ತಿಳಿಸಡಿಸುವದೇನಂದರೆ—ಇತ್ತಕಡೆಯು ಸರಕ್ಯುಲರ ನಂಬರ ೧೦೦ನೇ ತಾರೀಖು ೨೩ ಸಪ್ಟಂಬರ ೧೮೬೯ ಇಸವಿ ಕಲಮು ೪ ಪ್ರಕಾರಾ, ಸರಕಾರಿ ಲಖೋಟಗಳು ಟಿಕಿಟ ಹಚ್ಚಿ ಕಳುಹಿಸತಕ್ಕದ್ದಿದ್ದು, ಕೆಲವು ಮಾಸ್ತರರು ಸಾದಿಲವಾರ ವಳಿಸಿಕೊಂಬುವದರಗೋಸ್ಕರ ಸರ್ವಿಸ ಬೇರಿಂಗ ಕಳಿಸುತ್ತಾರೆ. ಅದರಿಂದ ನಾವು ಹಾಸಲಕೊಡಬೇಕಾಗುತ್ತದೆ. ವ ಆ ಹಾಸಲು ವಸೂಲಮಾಡಬೇಕಾದರೆ ೧ಆಣೆ ಖರ್ಚುಮಾಡಬೇಕಾತ್ತದೆ. ಈ ಪ್ರಕಾರ ಕೆಲಸ ವಖರ್ಚು ಬೆಳೆಯುವ ಕಾರಣಾ ಈ ವಹಿವಾಟ ಮಾಡಬಾರದೆಂದು ಸಖ್ತ ತಾಕೀದಿಯು ದರ್ಡಾವರ್ತಿ ಮಾಡಿದಾಗ್ಯೂ ತಮ್ಮ ನಡತೆ ಬಿಡುವದಿಲ್ಲ. ಕಾರಣ ಇದೊಂದಾವರ್ತಿ ಯಾವತ್ತರಿಗೆ ಸೂಚನೆ ಕೊಟ್ಟದೆ ಇನ್ನ ಮೇಲೆ ಸದರ ಪ್ರಕಾರದ ಲಖೋಟ ಸರ್ವಿಸ ಬೇರಿಂಗ ಕಳಿಸಿದರೆ ಅವರಿಗೆ ದಂಡ ಆಗುವ ಬಗ್ಗೆ ಮೋ. ಇ. ಇನಸ್ಪೇಕಟರ ಸಾ॥ ಬಹದ್ದರವರ ಕಡಿಗೆ ಶಿಫಾರಸ ಮಾಡಲಾದೀತು ತಾರೀಖು೬ ಮಾಹೆ ಮೋ ೧೮೭೩ ಇಸವಿ

Ramchandra. A. Sawanoor.

ಡಿ. ಇ. ಇ. ಜಿಲ್ಲಾ ಕಲಾದಗಿ.

Correspondence.

ಪತ್ರವ್ಯವಹಾರವು.

ಹೇಮಂತರ್ಋತು ವರ್ಣನೆಯು—.॥

॥ಶಾರ್ದೂಲವಿಕ್ರೀಡಿತವೃತ್ತಂ॥

॥ಶ್ರೀವತ್ಸಾಭರಣ, ಕೃಪಾವಿತರಣ, ಪೃಥ್ವೀಸಮುದ್ಧಾರ
ಣ,—।

॥ಸ್ವಾಮಿನ್, ಭಕ್ತಸುರಕ್ಷಕಾ, ಸುರಹರ, ಲಕ್ಷ್ಮೀಕಾಂತ, ವಿಶ್ವಂಭರ,॥
॥ಬ್ರಹ್ಮೇಶಾದಿನತ, ದ್ವಿಜೇಂದ್ರವಿನುತ, ತ್ರೈಲೋಕ್ಯಚೇತೋರತ,।
॥ಶ್ರೀಲಕ್ಷ್ಮೀನಿಲಯ, ಪ್ರಭೋ ಕುವಲಯ–ಶ್ಯಾಮಾಂಗ, ನಾಂಪಾಲಯ॥೧॥

॥ಕಾಮದಾವೃತ್ತಂ॥ ಶ್ರೀಸ್ನುಷೇ, ಸುಮೀನಾಂಕಸತ್ಕರೇ, ಭೂಸುರಪ್ರಿಯೇ, ಸತ್ಕೃಪಾಕರೇ,।
॥ದೇವಿ, ತೇ, ನಮಃ ಸರ್ವಲೋಕಸಂ–। ಭಾವಿತೇ, ಮತಿಂ ದೇಹ್ಯವಾಸಿತಂ॥೨॥

॥ಶಾ.ವಿ.ವೃ.॥ ಪ್ರಾವಾರ್ಗಸ್ಥಿತಕೇತಕೀಸುಮರಜಃಸದ್ಗಂಧಸಂದೋಹಭೃತ್,।
॥ಸ್ವರ್ವಾರ್ಗಾರ್ಗತ ಹಂಸಪಕ್ಷತಿ ಸಮುತ್ಸೃಷ್ಟಸ್ಪಕ್ಷಣೌಘೋಲ್ಲಸ,॥
॥ದುಗ್ಧವಾರ್ಗರೋಸ್ಮಿಹಿಕಾಧರಂ, ತುಹಿನತಾಲಕ್ಷ್ಮೀಶ್ವರಾಜ್ಞಾಸಮ,।
॥ಸ್ನಿವಾರ್ಗಹಂ, ಸುಳಿದಂಪ್ರಭಾವದ ಜಗತ್ತಂ ಕಂಬುಸುತ್ರಾತ್ತಶುಗಂ॥೩॥
॥ಅಂತಿಂತೆಂದೊಡದೇಂ ನೆಗಳ್ವನೊ! ಹಿಮೋರ್ವೀಪಾಲಕನ್ಯೇಪ್ಸ್ಯವಾ।
॥ತಂತತ್ಸಂನಿಭನೆಂದು ಬೆಚ್ಚಿರುಪೊಲಾತ್ಮಪ್ರಾಣವಕ್ತ್ರಂಗಳೋ-॥
॥ರಂತ್ರಾಛಾದನ ಪಾಣಿಯಿಂ ಕಳೆದುಮುಚ್ಚಿರ್ಪರ್ನಾರಿಯರ್.।

||ಕಾಂತಾಂಗಂಗಳನಪ್ಪಿದರ್ ಬಿಗಿದು ಶೀತಸ್ಪರ್ಶನ ತ್ರಾ
ಸದಿಂ||೪||
||ಚಂದಂಚಂದವನೊಂದೆನೊಂದೆರವಿಯುಂದಂ ಪೊಂದಲಿಂ
ದೀವರ—|
||ಕ್ಕಂದಂಕಂದಲು ಸಾರಸಾರಸವನಂ ಪೂವಾಳ್ಕೆಗುಂಪಳ್ಕೆ
ಸೊಂ||
||ಪಿಂದಿಂಪಿಂದಿಹಮಂಜುಮಂಜುವೆಸೆಶೀವಲ್ ಬೂವಿಯುಂ
ನಾಡಿನಾ-|
||ಸಂದಂಸಂದಣಿ ಸುತ್ತಿಸುತ್ತಿಬಡದೈಕಿಲ್ ಬಂತು ಶೀತಾಗ
ಮಂ||೫||
||ಮ.ವಿ.ವೃ|| ಘನಶೀದೇವಿ ಹಿಮಾಂಬುಮಜ್ಜನವ ಮಾಡು
ತ್ತಂ ಹರಿಚ್ಛಾಲಿ-ಸುಂ-|
||ದರಪೀತಾಂಬರವೃಷ್ಟಿ, ತೊಟ್ಟುರೆಹರಿಚ್ಛಾಲ್ಯದ್ಘ
ಕೊಮಾರ್ಗಸವಂ||
||ನರುಣೋಸ್ಸಿಲಿಮಶಾಲಿಕುಂಕುಮ ಮುಪೋದ್ಯಜ್ಜ
ತ್ರ ಕದ್ವಂದ್ವವಂ-|
||ನಿರದಿಷ್ಟ್ಯಪ್ಪಿ ದಿವಾಕರೋದಯದೊಳತ್ಯಾನಂದದಿಂ
ಛಂದದಿಂ||೬||
||ಖಗರಶ್ಮಿಪ್ರಜ-ಸುಪ್ರಕಾಶಿತಬಹುಪ್ರಾಲೇಯಮಾರ್ಬಿಂ
ದುದೀ-|
||ಪಗಳಂ ಶಾದ್ವಲಸದ್ಧರಿನ್ಮಣಿಮಯಾಂಚತ್ಪಾತ್ರದಲ್ಲಿ
ಟ್ಟುಕೊಂ|
||ಡುಗರುತ್ಮತ್ ಸ್ವರ ಮಂಜುಗಾನದಿ ಚಿರಪ್ರಾಪ್ತಾತ್ಮಸ
ರ್ವಸ್ವನಾ|

||ಥಗೆಪ್ಪಮಾಗಮ ರಾಜಗಾರುತಿಯುಮಾಳ್ಪೊಂಪಂದದಿಂ
ದೊಪ್ಪುವಳ್||೭||
||ಅತಿಮುಗ್ಧಾಕತಿ ನೋಡಿ, ಘೂರಮಣಿ ಯೈಕಿಲ್ ನ
ಲ್ಲಗಂ ಬೆಳ್ಗ ಯಾ|
||ರತಿಯುಂಸೂಸುತೆ ಮೌಕ್ತಿಕಾಕ್ಷತೆಗಳಂ ಕೂರ್ತಪ್ಪಿ
ತಾಂಸ್ವೇದಸಂ-||
||ಯುತೆಯಾದಂತಿರೆಮಂಜು, ಪೋಕ್ಚಳ್ಳಿ, ಹಿಮಾದ್ರಿಗಂ
ಭೂತಳಂ; ಶೀತದಿಂ|
ಬತಿವಿಟ್ಟಿಷ್ಟಪದೊಪ್ಪುತೋಪರಸವೋಪಂ ಕಲ್ಪ ಪ್ರೋ
ಲ್ ಪ್ರೀತಿಯಂ||೮|
||ಶಾ.ವಿ.ವೃ|| ಹೇಮಂತರ್ತುಕಾಸಿದ್ಧನುಜ್ಜ್ವರಿಸುತ್ತೊಂದಂ,
ಮಂತ್ರಮಂ, ಗುಪ್ತದಿಂ-|
||ದಾಮೂಡಲ್ ಮೊಗದಿಂದಮುಃಪೆವಲಚಿತ್ತಂ ಪೋದ
ನೋದ್ಯಸ್ತ್ರಮಂ||
||ನಾಮೋಲ್ ಚಲ್ಲಲಪಾಗಮೂಡೆಲರು, ಮಂಜೆಂಬೀದ್ವಿ
ರೂಪಂಗಳ||
||ತಾಮೋಪರ್ಚಳಿಯಾಗಿಯುಂ ಕಪಿದರಿಂಪನೇಂಗೈವ
ರೋ! ಲೋಕಮಂ||೯|
||ಮ.ವಿ.ವೃ.|| ನಡೆಪ್ಪೆರಂ ಪಟಿಯಾರಿಸಿತ್ತದರಗೋಣ್ಗ
ಯ್ಸಿತ್ತು ಮುಂದ್ಪೆದಿಮ್ಪ-
||ಯೊಡಿಸುತ್ತಂಕಳೆಗುಂದಿಸಿತ್ತು ಜನರಂಗಾಂಗಂಗಳ
ಸೊಂಕಿಬಾಯ್|
||ವಿಡಿಸಿತ್ತೀನೆಲವಂನುಹೀರಿಜಲವಂ ನೋಪ್ರೋಪ್ರೊ||
ತಾಮೂಡೆಲರ್|

॥ಗಿಡಗೂಡಂ ನಡೆತಂದು ತಾಗಿತು ಬಳ್ಳಿಕ್ಕೆಯಂಗೆಯ್ವುದೋ!
ಮುಂನದಂ॥೮೦॥
॥ಮಾಲಿನೀವೃತ್ತಂ॥ ಬಡಗಿಡಗಳನ್ನೈತಂದಾಕ್ಷಣಂತಂನಬ
ಲ್ಪಿಂ।
॥ನಡುಗಿಸಿತು. ನೆಲಕ್ಕಂ ಜೀರ್ಣಪತ್ರಾಳಿಯುಂನೊ-॥
॥ದ್ದೊಡನೆಕೆಡವಿ ದಿಗ್ವ್ಯಾಸಂಗಳಂ ಮಾಡಿದತ್ತೈ॥
॥ನಡೆಗತಿಗಡಿಸಿತ್ತಾ ಮಂತ್ರಘೂತ್ಕಾರವಾಯು॥೮೧॥
॥ಮ.ವಿ.ವೃ॥ ಧರೆಯುಂ ಬಾಂದಳಮಂನು ಮೇಣ್ದಿಸೆಗಳಂ ನೆ
ತ್ತೆತ್ತಲುಂ ಸಾಂದ್ರದಿಂ।
॥ಘರದಿಂನಾಡೆಮುಸುಂಕಿಮೋಹಿಸಿತು. ನೀಸರ್ಗಡ್ಡಗಟ್ಟಿ
ತ್ತದೋ-॥
॥ಪರ್ರವಕ್ತ್ರಂಪೆರರಿಂಗೆಕಾಣಿಸದವೊಲ್ ಕಣ್ಗಟ್ಟಿಪಿಂ
ಗಾರಿಪ್ಪೈ-।
॥ಬರುವಂನಂಜಿಸಿದತ್ತು. ಮುಂಕುಬಸುಮುಂಬೋಲ್ಮುಂ
ಜದೇಂಪರ್ಬಿತ್ತೋ॥೮೨॥
ಕಂದಂ॥ ಪೆಸವೆಣ್ಗಳಾಕ್ಕಳಿಸಲುದ। ಯಿಸಿಮೊಗದಿಂಪ್ಪೊಗೆ
ಯುದಂತರಿಕ್ಷವನೆತ್ತಂ॥
॥ಮುಸುಕಿದುದೊ! ಪೊಳ್ತಡೆಯೊಳ್ಂ। ಬೆಸಕಮಸೊದವಿ
ಸುವಮುಂಜದೇಂಪರ್ವಿದುದೋ॥೮೩॥
॥ಬಿಸುಗದಿರನಬೆಸದಿಂಪ್ರೊಂ। ಬಿಸಿಲದುಸಟಿಜೊಂನಮುಂ
ಪಿಡಿದದರಸುತ್ತಂ॥
॥ಮುಸುಕಿಕಾಯ್ವುದೆನೆರವಿಯುದ। ಯಿಸಲೆಳೆವಿಸಿಲುಂ,
ಹಿಮುಂ, ಕ್ರಮಂಸೊಗಯಿಸುಗುಂ॥೮೪॥
॥ಧರೆನವರತ್ನ ಸುಚಿತ್ರಿತ—। ಹರಿದಂಬರಮುಂಹಿಮಾತ್ಮನಾ

ಘಂಗಂಕೊ॥

॥ಜಿರೆಂದು ಪೂಸಿದ ಸೆರವಿ। ಕರದಿಂ ಪಸತ್ರಿಯೊಳೆಹಿಮ

ಕಣ್ಣಾಘಂಪ್ರೊಳಗುಂ॥೧೫॥

॥ವಸಂತತಿಲಕಾ॥ ಬಾಂಬೊಚ್ಚ ಕಚ್ಚ ರಿಯ ರೊಲ್ದು ವಿಭಾತಕಾ

ಲ।

॥ಕ್ಷಂಬಂದುವಿಂದುಜಲದಿಂತಡಿಗ್ರೈದಿಸಿಂದಾ॥

॥ಗಿಂಬಾಗಿತ್ರೊಯ್ದು ಕಜಪಕ್ಷಮುಝುಡಿಸಲ್ ಬೀ।

॥ಳ್ವಂಬಃ ಕಣ್ಣಾಘಮದುಲೋಕದಿಮಂಜೆನಿಕ್ಕ್ಯಂ॥೧೬॥

॥ಮ.ವಿ.ವೃ॥ ವಿರಹಾಗ್ನಿಜ್ವಲನಂ, ವಿಯೋಗಿಸಿಕರಂ ನೋ

ಧಂ, ಸ್ಮರಂಹ್ರೋತ್ರೈ, ಪ-।

॥ಬಿರುವೈಕಿಲ್ ವರರುತ್ರ್ವಿಜಂ, ಹಿಮಜಲಂ ಸಪಿಸ್ಸು,

ಮಂತ್ರಾಳ ಮಾ;

॥ಡೆರಲಾಗಲ್ಕೆ, ವಿಧಾನದಿಂ ವಿರಹಿಮೋಧಂ ಗೆಯ್ವದೀ

ಕ್ಷಾಧುರಂ-।

॥ಧರನೀತಂ, ಹಿಮಕಾಲಭೂಪ, ನಿದುಮಂಜೇಂ? ಧೂ

ಮಮಾಹ್ರೋಮದಾ!॥೧೭॥

॥ಮಂದಾಕ್ರಾಂತಾವೃತ್ತಂ॥ ಹೇ ನುಂತತರ್ಪೃಥಿವಿಯೊಳು

ಸಂವ್ಯಾಪಿಸಲ್ಕಾ ವಿಯೋಗಿ-।

॥ಸ್ತ್ರೀ ವೋದ್ದಾ ವೋದ್ವಿರಹದಹನಂ ಪ್ರೊತ್ತಲಾರಂಭಿ

ಸಲ್ ತದ್॥

॥ಧೂಮಂತಾ ವೋಣ್ಣ ಸಗಳೊಳು ತೀವಿಪ್ರದೆಂಬಂತೆ

ವ್ರೋಲ್ತ।

॥ಳ್ವಾಮಂಜೇಂ ಮಂಜುಲಮೆನೆಕರಂ ಮುತ್ತಿದತ್ತ್ರೋ!ಜ

ಗತ್ತಂ॥೧೮॥

೩೨೯

||ಮ.ವಿ.ವೃ|| ಕಡು ಬಂದೊತ್ತಿ ಪುದುಂಗಿಸುತ್ತಖಿಲಜೀವವ್ರಾ
ತಮಂ ಗದ್ಗದಂ|
||ನಡುಗಲ್ ಮೂಡಿ, ಪಿಕಾಳಿಕಂಠಗಳನೊತ್ತುತ್ತಂ, ಸ್ಮರ
ಜ್ವಾಲೆಯಂ||
||ನೊಡಲೊಳ್ ಪೇರ್ಚಿಸುತಂ ವಿಯೋಗಿಜನದಾ, ಪ
ರ್ಬಿರ್ದನೇವೇಳ್ವೆನೊ||
||ಳ್ಗಡಿಯಂ ಕಂದಿಸಿ ಕುಂದಿಸುತ್ತರರೆ!!ಯೈಕಿಲ್ ಕಾಡು
ಸಿದ್ಧಂ ಕರಂ||೧೯||
||ಅಘಟಂ ಮಾರ್ನಿಲಲಿಂದಿರಂಕೊಲವರಲ್ ಬೆಟ್ಟಂಗಳಾ
ಚಂದನಾ-|
||ಸೊದೆಗೈ ಸೂಸಿದಮರ್ದನುಂ ಪಿಡಿದುಣಲ್ ವೇಳ್ಕೆಂದಿ
ಡಲ್ ಪೆಪ್ಪುಗೊಂ||
||ಪದುಬೆಳ್ಗಪ್ಪುರವಲ್ಲಿಯಂತೆ, ಕೆನೆವಾಲಂದಂ, ವಿ
ತಾಯಂತೆಕಾ|
||ಣ್ಬುದು ನೋಡೆಂದೆನಿಸಿತ್ತಗಾಗ್ರಶಿಖರಸ್ಥಂ ಹೈಮಪಿಂ
ಡವ್ರಜಂ||೨೦||
	ವಸಂತತಿ		ನಾಹೇಳ್ವೆನೇಂ ಚಳಿಯ ಬಲ್ಪದನಪ್ಸರಾಸ್ತ್ರೀ	
	ವ್ರ್ಯೋಹಾಂಗಸಂಗಪರಿರಂಭಣನಾಗಿಯುಂ ಮೇ	
	ಘಾಹಬ್ಬಿದೈಕಿಲದುಮೈಪುಗಬೆಚ್ಚಿಹಾಹಾ
	ಹೂಹೂನಿನಾದವನೆಬಿಟ್ಟಿರನೇಂದುವಿಂದ್ರಂ		೨೧	
	ವಂಶಸ್ಥಂ		ಪಯೋರುಹಂಗದಿರ್ಗೆ ಶೀತಲಂ, ಮನಃ
	ಪ್ರಿಯಾಂಗಮೇವಾರಿ, ಯೆನುತ್ತ ಜಂತುಗು	
	ಕ್ತಿಯಿಂ ಹಿರಣ್ಯೋದರನಾಗಿ ತಾಂತದು
	ಷ್ಣಗೋಗದಿಂದಂ ಕಳೆವಂ ಹಿಮರ್ತುವಂ		೨೨	

||ಪೃಥ್ವೀ|| ಹಿಮಾಗಭವೆಗೌರಿ, ಗಂಗೆಸಲಿಲಾಂಗಿ, ನೇತ್ರಾ
ಗ್ನಿಜಾ|
	ಯಮುಮಿತ್ರನೆನುತಂ ಶಿವಂ ಪ್ರೊಳಲಚುರ್ಕೆ, ವೈಗಾಸಿ, ಭ	
	ಸ್ಮವಂತ್ರೊಡೆಮೊಡಲ್ಗೆ ವೇಣ್ಗೆ ಜತರಕ್ಷಣೆ ಚರ್ಮಂಗಳಂ
	ನುಮಾಂತನೆನೆತ್ರಾಳ್ವರೆಂ ತ್ರೊನರರೀ ಮಹಾಶೀತಮಂ		೨೩	

	ವ.ತಿ.		ವಾರಾಶಿಶಯ್ಯೆ, ಜಲಜಾಲಯೆ ಭಾರ್ಯೆ, ಯೆಂದಾ
	ನಾರಾಯಣಂ ತಪನಮಂಡಲವಾಸಿಮಿತ್ರಾ	
	ಧೀರಾಂಗನಾಂಗಪರಿರಂಭಣನಾಗಿಯುಂಕ
	ಸ್ತ್ರೀ ಲಲಾಟನುರಿನುಂಗಿದನೀಹಿಮರ್ಕ್ಕಂ		೨೪	

||ವೃ|| ತುಹಿನಸಮಯಭೂಪಂ ಬಂದನೈ! ಬಂದನೈ! ವಿ|
||ರಹದಹನಗೆಚೆಲ್ವಂ ತಂದನೈ! ತಂದನೈ! ನೋ||
||ಡಹಹ!! ಮಹಿವೆದೆಂತ್ರೋ! ಕೊಂದನೈ! ಕೊಂದನೆಂ
ದುಂ|
||ಬರುವಿರಹಿಜನಂದಲ್ ನೊಂದುದೈ! ನೊಂದುದೈದೆ||೨೫||

||ಶಿಖರಿಣೀವೃತ್ತಂ|| ಹಿಮಾನೀಹಂಸವರ್ಗೆ ಶಮಿಸುತಿಕೆ
ಚ್ಚಂ ಹಿಮವನೀ-|
||ವನೋಂ ವಿಮಾದುದ್ರೈಕಪಂ! ವಿರಹಶಿಖಿಯಂ ಪೇರ್ಚಿಪನಿವಂ||
||ಸಮಂತ್ರೀವಂಸಂತ್ರಾಪವನೆಮಗೆದಾವ್ ಪ್ರಿಯರಕಟಾ!!
||ಸುಮಾಸ್ತ್ರಕ್ಕಂ ಶಾಂತಿಪ್ರದರೆನುತೆನೊಂದರ್ ವಿರಹಿಗ
ಳ್||೨೬||

||ವ.ತಿ.|| ಕೋದಂಡಮಂ ಕಡಿಸಿಬಂಡಿಸಿಗಾಣದಲ್ಲಿ! ಟ್ಟಾದಂ
ಸರಲ್ಗಳನುದಿರ್ಚಿಹಿಮರ್ತುಕನ್ನಿ|
||ದಾದಪ್ಪನಂಗನಿಗಮಾಯುವಸೂಡಿಯುಂವೋಕ್| ದೈದ
ತ್ಪದೀವಿರಹವೃಂದಮಿದೇಂವಿಚಿತ್ರಂ||೨೭|

||ಮ.ವೃ|| ಇದುಮಂಜಾಗದು ಜೊನ್ನ, ವೈಕಿಲವಿದಲ್ತು ಕೈ
ವರ್ಣಮುಂ ನೀರು, ನೋ|
||ಇದು ಛಾಯಾವರಬಿಂಬಮಲ್ತು ವಿಧುಬಿಂಬಂ, ವಾಸರಾರಂ
ಬಮ-|
||ಲ್ತಿದು ಸಂಧ್ಯಾದಿ, ಹಿಮರ್ತುವಲ್ತಿದು ಕಲಾತ್ರಾಂತ್ರೋದ
ಯಂ, ನೊಂದವೇ|
||ಗದರಿಂದಬ್ಜಮುವಿಶಾವಿಯೋಗಿಜನರುಂ ಸೊಂಪಾಳ್ದ
ದಿಂದೀವರಂ||೨೮||

	ಮಾ		ಚಳಿಗಳೆಗಳೆಗುಂದುತ್ತಂ ಜಾತಂ ಮಂಜಿಗಂಬಾಂ
	ದಳದೊಳ್ನಡುಗುತ್ತಂ ಸಾವಕಾಶಂ ನಿಜೇಶಂ	
	ಚಳಿಪುದನಳಲುತ್ತಾ ಬಾಳಚಕ್ರಂಗಳಂ ಸಾ
	ಗಳೆ ಕಮಳಿನಿ ನೀಡುಂ ನೋಡಿ ಬಾಡಿರ್ದಳಯ್ಯೋ!		೨೯	

(ಮುಂದಕ್ಕೆ ಸಾಗುವದು.)

ರಾ. ರಾ. ಕನ್ನಡ ಶಾಲಾಪತ್ರ ಕರ್ತರಿಗೆ—

ವಿ||ವಿ|| ಅಯ್ಯಾ ನಾನು ಕೆಳಗೆ ಬರೆದ ಎರಡು ಶ್ಲೋಕಗಳನ್ನು ತಮ್ಮ ಸುಂದರವಾದ ಪತ್ರದಲ್ಲಿ ಮುದ್ರಿಸಿ ಅವುಗಳ ಅರ್ಥವನ್ನು ಯಾರಾದರೂ ಕೊಟ್ಟರೆ ಇದೇ ಪತ್ರಮುಖಾಂತರ ತಿಳಿಸಿ ನನ್ನ ಮನಸ್ಸು ಸಂತೋಷಪಡಿಸುವಿರೆಂದು ತಿಳಿದು ಬಿನ್ನಃ ಮಾಡಿದ್ದೇನೆ.

ವಸಂತತಿಲಕವೃತ್ತ.

ಸಾಂಬಾಪ್ರಸಾತುಹರಭೂತಿಪವಿತ್ರಾಂಗಿ|
ಗಂಗಾಜಲಂಚಹೃದಯಂಚಕುಚೌಚಪಾದೌ||

ವಕ್ತ್ರಂವಿಲೋಕ್ಯ ಮದನೇ ಸವಿದಹ್ಯಮಾನಾ।
ಹಾ ರೇ ಹಾ ರೇ ಹಿಮಕರೇ ಮಕರೇ ಕರೇ ಚ॥೧॥
ಪೂಗರ್ಗಂ ಮಾರ್ಗಂ ಮೃಗಯತಿ ಮೃಗೇ ಹೇ ಶಿರಾನೋಲೇ-
ರಾವೋ।
ಶೋಕಂ ಶೋಕಂ ಗತ ಇತಿ ಗತೇ ಲಕ್ಷ್ಮಣೇ ಲಕ್ಷ್ಮಣೇನ॥
ನೀತಾ ನೀತಾ ಗುರವರ ವಧೂ ಹಾರಲಂಕಾರಲಂಕಾ।
ಸೀತಾ ಸೀತಾ ಪತತಿ ಪತಗೇ ರಾವಣೇ ರಾವಣೇನ॥೨॥

ಶಿಗ್ಗಲಿ ತಾರೀಖು ೨೯ ಮಾರ್ಚ ೧೮೭೩ ಇಸವಿ.

ವಿಷ್ಣು ಪರಶುರಾಮ ಸ್ಕೂಲಮಾಸ್ತರ.

ಮ॥ರಾ॥ರಾ॥ ಕನ್ನಡ ಮಠಪತ್ರಿಕೆ ಕರ್ತರಿಗೆ—

ವಿ॥ವಿ॥ ಐಯ್ಯಾ ಎಡಿಟರುಗಳೇ— ತಮ್ಮಿಂದ ಹುಟ್ಟಲ್ಪಟ್ಟ ಮಾರ್ಚ ತಿಂಗಳ ಮಠಪತ್ರಿಕೆಯಲ್ಲಿ ಹುಣಶೀಕಟ್ಟಿ ಮಾಸ್ತರರಾದ ಮಲ್ಲಪ್ಪಾ ಕೆಂಚಪ್ಪಾ ಕೌಟಿ ಇವರು ಮುದಗಮಾಸೂರ ಮಾಸ್ತರರ ಪ್ರಶ್ನಕ್ಕೆ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಸ್ವಲ್ಪ ಸಂಶಯ ಬಂದದ್ದರಿಂದ ನನ್ನ ಬುದ್ಧಿಗೆ ತಿಳಿದಂತೆ ಕೆಲವು ಪ್ರಶ್ನಗಳನ್ನು ಬರೆದಿದ್ದೇನೆ. ತಮ್ಮ ಸುಂದರವಾದ ಪತ್ರಿಕದ ದ್ವಾರದಿಂದ ಸದರ ಮಾಸ್ತರರಿಗೆ ತಿಳಿಸುವಿರೆಂದು ಕೋರುತ್ತೇನೆ.

ಸಮುದ್ರ, ನದಿ, ಮೊದಲಾದವುಗಳಲ್ಲಿಯ ನೀರು ಕಬೆಯಾಗಿ ಅಂತರಿಕ್ಷಕ್ಕೆ ಹೋಗುವಾಗ್ಗೆ ಜಲಚರವಾದ ಪ್ರಾಣಿಗಳಲ್ಲಿ ಏಡಿ ಕಪ್ಪೆಗಳ ಸಂಣ ಮರಿಗಳು ಸಹ ಮೇಲಕ್ಕೆ ಹೋಗಿ ಪರ್ಜನ್ಯದ ಗೂಡಾ ಕೆಳಗೆ ಬೀಳುತ್ತವೆ ಎಂದು

ರದಿದ್ಧಾರೆ. ಆದರೆ ಆ ಪ್ರಾಣಿಗಳು ಹಬೆಯು ಗೂಡಾ ಹೋ
ಗುವಾಗ್ಯೆ ಹ್ಯಾಗೆ ಜೀವಿಸುವವು? ಈ ಪ್ರಾಣಿಗಳ ಹೊರ್ತು
ಮತ್ತ್ಯಾವ ಪ್ರಾಣಿಗಳು ಚಿಕ್ಕವಿಲ್ಲವೋ? ಅವು ಯಾಕೆ
ಹೋಗುವದಿಲ್ಲಾ? ನೀರಿನಲ್ಲಿ ಅಗದಿ ಮಿಳಿತವಾದಂಥಾ ಕ್ಷಾರ
ವು ಹಬೆಯು ಗೂಡಾ ಯಾಕೆ ಹೋಗುವದಿಲ್ಲಾ? ಮಿಾನಿನ
ತತ್ತ್ರಿಗಿಂತಲೂ, ಉಪ್ಪಿನ ಪರಿಮಾಣಗಳಿಗಿಂತಲೂ ಕಪ್ಪಿ
ಡಿಗಳ ತತ್ತ್ರಿಗಳು ಚಿಕ್ಕವೋ ಹ್ಯಾಗೆ? ಈ ಯಾವತ್ತು
ಪ್ರಶ್ನಗಳಿಗೆ ತಕ್ಕ ಉತ್ತರ ಕೊಟ್ಟು ಸದರಿ ಮಾಸ್ತರರು ನ
ನ್ನ ಮನಸ್ಸಿನ ಸಂಶಯವನ್ನು ದೂರ ಮಾಡುವರೆಂದು ಇ
ಚ್ಛಿಸುತ್ತೇನೆ.

ತಾ॥೨।೫।೭೩ ಇಸವಿ
ಮುಕ್ಕಾಮ ಹುಬ್ಬಳ್ಳಿ } ಚಿತಾಂಬರ ರುದ್ರೋ ಕುರ್ತಕೋಟಿಕರ ಪಂತೋಜಿಕಂ। ಮುಂ।ಸ್ಕೂಲ ಹುಬ್ಬಳ್ಳಿ.

ಮಹಾರಾಜ ರಾಜಶ್ರೀ ಕನಂಡ ಮಠಪತ್ರಿಕೆ ಕರ್ತರವ
ರ ಸಂನಿಧಿಗೆ—.

ಸೇವಕನು ಮಾಡಿಕೊಳ್ಳುವ ವಿನಯಪೂರ್ವಕವಾದ ವಿನಂ
ತಿ ಏನಂದರೆ: ಮಠಪತ್ರಿಕೆಯನ್ನು ಶೋಭಿಸುವ ತಮ್ಮ ಕರ
ಕಮಲಕ್ಕೆ ಲೋಕಬಂಧುವಾದ ಮಾಸ್ತರ ಜನರಿಂದ ಕೃತವಾ
ದ, ಕಂಕಣಕ್ಕೆ ಚಾತಕದಂತೆ ಆನಂದಭರಿತನಾಗಿ ಈಗ ನಾ
ನು ಅಪೇಕ್ಷಿಸುವ ಮೇಘವಿಸ್ತಾರವನ್ನು ತೋರಿನವಿಲಿನಂ
ತೆ ನನ್ನನ್ನು ನಲಿದಾಡಿಸುವರೆಂದು ಬೇಡಿಕೊಳ್ಳುವ ನಾಲ್ಕು
ಓಳಿಗಳಿಗೆ ಸ್ಥಳದೊರಿಯಬೇಕೆಂದು ಪ್ರಾರ್ಥಿಸಿ ಬರತ್ತೇ

ಈ ವಿಷಯಗಳು:

೧ ಮೇಘವೆಂದರೇನು, ಅವು ಎಷ್ಟು, ವರ್ಣಯಾವದು, ಆಕಾರಯಾವತರದ್ದು, ಎಲ್ಲಿರುವವು, ಅವು ಮಾಡುವ ಕಾರ್ಯವೇನು?

೨ ಗುಡುಗು ಯಾತರ ಶಬ್ದವು, ಎಲ್ಲಿಂದ ಹುಟ್ಟುತ್ತದೆ, ಯಾವಕಾರಣದಿಂದ ಉತ್ಪತ್ತಿ?

೩ ಸಿಡ್ಲು ಅಂದರೆ ಯಾತರಧ್ವನಿ, ಈ ನಾದ ಉಂಟಾಗುವದಕ್ಕೆ ಕಾರಣಯಾವದು, ಇದರಿಂದ ಕೆಳಗೆ ಬರುವ ಬೆಂಕಿಯು ಸಲಾಖೆಯು ಏನು, ಇದು ಮಾಡುವದೇನು, ಮತ್ತು ಇದರ ಖಂಗು ಬಹುತರವಾಗಿ ನಾಗರಹಾವಿನ ಮೇಲೆಯೂ, ಚೊಚ್ಚಲಮಕ್ಕಳ ಮೇಲೆಯೂ ಎಂದು ಪೂರ್ವಿಕರು ಹೇಳುವ ಪ್ರಕಾರ ದೃಷ್ಟಾಂತ ಬರುವದುಂಟು, ಇವುಗಳಿಗೆ ಕಾರಣ ಯಾವವು, ಇದು ಅಂತ್ಯದಲ್ಲಿ ಏನಾಗುವದು?

೪ ಮಳೆ ಅಂದರೇನು, ಹ್ಯಾಗೆ ಇದರ ಉತ್ಪತ್ತಿ, ಆನೇಕಲ್ಲುಮಳೆ ಏನು ಯಾತರಬಸಿಯಿಂದ ಹ್ಯಾಗೆ ಬರುವದು.?

೫ ಮುಗಿಲು ಅಂದರೇನು, ಬೈಲು ಎಂದು ಜನರು ಹೇಳುವದು ಧಿಟವಾದರೆ ಅನೇಕವರ್ಣ ತೋರಲಿಕ್ಕೆ ಕಾರಣವೇನು?

ಇವುಗಳಿಗೆ ಶಾಸ್ತ್ರ ಅಥವಾ ಯುಕ್ತಿಶಾಸ್ತ್ರ ಆಧಾರದಿಂದ ಪೂರ್ಣವಾಗಬೇಕು. ಪತ್ರಕರ್ತರೇ ವಾಗ್ದೋಷ ಹಸ್ತದೋಷ ಪತ್ರವಿಸ್ತಾರ ಇವುಗಳಿಗೆ ಲಕ್ಷ ಕೊಡದೆ ಛಾಪಿಸಿಕೊಂಡು ಪ್ರಕಟಿಸಿ ಇವುಗಳ ಸಂಬಂಧವಾದ ಅಜ್ಞಾನವ

ನ್ನು ದೂರ ಮಾಡಬೇಕು.

ತಾರೀಖು ೭೨ ನೇ ಎಪ್ರೀಲ್ ಸನ್ ೧೮೭೨ ನೇ ಇಸವಿ.

ಮಾಧವ ನಾರಾಯಣ ಜಮಖಂಡಿಕರ ಅಸಿಷ್ಟಂಟ

ಮಾ. ಆಲೂರ. ತಾಲೂಕ ಹಾನಗಲ್ಲ.

ಮಹಾರಾಜ ರಾ॥ ರಾ॥ ರಾವಸಾಹೇಬ ಕನ್ನಡವೃತ್ತ ಪತ್ರಿಕೆಯ ಎಡೀಟರ ಮುಕ್ಕಾಮ ಬೆಳಗಾಂವೀ ಇವರ ಚರಣ ಕಮಲಕ್ಕೆ

ಸೇವಕನು ಅತ್ಯಾದರದಿಂದ ಮಾಡಿಕೊಳ್ಳುವ ವಿಜ್ಞಾಪನಃ ವಿ॥ ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಅಂದವಾದ ಪತ್ರಿಕೆಯಲ್ಲಿ ಮುದ್ರಿಸಿ ಪ್ರಕಟಿಸುವಿರೆಂದು ಪೂರ್ಣ ಆಶಿಸುತ್ತೇನೆ. ಅದನ್ನು ನೆರವೇರಿಸುವಲ್ಲಿ ಕರ್ತರೇ ಇದ್ದೀರಿ.

ಶ್ಲೋಕ.

॥ನಕ್ಷತ್ರ ಮಂಟಪದೊಳೋರ್ವ ಗೋಪಾಲಸತಿ,
॥ನಕ್ಷತ್ರರಮಣನಸುಜನತೊಡೆಯ ಮೇಲೆ ಕುಳ್ಳಿರ್ದು,
॥ನಕ್ಷತ್ರಮಂಪಿಡಿದು,
॥ನಕ್ಷತ್ರದೊಳುಹಿಮನತುಂಬುತಿರಲಾಗ, ॥
॥ನಕ್ಷತ್ರರಿಪುಜನಕಬಾಗಿಲೊಳುಧ್ವನಿಗೈಯ್ಯೆ,
॥ನಕ್ಷತ್ರದಿಂಕೇಳನಮಿಸಿ, ಭಿಕ್ಷವನೀಡಿ,
॥ನಕ್ಷತ್ರಪತಿಧರಗೆವಂದಿಸುತತಾಂತನ್ನ
॥ನಕ್ಷತ್ರಮಂಸಾರ್ದಳು॥೧॥

ಇದು ಪ್ರಾಸು ಬಹು ರಂಮ್ಯವಾಗಿ ತೋರಿದ್ದಲ್ಲದೆ, ಅರ್ಥವು ಚಮತ್ಕಾರವಾಗುವದು ತಿಳಿಯುವ ಕಾರಣ ತಮಗೆ

ಅಚ್ಚಿಸುವದಕ್ಕೆ ಶ್ರಮಕೊಟ್ಟಿದ್ದೇನೆ. ಕ್ಷಮಾ ಇರಬೇಕು. ಮಮತಾ ಪೂರ್ಣವಿರಲಿ ಇಂತಿ ನಮಸ್ಕಾರಗಳು.

ತಾ॥೧ನೇ ಎಪ್ರಿಲ್ ೧೮೭೨ ಇಸವಿ

ನಿಲಕಂಠ ಚಿಕ್ಕೋ ಕು
ಲಕರ್ಣಿ ಅಸಿಸ್ಟಂಟಮಾ.
ಬ್ಯಾಡಗೀ ತಾ. ರಾ. ಜಿ. ಧಾ.

ಮ. ರಾ. ರಾ. ಕನ್ನಡ ಮಠಪತ್ರಕರ್ತರಿಗೆ

ವಿ. ವಿ. ನಾನು ಬರೆದ ನಾಲ್ಕು ಪಂಕ್ತಿಗಳಿಗೆ ಸ್ವಲ್ಪ ಸ್ಥಳಕೊಡಬೇಕೆಂದು ಆಶಿಸುತ್ತೇನೆ. ಅಚ್ಚು ಹಾಕುವದಕ್ಕೆ ಸ್ಥಳವಿದ್ದರೆ ಪ್ರಸಿದ್ಧ ಮಾಡಬೇಕು. ಹಾಗೂ ಯಾರಾದರು ಇದಕ್ಕೆ ಉತ್ತರ ಕೊಟ್ಟರೆ ಇದೇ ಪತ್ರದ್ವಾರದಿಂದ ತಿಳಿಸುವರೆಂದು ಪ್ರಾರ್ಥನೆ ಮಾಡುತ್ತೇನೆ.

ಖಗೋಲ.

೧. ಚಂದ್ರನು ಸ್ಥಿರ ಇದ್ದಾನೊ? ಅಥವಾ ಚಲ ಇದ್ದಾನೊ? ಸ್ಥಿರವಿದ್ದರೆ ಆಧಾರವೇನು? ಚಲವಿದ್ದರೆ ಆಧಾರವೇನು? ಮತ್ತು ಅವನು ಸೂರ್ಯನ ಸುತ್ತ ಮುತ್ತ ತಿರುಗುತ್ತಾನೋ ಅಥವಾ ಭೂಮಿಯ ಸುತ್ತ ಮುತ್ತ ತಿರುಗುತ್ತಾನೊ? ಸೂರ್ಯನ ಸುತ್ತ ತಿರುಗುತ್ತಿದ್ದರೆ ಆಧಾರವೇನು? ಭೂಮಿಯ ಸುತ್ತ ತಿರುಗುತ್ತಿದ್ದರೆ ಆಧಾರವೇನು?

೨. ಚಂದ್ರನು ಶುಕ್ಲ ಪಕ್ಷದಲ್ಲಿ ನಮ್ಮ ಉತ್ತರಕ್ಕೆ ಮತ್ತು ಕೃಷ್ಣಪಕ್ಷದಲ್ಲಿ ದಕ್ಷಿಣಕ್ಕೆ ಇರುತ್ತಾನೆ. ಇದರ ಕಾರಣವೇನು?

೩. ಪ್ರತಿ ದಿವಸ ರಾತ್ರಿಯಲ್ಲಿ ನಕ್ಷತ್ರಗಳು ಬಿದ್ದಂತೆ ನಮಗೆ ತೋರುತ್ತವೆ. ಅವರೆ ಇದು ಏನು? ಮತ್ತು ಹೀಗೆ ಆಗುವದಕ್ಕೆ ಕಾರಣವೇನು?

ಈ ಮೂರು ಪ್ರಶ್ನೆಗಳಿಗೆ ಆಧಾರ ಭೂತವಾಗಿ ಯಾರಾದರು ನಮ್ಮ ಬಂಧುಗಳು ಉತ್ತರ ಕೊಡುವರೆಂದು ಬೇಡಿಕೊಳ್ಳುತ್ತೇನೆ. ಇಂತಿ ವಿಜ್ಞಾಪನಃ

ಸಹಿ ಗೋಪಾಳ ಗಣೇಶ ಜೋಶಿ ಚಿಕ್ಕೋಡಿ
ವಿದ್ಯಾರ್ಥಿ ಶಾಲಾ ಚಿಕ್ಕೋಡಿ.

ಶಾಲಾಪತ್ರಕವು.

—000—

ಪುಸ್ತಕ ೯] [ಸಂಚಿಕೆ ೩.

ಬೆಳಗಾವಿ, ಮಾಹೆ ಜೂನ ೧೮೭೩.

SELF HELP.

ತನಗೆ ತಾನೇ ನೆರವಾಗುವದು.

ಈ ಯಂತ್ರದಲ್ಲಿ ಇವನು ಹತ್ತು ವರ್ಷಗಳವರೆಗೆ ಹೊಸ ಯುಕ್ತಿಗಳನ್ನು ತೆಗೆಯುತ್ತಾ, ಹೊಸ ರಚನೆಯನ್ನು ಮಾಡುತ್ತಾ ಪ್ರಯಾಸ ಪಟ್ಟನು; ಆದರೆ ಈ ಪ್ರಯತ್ನವು ಕಡೆಯಲ್ಲಿ ಒಂದು ಗೊತ್ತಿಗೆ ಮುಟ್ಟುವದೆಂಬ ಲಕ್ಷಣವು ಅವನಿಗೆ ಬಹು ಸ್ವಲ್ಪ ತೋರಿದಾಗ್ಯೂ, ಈ ಕೆಲಸದಲ್ಲಿ ತನಗೆ ಧೈರ್ಯಕೊಡುವ ಸ್ನೇಹಿತರು ಬಹುಶಃ ಯಾರು ಇಲ್ಲದಿದ್ದಾಗ್ಯೂ, ಅವನು ಇಷ್ಟು ದೃಢನಿಶ್ಚಯದಿಂದ ಉದ್ಯೋಗ ನಡಿಸಿದ್ದು ಬಹು ಆಶ್ಚರ್ಯವು. ಇತ್ತಲಾಗಿ ಈ ದೀರ್ಘ ಪ್ರಯತ್ನವನ್ನು ನಡಿಸಿರಲಾಗಿ, ತನ್ನ ಕುಟುಂಬದ ಪೋಷಣೆಗಾಗಿ ತುರ್ಯ ಯಂತ್ರಗಳನ್ನು ಮಾಡಿ ಮಾರುತ್ತಾ, ಸಾರಂಗ ಮುಂತಾದ ವಾದ್ಯಗಳನ್ನು ಮಾಡಿ ಮಾರುತ್ತಾ, ಅವುಗಳಲ್ಲಿ ಕೆಟ್ಟವುಗಳನ್ನು ನೆಟ್ಟಗೆ ಮಾಡುತ್ತಾ, ಕಲ್ಲ ಕುಟ್ಟಿಗರ ಕೆಲಸಗಳನ್ನೂ, ಮಾರ್ಗಗಳನ್ನೂ ಅಳಯುತ್ತಾ, ಕಾವಲಿಗಳನ್ನು ಕಟ್ಟುವ ಕೆಲಸಗಳಲ್ಲಿ ಮೇಲ್ವಿಚಾರಣೆಗಳನ್ನು ನಡಿಸುತ್ತಾ, ತಾತ್ಪರ್ಯವೇನಂದರೆ, ತನ್ನ ಕೈಲಾಗುವ ಕೆಲಸಗಳನ್ನು ಪ್ರಮಾಣಿಕತನದಿಂದ ಮಾಡಿ ಹೊ

ಟ್ಟು ತುಂಬಿಕೊಳ್ಳುತ್ತಾ ಕಾಲ ಕಳೆದನು. ಕಡೆಯಲ್ಲಿ ಬರ್ಮಿಂಗಂ ಪಟ್ಟಣದ ಮಾಥ್ಯೂ ಬೋಲ್ಟನ್ನನೆಂಬ ಹೆಸರಾದ ಕೆಲಸಗಾರನು ವಾಟ್ಟನಿಗೆ ತಕ್ಕ ಪಾಲಗಾರನಾಗಿ ಕೂಡಿದನು. ಅವನು ಒಳ್ಳೇ ಚತುರನೂ, ದೂರದರ್ಶಿಯೂ, ಚಟುವಟಿಕೆಯುಳ್ಳವನೂ, ಇದ್ದದರಿಂದ ವಾಟ್ಟನ ಒತ್ತುಪ ಉಗಿಯಂತ್ರವನ್ನು ಸಾಧಾರಣವಾಗಿ ಯೆಲ್ಲಾ ಶಿಲ್ಪಿಗರ ಕೆಲಸ ನಡಿಸುವ ಶಕ್ತಿಯು ಸಾಧನವಾಗಿ ಮಾಡುವದಕ್ಕೆ ಯತ್ನಿಸಿದನು. ಇವರಿಬ್ಬರೂ ಮಾಡಿದ ಪ್ರಯತ್ನವು ಹ್ಯಾಗೆ ಸಫಲವಾಯಿತೆಂಬದು ಈಗ ಇತಿಹಾಸದ ಸಂಗತಿಯಾಗಿದೆ.*

ಬಹು ಜನರು ಚತುರರಾದ ಶೋಧಕರು ಆಗಾಗ್ಗೆ ಈ ಉಗಿಯಂತ್ರದ ಶಕ್ತಿಯನ್ನು ಅನೇಕ ಯುಕ್ತಿಗಳಿಂದ ಹೆಚ್ಚು ಹೆಚ್ಚು ಮಾಡುತ್ತ ಹೋದರು. ಅವರು ಇದರ ರಚನೆಯಲ್ಲಿ ಯೆಷ್ಟೋ ಹೆಚ್ಚು ಕಡಿಮೆಗಳನ್ನು ಮಾಡಿ, ಬಹುಶಃ ಯೆಲ್ಲಾ ಶಿಲ್ಪ ಕೆಲಸಗಳಲ್ಲಿ ಇದರ ಉಪಯೋಗವಾಗುವಂತೆ ಮಾಡಿದರು. ಯಂತ್ರಗಳನ್ನು ನಡಿಸುವದರಲ್ಲಿಯೂ, ಹಡಗಗಳನ್ನು ನಡಿಸುವದರಲ್ಲಿಯೂ, ಧಾನ್ಯ ಬೀಸುವದರಲ್ಲಿಯೂ, ಪುಸ್ತಕಗಳನ್ನು ಅಚ್ಚು ಹಾಕುವದರಲ್ಲಿಯೂ, ಸುತ್ತಿಗೆಯಿಂದ ಹೊಡೆಯುವದರಲ್ಲಿಯೂ, ಈ ಮೊದಲಾದ ಶಕ್ತಿಯು ಆವಶ್ಯಕವಾಗಿದ್ದ ಕೆಲಸಗಳಲ್ಲೆಲ್ಲಾ ಇದರಿಂದ ಯಾಂತ್ರಿಕ ಶಕ್ತಿಯ ಲಾಭವಾಗುತ್ತದೆ. ಇದರಲ್ಲಿ

---

* ಈ ಪುಸ್ತಕದ ಮೊದಲನೇ ಆವೃತ್ತಿಯು ನಂತರ. ಈ ಗ್ರಂಥಕರ್ತನು "ವಾಟ್ಟಬೋಲ್ಟನ್‌ಗಳ ಚರಿತ್ರೆ" ಯೆಂಬದೊಂದು ಹೊಸ ಪುಸ್ತಕವನ್ನು ಮಾಡಿದ್ದಾನೆ. ಅದರಲ್ಲಿ ಈ ಇಬ್ಬರೂ ಸ್ತುತ್ಯರ್ಹರಾದ ಮನುಷ್ಯರ ಸ್ಥಿತಿ ರೀತಿಗಳನ್ನೂ, ಇವರ ದೊಡ್ಡ ದೊಡ್ಡ ಕೃತ್ಯಗಳನ್ನೂ ಹೆಚ್ಚು ವಿಸ್ತಾರವಾಗಿ ವರ್ಣಿಸುವ ಯತ್ನವನ್ನು ಮಾಡಿದ್ದಾನೆ.

ಅತಿ ಪ್ರಯೋಜನವಾದ ಹೊಸ ರಚನೆಯು ತ್ರೆವಿಥಿಕ್ಕನೆಂಬವನಿಂದ ಉಂಟಾಯಿತು. ಈ ರಚನೆಯು ಪ್ರಸಂಗಾನುಸಾರವಾಗಿ ಜಾರ್ಜ್‌ಸ್ಟೀಫನ್ಸನ್ನನೆಂಬವನಿಂದಲೂ, ಅವನ ಮಗನಿಂದಲೂ ತಿದ್ದಲ್ಪಟ್ಟು, ಉಗಿ ಬಂಡಿಯುಂಟಾಯಿತು. ಈ ಉಗಿ ಬಂಡಿಯಿಂದ ಜನರ ಸ್ಥಿತಿಯಲ್ಲಿ ಬಹು ಮಹತ್ವವುಳ್ಳ ಹೆಚ್ಚು ಕಡಿಮೆಗಳು ಉಂಟಾದವು. ಮನುಷ್ಯಜಾತಿಯ ಸುಧಾರಣೆಯ ಸಂಬಂಧದಿಂದಲೂ, ಜ್ಞಾನದ ಬೆಳವಣಿಗೆಯ ಸಂಬಂಧದಿಂದಲೂ ವಿಚಾರಿಸಿ ನೋಡಲಾಗಿ, ವಾಟ್ಟನ ಉಗಿಯ ಒತ್ತುವ ಯಂತ್ರಕ್ಕಿಂತ ಈ ಉಗಿ ಬಂಡಿಯಿಂದ ಬಹು ದೊಡ್ಡ ಲಾಭಗಳು ಉಂಟಾಗಿವೆ.

ವಾಟ್ಟನ ಶೋಧದಿಂದ ಕೈಗಾರಿಕೆಯ ಒಡವೆಗಳನ್ನು ಹುಟ್ಟಿಸುವ ಜನರ ವಶದಲ್ಲಿ ಅಮರ್ಯಾದ ಶಕ್ತಿಯನ್ನು ಕೊಟ್ಟ ಹಾಗಾಯಿತು. ಆದರಿಂದ ನೂಲಿನ ಬಟ್ಟೆಗಳನ್ನು ಮಾಡುವ ದೊಡ್ಡ ದೊಡ್ಡ ಕಾರಖಾನೆಗಳುಂಟಾದವು. ಆದರೆ ಅದರ ಶೋಧದಿಂದ ಉಂಟಾದ ಭವ್ಯವಾದ ಫಲವು ಇದೊಂದೇ ಅಲ್ಲ, ಇಂಥವು ಯೆಷ್ಟೋ ಉಂಟು. ಈ ಕಾರಖಾನೆಗಳನ್ನು ಮುಖ್ಯವಾಗಿ ಸ್ಥಾಪಿಸಿದ ಮನುಷ್ಯನು ಸರರಿಚರ್ಡ್ ಆರ್ಕರೈಟಯೆಂಬವನು. ಇವನ ಶೋಧಕ ಶಕ್ತಿಗಿಂತ ವ್ಯವಹಾರ ಚಾತುರ್ಯವೂ, ದಕ್ಷತೆಯೂ ಹೆಚ್ಚು ವರ್ಣಿಸತಕ್ಕದ್ದೆಂದು ಹೇಳಬಹುದು. ವಾಟ್ಟನೂ, ಸ್ಟೀಫನ್ಸನ್ನನೂ ಉಗಿಯ ಶಕ್ತಿಯನ್ನು ಹೊಸದಾಗಿ ಶೋಧಿಸಿದವರೆಂಬದರ ಬಗ್ಗೆ ಜನರು ಹ್ಯಾಗೆ ಸಂಶಯ ಪಡುತ್ತಾರೋ ಹಾಗೇ ಆರ್ಕರೈಟನ ಹೊಸ ಶೋಧಗಳನ್ನು ಕುರಿತು ಸಂಶಯಪಡುತ್ತಾರೆ. ವಾಟ್ಟನಿಗೂ, ಉಗಿಯಂತ್ರಕ್ಕೂ ಯೆ

ಷ್ಯ ಸಂಬಂಧವೋ, ಅಷ್ಟೇ ಆರ್ಕರೈಟನಿಗೂ, ನೂಲುವ ಯಂತ್ರಕ್ಕೂ ಸಂಬಂಧ ಉಂಟೆಂದು ತೋರುತ್ತದೆ. ಇವನು ಬೇರೆ ಬೇರೆ ಜನರ ಕಲ್ಪನೆಗಳನ್ನು ತನ್ನ ಯುಕ್ತಿಗೆ ಸರಿಯಾಗುವಂತೆ ಒಟ್ಟಾಗಿ ಕೂಡಿಸಿ, ತನ್ನದೊಂದು ಹೊಸ ಯಂತ್ರವನ್ನು ಮಾಡಿಟ್ಟನು. ಆರ್ಕರೈಟನಿಗಿಂತ ಮೂವತ್ತು ವರ್ಷಗಳ ಮುಂಚೆ ಬರ್ಮಿಂಗಂ ಪಟ್ಟಣದ ಲೂಯಿ ಪಾಲನೆಂಬವನು ಇವನ ಯಂತ್ರದಂಥಾದೇ ಒಂದು ನೂಲುವ ಯಂತ್ರವನ್ನು ರಚಿಸಿದಾಗ್ಯೂ, ಅವನ ಯಂತ್ರದ ಬೇರೆ ಬೇರೆ ಭಾಗಗಳ ರಚನೆಯು ಬಹಳ ಅಪೂರ್ತಿಯಾಗಿದ್ದ ಕಾರಣ ಅದರಿಂದ ಕೆಲಸ ನಡಿಸಿ ಲಾಭವೇನು ಆಗುತ್ತಿದ್ದಿಲ್ಲ; ಆದದರಿಂದ ಅವನ ಶೋಧವು ನಿಷ್ಫಲವಾಯಿತು. ಇನ್ನೊಬ್ಬ ಥಾಮಸಹಾಯಿಜ್‌ನೆಂಬ ಮನುಷ್ಯನು ಇದೇ ವಿಧದ ಯಂತ್ರವನ್ನು ಹುಟ್ಟಿಸಿದ್ದನೆಂದು ಹೇಳುತ್ತಾರೆ; ಆದರೆ ಅದರಿಂದಾದರೂ ಪ್ರಯೋಜನವೇನು ಆಗಲಿಲ್ಲ.

ಕೈಗಾರಿಕೆಯವರ ಕಾರಖಾನೆಗಳ ಸಲುವಾಗಿ ಶೋಧಕ ಬುದ್ಧಿಯುಳ್ಳ ಜನರು ಹೊಸ ವಸ್ತುಗಳನ್ನುಂಟು ಮಾಡುವದು ಅತ್ಯವಶ್ಯಕವಾಗಿರುವ ಸಮಯದಲ್ಲಿ ಬಹು ಜನರ ಮನಸ್ಸಿನಲ್ಲಿ ಒಂದೇ ವಿಧದ ಕಲ್ಪನೆಯು ಹೇರುತ್ತದೆಂದು ತೋರುತ್ತದೆ. ಉಗಿಯಂತ್ರ, ಅಭಯದೀಪ,* ತಂತಿಟಪಾಲು, ಇತ್ಯಾದಿ ಯಂತ್ರಗಳು ಹುಟ್ಟುವ ಕಾಲದಲ್ಲಿ ಇದೇ ಮೇರೆಗೆ ಆಯಿತು. ಆ ಕಾಲಗಳಲ್ಲಿ ತಮಗೆ ಬೇಕಾಗಿರುವ ಹೊಸ ವಸ್ತುಗಳನ್ನು ಹುಟ್ಟಿಸುವದಕ್ಕೋಸ್ಕರವಾಗಿ ಅನೇಕ ಜನರು ಕಲ್ಪಕರಾದ ಬುದ್ಧಿ ಶಾಲಿಗಳು ಅ

* ಇದನ್ನು ಕುರಿತು ಮುಂದೆ ಬರೆಯುವ.

ಪ್ರಯಾಸಪಡುತ್ತಿದ್ದರು. ಹೀಗಾಗಿ ಕಡೆಯಲ್ಲಿ ಹೆಚ್ಚು ಬುದ್ಧಿಯುಳ್ಳವನೂ, ವ್ಯವಹಾರ ಚತುರನೂ ಆದ ಕೆಲವೊಬ್ಬ ಮನುಷ್ಯನು ಮುಂದವರಿದು, ಯೆಲ್ಲರ ಮನಸ್ಸಿನಲ್ಲಿ ತೇಲಾಡುವ ಕಲ್ಪನೆಯನ್ನು ಕಾರ್ಯ ಸಿದ್ಧಿಯಾಗುವಂತೆ ಪ್ರಯೋಗಿಸಿ, ಅಪೇಕ್ಷಿತ ವಸ್ತುವನ್ನುಂಟು ಮಾಡಿ, ಅವರೆಲ್ಲರನ್ನೂ ಅದರ ಆಲೋಚನೆಯ ಶ್ರಮದಿಂದ ಬಿಡಿಸುತ್ತಿದ್ದನು. ಆದರೆ ಈ ವಿಧವಾಗಿ ಆ ಕಡಿಮೆಯ ಕಲ್ಪಕ ಜನರು ತಾವು ಹಿಂದಕ್ಕೆ ಬಿದ್ದದ್ದನ್ನು ನೋಡಿ ಸೈರಿಸದೆ, ಒಬ್ಬನು ಇದು ನನ್ನದು, ಯೆರಡನೇಯವನು ಈ ಕಲ್ಪನೆಯನ್ನು ನಾನೇ ಅವನಿಗೆ ಹೇಳಿದೆನು, ಮೂರನೇಯವನು ಇದನ್ನು ಮೊದಲು ಶೋಧಿಸಿ ತೆಗೆದವನು ನಾನೇ, ಯೆಂದು ಹಲತರದ ಕೂಗಾಟವನ್ನು ಯೆಬ್ಬಿಸುವರು. ಇದೇ ಕಾರಣದಿಂದ ವಾಟ್ಸ್, ಸ್ಟೀಫನ್ಸನ್, ಆರ್ಕ್‌ರೈಟ, ಮುಂತಾದ ಹಸ್ತ ಕೌಶಲ್ಯದಲ್ಲಿ ನಿಪುಣರಾದ ಬುದ್ಧಿಶಾಲಿಗಳು ತಾವೇ ಶೋಧಕರೆಂಬ ಬಾಧ್ಯಸ್ತಿಕೆಯನ್ನೂ, ಕೀರ್ತಿಯನ್ನೂ ಜಗಳಾಡಿ ಕಾಪಾಡಿಕೊಳ್ಳಬೇಕಾಯಿತು.

ಬೇರೆ ಯಂತ್ರಜ್ಞರಂತೆ ರಿಚರ್ಡ್ ಆರ್ಕ್‌ರೈಟನೆಂಬವನಾದರೂ ಬಡವರ ಮಗನೇ ಇದ್ದನು. ಇವನು ಪ್ರೆಸ್ತನ್ ಪಟ್ಟಣದಲ್ಲಿ ಸನ್ ೧೭೩೨ನೇ ವರ್ಷ ಹುಟ್ಟಿದನು. ಇವನ ತಾಯಿತಂದೆಗಳು ಬಹು ಬಡವರಿದ್ದರು; ಅವರ ೧೩ ಮಂದಿ ಮಕ್ಕಳಲ್ಲಿ ಇವನು ಯೆಲ್ಲಕ್ಕೂ ಕಡೆಯವನು. ಇವನು ಶಾಲೆಗೆ ಯೆಂದೂ ಹೋಗಲಿಲ್ಲ; ಆದದರಿಂದ ಇವನು ತನ್ನ ಸ್ವಂತ ಬುದ್ಧಿಯಿಂದಲೇ ಸ್ವಲ್ಪ ವಿದ್ಯಾಭ್ಯಾಸ ಮಾಡಿಕೊಂಡಿದ್ದನು. ಆದಾಗ್ಯೂ ಇವನಿಗೆ ಕಡೆತನಕ ಚನ್ನಾ

ಗೆ ಬರೆಯಲಿಕ್ಕೆ ಸಹ ಬರುತ್ತಿದ್ದಿಲ್ಲ. ಇವನು ಚಿಕ್ಕವನಿದ್ದಾಗ ಒಬ್ಬ ನಾವಲಿಗನ ಕೈಕೆಳಗೆ ಕೆಲಸ ಕಲಿಯುವದಕ್ಕೆ ಹೋಗುತ್ತಿದ್ದನು. ಆ ಉದ್ಯೋಗವನ್ನು ಕಲಿತನಂತರ ಇವನು ಬೋಲ್ಟನ್ ಪಟ್ಟಣದಲ್ಲಿ ಸ್ವತಂತ್ರವಾಗಿ ಕ್ಷೌರದ ಕೆಲಸ ಮಾಡಹತ್ತಿದನು. ಅಲ್ಲಿ ಇವನು ಒಂದು ನೆಲಮನೆಯಲ್ಲಿ ಇರುತ್ತಿದ್ದು, ಅದರಮೇಲೆ "ಈ ನೆಲಮನೆಯ ನಾವಲಿಗನ ಕಡೆಗೆ ಬನ್ನಿ, ಇವನು ಪೇನಿಗೆ ತಲೆಯ ಮಾಡುತ್ತಾನೆ," ಯೆಂದು ಬರೆದು ಹಚ್ಚಿದನು. ಹೀಗಾದಮೇಲೆ ಬೇರೆ ನಾವಲಿಗರು ತಮ್ಮ ಗಿರಾಕಿಗಳು ತಮ್ಮನ್ನು ಬಿಟ್ಟು ಹೋಗುತ್ತವೆಂದು ನೋಡಿ ತಾವಾದರೂ ಇವನಂತೆ ಒಂದೇ ಪೇನಿಗೆ ತಲೆಯ ಮಾಡಹತ್ತಿದರು. ಅದನ್ನು ನೋಡಿ ಆರ್ಕರೈಟನು ತನ್ನ ಉದ್ಯೋಗವನ್ನು ಮುಂದರಿಸಬೇಕೆಂಬ ನಿಶ್ಚಯದಿಂದ "ಅರ್ಧ ಪೇನಿಗೆ ಸ್ವಚ್ಛವಾದ ಕ್ಷೌರವಾಗುವದು," ಯೆಂದು ಬರೆದು ಹಚ್ಚಿದನು. ಕೆಲ ವರ್ಷಗಳ ನಂತರ ಇವನು ಆ ನೆಲಮನೆಯನ್ನು ಬಿಟ್ಟು ಊರೂರು ತಿರುಗುತ್ತಾ ಕೂದಲುಗಳ ವ್ಯಾಪಾರ ಮಾಡತೊಡಗಿದನು. ಆ ಕಾಲದಲ್ಲಿ ಗಂಡಸರು ತಮ್ಮ ತಲೆಯಮೇಲೆ ಕೃತ್ರಿಮ ಕೂದಲುಗಳನ್ನು ಧರಿಸುವ ನಡತೆ ಯಿತ್ತು. ಆದದರಿಂದ ಕೃತ್ರಿಮ ಕೂದಲುಗಳ ಟೊಪ್ಪಿಗೆಗಳನ್ನು ಮಾಡುವದೊಂದು ನಾವಲಿಗರ ದೊಡ್ಡ ಕೆಲಸವೇ ಆಗಿತ್ತು. ಆಕಾರಣ ಅರ್ಕರೈಟನು ಊರಿಂದೂರಿಗೆ ಹೋಗಿ ಈ ಟೊಪ್ಪಿಗೆಗಳ ಸಲುವಾಗಿ ಕೂದಲುಗಳನ್ನು ಕೊಳ್ಳುತ್ತಿದ್ದನು. ಲಾಂಕಾಶಾಯರಯೆಂಬ ತಾಲೂಕಿನಲ್ಲಿ ತರುಣ ಸ್ತ್ರೀಯರು ಕೂಡುವ ಸಂತೆಗಳಿಗೆಲ್ಲ ಇವನು ಹೋಗುತ್ತಿದ್ದನು. ಆ ಹಂ

ಗಸರು ತಮ್ಮ ತಲೆ ಕೂದಲು ಉದ್ದವಾಗಿರಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದ ಕಾರಣ, ಅವರ ಸಂಗಡ ಇವನ ವ್ಯಾಪಾರವು ಬಹು ಚೆನ್ನಾಗಿ ನಡೆಯುತ್ತಿತ್ತೆಂದು ಹೇಳುತ್ತಾರೆ. ಇದಲ್ಲದೆ ಇವನು ಕೂದಲಿಗೆ ಹಚ್ಚುವ ಒಂದು ವಿಧದ ಬಣ್ಣದ ಮಾರಾಟವನ್ನಾದರೂ ಮಾಡುತ್ತಿದ್ದನು. ಅದನ್ನು ಇವನು ಚಮತ್ಕಾರ ರೀತಿಯಿಂದ ಹಚ್ಚುತ್ತಿದ್ದನು; ಅದರಿಂದ ಅದರ ಮಾರಾಟವು ತಕ್ಕಮಟ್ಟಿಗೆ ಆಗುತ್ತಿತ್ತು. ಆದರೆ ಇಷ್ಟು ಪ್ರಯಾಸಪಟ್ಟು ಉದ್ಯೋಗ ಮಾಡಿದಾಗ್ಯೂ, ಇವನಿಗೆ ಅಂತು ಇಂತು ಉಪಜೀವನವ ಸಾಗಿಸುವದಕ್ಕೆ ತಕ್ಕಷ್ಟಕ್ಕಿಂತ ಹೆಚ್ಚು ಹಣವು ಸಿಕ್ಕುತ್ತಿತ್ತೆಂದು ತೋರುವದಿಲ್ಲ.

ಮುಂದೆ ಕೃತ್ರಿಮ ಕೂದಲುಗಳನ್ನು ಧರಿಸುವ ನಡತೆಯು ಬದಲಾದ ಕಾರಣ ಅವುಗಳ ಟೊಪ್ಪಿಗೆಗಳನ್ನು ಮಾಡುವವರಿಗೆ ವಿಪತ್ತು ಉಂಟಾಯಿತು. ಆದರೆ ಅರ್ಕರೈಟನಿಗೆ ಯಂತ್ರ ರಚನೆಯಲ್ಲಿ ಸ್ವಲ್ಪ ತಿಳುವಳಿಕೆಯಿದ್ದದರಿಂದ ಅವನು ಹೊಸ ಯಂತ್ರಗಳನ್ನು ರಚಿಸುವ ಉದ್ಯೋಗಕ್ಕೆ ಹತ್ತಿದನು. ಆ ಕಾಲದಲ್ಲಿ ಒಂದು ನೂಲುವ ಹೊಸ ಯಂತ್ರವನ್ನು ರಚಿಸುವದಕ್ಕೋಸ್ಕರವಾಗಿ ಬಹುಜನರು ಯತ್ನ ನಡಿಸಿದ್ದರು. ಆದದರಿಂದ ಈ ನಾವಲಿಗನಾದ ಯಾಂತ್ರಿಕನು ಅವರ ಸಂಗಡ ತಾನಾದರೂ ಅದೇ ಪ್ರಯತ್ನವನ್ನು ನಡಿಸಿದನು. ತನ್ನಂತೆ ಮನಸ್ಸಿನ ಬಲವುಳ್ಳವರಾಗಿ ಸ್ವಂತ ಪ್ರಯತ್ನದಿಂದ ಕಲಿತುಕೊಂಡ ಬೇರೆ ಜನರಂತೆ ಇವನಾದರೂ ತನಗೆ ಅವಕಾಶ ಸಿಕ್ಕಾಗ ಒಂದು ನಿರಂತರವಾಗಿ ಚಲನೆಯಲ್ಲಿಯೇ ಇರುವಂಥ ಯಂತ್ರವನ್ನು ರಚಿಸುವ ಉದ್ಯೋ

ಗ ನಡಿಸುತ್ತಿದ್ದನು. ಆಕಾರಣ ನೂಲುವ ಯಂತ್ರದ ಯುಕ್ತಿವನ್ನು ಕೈಕೊಳ್ಳುವದು ಇವನಿಗೆ ಸುಲಭವಾಗಿತ್ತು; ಯಾಕಂದರೆ ಇದಾದರು ಅದೇ ಜಾತಿಯ ಯಂತ್ರವಿರತಕ್ಕದ್ದೆಂಬದು ಸ್ಪಷ್ಟವೇ. ಈ ಕೆಲಸವನ್ನು ಇವನು ಅತಿಶಯ ಆಸ್ಥೆಯಿಂದ ನಡಿಸಲಾಗಿ, ತನ್ನ ಮುಂಚಿನ ವ್ಯಾಪಾರ

(ಮುಂದಕ್ಕೆ ಸಾಗುವದು.)

(New Poetry).

॥ಹೇಮಂತರ್ತು ವರ್ಣನೆಯು॥

॥ವಾರ್ಧಿಕ ಷಟ್ಪದಿಯು॥

॥ವಿರಹವಿಕ್ಷೇಣರಂ ನಂಜಿಸಲ್ ಭಂಜಿಸಲ್।
॥ಕಿರದೆಸುಮಸಾಳಿಯಂನದುರಿಸುತ್ತುದುರಿಸು।
॥ತ್ತರೆಜೀರ್ಣದಳಗಳಂ ಭಂಗಿಸಲ್ಕಿಂಗಿಸಲ್ ಪರಪುಷ್ಟವಿ
ಪ್ರತತಿಯಾ॥
॥ಕೊರಲೊತ್ತಿ ಸರಗಳಂ, ಶೌರ್ಯವೋ? ಕ್ರೌರ್ಯವೋ॥
ಗುರುಕುಚಾಲಿಂಗನಾಸಕ್ತರಾಶಕ್ತರಾ।
॥ಪರಿಸರದೊಳಿಟ್ಟಪನೊ! ಬಿಟ್ಟಪನೊ! ಚಳಿದೊರೆಪ್ರಾಣ
ಮಂ ಕಡುಸಡಂಗಿ॥೨೦॥

॥ಮಹಾಸ್ರಗ್ಧರಾವೃತ್ತಂ॥

॥ವರುಣಂತಾನೇಳ್ವನೇಕೆ! ಬ್ಬಿಸುವನೊರವಿಯಂ ನಾತನೇ
ಕೇಳ್ವನಿಗಾ–।
॥ತುರದಿಂ ರಥ್ಯಂಗಳೇಕಾರಥವನೆಳೆವವೆಂತ್ಯಾಕಿಲೊಳ್ ಪ
ಕ್ಕಿಗಳ್ನಿ–॥
॥ಪ್ಪರದಿಂದೀವಾರ್ತೆಯಂನೀ ಕಲಕಲರವದಿಂ ಪೇಳ್ವವೇ

ಕಕ್ಕಟಾಯಿಂ।

॥ಮರೆಬ್ಬೆದತ್ತು. ಪ್ರಿಯಾಲಿಂಗನ ಸುಖವನಗಲ್ದೀಳ್ವ ಕಾಂತಾ
ಕದಂಬಂ॥೨೯॥

॥ವ. ತಿ.॥ ಈಶಾಪದಿಂದರುಣನಾದನನೂರುವಾದಂ।
॥ತಾಶಾಪರಾಬ್ಧಿಖನಿನಂಹಯುವೊಂದುಸ್ರೋದ।
॥ತ್ರೈಸೊಂಕಿತಾಗಳವಕಂವಿಷವಾಶ್ವನಾಮಾ।
॥ಭಾಸಂನಿರಾಶ್ರಯುದೆಬಾಳುವವಾಖಗಂಗಳ್॥೩೦॥

॥ಮ. ವಿ. ವೃ॥ ಬಿಡರಾಲಿಂಗನವಂನುಬಿಟ್ಟೊಡೆ ಪುಸುಂ
ಕಂಪಾಣರ್ಪೆ ಮಾಣ್ದೊಡಂ।
॥ತೊಡನಾಸಜ್ಜೆಯೊಳಪ್ಪುತುಳ್ಕರರು, ನಿಲ್ಲರ್ ಕಾತ್ರೊ
ಡಂ ನಿಂತ್ರೊಡಂ॥
॥ನಡಿಯರ್ ತತ್ಕ್ರಿಯೆಯಾದೊಡಂ ಪೊಗಪುಸುಂ ಕಂ
ಬಿಟ್ಟರರ್ ಬಿಟ್ಟೊಡಂ।
॥ನುಡಿಯರ್. ದಂಪತಿಗಳ್ ಬಿಡರ್ ನುಡಿದೊಡಂ ತಾಪ್ಪೆ ಕಿ
ಲಂಬೈಪ್ರದಂ॥೩೧॥

॥ವಾಕ್ಯಂ॥ ಅದನುಂ॥ ॥ಕಂದಪದ್ಯಂ॥
॥ಬಿಟ್ಟೊಡೆ ಪ್ಯೆಯುನಡುಂಗಂ।
॥ನಟ್ಟರರಟ್ಟದೋರ್ಡಂ "ಚಳಯಾಪ್ರತ್ರ" ನುಡಿಯುಂ॥
॥ತೊಟ್ಟನೆಬಾಯಿಂಬಿಸುಟರ್।
॥ಕಟ್ಟೃಕಿಲ್ಗಡುಪನಿಂನುನಾನೇ ವೇಳ್ಪಂ॥೩೨॥

॥ಪದಂ॥ನಾಂಟಿ ರಾಗಂ॥

॥ಅಸಮಶರನ್ನೃಪನೀವ। ನುಸುಕಿಣ್ಣೆಗಳನೀ॥
ಗೆಸುಮಶರಕಸಗೊಳದ। ಋಷಿವಿಸರಗಳಗೆ॥ಪಲ್ಲ॥
॥ಚಳಗಾಲಮುಂಕರಿಸಿ, ಕಾಳಗಾಳಯುಂತರಿಸಿ॥

	ಜಳಪನುಗುಳುವಮಂಜು, ಗಳನೆಬರಿಸಿ	
	ಇಳೆಯೊಳೆತ್ತಂಕೞಸಿ ಬೆಳಬೆಳಸಿನೆಲೆಗೊಳಿಸಿ
	ಚಳಿಗಾಳಿಮಂಜುಗಳ, ಬಿಸುಪನಳಿಸಿ		ಅ	
	ಇನನುಷ್ಣವಂಶಳೆದು, ಘನವಹ್ನಿಯುರೆಗಳೆದು
	ಮುನಿಜನಕ್ಕಂತಪೋಭ್ರಾಂತಿದಳೆದು	
	ವನವಾಸಕೆಳದೊಯ್ದು, ಮುನಿದೈಕಿಲಂಹೊಯ್ದು
	ತನುಬಿರಿಯೆ ಮೂಡೆಲರಿನಿಂದೆಪೊಯ್ದು		ಬ	
	ಚಳಿಗಾಳಿಮಂಜುಗಳ್, ಚಳಿತರುಣನುದಯದೊಳ್
	ಕಳಿಸಿಬಟ್ಟೆಗಳ ಕೈಪಮನೊಂದನುಳಿಸಿ	
	ಜಳದಿಮುಳುಮುಳುಗಿಸೇಳಿಸಿ, ಕಂಪನಂಗೊಳಿಸಿ
	ಚಳಚಳನೆ, ಜಾಣನುದುಪಾಯಪ್ರವೀಣಂ		ಕ	
	ಧರೆಗೊಂಬೆಬೆರಳೂರಿ, ಕರಗಳಂವೋಲ್ವೀರಿ
	ಕೊರಲೆತ್ತಿವೊಗಗಂಗಳಂರವಿಗೆತ್ತೋರಿ	
	ಬರೆಬೈಲೊಳಂತುನಿ, ಲ್ತಿರುವಂತ್ರಿಮಾಜಿನಿ
	ಭರ್ರದಿಂದಿನಂಕಂಗಳಂಕುಕ್ಕುತಿರಲು		ಡ	
	ನಿಟ್ಟುರಪೊಳಂತುಬಾಧಿಸಲುಕೆಲವರುಬಂನ
	ಬಟ್ಟು ಹರಿಹರಿ!! ಯೆಂದುಹರಿಯುಮರೆವೊಗಲು	
	ಧಿಟ್ಟ ಕೌಶಿಕ, ಪರಾಶರಮುಖರ್ಭ್ರಮಿಸಿಕಂ
	ನೆಟ್ಟು, ಧೈರ್ಯಂಬಿಟ್ಟು, ಕಾಲಿಗೆರಗಿರಲು		ಈ		೨೫	

||ಗದ್ಯಂ|| ಇಂತುಕಂಗೊಳಸುತ್ತಮೋಹಮಾಗಮಂ ಮನೋರಮಮಾಗಿಪ್ಪರ್ದುಮಲ್ಲದೆ||

||ನಾರಾಯಣಂಬೋಲ್ — ಮಹಾಹಿಮಾಶ್ರಯಂ, ಪಙ್ಕಾಂತಕಂ||

||ಶಿವನಂತೆವೋಲ್—ಅಪರ್ಣಾಗೋಪವನಾಶ್ರಯಂ,||

॥ಪರೋಪಕಾರಿಯಂತೆ– ಬಹುಧಾನ್ಯ ಕಾಂಕ್ಷಾಪೂರಕಂ॥
॥ಶರಂಬೊಲ್—ಪರಾಶಾಪ್ರಕಂಪನಂ॥
॥ವಿಧುವಿಹಿತನಾಗಿಯುಂ, ಸುಪರ್ಣಾಂತಕಂ॥
॥ಶೀತಲಸತ್ವಾನ್ವಿತನಾಗಿಯುಂ, ವಿಗ್ರಹವಿಭೇದಕಂ, ಶೂ
ರಕರಸ್ತಂಭಕಂ॥
॥ಪ್ರದ್ಯುಮ್ನೋದ್ರೇಕಸಂವರ್ಧನನಾಗಿಯುಂ, ಸಕಲವಿಭ
ವಾನಂದಾಪಹಾರಕಂ॥
॥ಮನ್ಮಥೋತ್ಫಲದನಾಗಿಯುಂ, ಸುಮನೋಜಾತ್ಯಂತ
ಕಂ॥
॥ನದೀನದಾನುಬಂಧೋಗಿಯಾಗಿಯುಂ, ನಿಸ್ವನಾಮಹಿ
ತಘನೋಪೇತ, ಮೊನಸಿಸ್ರ್ಗದಲ್ಲದೆಯುಂ॥
॥ಮ. ವೃ॥ ಕಮಳಾನಂದವಕಂದಿಸಲ್ ದುಗುಡದಿಂ ದಾರಾಜ
ಹಂಸದ್ವಿಜಾ–।
॥ಳಿಮನಂನೊಂದುಸುಮಾನಸಾಶ್ರಯಮನಾಯುಲ್ ಕ್ಪೋ
ಯ್ಯುತ್ತಿಹ್ಯಮಾಗಮಂ॥
॥ಸುಮನೋನಾಶಕನೀತನಂಶಮಿಸಲಾ ಲೋಕೈಕಶೂ
ರಂಸುಜಾ।
॥ನಮುಕೊಂಡೇಳ್ ಪ್ರತಾಪಗುಂಬದನಲಂಘ್ಯಂ ಕಾಲಮ
ಯ್ದಾರ್ದೆಯುಂ॥೨೬॥
॥ಚಲುವಂನೀಪೆಲ್ವೊಗಳಂಸಸಿಸಿನಂಮುಂನಂದಗುಂದಿಪ್ಪ
ಗ್ಯ–॥
॥ಕಿಲಗಾಲಂಗಲರಂಬನಂತ್ರಿಗೆಳ್ಯುಂ ತನ್ನಾಮುಮಂಪೇ
ಳ್ವೆನಂ॥
॥ದೊಲಪಿಂಪುಸ್ತ್ರಥವೃಕ್ಷಮಾನೆನಲದೆಷ್ಟೋ ಮಿತ್ರರೋ.

ಳ್ಪ್ರೀತಿ! ಸಾ।
॥ಫಲಮಾಯ್ತುಜ್ಜುಗ "ಮಾಧ್ಯಮಸ್ಯಫಲ" ಮೆಂಬೀ
ಶಾಸ್ತ್ರಮೇಂ ಮಿಥ್ಯಮೇ?॥೩೭॥

॥ಕಂ॥ ವಸಲಕ್ಷ್ಮೀಪತಿಮಾಧವ।
॥ಘನವಿರಹಜ್ವಾಲೆಯೋ! ಹಿಮತೂರ್ವಿರ್ವಕೇ—।
॥ತನರಕ್ತ ಪಟಪಟಲಮೋ॥
॥ಯೆನೆಪ್ರೊತಾಮುತ್ತಲಂಮಲಂಕಂಗೊಳಿಕುಂ॥೩೮॥
॥ತ್ರೊತ್ತುಳಪ್ಪದುರ್ಗಗಳಪಡಗೆ।
॥ಸುತ್ತಿಪಥಿಕ, ಪಿಕ, ಶುಕಂ ಗಳೆಳೆಮಾವೆನುತಂ॥
॥ಮುತ್ತಿದೊಡಾಕೆಗೆಡಿಸಿದಾ।
॥ಗೊತ್ತಿಗೆ "ಮುತ್ತುಗ" ಮಿದೆಂದರಾಕಂನಡಿಗರ್॥೩೯॥

॥ಶಾ. ವಿ.॥ಪ್ರೊತಾಮುತ್ತಲಮಂ ಶುಕಂತಳೆತಮಾವೆಂದೈತರ
ಲ್ "ಕಿಂ? ಶುಕಾ—
॥ಯಾತೋಸ್ಯತ್ರ ನಿರರ್ಥಕಂ ಕಥಯಮೇ! ಜಾನೀಹಿ
ನಾಹಂನವಃ॥
॥ಚತೋ ತ್ರೋಸ್ಮೀತಿ" ಯೆನುತ್ತದಂನದುಮರಳ್ದತ್ತಿಂದು
ದೇ ವ್ರೋಕ್ತಿವಿ
॥ಜ್ಞಾತರ್ಸೇಳುವರ "ಸ್ಯ ಕಿಂಶುಕಸಮಾಖ್ಯಾ ಸತ್ಯಮೆಂ"
ದಂದಿನಿಂ॥೪೦॥

॥ಇತಿಹೇಮಂತರ್ತುವರ್ಣನಂ॥

ತಾರೀಖು ೭ ಮಾಹೆ ಎಪ್ರೇಲ್ ಸನ್ ೧೮೭೩ ಇಸವಿ ಮುಕ್ಕಾಂ ಕಾಗಿನೆಲ್ಲೀ.	ಧೋಂಡೋ ನರಸಿಂಹ ಮುಳಬಾಗಲಕರ ಮುಕ್ಕಾಂ ಕಾಗಿನೆಲ್ಲೀ.

NOTICES.

ನೋಟಿಸುಗಳು.

ಮೆಹರಬಾನ ಯೆಜ್ಯುಕೇಶನಲ ಇನಸ್ಪೆಕ್ಟರ ಸಾಹೇಬ ಬಹಾದ್ದೂರ ಇವರ ಕಚೇರಿಯಿಂದ—.

ಯಾದಾಸ್ತು:—

ರೆವ್ಹಿನ್ಯೂ ಮುಂತಾದ ಖಾತೆಗಳ ಕೆಳಗಿನ ಅಧಿಕಾರಿಗಳಿಂದ ಇಡಲ್ಪಟ್ಟ ಖಾತೆ ಕಿರ್ದಿಗಳಲ್ಲಿ ಸ್ವಚ್ಛತೆಯು ಸಲುವಾಗಿಯೂ, ಶುದ್ಧತೆಯು ಸಲುವಾಗಿಯೂ ಏತದ್ದೇಶೀಯ ಅಂಕೆಗಳಿಗೆ ಬದಲಾಗಿ ಇಂಗ್ಲಿಷ ಅಂಕೆಗಳನ್ನು ಉಪಯೋಗಿಸಬೇಕೆಂದು ಸರಕಾರದವರ ಅಭಿಪ್ರಾಯವುಂಟು. ಈ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಮೂರನೇದು ಹಿಡಿದು ಮುಂದಿನ ಎತ್ತೆಗಳಂತೆ ಅಭ್ಯಾಸ ನಡಿಸುವಂಥಾ ವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್ ಮಾಸ್ತರರೂ ಸೇಕಂಡಗ್ರೇಡ ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್ ಮಾಸ್ತರರೂ ಇಂಗ್ಲಿಷ ಅಂಕೆಗಳ ಮಾಹಿತೀ ಮಾಡಿಕೊಳ್ಳತಕ್ಕದ್ದು. ಮತ್ತು ವಿದ್ಯಾರ್ಥಿಗಳ ಕೈಯಿಂದ ಇಂಗ್ಲಿಷ ಅಂಕೆಗಳನ್ನು ಹಾಕಿ ಲೆಕ್ಖ ಮಾಡುವ ಅಭ್ಯಾಸ ಮಾಡಿಸತಕ್ಕದ್ದು. ಡಿ. ಇ. ಇನಸ್ಪೆಕ್ಟರರೂ, ಅಸಿಸ್ಟಂಟ ಡಿ. ಇ. ಇನಸ್ಪೆಕ್ಟರರೂ ಶಾಲೆಗಳ ಪರೀಕ್ಷೆಯನ್ನು ತಕ್ಕೊಳ್ಳುವಾಗ ಈ ವಹಿವಾಟು ನಡೆದದೆಯೋ ಇಲ್ಲವೋ ಯೆಂಬ ಬಗ್ಗೆ ಶೋಧ ಮಾಡತಕ್ಕದ್ದು. ಆದರೆ ಹೆಡ್ ಮಾಸ್ತರರು ಚನ್ನಾಗಿ ತಿಳಿಯತಕ್ಕದ್ದೇನಂದರೆ ಶಾಲೆಗಳಲ್ಲಿ ಇಂಗ್ಲಿಷ ಅಂಕೆಗಳ ಅಭ್ಯಾಸವನ್ನು ನಡಿಸಿ ಏತದ್ದೇಶಿಯ ಅಂಕೆಗಳನ್ನು ತೀರ ತೆಗೆದು ಹಾಕಕೂಡದು. ಅವರ ವಿದ್ಯಾರ್ಥಿಗಳಿಗೆ ಇಂಗ್ಲಿಷ

ಅಂಕೆಗಳಿಂದಲೂ, ಏತದ್ದೇಶೀಯ ಅಂಕೆಗಳಿಂದಲೂ ಲೆಕ್ಕ ಮಾಡುವ ರೀತಿಯು ಪೂರ್ಣವಾಗಿ ಗೊತ್ತಿರತಕ್ಕದ್ದಿಷ್ಟೇ.

(Signed) J. F. Fleet.

ಮುಕ್ಕಾಮು ಗದಗ ತಾ. ೧೮ ಮಾಹೆ ಮಾರ್ಚ ಸನ್ನ ೧೮೭೩ ಇ. } ಅ. ಎ. ಇನಸ್ಪೆಕ್ಟರ ದಕ್ಷಿಣಭಾಗ.

ಮೆಹರಬಾನ ಯಜ್ಯುಕೇಶನಲ ಇನಸ್ಪೆಕ್ಟರ ಸಾಹೇಬಬ
ಹಾದ್ದುರವರ ಕಚೇರಿಯಿಂದ—

ಯಾದಾಸ್ತು:—

ಶಾಲೆಯ ಲೆಕ್ಕವನ್ನು ಇಡುವ ಕೆಲಸದಲ್ಲಿ ದುರ್ಲಕ್ಷ್ಯದ ಯೆರಡು ಉದಾಹರಣೆಗಳು ಇತ್ತಲಾಗಿ ನಮ್ಮ ನಜರಿಗೆ ಬಂದಿರುತ್ತವೆ. ಅವು ಯಾವವೆಂದರೆ—

(ಅ) ಒಬ್ಬ ಮಾಸ್ತರನು ರಜಿಸ್ತರ ಇಡುವ ಕೆಲಸವನ್ನೂ ಫೀ ಯೆತ್ತುವ ಕೆಲಸವನ್ನೂ ಸ್ವತಃ ತಾನಾಗಲಿ, ತನ್ನ ಅಸಿಸ್ಟಂಟರ ಮುಖಾಂತರವಾಗಿ ಆಗಲಿ ನಡಿಸದೆ ವಿದ್ಯಾರ್ಥಿಗಳಿಗೆ ಒಪ್ಪಿಸುತ್ತಾನೆಂದು ಕಂಡು ಬಂದದೆ; ಮತ್ತು

(ಬ) ಕಾರಕೂನನಿರುವಂಥಾದೊಂದು ಶಾಲೆಯಲ್ಲಿ ಫೀ ಹಣವು ಆಗಿಂದಾಗ್ಗೆ ತಿಜೋರಿಗೆ ಭರಣಾ ಮಾಡಲ್ಪಡಲಿಲ್ಲವೆಂತಲೂ, ತಿಜೋರಿಯಿಂದ ಹಣ ತಂದ ಬಳಿಕ ಆಗಿಂದಾಗ್ಗೆ ವಿದ್ಯಾರ್ಥಿಗಳು ಮುಂತಾದವರಿಗೆ ಸಲ್ಲತಕ್ಕ ಸಂಬಳದ ಹಣವು ಸಲ್ಲಲಿಲ್ಲವೆಂತಲೂ ಕಂಡು ಬಂದದೆ.

೨ ಸೇಕಂಡಗ್ರೇಡ ಅ. ವ್ಹ. ಶಾಲೆಗಳ ಹೆಡ್ ಮಾಸ್ತರರೂ, ವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್ ಮಾಸ್ತರರೂ ಮೇಲೆ ಹೇಳಿದ ಯೆರಡು ಸಂಗತಿಗಳಿಗೆ ಚನ್ನಾಗಿ ಲಕ್ಷ್ಯಕೊಡತಕ್ಕ

ದ್ದು. ಮತ್ತು ಅವರಿಗೆ ತಿಳಿಸುವದೇನಂದರೆ ಶಾಲೆಗಳ ಲೆಕ್ಕ ಪತ್ರದ ಕೆಲಸದಲ್ಲಿಯೂ ರಜಿಸ್ತರದ ಕೆಲಸದಲ್ಲಿಯೂ ಅವರು ವಿದ್ಯಾರ್ಥಿಗಳಿಗೆ ಕೈ ಹಾಕಗೊಡಬಾರದು; ನಿಯಮಿತ ವೇಳೆಯಲ್ಲಿ ಫೀ ವಸೂಲ ಮಾಡಿ ಅದನ್ನು ತಿಂಗ ತಿಂಗಳಿಗೆ ತಿಜೋರಿಗೆ ಭರಣಾ ಮಾಡತಕ್ಕದ್ದು. ದಕ್ಷಿಣಭಾಗದೊಳಗಿನ ಪ್ರತಿ ಹೆಡ್ಡ ಮಾಸ್ತರನು ಮೇಲೆ ಹೇಳಿದ ಕ್ರಮದಿಂದಲೂ, ಜಾಗ್ರತೆಯಿಂದಲೂ ನಡೆಯುವನೆಂದು ನಾವು ಅಪೇಕ್ಷಿಸುತ್ತೇವೆ. ಅದರಂತೆ ನಡೆಯದಿದ್ದರೆ ಬದತರ್ಫ ಮಾಡಲಾದೀತು. ಸೇಕಂಡಗ್ರೇಡ ಅಂಗ್ಲೋಹ್ವನ್ಯಾರ್ಕ್ಯುಲರ ಶಾಲೆಗಳ ಹೆಡ್‌ಮಾಸ್ತರರೂ, ಹ್ವನ್ಯಾರ್ಕ್ಯುಲರಶಾಲೆಗಳ ಹೆಡ್‌ಮಾಸ್ತರರೂ ಶಾಲೆಯ ಲೆಕ್ಕದ ಕೆಲಸಗಳಲ್ಲೆಲ್ಲ ತಾವೇ ಜಬಾಬುದಾರರಿರುತ್ತಾರೆಂದು ತಿಳಿಯತಕ್ಕದ್ದು.

(Signed) J. F. Fleet,

ಬೆಳಗಾವ ತಾ॥ ೨೬ ಮೇ ಸನ್ನ ೧೮೭೩ ಇಸವಿ.	ಅಯ. ಇನಸ್ಪೆಕ್ಟರ ದಕ್ಷಿಣಭಾಗ.

ಮಿಹರಬಾನ ಯೆಜ್ಯುಕೇಶನಲ ಇನಸ್ಪೆಕ್ಟರ ಸಾಹೇಬ ಬಹಾದ್ದುರವರ ಕಚೇರಿಯಿಂದ—

ಯಾದಾಸ್ತು:—

ದಕ್ಷಿಣ ಭಾಗದೊಳಗಿನ ಸೇಕಂಡಗ್ರೇಡ ಹಾಂಗು ಕನ್ನಡ ಮರಾಠೀ ಶಾಲೆಗಳ ಹೆಡ್‌ಮಾಸ್ತರರಿಗೆ ತಿಳಿಯ ಪಡಿಸುವದೇನಂದರೆ ಸರಕಾರೀ ನೌಕರರು ತಾವು ಕೆಲಸಮಾಡುವ ಜಿಲ್ಹೆಯಲ್ಲಿ ಭೂಮಿಯನ್ನು ಸಂಪಾದಿಸ ಬಾರದೆಂದು ಸ

ರಕಾರದವರ ಹುಕುಮು ಇದ್ದದ್ದು ವಿದ್ಯಾಖಾತೆಯೊಳಗಿನ ನೌಕರರಿಗೆ ಸಹ ಸಂಬಂಧವಾಗಿರುತ್ತದೆ.

(signed) J. F. Fleet.

ಬೆಳಗಾವ ತಾ|| ೨೭ ಮೇ ಸನ್ನ ೧೮೭೫ ಇಸವಿ. } ಅ. ಯೆ. ಇನಸ್ಪೆಕ್ಟರ ದಕ್ಷಿಣ ಭಾಗ.

ಕಾನಡಾ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ಡಿ. ಎಜ್ಯುಕೇಶನಲ್ ಇನಸ್ಪೆಕ್ಟರ ಜಿಲ್ಲಾ ಕಾನಡಾ ಇವರ ಕಡೆಯಿಂದ ತಿಳಿಯಪಡಿಸುವದೇನಂದರೆ ಕುಮಟಾ ತಾಲೂಕ ಪೈಕಿ ಬಾಡ ಸ್ಕೂಲಮಾಸ್ತರರಾದ ತಂಮಾಜಿ ಅಂಣಾಜಿ ಸವದಿ ಇವರು ಹುಕುಮು ಪಡಕೊಂಡ ಹೊರತು ತಂಮ ಕೆಲಸ ಬಿಟ್ಟು ೭ ದಿವಸ ಗೈರ ಹಾಜರ ಇದ್ದದ್ದು ತಿಳುವಳಿಕೆಗೆ ಬಂದದರಿಂದ ಅವರಿಗೆ ಮೊಹರಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹಾದೂರ ದಕ್ಷಿಣಭಾಗ ಇವರು ಅರ್ಧ ರೂಪಾಯಿ ದಂಡಮಾಡಿದ್ದಾರೆ. ಈ ಮಜಕೂರು ಎಲ್ಲ ಮಾಸ್ತರರು ಹಾಗೂ ಅಸಿಷ್ಟಂಟರು ತಿಳುಕೊಂಡು ಜಾಗ್ರತೆ ಇಡಬೇಕು ತಾರೀಖು ೧೦ ಮೇ ಸನ್ ೧೮೭೫ ಇಸವಿ ಮುಕ್ಕಾಮ ಕಾರವಾರ.

(Signed) R. W. Bhanap.

ಡಿ. ಇ. ಇನಸ್ಪೆಕ್ಟರ ಜಿಲ್ಲಾ ಕಾನಡಾ.

ಧಾರವಾಡ ಜಿಲ್ಲೆದೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ತಿಳಿಯಪಡಿಸುವದೇನಂದರೆ–ಕೆಲವು ಮಾಸ್ತರರು ನಂಮ ಕಡೆಗೆ ವಿನಹಕಾರಣ ರಿಪೋರ್ಟುಗಳನ್ನು ಮಾಡುತ್ತಾರೆ. ಇದರಿಂದ ನಂಮ ಕಚೇರಿಯಲ್ಲಿ ವ್ಯರ್ಥ ಕೆಲಸವು ಬೆಳೆಯುತ್ತದೆ. ಇಂನ ಮುಂದೆ ವಿನಹಕಾರಣ ರಿಪೋರ್ಟು ಮಾಡುವವರವಿಷಯವಾಗಿ ತಜವೀಜಮಾಡುವೆವು. ತಿಳಿಯುವದು ತಾರೀಖು ೧೯ ಮಾಹೆ ಮೇ ಸನ್ನ ೧೮೭೩ ಇಸವಿ. ಧಾರವಾಡ.

(Signed) Chanbussappa B. Dharwar,
ಡಿ. ಯು. ಇ. ಜಿಲ್ಹಾ ಧಾರವಾಡ

ಬೆಳಗಾಂವ ಟ್ರೇನಿಂಗಕಾಲೇಜದಲ್ಲಿ ಪರೀಕ್ಷೆ ಕೊಟ್ಟು ಸರಟಿಫಿಕೇಟು ಪಡಕೊಂಡು ಇಂನುವರೆಗೂ ವಿದ್ಯಾಖಾತೆಯಲ್ಲಿ ಕೆಲಸದೊರಕದೆ ಇರುವಟ್ರೇಂಡ ವಿದ್ಯಾರ್ಥಿಗಳಿಗೆ ಹಾಗು ಮಾಸ್ತರರಿಗೆ–

ಬೆಳಗಾಂವ ಟ್ರೇನಿಂಗ ಕಾಲೇಜದ ಆಕ್ಟಿಂಗ ಪ್ರಿನ್ಸಿಪಾಲರು ತಿಳಿಸುವದೇನಂದರೆ, ವಿದ್ಯಾಖಾತೆಯಲ್ಲಿ ಖಾಲಿ ಬೀಳುವಂಥ ಸಣ್ಣ ಅಥವಾ ದೊಡ್ಡ ಪಗಾರದ ಅಶಿಷ್ಟಾಂಟ ಮಾಸ್ತರ ಕೆಲಸಗಳನ್ನು, ಕಾಲೇಜದಲ್ಲಿ ಅಭ್ಯಾಸಮಾಡಿ ಸರಟಿಫಿಕೇಟು ಪಡೆಯದೆ ಇರುವ ಜನರಿಗೆ ಕೊಡುವ ವಹಿವಾಟ ಬಂದ ಮಾಡಬೇಕೆಂದು ಮೆ. ಎ. ಇ. ದಕ್ಷಿಣಭಾಗರವರ ವಟ್ಟು ಹುಕುಮು ಆದ್ದರಿಂದ ಆ ಹುಕುಮು ಅಮಲಿನಲ್ಲಿ ತರತಕ್ಕದ್ದಿರುತ್ತದೆ. ಮತ್ತು ಮೆ. ಡಿ. ಎ. ಇ. ಜಿಲ್ಹಾ ಬೆಳಗಾಂವ ಇವರ ಕಡಿಂದ ನಮಗೆ ಬರೆದು ಬಂದದಲ್ಲಾ ಈ ಪ್ರಕಾರ ಖಾಲಿ ಇರುವ ಜನರು ಎಷ್ಟು ಮಂದಿ, ಅವರ ಜಾತಿ, ವ

ಯು, ಎಷ್ಟು ರೂಪಾಯಿಯ ಸರಟಿಫಿಕೇಟು ಪಡಕೊಂಡಿದ್ಧಾರೆ ಮತ್ತು ಕನಿಷ್ಟ ಎಷ್ಟು ರೂಪಾಯಿಯ ಪಗಾರದ ಅಶಿಷ್ಟಾಂಟ ಮಾಸ್ತರನ ಕೆಲಸಕ್ಕೆ ಹೋಗುವದಕ್ಕೆ ಇಚ್ಛೆಯುಳ್ಳವಂದ್ಧಾರೆ. ಮುಂತಾದ ಮಾಹಿತಿ ಬೇಡಿದ್ಧಾರೆ ಹೀಂಗು ಬೆಳಗಾಂವ ಜಿಲ್ಹೆಯಲ್ಲಿ ಅಶಿಷ್ಟಾಂಟ ಮಾಸ್ತರನ ಬಹಳ ಕಡಿಮೆ ಪಗಾರ ೪ ನಾಲ್ಕು ರೂಪಾಯಿ ಹಾಂಗೆ ಬಹಳ ದೊಡ್ಡ ಪಗಾರ ೨೦ ರೂಪಾಯಿ ಇರುತ್ತದೆ ಈ ನೋಟಿಸಿನಿಂದ ನಿಮಗೆ ತಿಳಿಸುವದೇನಂದರೆ ನೀವು ನಿಮ್ಮ ಹೆಸರು, ಜಾತಿ, ವಯ, ಪರೀಕ್ಷೆ ಕೊಟ್ಟ ವರುಷ, ಎಷ್ಟು ರೂಪಾಯದ ಸರಟೀಫಿಕೇಟು ಪಡಕೊಂಡಿದ್ಧೀರಿ ಎಷ್ಟು ಪಗಾರಕ್ಕೆ ಕಬೂಲ ಇದ್ಧೀರಿ ಎಂಬುವದನ್ನು ನಮ್ಮ ಕಡಿಗೆ ಪೋಷ್ಟ ಸೇಡ ಪತ್ರದ್ವಾರ ತೀವ್ರ ಬರೆದು ತಿಳಿಸಿದಲ್ಲಿ, ಒಟ್ಟು ಜನರ ಒಂದು ಯಾದಿಮಾಡಿ ಶಾಲಾಪತ್ರಿಕೆಯಲ್ಲಿ ಛಾಪಿಸುತ್ತೇವೆ. ಅಂದರೆ ಜಾಗಗಳು ಖಾಲಿ ಇದ್ದ ವೇಳೆ ನಾಲ್ಕು ಜಿಲ್ಹೆಯ ಡಿ. ಎ. ಇ. ರವರು ತಮ್ಮ ತಮ್ಮ ಸೋಯಿಪ್ರಕಾರ ನೇಮಣೂಕು ಮಾಡುವದಕ್ಕೆ ಸುಲಭವಾದೀತು. ಸದರಿ ಯಾದಿ ಅಗಷ್ಟ ತಿಂಗಳ ಮಾಸಪತ್ರಿಕೆಯಲ್ಲಿ ಛಾಪಿಸುವವರು ಇದ್ಧೇವೆ ಅದರ ವೊಳಗಾಗಿ ನಿಮ್ಮ ಪತ್ರಗಳು ಬರತಕ್ಕದ್ದು ತಿಳಿಯುವದು ತಾರೀಖು ೬ನೇ ಜೂನ ಸನ ೧೮೭೩ ಇಸವಿ—

[signed]Shrinivas R. Sowady.

ಅಕ್ಟಿಂಗ ಪ್ರಿನ್ಸಿಪಾಲ ಟ್ರೇನಿಂಗಕಾಲೇಜ

ಬೆಳಗಾಂವಿ.

Correspondence.

ಪತ್ರವ್ಯವಹಾರವು.

ಮಹಾರಾಜ ರಾ॥ ರಾ॥ ಕನ್ನಡ ಮಾಸಪತ್ರಕರ್ತರಿಗೆ ಸೇವಕನ ವಿಜ್ಞಾಪನೆ: ಏನೆಂದರೆ ನಾನು ಒಂದು ಪುಸ್ತಕದೊಳಗಿನ ಲೆಖ್ಖಗಳನ್ನು ಮಾಡುತ್ತಿರಲು; ಒಂದು ಸ್ಥಳದಲ್ಲಿ ಸ್ವಲ್ಪ ಸಂಶಯ ಹುಟ್ಟಿದರಿಂದ ಅದನ್ನು ತಮ್ಮ ಕರಗಳಲ್ಲಿ ಹುಟ್ಟುವ ಅಂದವಾದ ಪತ್ರದಲ್ಲಿ ಛಾಪಿಸಿದರೆ, ಯಾರಾದರೂ ಕೆಳಗೆ ಬರೆದ ನನ್ನ ಸಂಶಯವನ್ನು ಮಾಸಪತ್ರದ್ವಾರದಿಂದ ಪರಿಹಾರ ಮಾಡುವರೆಂಬ ಮಹತ್ಕಾಂಕ್ಷೆಯಿಂದ ತಮ್ಮ ಕಡಿಗೆ ಕಳುಹಿಸಿದ್ದೇನೆ. ಆದರೆ ಈ ನನ್ನ ಅಪೇಕ್ಷೆಯನ್ನು ಪೂರ್ಣಮಾಡುವವರು ಸಮರ್ಥರೇ ಇದ್ದೀರಿ.

೧/೪ ಮತ್ತು ೦/೪ ಇವೆರಡರಲ್ಲಿ ಭೇದ ಉಂಟೋ ಇಲ್ಲವೋ? ಭೇದವಿದ್ದರೆ ಏನು ಭೇದ? ಇಲ್ಲದಿದ್ದರೆ ಯಾಕೆ ಇಲ್ಲ? ಈ ನನ್ನ ಸಂಶಯವನ್ನು ಮುಂದಿನ ತಿಂಗಳ ಪತ್ರದ್ವಾರದಿಂದ ಯಾರಾದರೂ ದೂರಮಾಡಬೇಕೆಂಬುದಾಗಿ ಬೇಡಿಕೊಳ್ಳುತ್ತೇನೆ.

ತಾರೀಖು ೨೯।೫।೮೩ } ಸಹಿ ಅಣ್ಣಾಜಿ ಕೃಷ್ಣ ಮುದ್ದತನೀಸ ಮುಗುಟಖಾನ ಹುಬ್ಬಳ್ಳಿ ತಾಲೂಕ ಸಂಪಗಾವ

ಮಾ॥ ರಾ॥ ರಾ॥ ಕನ್ನಡ ಮಾಸಪತ್ರಕರ್ತರಿಗೆ—

ಏ. ಏ. ತಮ್ಮ ಕರಗಳಿಂದ ಹುಟ್ಟಲ್ಪಟ್ಟ ಮೇ ತಿಂಗಳ ಶಾಲಾಪತ್ರಿಕದಲ್ಲಿ ಬ್ಯಾಡಗಿ ಅಸಿಸ್ಟಂಟ ಮಾಸ್ತರರು ಕೊಟ್ಟ ಶ್ಲೋಕವನ್ನು ಅರ್ಥಸಹಿತವಾಗಿ ಬರೆದು ತಮ್ಮ ಕಡೆಗೆ ಕಳುಹಿಸಿದ್ದೇನೆ ಆದರೆ ತಾವು ಅದನ್ನು ಅಚ್ಚಿಸಿ ಪ್ರಸಿದ್ಧ ಮಾಡು

ಏರೆಂದು ಆಶಿಸುತ್ತೇನೆ.

ಶ್ಲೋಕವು.

	ನಕ್ಷತ್ರ ಮಂಟಪದೊಳೋರ್ವ ಗೋಪಾಲಸತಿ
	ನಕ್ಷತ್ರರಮಣನನುಜನ ತೊಡೆಯ ಮೇಲೆ ಕುಳ್ಳಿರ್ದು
	ನಕ್ಷತ್ರ ಮಂ ಪಿಡಿದು ನಕ್ಷತ್ರದಿಂ ಹಿಮವ ತುಂಬುತಿರಲಾಗ	
	ನಕ್ಷತ್ರ ರಿಪುಜನಕ ಬಾಗಿಲೊಳು ಧ್ವನಿಗೈಯ್ಯೆ
	ನಕ್ಷತ್ರದಿಂ ಕೇಳನಮಿಸಿ ಭಿಕ್ಷವನೀಡಿ
	ನಕ್ಷತ್ರಪತಿಧರಗೆ ವಂದಿಸುತ ತಾಂ ತನ್ನ ನಕ್ಷತ್ರಮಂ ಸಾರ್ದ
ಳು	೧	

ಈ ಶ್ಲೋಕದಲ್ಲಿ ನಕ್ಷತ್ರ ಶಬ್ದಗಳಿಗೆ ಅರ್ಥ (೨೭) ನಕ್ಷತ್ರಗಳೊಳಗಿನವು ಮಾಡಿರುತ್ತವೆ.

ಅರ್ಥ|| ನಕ್ಷತ್ರಮಂಟಪದೊಳ್=ಚಿತ್ರ ಮಂಟಪದಲ್ಲಿ ಓರ್ವಗೋಪಾಲಸತಿ=ಒಬ್ಬ ಗೋಪಿಕಾಸ್ತ್ರೀಯು| ನಕ್ಷತ್ರರಮಣನ=ರೇವತಿಯ ಗಂಡನ| ಅನುಜನ=ತಮ್ಮನಾದ ಶ್ರೀಕೃಷ್ಣನ| ತೊಡೆಯ ಮೇಲೆ| ಕುಳಿರ್ದು=ಕೂತುಕೊಂಡು ನಕ್ಷತ್ರಮಂ=ಭರಣಿಯನ್ನು| ಪಿಡಿದು=ಹಿಡಿದು| ನಕ್ಷತ್ರದಿಂ=ಹಸ್ತದಿಂದ| ಹಿಮವ=ಕುಂಕುಮವನ್ನು| ತುಂಬುತಿರಲಾಗ=ತುಂಬುವಾಗ| ನಕ್ಷತ್ರರಿಪು=ತಾರಕಾಸುರನಿಗೆ ವೈರಿಯಾದ ಷಣ್ಮುಖನ| ಜನಕ=ತಂದೆಯಾದ ಶಿವನು| ಬಾಗಿಲೊಳು=ಬಾಗಲದಲ್ಲಿ| ಧ್ವನಿಗೈಯ್ಯೆ=ಒದರಲು| ನಕ್ಷತ್ರದಿಂ=ಶ್ರವಣಗಳಿಂದ| ಕೇಳ=ಆಲಿಸಿ| ನಮಿಸಿ=ನಮಸ್ಕರಿಸಿ| ಭಿಕ್ಷವ ನೀಡಿ| ನಕ್ಷತ್ರಪತಿಧರಗೆ=ಚಂದ್ರಧರಗೆ| ವಂದಿಸುತ=ನಮಸ್ಕರಿಸುತ್ತಾ| ತಾಂತನ್ನ=ತಾನು ತನ್ನ| ನಕ್ಷತ್ರಮಂ=ಮೂಲೆಯನ್ನು| ಸಾರ್ದಳು=ಹೊಂದಿದಳು||೧||

||ಅಭಿಪ್ರಾಯವು|| ಒಂದು ಚಿತ್ರ ಮಂಟಪದಲ್ಲಿ ಒಬ್ಬ ಗೋಪಿಕಾಸ್ತ್ರೀಯು ಕೃಷ್ಣನ ತೊಡಿಯ ಮೇಲೆ ಕೂತು ಕೊಂಡು, ಕೈಯಿಂದ ಭರಣಿಯಲ್ಲಿ ಕುಂಕುಮವನ್ನು ತುಂಬುವ ವೇಳೆಯಲ್ಲಿ ಈಶ್ವರನು ಬಾಗಿಲದಲ್ಲಿ ಬಂದು ಭಿಕ್ಷವ ಹಾಕಿರೆಂದು ಧ್ವನಿಮಾಡಲು, ಅದನ್ನು ಕೇಳಿ ಆ ಗೋಪಿಕಾ ಸ್ತ್ರೀಯು ನಮಸ್ಕಾರಮಾಡಿ, ಭಿಕ್ಷವ ನೀಡಿ, ಮತ್ತು, ಆ ಶಿವನಿಗೆ ನಮಿಸಿ ತನ್ನ ಮೂಲೆಯನ್ನು ಹೊಂದಿದಳು.

ತಾ. ೧ನೇ ಜೂನ ಸನ್೧೮೭ಲ್ಲಿ ಇಸವಿ ಮುಳಗುಂದ ತಾ. ಡಂಬಳ ಜಿಲ್ಲಾ ಧಾರವಾಡ.	ಸಹಿ ಗೋವಿಂದ ಬಾಪುಜಿ ಸಂಗಮ ಅಸಿಸ್ಟಂಟ ಮಾ. ಮುಳಗುಂದ.

ಮೋಹರಬಾನ ಕನ್ನಡ ಶಾಲಾಪತ್ರದ ಯೆಡಿಟರ ಧೊರೆ
ಯವರ ಸೇವಿಗೆ—

ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ಮುದ್ರಿಸುವದಕ್ಕೆ ಅಪ್ಪಣೆ ಕೊಡುವಿರೆಂದು ಬೇಡಿಕೊಳ್ಳುತ್ತೇನೆ—

ನಮ್ಮ ದೇಶದಲ್ಲಿ ಪ್ರಚಾರದೊಳಗೆ ಇದ್ದ ಕೆಲವು ಸಂಗತಿಗಳಬಗ್ಗೆ ಹಲ ಜನರನ್ನು ಕೇಳಲಾಗಿ ಅವುಗಳ ಸ್ಪಷ್ಟೀಕರಣವಾಗಲಿಲ್ಲಾದಕಾರಣ ಯಾರಾದರೂ ಅದರ ವಿಷಯು ಒಳ್ಳೇ ಸಮಜೂತ ಕೊಡುವರೆಂದು ಅಪೇಕ್ಷೆವುಂಟು. ಸುತ್ತಲು ಮರಿಗಬೇನೆಯಿಂದ ಜನರು ಸಾಯುತ್ತಿರಲು ಇಲ್ಲಿ ಕೆಲ ಒಬ್ಬ ಪ್ರಮುಖ ಗೃಹಸ್ಥನಿಗೆ ಕನಸು ಬಿದ್ದದ್ದು ಯೆಂತೆಂದಡೆ, "ಒಬ್ಬ ಪಿಶಾಚ ಸ್ವರೂಪೀ ಸ್ತ್ರೀಯಳು ಮಣ್ಣು ತೂರುತ್ತಾ ಹೋಗುವಾಗ್ಗ ನೋಡಿ ಅವಳನ್ನು ಒಳ್ಳೆ ಹಾಗಿ ಶಿಕ್ಷಿಸಲು ಪಲಾಯನಮಾಡಿದಳು" ಈ ಕನಸು ಕೇ

ಳ ಜನರು ಬಹಳ ಸಂತೋಷಪಡಹತ್ತಿದರು. ಮುಂದೆ ನಾಲ್ಕು ದಿನ ಕಳೆದಕೂಡಲೆ ಊರೊಳಗೆ ಅಮ್ಮನವರ ಪ್ರವೇಶವಾಯಿತು. ಆಗಲವರು ಅಂದದ್ದು "ಊರ ಬಿಟ್ಟು ಹೋದಳು ಅಂದ ಮೇಲೆ ಬರುವಳಾಯೆಂಬ ವಿಪರೀತ ಅರ್ಥ ತಿಳಕೊಳ್ಳತಕ್ಕದ್ದು. ಮುಂಚೆಗಗೆ ನಮಗೆ ತಿಳಿಯಲಿಲ್ಲ"ಈ ಸಂಗತೀ ಮೇಲಿಂದ ಕನಸಿನ ಮೇಲೆ ನಂಬಿಗೆಯಿಡಬಾರದೆಂದರೆ ಇದರವಿಷಯು ಕೆಲ ಪುಸ್ತಕಗಳಾದರೂ ಅಚ್ಚುಹಾಕಲ್ಪಟ್ಟವೆ. ಹಾಂಗು ಕೆಲವು ಬಲ್ಲ ಜನರು ಸಹ ಇದನ್ನು ನಂಬುವರು. ಆದರೆ ಹೀಗೆ ನಂಬುವದು ವಿಹಿತವೋ? ದೇವರಪೂಜೆ ಅದಕೂಡಲೆ ಪ್ರಸಾದ ಕೇಳುತ್ತಾರೆ. ಯೇನಾದರೂ ಕಾರ್ಯ ಆಗುವದು ಇದ್ದರೆ ನನ್ನ ಕಾರ್ಯ ಕೈಗೂಡಿದರೆ ವಾರವಾರಕ್ಕೆ ನೀರು ನೀಡುವೆನು ಯೆಂದು ಬೇಡಿಕೊಳ್ಳುತ್ತಾರೆ. ಜಯು ಅಥವಾ ಅಪಜಯು ಯಾವದಾದರೂ ಒಂದು ಆಗುವದು ನಿಶ್ಚಯು. ಹೀಗೆ ಬೇಡಿಕೊಂಬೋದರಲ್ಲಿ ಯೇನು ವಿಶೇಷ? ಇವುಯೆಲ್ಲವುಗಳು ನನ್ನ ಬುದ್ಧಿಗಾದರೂ ವಿಪರೀತ ಕಾಣಿಸುತ್ತವೆ. ಆದರೆ ಇವುಗಳು ಪ್ರಚಾರದೊಳಗ ಹ್ಯಾಗ ಬಂದಿರುತ್ತವೆ ಬರುವದಕ್ಕೆ ಕಾರಣವೇನು ತಿಳಿಸಬೇಕು.

ತಾ॥ ೨ನೇ ಮಾಹೆ ಎಪ್ರಿಲ ೧೮೭೩ ಇ.

ವಿಷ್ಣು ರಾಮಚಂದ್ರ ರಾಮದುರ್ಗಕರ ಸ್ಕೂಲಮಾಸ್ತರ

ಹೂನವಾಡ.

(ದುಃಖದ ಸಂಗತಿಯು)

ರಾ॥ ರಾ॥ ಕನ್ನಡ ಶಾಲಾ ಪತ್ರಕರ್ತರಿಗೆ—

ಬಿನ್ನಃ ತಾ॥ ೧ನೇ ಮಾಹೆಜೂನ ಸನ್ನ೧೮೭೨ ಇಸ್ವಿ—
ನಾನು ಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಅಂದವಾದ
ಪತ್ರದಲ್ಲಿ ಮುದ್ರಿಸುವಿರೆಂಬುವ ಕಾಂಕ್ಷೆಯಿಂದ ಬೇಡಿಕೊ
ಳ್ಳುತ್ತೇನೆ—

ನಾವು ಇತ್ತಕಡಗೆ ಅಂದರೆ ಆರೇಳು ತಿಂಗಳ ಹಿಡಿದು
ಕಷ್ಟ ಬಿಡುವದು ಸರಕಾರದ ಲಕ್ಷ್ಯದಲ್ಲಿ ಹ್ಯಾಗೆ ಬರು
ವದೆಂಬದಾಗಿ ಬಹಳ ದಿವಸದ ಮಟ್ಟಿಗೂ ಚಿಂತೆಮಾಡುವದು
ಈವತ್ತಿನ ದಿವಸ ಆ ಚಿಂತೆಯು ಪರಿಹಾರ ಆಗುವ ಯುಕ್ತಿ
ಯು ಸೂಚಿಸಿದ್ದರಿಂದ ಈ ಪತ್ರ ಮುಖಬಂದ ಮೇಹಬೂರ್
ನ್ ರಾವಸಾಹೇಬ ಡಿಪ್ಯೂಟಿ ವ ಇನ್‌ಸ್ಪೆಕ್ಟರ ಧೊರೆಗಳವ
ರಿಗ ಅರಿಕೆ ಮಾಡಿಕೊಳ್ಳುತ್ತೇನೆ. ನಾವು ನಮ್ಮ ಊರುಗ
ಳನ್ನು ಬಿಟ್ಟು, ಉದರ ನಿಮಿತ್ತ್ಯಾರ್ಥ ಚಾಕರಿ ಮಾಡಿ ಕಾ
ಲಹರಣವನ್ನು ಮಾಡುತ್ತೇವೆ. ದಯಾಳು ಸರಕಾರದವ
ರು ನಮಗೆ ಸಂಬಳಕೊಟ್ಟು ಕಾಪಾಡುವ ಕೀರ್ತಿಯನ್ನು ತಾ
ವು ತೆಗೆದುಕೊಳ್ಳುತ್ತಾರೆ. ಒಳ್ಳೇದು ಇತ್ತಕಡೆಗ ವಿದ್ಯಾಖಾ
ತೆಯಮೇಲೆ ಸರಕಾರದವರು ಮನಸು ತೆಗಿದರೆಂದು ನಾ
ವು ಬಹಳ ದುಃಖಿಗಳಾಗಿದ್ದೇವೆ. ಯಾಕಂದರೆ ನಾವು ಬಡ
ಜನರು ನಮ್ಮ ನಮ್ಮ ತಲಬು ತಿಂಗಳ ಗಟ್ಲೆ ಮುಟ್ಟದೆ
ಇರೋಣದರಿಂದ ಎಷ್ಟು ನಮಗೆ ಕಷ್ಟವಾಗುತ್ತದೆಂಬುವ
ದು ತಮ್ಮ ಮನಸ್ಸಿನಲ್ಲಿ ಯಾಕೆ ಬರವಲ್ಲದೋ? ತಿಳಿಯದು.
ಡಿಪ್ಯೂಟಿಸಾಹೇಬರವರಿಗೆ ಸಂಬಳವು ಹೆಚ್ಚಿದ್ದರಿಂದ ಒಂದೆರ
ಡು ತಿಂಗಳ ಮುಟ್ಟದೆ ಇರುವದರಿಂದ ಶಿಲ್ಕು ರೂಪಾಯಿಗ
ಳನ್ನು ವೆಚ್ಚಮಾಡಿ ತಮ್ಮ ಚರಿತಾರ್ಥ ಸಾಗಿಸುತ್ತಾರೆ. ಅ
ವರಂತೆ ನಮ್ಮ ಬಡಜನರಿಗೆ ಮಾಡಿದರೆ ಹ್ಯಾಗೆ ನಡದೀತು?

॥ಗಾದೆ॥ ಒಬ್ಬ ಅರಸನಿಗೆ ಪ್ರಧಾನನು ಕೇಳಿದನಂತೆ ಧೊರೆಗಳೇ! ದುಃಷ್ಕಾಳ ಬಿದ್ದು ಜನರಿಗೆ ಅಂಬಲಿ ಸಹ ಶಿಗದೆ ಉಪವಾಸ ಸಾಯುತ್ತಾರೆಂದು ಕೇಳಿದ್ದಕ್ಕೆ ಅವನು ಹಾಲು ಅನ್ನ ಸಹ ಶಿಗುವದಿಲ್ಲೇನು? ಎಂದು ಕೇಳಿದ ಪ್ರಕಾರ ಚೆಂತಿಯಿಂದ ನಾವು ಕಷ್ಟ ಬಿಡುವ ಸಂಗತಿಯನ್ನು ಇನಸ್ಪೇಕ್ಟರ ಧೊರೆಗಳು ಪರಿಹರಿಸುವರೆಂದು ಕೋರುತ್ತೇನೆ.

ಸಹಿ ಕ್ಷುಧಿತನಾದ ಮಾಸ್ತರನು.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

REGISTERED NO. 24/1872

ನೋಟಿಸು.

ಎಲ್ಲಾ ಜನರಿಗೂ ತಿಳಿಯ ಪಡಿಸುವದೇನಂದರೆ ಫಿಜಿಕಲ್ ಜಿಯಾಗ್ರಫಿಯು (ಪ್ರಾಕೃತಿಕ ಭೂಗೋಲಶಾಸ್ತ್ರವು) ಛಾಪಿಸಲ್ಪಟ್ಟು ಸಿದ್ಧವಾಗಿದೆ. ಅಗತ್ಯವು ಕೊಟ್ಟವರು ಒಂದಾಣೆದ ಟಪಾಲ ಟಿಕೀಟುಗಳನ್ನು ಕಳಿಸಿಕೊಟ್ಟಲ್ಲಿ ಅವರು ಇದ್ದ ಸ್ಥಳಕ್ಕೆ ಪುಸ್ತಕಗಳು ಕಳುಹಿಸಲ್ಪಡುವವು. ಇತರರು ಒಂದರೂಪಾಯಿ ಒಂದಾಣೆ ಕಳುಹಿಸಿದಲ್ಲಿ ಅವರಿದ್ದ ಸ್ಥಳಕ್ಕೆ ಪುಸ್ತಕಗಳು ಬಂದು ಮುಟ್ಟುವವು.

ಪುಸ್ತಕದ ಕ್ರಯ—೧॥

ಟಪಾಲ ಹಾಸಿಲು ಒಂದಾಣೆ

ಈ ಪುಸ್ತಕಗಳು ಬೆಳಗಾವ ಸಮಾಚಾರ ಛಾಪಖಾನೆಯ ಮಾಲಕರಾದ ರಾಜಶ್ರೀ ಭಿಕ್ಕಾಜಿಪಂತ ಸಾಮಂತ ಇವರ ಕಡೆಗೆ ಮಾರಾಟಕ್ಕೋಸ್ಕರ ಇಟ್ಟಿರುತ್ತವೆ. ಬೇಕಾದವರು ಅವರ ಕಡೆಗೆ ಹಣ ಕಳುಹಿಸಿ ಕೊಟ್ಟಲ್ಲಿ ಅವು ಅವರಿಗೆ ದೊರಕುವವು.

ಭುಜಂಗರಾವ ಕೃಷ್ಣ ಹೂಲಿಗೋಳ.

ಕನ್ನಡ ಶಾಲಾಪತ್ರಕವು
CANARESE SCHOOL PAPER.

ಪುಸ್ತಕ ೯] [ಸಂಚಿಕೆ ೭.

ಬೆಳಗಾವಿ, ಮಾಹೆ ಜುಲಾಯಿ ೧೮೭೩.

ಅನುಕ್ರಮಣಿಕೆಯು............................ ಪುಟ.

ತನಗೆ ತಾನೇ ನೆರವಾಗುವದು..............................೩೬೧
ಶಾಂತವೀರ ರಾಜದೇವ ಕೃತ ಕರ್ನಾಟಕ ವ್ಯಾಖ್ಯಾನಗಳು.. ೩೬೭
ನೋಟೀಸುಗಳು..೩೭೩
ಹಾವು ಕಚ್ಚಿದಕ್ಕೆ ಉಪಾಯವು.............................. ೩೭೭
ಪತ್ರವ್ಯವಹಾರವು......................................೩೮೧

CONTENTS.. Page

Self Help..361
Champu Ramayen and Champu Bharata with Commentaries in Canarese by Mr. Shantaviraya........367
Notices..373
Instructions how to act in the case of snake-bite.... 377
Correspondence..381

BELGAUM.
Printed at the Belgaum Samachar Press.

ಶಾಲಾಪತ್ರಕವು.

———000———

ಪುಸ್ತಕ ೯] [ಸಂಚಿಕೆ ೪.

ಬೆಳಗಾವಿ, ಮಾಹೆ ಜುಲಾಯಿ ೧೮೭೩.

SELF HELP.

ತನಗೆ ತಾನೇ ನೆರವಾಗುವದು.

ವನ್ನು ಮರೆತು ಬಿಟ್ಟು, ತನ್ನ ಹತ್ತಿರ ಯೇನು ಸ್ವಲ್ಪ ಹಣವನ್ನು ಕಾಯ್ದು ಕೊಂಡಿದ್ದನೋ, ಅದನ್ನೆಲ್ಲ ಕಳೆದು ಕೊಂಡು ತೀರ ಬಡವನಾದನು. ಈ ಪೂರ್ವದಲ್ಲಿಯೇ ಇವನ ಲಗ್ನವಾಗಿತ್ತು. ಆದದರಿಂದ ಇವನು ಈ ವಿಧವಾಗಿ ತನ್ನ ವ್ಯಾಳ್ಯವನ್ನೂ, ಹಣವನ್ನೂ ಕಳೆಯುತ್ತಿರಲಾಗಿ, ಇವನ ಹೆಂಡತಿಯು ಇದೆಲ್ಲ ವ್ಯರ್ಥವೇ ಹೋಯಿತೆಂದು ಖೇದಪಟ್ಟು ಸಿಟ್ಟಿನ ಭರದೊಳಗೆ ಇವನು ಮಾಡಿಟ್ಟ ಯಂತ್ರಗಳನ್ನೆಲ್ಲ ತೆಗೆದುಕೊಂಡು ಮುರಿದು ಹಾಕಿದಳು; ಅದರಿಂದ ತನ್ನ ಕುಟುಂಬದ ವಿಪತ್ತು ನಷ್ಟವಾಗುವದೆಂದು ಅವಳು ನೆನಸಿಕೊಂಡಿದ್ದಳು. ಆದರೆ ಆರ್ಕರೈಟನು ನಿಷ್ಕಲವಾದ ಆವೇಶವುಳ್ಳ ಮನಸ್ಸಿನವನಿದ್ದದರಿಂದ ಹೆಂಡತಿಯು ಕೃತ್ಯವನ್ನು ನೋಡಿ ವರ್ಣಿಸ ಕೂಡದಷ್ಟು ಸಂತಪ್ತನಾಗಿ, ಆ ಕ್ಷಣವೇ ಅವಳನ್ನು ಬಿಟ್ಟುಕೊಟ್ಟನು.

ಆರ್ಕರೈಟನು ಪ್ರಾಂತದಲ್ಲಿ ತಿರುಗಾಡುತ್ತಿದ್ದಾಗ ಕೇಯೆಂಬ ಒಬ್ಬ ಮನುಷ್ಯನ ಗುರುತ ಮಾಡಿಕೊಂಡಿದ್ದನು. ಈ ಮನುಷ್ಯನು ವಾರಿಂಗಟನ್ನೆಂಬ ಊರಲ್ಲಿ ಘಡಿಯಾಲ

ಗಳನ್ನು ಮಾಡುವವನಿದ್ದು, ಆರ್ಕ್‌ರೈಟನಿಗೆ ಅವನ ನಿರಂತ ರ ಗತಿಯ ಯಂತ್ರದ ಕೆಲವು ಭಾಗಗಳನ್ನು ರಚಿಸುವದರ ಲ್ಲಿ ಸಹಾಯ ಮಾಡಿದ್ದನು. ಸಿಲಿಂಡರಗಳಿಂದ* ನೂಲು ವ ಯುಕ್ತಿಯನ್ನು ಇವನೇ ಆರ್ಕ್‌ರೈಟನಿಗೆ ತಿಳಿಸಿದನೆಂದು ಜನರ ತರ್ಕವುಂಟು. ಆದರೆ ಆರ್ಕ್‌ರೈಟನು ಒಮ್ಮೆ ಅಕ ಲ್ಪಿತವಾಗಿ ಒಂದು ಕಾಯ್ದು ಕೆಂಪಗಾದ ಕಬ್ಬಿಣದ ತುಂಡು ಒಂದಕ್ಕೊಂದು ಹೊಂದಿ ತಿರುಗುವ ಯೆರಡು ಸಿಲಿಂಡರಗಳ ನಡುವೆ ಹಾಯ್ದು ಹೋಗಲಾಗಿ ಉದ್ದವಾಯಿತೆಂದು ನೋಡಿ ದರಿಂದ ಅಂಥಾ ಸಿಲಿಂದರಗಳಿಂದ ನೂಲಬಹುದೆಂಬ ಕಲ್ಪ ನೆಯು ಅವನಿಗೆ ತೋರಿತೆಂದು ಕೆಲವರು ಅನ್ನುತ್ತಾರೆ. ಇದು ಹ್ಯಾಗೇ ಇರಲಿ, ಈ ಕಲ್ಪನೆಯು ಅವನ ಮನಸ್ಸಿನ ಲ್ಲಿ ಬೇಗ ದೃಢವಾಗಿ ಸೇರಿಕೊಂಡಿತು. ಆ ಮೇಲೆ ಅವ ನು ಇದರಂತೆ ಯಂತ್ರವನ್ನು ರಚಿಸುವ ಯುಕ್ತಿಯನ್ನು ನ ಡಿಸಿದನು. ಈ ಕೆಲಸದಲ್ಲಿ ಅವನಿಗೆ ಕೇ ಯೆಂಬವನಿಂದ ಯೇನು ಸಹಾಯವಾಗಲಿಲ್ಲ. ಇಷ್ಟಾದಮೇಲೆ ಆರ್ಕ್‌ ರೈಟನು ತನ್ನ ಮೊದಲಿನ ಕೂದಲಿನ ವ್ಯಾಪಾರವನ್ನು ಬಿ ಟ್ಟುಕೊಟ್ಟು, ಈ ಯಂತ್ರವನ್ನು ಮುಗಿಸುವ ಕೆಲಸಕ್ಕೆ ಹತ್ತಿದನು. ತರುವಾಯ ತನ್ನ ಯುಕ್ತಿಯಂತೆ ಕೇಯೆಂ ಬವನ ಕೈಯಿಂದ ಚಿಕ್ಕದೊಂದು ಯಂತ್ರವನ್ನು ಮಾಡಿಸಿ, ಪ್ರೆಸ್ಟನ್ ಪಟ್ಟಣದ ಫ್ರೀಗ್ರಾಮರ ಸ್ಕೂಲ ಯೆಂಬಶಾಲೆಯ ನಡುಮನೆಯಲ್ಲಿ ಅದನ್ನು ಸ್ಥಾಪಿಸಿದನು. ಇವನು ಅದೇ ಊರಲ್ಲಿ ಮನೆತನ ಉಳ್ಳವನಾದದರಿಂದ ಜನರಲ್ ಬರ್ಗಾ

---

* ಗುಂಡ ಕಲ್ಲಿನ ಹಾಗೆ ವರ್ತುಲಾಕಾರವಾಗಿಯೂ ಉದ್ದಾಗಿಯೂ ಇದ್ದ ಪದಾರ್ಥಗಳಿಗೆ ಸಿಲಿಂದರವೆಂಬೆನ್ನುತ್ತಾರೆ.

ಯಿನ್ನೆಂಬವನನ್ನು ಆ ಪೂರವರು ತಮ್ಮ ಪ್ರತಿನಿಧಿಯನ್ನು ನೇಮಿಸಿ ಪಾರ್ಲಿಮೆಂಟಿಗೆ ಕಳುಹಿಸುವ ಕಾಲದಲ್ಲಿ ನಡೆದ ವಾದವಿವಾದದಲ್ಲಿ ಇವನು ಅಭಿಪ್ರಾಯ ಕೊಡುವದಕ್ಕೆ ಹೋಗಿದ್ದನು. ಆ ಕಾಲದಲ್ಲಿ ಇವನ ಬಡತನವು ಯೆಷ್ಟಿತ್ತೆಂದರೆ ಇವನ ಮೈಮೇಲಿನ ಬಟ್ಟೆಗಳು ಹರಿದು ತುಂಡು ತುಂಡಾಗಿ ಇವನು ಕೇವಲ ತಿರುಕನಂತೆ ಕಾಣುತ್ತಿದ್ದದ್ದನ್ನು ನೋಡಿ, ಆ ಸಭೆಗೆ ಹೋಗುವ ಮುಕ್ಕಟ್ಟಿನಲ್ಲಿ, ನಾಲ್ವರು ಕೂಡಿ ಮಂತಿಗೆಯಿಂದ ಹಣ ಕೂಡಿಸಿ ಇವನಿಗೆ ಹೊಸ ವಸ್ತ್ರವನ್ನು ಕೊಂಡುಕೊಟ್ಟರು.

ಪ್ರೆಸ್ಟನ್ ಪಟ್ಟಣದಲ್ಲಿ ಬಹು ಜನರು ಕೈಯಿಂದ ಕೆಲಸ ಮಾಡಿ ಹೊಟ್ಟೆತುಂಬಿಕೊಳ್ಳುವವರು ವಾಸಿಸುತ್ತಿದ್ದಕಾರಣ ಅಲ್ಲಿ ಆರ್ಕರೈಟನು ತನ್ನ ಯಂತ್ರದ ಉಪಯೋಗವನ್ನು ಜನರಿಗೆ ತೋರಿಸಬೇಕಾದರೆ ಬಹಳ ಭಯಪಟ್ಟಿದ್ದನು. ಆ ಶಾಲೆಯ ಹೊರಬದಿಯಲ್ಲಿ ಭಯ ಸೂಚಕವಾದ ಕೂಗಾಟಗಳು ಆಗಲೇ ಕೇಳ ಬರುತ್ತಿದ್ದವು. ಇದಲ್ಲದೆ ಕೇಯ್ ನೇಯಿಕಾರರ ಲಾಳಯಂಥಾದೊಂದು ಯಂತ್ರವನ್ನು ರಚಿಸಿದರಿಂದ ಲಾಂಕಾಶಾಯರದ ಜನರು ಅವನ ಸುತ್ತುಮುತ್ತು ನೆರೆದು ಗತಿಗೆಡಿಸಿ ಅವನನ್ನು ಆ ತಾಲೂಕಿನೊಳಗಿಂದ ಓಡಿಸಿದ್ದರು. ಇದೇಮೇರಿಗೆ ಸ್ವಲ್ಪ ಕಾಲದ ಹಿಂದೆ ಹಾರ್ಗ್ರೀವ್ಸ್ ಯೆಂಬವನು ಒಂದು ವಿಧದ ನೂಲುವ ಯಂತ್ರವನ್ನು ರಚಿಸಿದ್ದರಿಂದ ಬ್ಲಾಕಬರ್ನ ಪಟ್ಟಣದ ನಿವಾಸಿಗಳು ನೆರೆದು ಅದನ್ನು ಮುರಿದು ಹಾಕಿ ಬಿಟ್ಟಿದ್ದರು. ಈ ಸಂಗತಿಗಳನ್ನೆಲ್ಲ ತಿಳಿದುಕೊಂಡು ಆರ್ಕರೈಟನು ತನ್ನ ಯಂತ್ರವನ್ನು ಆ ಪಟ್ಟಣದೊಳಗಿಂದ ತೆಗೆದು

ಅಷ್ಟು ಭಯ ವಿಲ್ಲದಂಥ ಸ್ಥಳಕ್ಕೆ ಒಯ್ಯುವದನ್ನು ನಿಕ್ಷೇಪಿಸಿಕೊಂಡನು. ಆ ವೇಳೆಗೆ ಅವನು ನಾಟಿಂಗಂ ಪಟ್ಟಣಕ್ಕೆ ಹೋಗಿ ತನ್ನ ಯಂತ್ರ ನಡಿಸುವದಕ್ಕೆ ಆಗತಕ್ಕವನ್ನು ಅಲ್ಲಿಯ ಕೆಲವು ಸಾವುಕಾರರಿಗೆ ಸಾಲ ಬೇಡಲಾಗಿ, ರೈಟಯೆಂಬ ವ್ಯಾಪಾರ ಸಂಘದವರು ಆ ಯಂತ್ರದಿಂದ ಉಂಟಾಗುವ ಲಾಭದಲ್ಲಿ ತಮಗೆ ಪಾಲವಿರಬೇಕೆಂಬ ಕರಾರಿನಿಂದ ಅವನಿಗೆ ಸಾಲಕೊಟ್ಟರು. ಆದರೆ ಆ ಯಂತ್ರವು ಅವರ ಕೋರಿಕೆಯಂತೆ ತೀವ್ರವಾಗಿ ಮುಗಿಯಲಿಲ್ಲಾದದರಿಂದ ಸ್ಟ್ರಟ್ಟ, ನೀಡ, ಯೆಂಬ ಇಬ್ಬರ ಸಹಾಯವನ್ನು ಹ್ಯಾಗಾದರೂ ಮಾಡಿ ಸಂಪಾದಿಸೆಂದು ಅವರು ಆರ್ಕ್‌ರೈಟನಿಗೆ ಹೇಳಿದರು; ಸ್ಟ್ರಟ್ಟಯೆಂಬವನು ಕಾಲ ಚೀಲಗಳ ಯಂತ್ರವನ್ನು ಹುಟ್ಟಿಸಿದವನು ಸ್ಟ್ರಟ್ಟನು ಆರ್ಕ್‌ರೈಟನ ಯಂತ್ರದ ಯೋಗ್ಯತೆಯನ್ನು ತತ್ಕಾಲವೇ ತಿಳಿದುಕೊಂಡು, ಅವನ ಸಂಗಡ ಪಾಲ ಕೂಡಿದನು; ಇದರನಂತರ ಆರ್ಕ್‌ರೈಟನ ದೈವ ತೆರೆಯುವ ಮಾರ್ಗವು ನಿರಾಂತಕವಾಯಿತು. ಆಮೇಲೆ ಈ ಯಂತ್ರದ ಬಾಧ್ಯಸ್ತಿಕೆಯು "ನಾಟಿಂಗಂ ಪಟ್ಟಣದ ಘಡಿಯಾಲ ಮಾಡುವವನಾದ ರಿಚರ್ಡ್ ಆರ್ಕ್‌ರೈಟ" ಯೆಂಬ ಹೆಸರಿನಿಂದ ಗೊತ್ತಾಯಿತು. ಇದರಲ್ಲಿ ಲಕ್ಷಕೊಡತಕ್ಕಂಥ ಸಂಗತಿ ಯೇನಂದರೆ, ಈ ಬಾಧ್ಯಸ್ತಿಕೆಯು ಆರ್ಕ್‌ರೈಟನಿಗೆ ಪ್ರಾಪ್ತಿಯಾದ ವರ್ಷವೇ, ಅಂದರೆ ಸನ್ ೧೭೬೯ನೇ ವರ್ಷದಲ್ಲಿ, ವಾಟ್ಟನಿಗೆ ಉಗಿಯಂತ್ರದ ಬಾಧ್ಯಸ್ತಿಕೆಯು ಪ್ರಾಪ್ತಿಯಾಯಿತು. ಈ ಯಂತ್ರವು ಮೊದಲು ಕುದುರೆಗಳಿಂದ ತಿರುಗಿಸಲ್ಪಡುವಂತೆ ನಾಟಿಂಗಂ ಪಟ್ಟಣದಲ್ಲಿ ಮಾಡಲ್ಪಟ್ಟಿತು; ಆ ಮೇಲೆ ತೀವ್ರವೇ ಡರ್ಬೀಶಾಯರದೊ

ಳಗಿನ ಕ್ರಾಂಫರ್ಡ್‌ಯೆಂಬ ಊರಲ್ಲಿ ಅದಕ್ಕಿಂತ ದೊಡ್ಡದೊಂದು ರಚಿಸಲ್ಪಟ್ಟಿತು. ಆ ಯಂತ್ರವು ನೀರಿನಿಂದ ತಿರುಗುತ್ತಿದ್ದ ಗಾಲಿಯಿಂದ ತಿರುಗುತಿತ್ತು; ಆದದರಿಂದ ಆರ್ಕ್‌ರೈಟನ ನೂಲುವ ಯಂತ್ರಕ್ಕೆ ನೀರಿನಿಂದ ತಿರುಗುವ ಯಂತ್ರವೆಂದು ಹೆಸರು ಬಿತ್ತು.

ನಿಜವಾಗಿ ನೋಡಿದರೆ ಈ ಕಾಲದಿಂದ ಆರ್ಕ್‌ರೈಟನ ಶ್ರಮಕ್ಕೆ ಆರಂಭವಾಯಿತು. ಅವನು ತನ್ನ ಯಂತ್ರದ ಯೆಷ್ಟೋ ಕೆಲಸ ಮಾಡುವ ಭಾಗಗಳನ್ನು ಇನ್ನೂ ಮಾಗಿಸಬೇಕಾಗಿತ್ತು. ಅದರಲ್ಲಿ ಅವನು ಮೇಲೆ ಮೇಲೆ ಹೆಚ್ಚು ಕಡಿಮೆಗಳನ್ನೂ, ಮೇಲೆ ಮೇಲೆ ಸುಧಾರಣೆಗಳನ್ನೂ ಮಾಡುತ್ತಹೋಗಿ ಕಡೆಯಲ್ಲಿ ಅದರಿಂದ ಅತ್ಯುತ್ತಮ ರೀತಿಯಿಂದ ಕೆಲಸ ನಡೆದು ಒಳ್ಳೇ ಲಾಭವಾಗುವಂತೆ ಮಾಡಿದನು. ಆದರೆ ಇವರಲ್ಲಿ ಬಹು ಕಾಲದವರೆಗೆ ತಾಳ್ಮೆಯಿಂದ ಶ್ರಮ ನಡಿಸಿದರಿಂದಲೇ ಕಾರ್ಯ ಸಿದ್ಧಿಯುಂಟಾಯಿತು. ಕೆಲ ವರ್ಷಗಳವರೆಗೆ ಈ ಉದ್ಯೋಗದಲ್ಲಿ ಬಹಳ ಹಣ ವೆಚ್ಚವಾದಾಗ್ಯೂ ಲಾಭವೇನು ಇಲ್ಲದೆ, ಮನಸ್ಸಿಗೆ ಬಹು ಖೇದವಾಗುವಂಥ ಸಂಗತಿಯಿತ್ತು. ಆದರೆ ಈ ಯಂತ್ರವನ್ನು ಮಾಡಿದ ಉದ್ದೇಶವು ಸಫಲವಾಗುತ್ತದೆಂಬ ಲಕ್ಷಣವು ಹೆಚ್ಚು ಹೆಚ್ಚು ವ್ಯಕ್ತವಾಗಿ ತೋರುತ್ತ ಹೋದದರಿಂದ ಲಾಂಕಾಶಾಯರದ ಜೇಡರು ಅದರ ಮೇಲೆ ಬಿದ್ದು ಅದನ್ನು ಮುರಿದು ಹಾಕಲೆತ್ನಿಸಿದರು; ಇದೇ ಮೇರಿಗೆ ಕಾರ್ನವಾಲ ತಾಲೂಕದ ಒಡ್ಡರು ವಾಟ್ಟ, ಬೋಲ್ಟನ್‌ಗಳ ಮ್ಯಾ ಮೇಲೆಯೇರಿ ಹೋಗಿ, ಅವರ ಉಗಿಯಂತ್ರದ ಲಾಭವನ್ನು ಅಪಹರಿಸುವ ಯತ್ನ ಮಾಡಿದ್ದರು. ಆರ್ಕ್‌ರೈಟನು ಕೈಗಾ

ಾಕೆಯಿಂದ ಹೊಟ್ಟೆ ತುಂಬಿಕೊಳ್ಳುವವರಿಗೆ ಹಗೆಯಾಗಿ ಬಂದನೆಂದು ಸಹ ಜನರು ಅನ್ನಹತ್ತಿದರು; ಕೋಲ್ರೇಯೆಂಬ ಊರಿನ ಹತ್ತರ ಅವನು ಮಾಡಿಟ್ಟ ಒಂದು ಯಂತ್ರವನ್ನು ಕೂಟಾಳದ ಜನರು ನೆರೆದು, ಪೋಲೀಸರೂ, ದಂಡಿನ ಶಿಪಾಯಿಗಳೂ ಅದನ್ನು ರಕ್ಷಿಸುತ್ತಿದ್ದಾಗ್ಯೂ ಅವರೆದುರಿಗೇ ಮುರಿದುಹಾಕಿಬಿಟ್ಟರು. ಆರ್ಕರೈಟನ ಯಂತ್ರದಿಂದ ಹುಟ್ಟಿದ ನೂಲು ಮೇಲಾದದ್ದು ಇದ್ದಾಗ್ಯೂ, ಲಾಂಕಾಶಾಯರದ ಜನರು ಅದನ್ನು ಕೊಳ್ಳುತ್ತಿದ್ದಿಲ್ಲ. ಆ ಮೇಲೆ ಕೆಲಕಾಲದ ನಂತರ ಅವರು ಮೆಲ್ಲ ಮೆಲ್ಲಗೆ ಅವನ ಯಂತ್ರವನ್ನು ತಮ್ಮ ಉಪಯೋಗದಲ್ಲಿ ತಂದುಕೊಂಡಾಗ್ಯೂ, ಅದರ ಬಾಧ್ಯಸ್ತಿಕೆಗಾಗಿ ಅವನಿಗೆ ಕೊಡತಕ್ಕ ಹಣವನ್ನು ಕೊಡಲಿಲ್ಲ. ಅನೇಕರು ಒಕ್ಕಟ್ಟಾಗಿ ಕೂಡಿ ನ್ಯಾಯ ಸಭೆಗೆ ಹೋಗಿ ಕಾಯ್ದೆಗಳ ಸಹಾಯದಿಂದಲೇ ಅವನನ್ನು ನಾಶಪಡಿಸುವ ಯೊತ್ತುಗಡೆಯು ಮಾಡಿದರು. ಅದರಂತೆ ಅವರ ಉದ್ಯೋಗವು ಸಫಲವಾಯಿತು; ನ್ಯಾಯಕೋರ್ಟಿನಲ್ಲಿ ಆರ್ಕರೈಟನ ಬಾಧ್ಯಸ್ತಿಕೆಯು ಸುಳ್ಳೆಂದು ನಿರ್ಣಯವಾದದ್ದಂನು ಕೇಳಿ ಸಜ್ಜನರಿಗೆ ಖೇದವಾಗದೆ ನಿಲ್ಲಲಿಕ್ಕಿಲ್ಲ. ಈ ನ್ಯಾಯವು ಮುಗಿದ ನಂತರ ಆರ್ಕರೈಟನು ಒಮ್ಮೆ ತನ್ನ ಪ್ರತಿ ಪಕ್ಷಗಳು ಇರುತ್ತಿದ್ದ ಮನೆಯ ಹತ್ತರ ಹಾಯ್ದು ಹೋಗುವಾಗ ಅವನು ಕೇಳುವ ಹಾಗೆ ಅವರಲ್ಲಿ ಒಬ್ಬನು ನುಡಿದದ್ದು ಯೇನಂದರೆ, "ಒಳ್ಳೇದಾಯಿತು, ಈ ಮುದಿ ನಾವಲಿಗನನ್ನು ನಾವು ಕಡೆಯಲ್ಲಿ ಗೆದ್ದೆವು". ಈ ಮಾತಿಗೆ ಆರ್ಕರೈಟನು ಕೊಟ್ಟ ಉತ್ತರವೇನಂದರೆ, "ಚಿಂತಿಲ್ಲ, ನನ್ನ ಹತ್ತರ ಇನ್ನು ವೊಂದು ಕತ್ತಿಯುಂಟು, ಅದು

ನಿಮ್ಮೆಲ್ಲರ ತಲೆಯನ್ನು ಬೋಳಿಸುವದು". ಮುಂದೆ ಆರ್ಕ್‌ರೈಟನು ಲಾಂಕಾಶಾಯರದಲ್ಲಿಯೂ, ಡರ್ಬಿಶಾಯರದಲ್ಲಿಯೂ, ಸ್ಕಾಟಲಂಡದೊಳಗಿನ ನ್ಯೂಲಾನಾರ್ಕಯೆಂಬ ಊರಲ್ಲಿಯೂ ಹೊಸ ಯಂತ್ರಗಳನ್ನು ಸ್ಥಾಪಿಸಿದನು. ಇದಲ್ಲದೆ ಕ್ರಾಂಫರ್ಡದೊಳಗಿನ ಯಂತ್ರಗಳಾದರೂ ಸ್ಟ್ರಟ್ಟನ ಸಂಗಡ ಇವನು ಕೂಡಿದ ಪಾಲಗಾರಿಕೆಯ ಮುದ್ದತು ತೀರಿದ ನಂತರ ಇವನ ವಶದಲ್ಲಿ ಬಂದವು. ಇವನ ಯಂತ್ರಗಳಿಂದ ಉತ್ತಮವಾದ ನೂಲು ಸಮೃದ್ಧಿಯಾಗಿ ಹುಟ್ಟಹತ್ತಿದ ಕಾರಣ ಸ್ವಲ್ಪ ಕಾಲದೊಳಗೆ ಇವನೇ ಆ ವ್ಯಾಪಾರದ ಮುಖ್ಯಸ್ಥನಾದನು; ಇವನು ಕಟ್ಟಿದ ಬೆಲೆಗಳೇ ಬಾಜಾರಿನಲ್ಲಿ ನಡೆಯಹತ್ತಿದವು; ನೂಲನ್ನು ಹುಟ್ಟಿಸುವ ಬೇರೆ ಜನರ ವ್ಯಾಪಾರವು ಸಹ ಇವನ ಮುಖಾಂತರವಾಗಿಯೇ ನಡೆಯಹತ್ತಿತು.

Champu Ramayen and Champu Bharata with Commentaries in Canarese by Mr. Shantaviraya.

॥ಚಂಪೂಭಾರತೇ ಸವ್ಯಾಖ್ಯಾನೇ ಪ್ರಥಮಸ್ತಬಕಃ॥

॥ವಸಂತತಿಲಕಾವೃತ್ತಂ॥

ಶಾಲೀನತಾಮುಪಗಣಯ್ಯ ಸಖೀಸಮಾಜೇ।
ಪಶ್ಚಾತ್ಕೃತಸ್ಯ ಕಮಿತುಃ ಪ್ರಣಯಪ್ರಕೋಪಾತ್।
ಮುಗ್ಧಾ ಸಮೀಕ್ಷ್ಯ ಮುಕುರಾಯಿತರತ್ನಭಿತ್ತೌ।
ಛಾಯಾಂ ಕ್ಷಣಾನುತಪನಂ ಶಮಯಂತಿ ಯಸ್ಯಾಂ॥೮॥

॥ಅನ್ವಯಃ॥

ಯಸ್ಯಾಂ=ಆ ಪುರದಲ್ಲಿ। ಮುಗ್ಧಾಃ=ಮೂಢಸ್ತ್ರೀಯ

ರು (ಸುಂದರರು) ಪ್ರಣಯಕೋಪಾತ್=ಸ್ನೇಹಕಲಹದೆಸ ಯಿಂದ। ಸಖೀಸಮಾಜೇ, ಸಖೀ=ಗೆಳತಿಯರ, ಸಮಾಜೇ=ಸ ಭೆಯಲ್ಲಿ। ಶಾಲೀನತಾಂ=ಲಜ್ಜಾ ಭಾವವನ್ನು। ಅವಿಗಣ ಯ್ಯ=ಗಣಿಸದೆ। ಪಶ್ಚಾತ್ಸ್ಥಿತಸ್ಯ=ಪರಾಙ್ಮುಖವಾದ। ಕಮಿ ತುಃ=ಪ್ರಿಯನ(ವಿರಹಿಯ)। ಛಾಯಾಂ=ಪ್ರತಿ ಬಿಂಬವನ್ನು। ಮುಕುರಾಯಿತರತ್ನಭಿತ್ತೌ, ಮುಕುರಾಯಿತ=ದರ್ಪಣದ ಶೋಭೆಯನ್ನು ಗ್ರಹಿಸಿದ, ರತ್ನಭಿತ್ತೌ=ರನ್ನ ಗೋಡೆಯ ಲ್ಲಿ। ಸವೀಕ್ಷ್ಯ=ನೋಡಿ। ಕ್ಷಣಾನುತಪನಂ, ಕ್ಷಣಂ=ಆ ಕ್ಷ ಣದಲ್ಲಿ, ಅನುತಪನಂ=ಪಶ್ಚಾತ್ತಾಪವನ್ನು (ವಿರಹವನ್ನು) ಶಮಯಂತಿ=ನಿವಾರಿಸುವರು.

॥ಶಾಸ್ತ್ರವಿಷಯಃ॥

ಮುಗ್ಧಾಃ ಕರ್ತೃ, ಅನುತಪನಂ ಕರ್ಮ, ಶಮಯಂತಿ ಕ್ರಿಯಾಪದ, ಸಕರ್ಮಕ, ಕ., ಪ್ರ., ಶಮಯಂತಿ= (ಶಮ್+ಅಯ್+ಅಂತಿ)ಶಮ್ಎಂಬುದು ಧಾತು, ಅಯ್ ಎಂಬುದು ವಿಕರಣ, ಅಂತಿ ಎಂಬುದು ಲಟ್‌ಲಕಾರ, ವರ್ತ ಮಾನಕಾಲ, ಪರಸ್ಮೈಪದ, ಪ್ರಥಮ ಪುರುಷ, ಬಹುವಚ ನ.। ಅ.—ಕಾವ್ಯಲಿಂಗಾಲಂಕಾರದಿಂದಲೂ ಭಾವಶಾಂತ್ಯಲಂಕಾ ರದಿಂದಲೂ ಸಂಕರಾಲಂಕಾರವೆನಿಸಿತು.। ರ.—ತನ್ನ ವಿರಹ ವನ್ನು ಶಮಿಸಿ ಕೊಳ್ಳಲು ಶಾಂತಿರಸ.

॥ಭಾವಾರ್ಥಃ॥

ಸ್ನೇಹ ಕಲಹದೆಸೆಯಿಂದ ಸ್ತ್ರೀ ಸಭೆಯಲ್ಲಿ ತಿರಿಗಿದ ಆ ಪ್ರಿಯನ ಪ್ರತಿಬಿಂಬವನ್ನು ರನ್ನಗೋಡೆಯ ಮೇಲೆ ನೋಡಿ ಪಟ್ಟಣದ ಮುಗ್ಧ ಸ್ತ್ರೀಯರು ತಮ್ಮ ವಿರಹ ವನ್ನು ನಾಚದೆ ಶಮಿಸಿ ಕೊಳ್ಳುತ್ತಿದ್ದರು.

॥ಚಂಪೂರಾಮಾಯಣೆ ಸವ್ಯಾಖ್ಯಾನೆ ಬಾಲಕಾಂಡಃ॥

॥ವಸಂತತಿಲಕಾವೃತ್ತಂ॥

ವಾಣೀವಿಲಾಸಮಪರತ್ರ ಕೃತೋಪಲಂಭ।
ಮಂಭೋಜಭೂರಸಹಮಾನ ಇವಾವಿರಾಸೀತ್।
ಆಭಾತಿ ಯತ್ಕೃತಿರನೇಕವಿಧಪ್ರಪಂಚ।
ವ್ಯಾಜೇಂದ್ರಜಾಲವಿಧಿಸಾಧಕಪಟ್ಟಿಕೇವ॥೧॥

॥ಅನ್ವಯಃ॥

ಅಂಭೋಜಭೂಃ=ಬ್ರಹ್ಮನು। ಅಪರತ್ರ=ವಾಲ್ಮೀಕಿಯಲ್ಲಿ। ಕೃತೋಪಲಂಭಂ=ಸಃ ಸಾಕ್ಷಾತ್ಕಾರವಾದಂಥ। ವಾಣೀವಿಲಾಸಂ ಪ್ರತಿ, ವಾಣೀ=ವಾಗ್ದೇವಿಯ, ವಿಲಾಸಂಪ್ರತಿ=ಲೀಲೆಯನ್ನು ಕುರಿತು। ಅಸಹಮಾನ ಇವ=ಸಹಮಾನವಿಲ್ಲದೋಪಾದಿಯಲ್ಲಿ। ಆವಿರಾಸೀತ್=ವ್ಯದೋರಿದನು। ಯತ್ಕೃತಿಃ, ಯತ್=ಆ ಬ್ರಹ್ಮನ, ಕೃತಿಃ=ಕ್ರಿಯಾಶಕ್ತಿಯು। ಅನೇಕವಿಧ ಪ್ರಪಂಚವ್ಯಾಜೇಂದ್ರಜಾಲ ವಿಧಿಸಾಧಕಪಟ್ಟಿಕೇವ, ಅನೇಕವಿಧ=ಬಹುಪ್ರಕಾರವಾದ, ಪ್ರಪಂಚವ್ಯಾಜ=ಪ್ರಪಂಚವೆಂಬ ನಿಮಿತ್ತವಾದ, ಇಂದ್ರಜಾಲವಿಧಿ=ಮಹೇಂದ್ರಜಾಲದ ವಿಧಾನದ, ಸಾಧಕಪಟ್ಟಿಕಾ ಇವ=ಸಾಧಕದ ಗರಿಯೋಪಾದಿಯಲ್ಲಿ। ಆಭಾತಿ=ಪ್ರಕಾಶಿಸುವದು.

॥ಶಾಸ್ತ್ರವಿಷಯಃ॥

ಅಂಭೋಜಭೂಃ ಕರ್ತೃ, ಆವಿರಾಸೀತ್ ಕ್ರಿಯಾಪದ, ಅಕರ್ಮಕ, ಕ, ಪ್ರ.। ಆವಿರಾಸೀತ್=(ಆವಿಃ+ಅಸ್+ಈತ್) ಆವಿಃ ಎಂಬುದು ಅವ್ಯಯ, ಅಸ್ ಎಂಬುದು ಧಾತು, ಈತ್ ಎಂಬುದು ಲಙ್ ಲಕಾರ, ಭೂತಕಾಲ, ಪ್ರಥಮ ಪುರುಷ, ಏಕವಚನ, ಪರಸ್ಮೈಪದ.। ಕೃತಿಃ ಕರ್ತೃ, ಆಭಾತಿ

ಕ್ರಿಯಾಪದ, ಅಕರ್ಮಕ, ಕ, ಪ್ರ.। ಆಭಾತಿ=(ಆ+ಭಾ+ತಿ) ಆ ಎಂಬುದು ಉಪಸರ್ಗ, ಭಾ ಎಂಬುದು ಧಾತು, ತಿ ಎಂಬುದು ಲಟ್ ಲಕಾರ, ವರ್ತಮಾನ ಕಾಲ, ಪರಸ್ಮೈಪದ ಪ್ರಥಮ ಪುರುಷ, ಏಕವಚನ.। ಪಿಚ್ಛಿಕಾ=(ಪಿಚ್ಛಾ+ಇ+ಕಾ+ಆ)"ಸ್ವಾರ್ಥೇಕಪ್‌ಕಾತ್ಪೂರ್ವಸ್ಯೇಕಾರಾದೇಶಃ।" ಸ್ವಾರ್ಥದಲ್ಲಿ ಕಪ್ ಪ್ರತ್ಯಯ ಪರವಾಗಲು ಚ್ಛ ಕಾರೋತ್ತರ ಅಕಾರಕ್ಕೆ ಇಕಾರಾದೇಶವಾಗಿ ಕಕಾರೋತ್ತರಕ್ಕೆ ಆ ಎಂಬ ಸ್ತ್ರೀ ಪ್ರತ್ಯಯವು। ಅ.—ಪೂರ್ವಾರ್ಧ ಶ್ಲೋಕದಲ್ಲಿ ಆರೋಪಣದಿಂದ ಅಪಹ್ನವಾಲಂಕಾರ. ಉತ್ತರಾರ್ಧ ಶ್ಲೋಕದಲ್ಲಿ ಉಪಮಾಲಂಕಾರ.

॥ಭಾವಾರ್ಥಃ॥

ವಾಲ್ಮೀಕಿಯಲ್ಲಿ ಸಾಕ್ಷಾತ್ಕಾರವಾದ ಸರಸ್ವತಿಯನ್ನು ಕುರಿತು ಸ್ಮರಿಸದೆ ಬ್ರಹ್ಮನು ವೈದೋರಿದನು. ಆ ಬ್ರಹ್ಮನ ಕ್ರಿಯಾಶಕ್ತಿಯು ಪ್ರಪಂಚವೆಂಬ ಇಂದ್ರಜಾಲವನ್ನು ಹಚ್ಚಿಸುವ ಸಾಧಕದ ಗರಿಯೋ ಏನೋ ಎಂಬ ಹಾಂಗೆ ಶೋಭಿಸಿತು.

ಶಾಂತವೀರ ರಾಚಯ್ಯಾ ಕಿತ್ತೂರ ಟ್ರೇನಿಂಗ ಕಾಲೇಜ್.

ಶಿಗ್ಲಿಯಲ್ಲಿ ಆದ ಕಲ್ಮಳೆಯು.

ಮಾಲಿನಿವೃತ್ತ

ಪರಮಪದವನ್ನೀಡೋದಕ್ಕೆ ಬೇಕೀ ಪ್ರಯತ್ನಂ।
ಶರಣವರದನಾಮಂಶೇರಿತ್ಯೈದೇವಿನಿನ್ನಂ॥
ಸರಸಿಜಭವಕನ್ನೇ ಬೇಡಿಕೊಳ್ವೆಂಪ್ರಸಾದಂ॥
ಕರುಣದಿಬಲುಬೇಗಂಕೊಟ್ಟು ರಕ್ಷಿಪ್ಪುದೆನ್ನಂ॥೧॥

ಉತ್ಸಾಹವೃತ್ತ.

ಧಾರವಾಡವೆಂಬಜಿಲ್ಲೆ ಮಧ್ಯದಲ್ಲಿ ಲಕ್ಷ್ಮೀ।
ಪೂರವೆಂಬದೊಂದುಪಟ್ಣ ಚಂದವಾಗಿ ತೋರಿತು॥
ಶೇರಿದಂಥಶಿಗ್ಲಿಯಲ್ಲಿ ಕಂಡೆವೊಂದಗಾಧವನ್ನ।
ಸಾರುವಿಲ್ಲಿ ವೃತ್ತವನ್ನು ನೋಡಿಭೀತಿ ಹುಟ್ಟತ್ತೈ॥೨॥

॥ವ॥ ಒಂದುಸಮಯದೊಳೊಬ್ಬ ಧನಿಕನವಿವಾಹಸಮಾರಂಭದಸುವಾಸಿನಿಯರ ಸಮೂಹಂ ಸುವರ್ಣಾಲಂಕಾರಂಗಳಿಂ ಸು ಶೋಭಿತಮಾಗಿಯುಂ ಸುಗಂಧದ್ರವ್ಯಂಗಳಿಂಲೇಪಿತಮಾಗಿಯುಂ ಕುಲದೇವತೆಯಪ್ಪ ಕುಮುದಲೋಚನೆಯದೇವಾಲಯಕ್ಕೈದುವಲ್ಲಿ.

ಮತ್ತೇಭವಿ.

ನೊಸಲೊಳ್ಕುಂಕುಮರೇಖೆಯಿಂದೆಸವರಾಸ್ ಭಾಗ್ಯದಿಂ
ಭಾಗ್ಯದಿಂ।
ಕುಸುಮಂಕೂಡಿದ ತಟ್ಟೆಯೊಳಿರಿಸಿದಾ ದೀಪಂಗಳಿಂ
ಕಂಗಳಿಂ॥
ಯುಸಳಂಪ್ರೋಲುವ ಪಾದದಿಂಗಮಿಸುವಾ ನಾಟ್ಯಾಟದಿಂ
ದಾಟದಿಂ।
ಹಸನಂಮಾಗಲಿ ಕಾರ್ಯವೆಂದುಲಿಯುವರ್ ಗೋಹಾ
ಡಿನಿಂಚೋಡನಿಂ॥೩॥

ಶಾ. ವಿ.

ಕಾರ್ಯಂನೋಡಲು ಕೂಡಿದಂಥಜನರೊಳಿದ್ದರ್ ಕೆಲ
ರ್ವೈರಿಗಳ್।
ಸೂರ್ಯಂನೋಡಲಶಕ್ಯವಾದವ್ರಕಣಾ ಕೆಂಪೇರುವಾಕಂ
ಣಾಗಳ್।

ಆರ್ಯರ್ಗೇಳುವ ಮಾತುಮಿಥ್ಯವಹುದೇ? ಕೆಂಗೆಂ
ಪುಂಕಾರಿದರ್
ವೀರ್ಯಂತೋರಲು ಬಂದರೈ? ಮುಸುಕಿದರ್ ಮೇ
ಘಂಗಳಪ್ಪಂತೆವೋಲ್ ॥೪॥

ಮ. ವಿ.

ಸರಸಂತೋರುವ ಕಾಲವೃಷ್ಟಿಯು ಜನಂಸಾನಂದದಿ
ನೋಳ್ಪುದೇ!
ಕರದಲ್ಲಿದ್ದತಿಕಾಂತಿಯಿಂಪೊಳೆವಸತ್ ಖಡ್ಗಂಗಳೇ ಮಿಂ
ಚುಗಳ್।
ಭರದಿಂಕಾದಲಿ ನೃತ್ಯಮೆಂದುಲಿಯುವಾ ಶಬ್ದಂಗಳೇ
ರ್ಜನೆ
ಹರಿಯಿಂನೋಡಲ ಸಾಧ್ಯದಿಂಗುರಿವಬಾಣಂಗಳೇ ಬಿಂ
ದುಗಳ್ ॥೫॥

ಶಾ. ವಿ.

ನೆಟ್ಟಂತಾಳದೆ ಗಿತ್ರನೇತಿರುಗುವಾ ದೇಹಂಗಳೇ ಚಕ್ರ
ಗಳ್
ಶಿಷ್ಟಂಕಾದಲು ಮೇಲಿನಿಂದುರುಳುವಾವಸ್ತ್ರಂಗಳೇ ಗ
ಳ್ಳಿಗಳ್।
ಜುಟ್ಟಂಪಾವಸೆಯಾಗಸಾಲಿರಿಸಿದಾ ಕಾಯಂಗಳೇ ದಂ
ಗಳ್।
ಕಟ್ಟಂತಪ್ಪದ ಶೋಣಿತ ಪ್ರಸರದಿಂ ಕಣ್ಗೊಪ್ಪಿತೈಕೆಂ
ಬೊನಲ್ ॥೬॥

(ಮುಂದಕ್ಕೆ ಸಾಗುವದು.)

NOTICES.

ಪ್ರಕಟನೆಯು.

ಇದರಿಂದ ತಿಳಿಯಪಡಿಸುವದೇನಂದರೆ, “ವರ್ಥ ಪ್ರಾಯಿಜ್” ಯೆಂಬ ಇನಾಮಿನ ಸಲುವಾಗಿ ಹಳೆಗನ್ನಡಿನಲ್ಲಿ ಉಮೇದವಾರರ ವಾರ್ಷಿಕ ಪರೀಕ್ಷೆಯು ಬರುವ ಆಕ್ಟೋಬರ ತಿಂಗಳ ೧೪ನೇ ತಾರೀಖು ಮಂಗಳವಾರ ದಿವಸ ೧೦½ ಘಂಟೆಗೆ ಬೆಳಗಾವಿಯ ಫಸ್ಟ ಗ್ರೇಡ ಅಂಗ್ಲೋ ವ್ಹರ್ನ್ಯಾಕ್ಯುಲರ ಶಾಲೆಯಲ್ಲಿ ಆರಂಭವಾಗುವದು. ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಾಹಾದ್ದೂರ ಇವರು ಈ ಪರೀಕ್ಷೆಗೆ ನೇಮಿಸಲ್ಪಡುವ ಕಮಿಟಿಯ ಅಧ್ಯಕ್ಷರಾಗುವರು.

೨. ಈ ಪರೀಕ್ಷೆಯ ನಿಯಮಗಳು ಸನ್ ೧೮೭೧ ನೇ ಇಸವಿಯ ಆಕ್ಟೋಬರ ತಿಂಗಳ ಶಾಲಾ ಪತ್ರಿಕೆಯ ೧೪ ನೇ ಪುಟದಲ್ಲಿ ಪ್ರಸಿದ್ಧ ಮಾಡಲ್ಪಟ್ಟವೆ. ಅವೇ ನಿಯಮಗಳು (ಡಿಪ್ಯೂಟಿ ಇನಸ್ಪೆಕ್ಟರ ಮುಂತಾದ) ಅಧಿಕಾರಿಗಳಿಗೆ ತಿಳಿಯಪಡಿಸುವದಕ್ಕಾಗಿ ಇಂಗ್ಲಿಷದಲ್ಲಿ ಕಳುಹಿಸಲ್ಪಟ್ಟವೆ.

೩. ಸದರೀ ಪರೀಕ್ಷೆಗೆ ಬರಲಿಚ್ಛಿಸುವ ಉಮೇದವಾರರು ಬರುವ ಸಪಟಂಬರ ತಿಂಗಳ ೧೪ನೇ ತಾರೀಖಿನಲ್ಲಿ ಇಲ್ಲವೆ ಅದಕ್ಕೂ ಮುಂಚಿತವಾಗಿ ತಮ್ಮ ಹೆಸರುಗಳನ್ನು ಬರೆದು ಕಳುಹ ತಕ್ಕದ್ದು; ಆ ತಾರೀಖಿನ ತರುವಾಯ ಅರ್ಜಿಗಳನ್ನು ತಕ್ಕೊಳ್ಳುವದಕ್ಕೆ ಒಡಂಬಡಲಿಕ್ಕಿಲ್ಲ.

೪. ಉಮೇದವಾರರು ನಿಶ್ಚಯಿಸಿದ ಮರ್ಯಾದೆಯೊಳಗೆ ತಮ್ಮ ವಯಸ್ಸು ವುಂಟೆಂಬ ಬಗ್ಗೆ ಮನಗಾಣುವಂಥ ಆಧಾ

ರವನ್ನು ಮೊದಲು ತೋರಿಸದ ಹೊರ್ತು ಅವರಿಗ ಪರೀಕ್ಷೆಯ ಮನೆಯಲ್ಲಿ ಪ್ರವೇಶಿಸಲಿಕ್ಕೆ ಅಪ್ಪಣೆಯು ದೊರಿಯಲಿಕ್ಕಿಲ್ಲ.

(signed) J. F. Fleet.

ಬೆಳಗಾವ ತಾರೀ ೧೮ನೇ ಮಾಹೆ ಜುಲಾಯಿ ಸನ್ ೧೮೭೪ ನೇ ಇಸವಿ. } ಎ. ಇನಸ್ಪೆಕ್ಟರ ದಕ್ಷಿಣ ಭಾಗ

ಒಂದು ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಯೊಳಗಿನವನೊಬ್ಬ ಕನ್ನಡ ಶಿಕ್ಷಕನು ಮತ್ತೊಂದು ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಯಲ್ಲಿ ಹೆಚ್ಚಿನ ಪಗಾರಕ್ಕೆ ನೇಮಿಸಲ್ಪಟ್ಟಿರಲಾಗಿ, ಅವನು ಆ ಸ್ಥಳದ ಹವೆಯು ತನಗೆ ತಾಳಲಿಕ್ಕಿಲ್ಲವೆಂಬ ಹೆದರಿಕೆಯಿಂದ ಅಲ್ಲಿಗೆ ಹೋಗಲೊಡಂಬಡಲಿಲ್ಲ ಮತ್ತು ಎಜ್ಯುಕೇಶನಲ್ ಇನಸ್ಪೆಕ್ಟರಸಾಹೇಬ ಬಹದ್ದೂರರ ಅಪ್ಪಣೆಯನ್ನು ಅಮಾನ್ಯ ಮಾಡುವದರಲ್ಲಿ ಹಟ ಹಿಡಿಯುವದರ ಪರಿಣಾಮವೇನಾಗುವದೆಂಬದನ್ನು ಅವನಿಗೆ (ದಯದ ಸಲುವಾಗಿ) ತಿಳಿಯ ಹೇಳುವದಕ್ಕೋಸ್ಕರ ಒಬ್ಬ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಿಗೆ ಹುಕುಮು ಕಳುಹಿಸಿರಲಾಗಿ ಅವನು ಆ ಅಧಿಕಾರಿಗಳ ಬಳಿಗೆ ಹೋಗಿ ಹಜರು ಆಗಲಿಕ್ಕೆ ಇನ್ಕಾರು ಮಾಡಿದನು. ಈ ಕಾರಣಗಳ ಸಲುವಾಗಿ ಆ ಮನುಷ್ಯನು ಈ ಖಾತೆಯೊಳಗಿಂದ ಬರತರ್ಫ ಆಗಿರುತ್ತಾನೆ, ಅವನಿಗೆ ಪುನಃ ಕೆಲಸವು ಕೊಡಲ್ಪಡಲಿಕ್ಕಿಲ್ಲ. ಮಾಸ್ತರ ಜನರೂ ಅಸಿಸ್ಟಂಟರೂ ಮೇಲೆ ಹೇಳಿದಂಥ ನಿಮಿತ್ತಗಳನ್ನು ತೋರಿಸಿ, ಬದಲಿಯ ಹುಕುಮುಗಳನ್ನು ಮುರಿಯುವ ಬಗ್ಗೆ ಆಗಾಗ್ಗೆ ಯತ್ನಿಸುತ್ತಿರುತ್ತಾ

೮. ಈ ವಹಿವಾಟಿನಿಂದ ನಿಷ್ಕಾರಣವಾಗಿ ಬಹಳ ಪತ್ರ ವ್ಯವಹಾರವೂ ತೊಂದರೆಯೂ ಉಂಟಾಗುವ ಕಾರಣ ಇದನ್ನು ಮುರಿಯುವದು ಅವಶ್ಯವು. ಆದದರಿಂದ ಈ ದಕ್ಷಿಣ ಭಾಗದೊಳಗಿನ ಯಾವತ್ತು ಸೆಕೆಂಡಗ್ರೇಡ ಅಂಗ್ಲೋವ್ಹರ್ನ್ಯಾಕ್ಯುಲರ ಮತ್ತು ವ್ಹರ್ನ್ಯಾಕ್ಯುಲರ ಶಾಲೆಗಳ ಮಾಸ್ತರರಿಗೂ, ಅಸಿಸ್ಟಂಟರಿಗೂ ಈಗ ತಿಳಿಸುವದೇನಂದರೆ, ದಕ್ಷಿಣ ಭಾಗದ ಯೆಜ್ಯುಕೇಶನಲ್ ಇನಸ್ಪೆಕ್ಟರಸಾಹೇಬ ಬಹಾದ್ದುರವರು ಬದಲಿಯ ಹುಕುಮುಗಳನ್ನು ಕೊಡುವಾಗ ಪೂರ್ಣವಾಗಿ ವಿಚಾರಮಾಡಿಕೊಡುತ್ತಿರುತ್ತಾರೆ; ಆದದರಿಂದ ಅವುಗಳು ಮಾನ್ಯವಾಗಲಿಕ್ಕೇ ಬೇಕು. ಮತ್ತು ತಿಳಿಸುವದೇನಂದರೆ, ಸದರೀ ಕನ್ನಡ ಶಿಕ್ಷಕನಂತೆ ಹುಕುಮಿಗೆ ಅಮಾನ್ಯ ಮಾಡಲಿಕ್ಕೆ ಯತ್ನಿಸುವವರಿಗೆ ಸದರೀ ಮೇರೆಗೆ ಶಿಕ್ಷೆಯಾಗುದು.

(Signed) J. F. Fleet,

ಬೆಳಗಾವ ತಾ॥೮ ನೇ ಮಾಹೆ ಜುಲಾಯಿ ಸನ್ ೧೮೭೩ ಇ॥ } ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ.

ಪ್ರವೇಶಪರೀಕ್ಷೆಯ ವಿಷಯಕ್ಕೆ

ಬೆಳಗಾವಿ ಟ್ರೇನಿಂಗ ಕಾಲೇಜದಲ್ಲಿ ಅಭ್ಯಾಸ ಮಾಡಲಿಚ್ಛಿಸುವವರಿಗೆ ತಿಳಿಯಪಡಿಸುವದೇನಂದರೆ— ಸದರಿ ಪರೀಕ್ಷೆಯು ತಾರೀಖು ೨ನೇ ಅಕ್ಟೋಬರ ಸನ್ ೧೮೭೩ನೇ ಇಸವಿ ಗುರುವಾರ ದಿವಸ ಟ್ರೇನಿಂಗ ಕಾಲೇಜದಲ್ಲಿಯೂ, ಧಾರವಾಡ, ಕಲಾದಗಿ, ಕಾನಡಾ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೇಕ್ಟರವರ ಆಫೀಸಗಳಲ್ಲಿಯೂ ಆಗುವದು. ಆದ

ರೆ ಈ ಪರೀಕ್ಷೆಯನ್ನು ಕೊಡಲಾಪೇಕ್ಷಿಸುವವರು, ಎರಡು ದಿವಸ ಪೂರ್ವದಲ್ಲಿಯೇ ಆಯಾಯ ಸ್ಥಳಗಳಲ್ಲಿ ಹಾಜರಾಗಿ, ತಾವು ಅಭ್ಯಾಸ ಮಾಡಿರುವ ಶಾಲಿಯ ಮಾಸ್ತರರ ಕಡಿಯಿಂದ ತಂಮ ವಯಸ್ಸು ೧೭ನೇ ವರ್ಷ ಪೂರ್ಣ ಆಗಿರುವ ಬಗ್ಯೆಯೂ, ಪರೀಕ್ಷೆಯ ಕೊಡಲಿಕ್ಕೆ ಲಾಯಖರಿರುವ ಬಗ್ಯೆಯೂ, ಒಳ್ಳೇ ನಡತೆಯುಳ್ಳವರಾಗಿರುವ ಬಗ್ಯೆಯೂ, ಸರಟಿಫಿಕೇಟಗಳನ್ನು ತೆಗೆದುಕೊಂಡು ಬಂದು, ತಮ್ಮ ಹೆಸರುಗಳನ್ನು ಪರೀಕ್ಷೆಯ ಪಟ್ಟಿಗೆ ದಾಖಲು ಮಾಡಿಸಬೇಕು. ಈ ಪರೀಕ್ಷೆಯು ಐದನೇ ಸ್ಟ್ಯಾಂಡರ್ಡನಂತೆ (ಅಂದರೆ ಎತ್ತ್ರೆಯಂತೆ) ಆಗುವದು.

ಕನ್ನಡ ಕವಿತೆಯ ಎರಡನೇ ಪುಸ್ತಕ ತಯಾರಾಗಿರುವದರಿಂದ, ಸ್ಟ್ಯಾಂಡರ್ಡನಲ್ಲಿ ಬರೆದ ಪ್ರಕಾರ ಆ ಪುಸ್ತಕದಲ್ಲಿಯೇ ಉಮೇದವಾರರು ಪರೀಕ್ಷಿಸಲ್ಪಡುವರು.

ವಿದ್ಯಾರ್ಥಿ ಜನರ ಲಾಯಖಿ, ವಯಸ್ಸು, ಒಳ್ಳೇ ನಡತೆ ಇವುಗಳ ಬಗ್ಯೆ ಮಾಸ್ತರರು ಚನ್ನಾಗಿ ವಿಚಾರಣೆ ಮಾಡಿ, ಸರಟಿಫಿಕೇಟು ಕೊಡತಕ್ಕದ್ದು. ಇದಲ್ಲದೆ ಹೋದರೆ, ಉಮೇದವಾರರ ಸಂಖ್ಯೆಯು ಸುಂಮನೇ ಬೆಳದು ಪರೀಕ್ಷಕರಿಗೆ ಹೆಚ್ಚು ಆತಂಕ ಉಂಟಾಗುತ್ತದೆ. ತಿಳಿಯುವದು ತಾರೀಖು ೫ನೇ ಜುಲಾಯಿ ಸನ್೧೮೭೩ನೇ ಇಸವಿ.

[signed]Shrinivas R. Sowady.

ಅಕ್ಟಿಂಗ ಪ್ರಿನಸಿಪಾಲ್ ಟ್ರೇನಿಂಗ ಕಾಲೇಜ ಬೆಳಗಾವಿ.

ಸರಟಿಫಿಕೇಟ ಪರೀಕ್ಷೆಯ ವಿಷಯಕ್ಕೆ.

ಸನ್ ೧೮೭೧ ನೇ ಇಸವಿ ಜನವರಿ ತಿಂಗಳ ಕಾಲಾಪ್ರತ್ರಿಕೆ

ಯು ಪಾನು ೨೧೬ ನೇದರಲ್ಲಿ ಛಾಪಿಸಲ್ಪಟ್ಟ ನೋಟೀಸಿಗೆ ಅನುರೋಧಿಸಿ, ತಿಳಿಯಪಡಿಸುವದೇನಂದರೆ— ಅದರಲ್ಲಿ ಬರೆದ ಪರೀಕ್ಷೆಯು ತಾರೀಖು ೨೭ನೇ ಅಗಟಂಬರ ಸನ್ ೧೮೭೨ನೇ ಇಸವಿ ಸೋಮವಾರ ದಿವಸ, ಬೆಳಗಾವಿ ಟ್ರೇನಿಂಗಕಾಲೇಜದಲ್ಲಿ, ಮೊಹಬಾರ್ನ್ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಾಹಾದ್ದುರವರು ತೆಗೆದುಕೊಳ್ಳುವರು. ಕಾರಣ, ಈ ಪರೀಕ್ಷೆಯನ್ನು ಕೊಡಲಪೇಕ್ಷಿಸುವವರು, ನೇಮಕವಾದ ತಾರೀಖಿನ ನಾಲ್ಕು ದಿವಸ ಪೂರ್ವದಲ್ಲಿಯೇ ತಮ್ಮ ಹೆಸರನ್ನು ರೆಜಿಸ್ತರದಲ್ಲಿ ಶೇರಿಸಲಿಕ್ಕೆ ಪ್ರಿನ್ಸಿಪಾಲ್ ಟ್ರೇನಿಂಗಕಾಲೇಜ ಬೆಳಗಾವಿ ಇವರ ಕಡಿಗೆ ಬಂದು, ಹಾಜರಾಗುವದು. ತಿಳಿಯುವದು ತಾರೀಖು ೫ ನೇ ಜುಲಾಯಿ ಸನ್ ೧೮೭೨ ನೇ ಇಸವಿ.

(Signed) Shrinivas R. Sowady.
ಆಕ್ಟಿಂಗ ಪ್ರಿನ್ಸಿಪಾಲ್ ಟ್ರೇನಿಂಗಕಾಲೇಜ ಬೆಳಗಾವಿ.

Instructions how to act in the case of snake-bite.

ಹಾವು ಕಚ್ಚಿದಕ್ಕೆ ಉಪಾಯವು.

ಮನುಷ್ಯನಿಗೆ ಹಾವು ಕಚ್ಚಿದಕೂಡ್ಲೆ ಆದಷ್ಟು ಬೇಗನೆ ಕಚ್ಚಿದ ಸ್ಥಳವನ್ನು ಬಿಟ್ಟು ಸುಮಾರು ಯೆರಡು ಮೂರು ಇಂಚುಗಳ ಮೇಲೆ ಶರೀರದ ಭಾಗದ ಸುತ್ತುಮುತ್ತು ಹಗ್ಗವನ್ನು ಬಿಗಿದು ಕಟ್ಟು.

ಮತ್ತು ಶರೀರದ ಭಾಗಕ್ಕೂ ಹಗ್ಗಕ್ಕೂ ನಡುವೆ ಒಂದು ಕಟ್ಟಿಗೆಯ ತುಂಡವನ್ನಾಗಲಿ ಗೂಕಿಯನ್ನಾಗಲಿ ಹಾಕಿ ಅದನ್ನು ತಿರುಗಿಸಿ ಹಗ್ಗಕ್ಕೆ ಮುರುಗೆ ಹಾಕಿ ಕೈಲಾದಮಟ್ಟಿ

ಗೆ ಅದನ್ನು ಬಿಗಿ ಮಾಡು.

ಈ ಕಟ್ಟಿನ ಮೇಲೆ ಸುಮಾರು ೪ ಆಗಲಿ ೬ ಆಗಲಿ ಇಂಚುಗಳ ಅಂತರದ ಮೇಲೆ ಮತ್ತು ಯೆರಡು ಮೂರು ಕಟ್ಟುಗಳನ್ನು ಹಾಕಿ ಇದೇ ಮೇರೆಗೆ ಅವುಗಳನ್ನು ಬಿಗಿಮಾಡು. ಇಷ್ಟಾದಬಳಿಕ ಚೂರಿಯಿಂದಾಗಲಿ ಅಂಥಾದೊಂದು ಬೇರೆ ಶಸ್ತ್ರದಿಂದಾಗಲಿ ಕಡಿದ ಘಾಯುಗಳ ಮೇಲೆ ಸುಮಾರು ಪಾವು ಇಂಚಿನಷ್ಟು ಆಳವಾದ ಕಡತಗಳನ್ನು ಹಾಕು ಆ ಕಡತಗಳೊಳಗಿಂದ ಹೋದಷ್ಟು ರಕ್ತ ಹೋಗಬಿಡು ಅಥವಾ ದಂಶವಾದ ಭಾಗವನ್ನೆಲ್ಲ ಕೊಯಿದು ತೆಗೆಯುವದು ಇದಕ್ಕೂ ಒಳ್ಳೇದು. ಇಷ್ಟಾದ ಕೂಡಲೆ ಅತಿ ತ್ವರೆಯಿಂದ ಘಾಯುಗಳ ಬುಡಕ್ಕೆ ಮುಟ್ಟುವಹಾಗೆ ನಿಗಿನಿಗಿ ಕೆಂಡವನ್ನಾಗಲಿ ಕೆಂಪಾಗಿ ಕಾಯಿದ ಕಬ್ಬಿಣವನ್ನಾಗಲಿ ಹಚ್ಚು; ಅಥವಾ ಆ ಘಾಯುಗಳಿಗೆ ಕಾರ್ಬಾನಿಕ್ ಆಸಿದ, ಇಲ್ಲವೆ ನಾಯಿಟ್ರಿಕ್ ಆಸಿದ ಯೆಂಬ ಔಷಧಗಳನ್ನು ಹಚ್ಚಿ ಸುಡು.

ದಂಶವಾದ ಭಾಗದ ಸುತ್ತುಮುತ್ತು ಮೇಲೆ ಹೇಳಿದಂತೆ ಕಟ್ಟುವದಕ್ಕೆ ಸುಲುವಹಾಗಿರದಿದ್ದರೆ ದಂಶವಾದ ಭಾಗವನ್ನಷ್ಟೇ ಹೆಬ್ಬೊಟ್ಟಿನಿಂದಲೂ ತರ್ಜನಿಯಿಂದಲೂ ಕೂಡ ಜಗ್ಗಿ ಎತ್ತಿ ಹಿಡಿದು ಪ್ರತಿ ಛಿದ್ರದ ಸುತ್ತುಮುತ್ತು ಕೈ ಬೊಟ್ಟಿನ ಉಗುರಿನಷ್ಟು ಭಾಗವನ್ನು ಹದನಾದ ಚೂರಿಯಿಂದ ಕೊಯಿದು ತೆಗಿ. ಆದರೆ ಆ ಕೊಯಿದು ತೆಗೆದ ಭಾಗವು $\frac{೧}{೪}$ ಇಲ್ಲವೆ $\frac{೧}{೩}$ ಇಂಚಿನಷ್ಟು ದಪ್ಪವಿರಬೇಕು. ತರುವಾಯ ಮೇಲಿನಂತೆ ಆ ಘಾಯುಗಳ ಬುಡಕ್ಕೆ ಮುಟ್ಟುವಂತೆ ನಿಗಿನಿಗಿ ಕೆಂಡವನ್ನಾಗಲಿ, ಕೆಂಪಾಗಿ ಕಾಯಿದ ಕಬ್ಬಿಣವನ್ನಾಗಲಿ ಹಚ್ಚು.

ಮತ್ತು ಬೇಗನೆ ಲಿಕರ ಅಮೋನಿಯ ಯೆಂಬ ಔಷಧದ ೩೦ ಹನಿಗಳಲ್ಲಿ ಒಂದು ಅಂಸು (೨ ರೂಪಾಯಿಗಳ ತೂಕ)ನೀರು ಕೂಡಿಸಿ ಕುಡಿಯ ಕೊಡು. ಇದೇ ಮೇರೆಗೆ ಪಾವು ಪಾವು ತಾಸಿನ ಅಂತರದಿಂದ ಮೂರು ನಾಲ್ಕು ಸಾರಿ ಈ ಔಷಧವನ್ನು ಕೊಡು. ಆದರೆ ವಿಷ ವೇರಿದ ಲಕ್ಷಣಗಳು ಇನ್ನೂ ತೋರಿಬರುತ್ತಿದ್ದರೆ ಮತ್ತೂ ಕೆಲವು ಸಾರಿ ಕೊಡು.

ಅಥವಾ ಕಾಯಿದ ಬ್ರಾಂಡಿಯನ್ನಾಗಲಿ, ಬೆಲ್ಲದ ಸರಾಯಿಯನ್ನಾಗಲಿ, ಬೇರೆ ಯಾವದಾದರೂ ಸರಾಯಿಯನ್ನಾಗಲಿ ಒಂದು ಅಂಸು ತಕ್ಕೊಂಡು, ಅದರೊಳಗೆ ಅಷ್ಟೇ ನೀರು ಕೂಡಿಸಿ (ಪ್ರೌಢ ಮನುಷ್ಯನಿಗೆ) ಪಾವು ಪಾವು ತಾಸಿನ ಅಂತರದ ಮೇಲೆ ಕುಡಿಸು. ತಡ ಮಾಡದೆ ವೈದ್ಯನನ್ನು ಕರಿಸು, ಇಲ್ಲವೆ ದಂಶವಾದ ಮನುಷ್ಯನನ್ನು ತೀರ ಸಮೀಪವಿದ್ದ ವೈದ್ಯನ ಬಳಿಗೆ ತಕ್ಕೊಂಡು ಹೋಗು. ಸಮೀಪದಲ್ಲಿ ಯಾರೂ ವೈದ್ಯರು ಇಲ್ಲದಿದ್ದರೆ ಒಂದು ಅರ್ಧ ತಾಸು ಹಾದೀನೋಡಿ ಆ ವೇಳೆಯಲ್ಲಿ ವಿಷದ ಲಕ್ಷಣಗಳು ಯೇನೂ ತೋರದಿದ್ದರೆ ಆ ಭಾಗಕ್ಕೆ ಕಟ್ಟಿದಂಥಾ ಕಟ್ಟುಗಳನ್ನು ಸೈಲು ಮಾಡು, ಇಲ್ಲದಿದ್ದರೆ ಕಟ್ಟಿದ ಭಾಗವು ನಿರ್ಜೀವವಾಗುವದು.

ವಿಷದ ಲಕ್ಷಣಗಳು ಕಂಡುಬಂದರೆ ವಿಷ ಇಳಿಯುವ ವರೆಗೂ ಇಲ್ಲವೆ ಆ ಕಟ್ಟುಗಳು ಹಾಕಿದ ಶರೀರದ ಭಾಗವು ಕಂದುಗಟ್ಟಿ ತಣ್ಣಗಾಗುವ ವರೆಗೂ ಕಟ್ಟುಗಳನ್ನು ಸೈಲು ಮಾಡಬೇಡ. ಕಡಿದ ಘಾಯಗಳನ್ನು ಸೀಪಿಕೊಳ್ಳುವದರಿಂದ ಬಹು ತರವಾಗಿ ಹಿತವಾಗುತ್ತದೆ. ಆದರೆ ಆ ಸೀ

ಸುವವನಿಗೆ ಅಪಾಯವಾಗುವ ಸಂಭವವುಂಟು. ಆದದರಿಂದ ಅದನ್ನು ಮಾಡಿರೆಂದು ನಾವು ಹೇಳಲಾರೆವು. ಇಷ್ಟು ಉಪಾಯಗಳನ್ನು ಮಾಡಿದಾಗ್ಯೂ ವಿಷವೇರಿದ ಲಕ್ಷಣಗಳು ತೋರಿ, ಹೆಚ್ಚಾಗುತ್ತಾ ಹೋಗಿ ದಂಶಪಟ್ಟವನು ಮೂರ್ಛಿತನಾದರೆ, ಅಥವಾ ಬಲಗುಂದಿದರೆ, ಅಥವಾ ಸ್ಮೃತಿಗೆಟ್ಟರೆ ಅಥವಾ ಓಕರಿಸಹತ್ತಿದರೆ, ಇಲ್ಲವೆ ಅಸ್ವಸ್ಥನಾದರೆ, ಸಾಸಿವೆಯ ಪೋಟೀಸವನ್ನಾಗಲಿ, ಲಿಕರ ಅಮೋನಿಯ ಎಂಬ ಔಷಧವನ್ನಾಗಲಿ ಒಂದು ಅರವಿಗೆ ತೊಡೆದು ಅದನ್ನು ಅನ್ನಕೋಶದ ಮೇಲೆಯೂ (ಎಡ ಎದೆಯ ಕೆಳಬದಿಯಲ್ಲಿ) ಎದೆಯಗುಂಡಿಗೆಯ ಮೇಲೆಯೂ (ಎಡ ಎದೆಯ ಮೇಲೆ) ಕಟ್ಟು. ಹಾಂಗು ಬಲಪಡಿಸುವ ಉಪಾಯಗಳನ್ನು ನಡಿಸುತ್ತಾ ದಂಶಪಟ್ಟವನನ್ನು ಬೆಚ್ಚಗಿಡು. ಆದರೆ ಗಮ್ಮಾಗಿ ಉಸುರು ಕಟ್ಟುವಂಥಾ ಇಟಕರೆಯ ಕೋಣೆಯಲ್ಲಿ ಅವನನ್ನು ಎಷ್ಟುಮಾತ್ರವೂ ಮುಚ್ಚಿಡಬೇಡ. ಹಾಗೆ ಮಾಡುವದಕ್ಕಿಂತ ತೆರೆದ ಹವೆಯಲ್ಲಿ ಅವನನ್ನು ಇಡುವದು ಒಳ್ಳೇದು.

ಆ ಮನುಷ್ಯನು ಬಹಳ ದಣಕೊಂಡು ದುರ್ಬಲನಾದರೆ ಅವನನ್ನು ಅತ್ತಿತ್ತ ನಡಿಯಗೊಡಬೇಡ. ಬಲಪಡಿಸುವ ಉಪಾಯಗಳಿಂದ, ಸಾಸವೆಯ ಪೋಟೀಸಿನಿಂದ ಇಲ್ಲವೆ ಅಮೋನಿಯದಿಂದ ಅವನನ್ನು ಜಾಗ್ರತೆ ಪಡಿಸು. ಆದರೆ ಅವನು ಸ್ವಸ್ಥ ಮಲಗಲಿ.

ಹಾವು ಕಡಿದು ಕೆಲವು ವೇಳೆಯ ನಂತರ ದಂಶಪಟ್ಟವನು ತರಲ್ಪಟ್ಟು ವಿಷವೇರಿದ್ದರೂ ಇವೇ ಉಪಾಯಗಳನ್ನು ನಡಿಸತಕ್ಕದ್ದು, ಬಹುದಾ ನಿಷ್ಫಲವಾಗಲಿಕ್ಕಿಲ್ಲ. ಎ

ಷ್ಟೋ ಸಾರಿ ವಿಷವಿಲ್ಲದ ಹಾವು ಕಚ್ಚಿದಾಗ್ಯೂ ಕಡಿಸಿ ಕೊಂಡವನು ಕೇವಲ ಹೆದರಿಕೆಯಿಂದಲೇ ನಿಶ್ಪ್ರಾಣವಾಗುತ್ತಾನೆ. ಇಂಥವರಿಗೆ ಮೇಲೆ ಹೇಳಿದ ಉಪಾಯಗಳಿಂದ ತಾತ್ಕಾಲ ಗುಣ ಬರುವದು. ಇದಲ್ಲದೆ ಏರಿದ ವಿಷವು ಅದು ಸಾಧಾರಣ ತರದ್ದಿದ್ದರೂ, ಪ್ರಾಣ ಹಾನಿಕರ ವಿದ್ದರೂ ಇವುಗಳಿಗಿಂತ ಹೆಚ್ಚು ಗುಣಕಾರಿಯಾದ ಉಪಾಯಗಳು ಬೇರೆ ಯಾವವೂ ಇಲ್ಲ.

ಆದಷ್ಟು ಯತ್ನ ಮಾಡಿ ಕಡಿದ ಹಾವನ್ನು ಹುಡುಕಿ ತೆಗಿಯು ತಕ್ಕದ್ದು. ಯಾರಿಗಾದರೂ ಹಾವು ಕಡೆದ ಕೂಡಲೆ ಎಷ್ಟು ಮಾತ್ರವೂ ತಡಮಾಡದೆ, ಆ ದಂಶ ಪಟ್ಟವನನ್ನು ಆಸಪತ್ರಿಗಾಗಲಿ, ಪೋಲೀಸ ಚಾಕಿಗಾಗಲಿ ಒಯ್ಯ ತಕ್ಕದ್ದು. ಅಲ್ಲಿ ಮೇಲೆ ಹೇಳಿದ ಉಪಾಯಗಳು ಮಾಡಲ್ಪಡುವವು.

Correspondence.

ಪತ್ರವ್ಯವಹಾರವು.

ಮಾಹರಾಜ ರಾ. ರಾ. ಶಾಲಾಪತ್ರಿಕೆಯ ಎಡಿಟರ
ಮುಕ್ಕಾಮ ಬೆಳಗಾವಿ ಇವರ ಸನ್ನಿಧಾನಕ್ಕೆ -.

ಕಸಬಾ ನಂದಿಕೇಶ್ವರ ತಾಲೂಕ ಬಾದಾವಿ ಜಿಲ್ಹಾ ಕಲ್ಹಾದಗಿ ಇಲ್ಲಿಯ ಬ್ರ್ಯಾಂಚಸ್ಕೂಲ ಮಾಸ್ತರನ ವಿಜ್ಞಾಪನಃ ಏನಂದರೆ, ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಸುಂದರವಾದ ಕರದ್ವಯಗಳಲ್ಲಿ ಹುಟ್ಟಲ್ಪಡುವ ಅಂದವಾದ ಪತ್ರಿಕೆಯಲ್ಲಿ ಮುದ್ರಿಸಿ ಪ್ರಕಟಿಸುವದಕ್ಕೆ ಸ್ಥಳ ದೊರದೀತೆಂದು ಪರಮಾಶಾಬದ್ಧನಾಗಿ ಬೇಡಿಕೊಳ್ಳುತ್ತೇನೆ.

ತಾರೀಖು ೪ ಫೇಬ್ರುವಾರಿ ಸನ್ ೧೮೭೩ ಇ. ದಿವಸ ಖುದಾಯವಂದ ಫಸ್ಟ್ ಅ. ಕಲೇಕ್ಟರ ಜಿಲ್ಹಾ ಕಲ್ಹಾದಗಿ ಇವರು ಸಾಲಿಯೊಳಗೆ ಬಂದು ಮೊದಲನೇ ಎರಡನೇ ವರ್ಗದ ಪರೀಕ್ಷೆ ತೆಗೆದುಕೊಂಡು ಹುಡುಗರ ಅಕ್ಷರ ಸ್ವಚ್ಛ ಉಂಟು. ಓದೋಣ ಮುಂತಾದ ಅಭ್ಯಾಸ ನೆಟ್ಟಗೆ ಅದೆ ಎಂದು ಷರಾ ಸಹ ಬರೆದು ಇದ್ದಾರೆ. ಈ ಧೊರೆಗಳ ಲಕ್ಷ ಸ್ರು ವಿದ್ಯಾಭಿವೃದ್ಧಿಯಕಡೆಗೆ ವಿಶೇಷವಾಗಿ ಚಿಕ್ಕ ಹುಡುಗರು ಕಲಿಯುವ ಬಗ್ಗೆ ಬಹಳ ಉತ್ತೇಜನ ಕೊಡುತ್ತಾರೆ.

ಈ ಗ್ರಾಮದ ಎಲ್ಲ ರೈತಜನರಿಗೆ ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು ಯೆಂಬದಾಗಿ ಸ್ವತಃ ಬೋಧ ಮಾಡಿದರು. ಇದೇಮೇರೆಗೆ ದೊಡ್ಡ ದೊಡ್ಡ ಅಧಿಕಾರಸ್ಥರು ಹಳ್ಳಿ ಪೂರ ಶಾಲೆಗಳ ಮೇಲೆ ಲಕ್ಷಕೊಟ್ಟರೆ ಜನರಿಗೆ ಬಹಳ ಆನಂದಕರವಾದೀತೆಂದು ತೋರುತ್ತದೆ.

ಮುಕ್ಕಾಂ ನಂದಿಕೇಶ್ವರ ತಾ॥ ೫ ಮಾರ್ಚ ೧೮೭೩ ಇಸವಿ.	ರಾಘವೇಂದ್ರ ಗೋವಿಂದ ಸವದತ್ತೀಕರ ಬ್ರಾಂಚಸ್ಕೂಲ ಮಾಸ್ತರ ನಂದಿಕೇಶ್ವರ.

ಶ್ರೀಮಂತ ರಾ. ರಾ. ರಾವಸಾಹೇಬ ಕನ್ನಡ ಶಾಲಾ ಪತ್ರಿಕೆಯ ಕರ್ತೃಗಳ ಸನ್ನಿಧಾನಕ್ಕೆ.—

ಕೆಳಗೆ ಸಹಿ ಮಾಡಿದಾತನ ವಿನಯಪೂರ್ವಕ ವಿಜ್ಞಾಪನಃ ಈಗ ಇತ್ತಕಡೆಯಿಂದ ಶ್ರೀಮನ್ಮಹಾಭಾರತದೊಳಗಿನ ಒಂದು ಕನ್ನಡ ಪದ್ಯವನ್ನು ಕೆಳಗೆ ಬರೆದು ಕಳುಹಿಸಿದ್ಧೇನೆ ದಯಮಾಡಿ ತಮ್ಮ ಸುಂದರವಾದ ಸ್ಕೂಲ ಪೇಪರದಲ್ಲಿ ಪ್ರಸಿದ್ಧಿಸುವದಕ್ಕೆ ಸ್ಥಳದೊರಿಯಬೇಕು.

ವ್ಯಾಸ ಗುಪ್ತನ ಪದ್ಯವು.

॥ಜನಪ ಕೇಳುಪಲಾಲಿತಾಂಜನ ಜನಜಿತಕ್ಷ ವಿಪಕ್ಷ
॥ಮಾದವು ವಿನುತ ಕರ್ಣಪ್ರಣಯುಗಳು ವೃಷಿಸೇ
॥ಸ ವೈರದಲೀ॥ ಜನ ವಿಡಂಬನ ತಾರಕಾಮಂಡನ ಕದ
॥ರ್ಚಿತ ಕುಮುದಮನೆ ಲೋಚನಯುಗಳು ಮೊಪ್ಪಿದ
॥ವು ಪರ ಪಾಂಚಾಲ ನಂದನೆಯಾ॥೧॥

ಈ ಮೇಲಿನ ಕವಿತೆಯು ದ್ವಂದ್ವಾರ್ಥದ್ದಿದ್ದು, (೧) ಅರ್ಥವು ದ್ರೌಪದಿಯ ನೇತ್ರಗಳಿಗೂ, ಇನ್ನೊಂದು ಶ್ಲೇಷಾರ್ಥವು ಹನುಮಂತನಿಗೂ ಆಗ ಬೇಕೆಂದು ಕೆಲಜನರು ಹೇಳುತ್ತಾರೆ. ಇದುಸಮವಿದ್ದರೆ ನಮ್ಮ ದೇಶ ಬಾಂಧವರಾದ ಸಾಲೀಮಾಸ್ತರರಾಗಲಿ, ಅಥವಾ ಮತ್ತ್ಯಾರಾದರೂ ವಿದ್ವಜ್ಜನರು ಮೆಹರ್ಬಾನಿಗಿಯಿಂದ ಚನ್ನಾಗಿ ಅರ್ಥ ಬಿಡಿಸಿ ಸರ್ವರಿಗೂ ಗ್ರಹಿಕೆಯಾಗುವದಕ್ಕೋಸ್ಕರ ಇದೇ ಪತ್ರದ್ವಾರದಿಂದ ಪ್ರಸಿದ್ಧ ಪಡಿಸ್ಯಾರೆಂಬುವ ಶಾನೆ ನಂಬಿಕೆಯನ್ನು ತಾಳಿದ್ದೇನೆ. ಮಮತಾಶುಕ್ಲೇಂದುವತ್ ವಿರಲಿ ಇತಿ ವಿಜ್ಞಾಪನಃ.

ತಾ॥ ೩೧ ನೇ ಮಾರ್ಚ ಸನ್ ೧೮೭೩ ಇಸ್ವಿ	ನೀಲಕಂಠ ಚಕ್ರೋ ಕುಲಕರ್ಣಿ ಅಸಿಸ್ಟಂಟ ಸ್ಕೂಲಮಾಸ್ತರ ಬ್ಯಾಡಗೀ ತಾ॥ ರಾಣೇಬೆದನೂರ.

ರಾ. ರಾ. ಕನ್ನಡ ಮತ್ರಪತ್ರಿಕದ ಯಡಿಟರ ಇವರಿಗೆ—

ಕೆಳಗಿನ ಪಂಗ್ತಿಗಳು ತಮಗೆ ಸಮಪಟ್ಟರೆ ಸ್ಥಳ ಕೊಡುವ ವಿಚಾರ ಆಗಬೇಕು.

ನಾನು ಬರೆಯುವ ಸಂಗತಿಯುಸಾಲಿಗಳಿಗೆ ಸಂಬಂಧವಾದದ್ದು ಅಥವಾ ಸಾರ್ವಜನಿಕ ಸಂಬಂಧದ್ದು ಅಲ್ಲೆಂದು ತಿಳಿ

ಕೊಂಡಾಗ್ಯಾದರೂ ತಮ್ಮ ಕಡಿಗೆ ಕಳಿಸುವದು ಅಗತ್ಯ ತೋರಿಬಂತು. ಕ್ಷೌರ ಯೇಕಾದಶಿ, ಅಮಾವಾಸ್ಯ, ಹುಣ್ಣಿವಿ ಹಾಂಗ ಯೇನಕೆ ತಿಥಿಗಳಿಗೆ ಮಾಡಿಸಿಕೊಳ್ಳಬಾರದು ಯೆಂದು ನಮ್ಮ ಗುರುಗಳಾದ ಭಟ್ಟಜಿಯವರು ಹೇಳುತ್ತಾರೆ. ಹಾಗು ನಮ್ಮ ಯಜಮಾನರ (ಇಂಗ್ಲಿಶ ಕಲಿತವರು) ಕಡಿಗೆ ಹೋದಾಗ್ಯೆ ಈ ಸಂಬಂಧದ ಮಾತುಹೊರಟರೆ ಮನಸ್ಸು ಬಂದಾಗ್ಯೆ ತಲೆಮಾಡಿಸಿಕೊಳ್ಳಬೇಕು ಯೆಂದು ನುಡಿಯುತ್ತಾರೆ. ಈ ಉಭಯಿತರಿಗೆ ಯಿದರಕಾರಣ ಕೇಳಿದರೆ ಭಟ್ಟಜಿಗಳು ಶಂಕರಾಚಾರ್ಯರ ಕಡಿಗೆ ಹೋಗಿರಿ ಅವರು ಹೇಳುವರು. ನೀವು ನಿಮ್ಮ ಧರ್ಮ ಬಿಟ್ಟು ಅಡಿವೆ ಸೇರಿದಿರಿ ಯೆಂದು ಸಿಟ್ಟಿಲೆ ಮಾತಾಡುತ್ತಾರೆ. ಪರಂತು ಅದರ ಪೂರ್ವ ವೃತ್ತಾಂತ ಯಾರೂ ಹೇಳುವದಿಲ್ಲ. ಹಾಂಗು ಹೊಸದಾಗಿ ತಯಾರಾದ ಜನರಿಗೆ ಕೇಳಿದರೆ ಪಾಖಾಂಡ ಮತ ಹಿಡಿಯುತ್ತಾರೆ. ಆದರೂ ಯಿಂತಿಂಥಾ ದಿವಸ ಕ್ಷೌರ ಮಾಡಿಸಬಾರದು ಯೆಂದು ನಿಯಮ ಮಾಡುವದಕ್ಕೆ ಕಾರಣವೇನಾಯಿತು? ಇದಕ್ಕೆ ಯೇನು ಜವಾಬು ಇದೇ ಪತ್ರದ್ವಾರದಿಂದ ಯಾರಾದರು ಕೊಟ್ಟರೆ ನನ್ನಂಥಾ ಅರಿಯದ ಜನರಿಗೆ ಬೋಧವಾಗುವದು. ತಾ|| ೧೨ ನೇ ಅಪ್ರೀಲ ೧೮೭೪ ಇಸ್ವಿ

ವಿಷ್ಣು ರಾಮಚಂದ್ರ ರಾಮದುರ್ಗಕರ
ಸ್ಕೂಲ ಮಾಸ್ತರ ಹೊನವಾಡ ತಾ.
ವಿಜಾಪೂರ.

ಶಾಲಾಪತ್ರಕವು.

———000———

ಪುಸ್ತಕ ೯] [ಸಂಚಿಕೆ ೫.

ಬೆಳಗಾವಿ, ಮಾಹೆ ಅಗಸ್ಟ ೧೮೭೩.

SELF HELP.

ತನಗೆ ತಾನೇ ನೆರವಾಗುವದು.

ಆರ್ಕರೈಟನ ಸ್ಥಿತಿ ರೀತಿಗಳು ಯೆಂದಿಗೂ ಬದಲಾಗುವಂಥವುಗಳಲ್ಲ; ಅವನ ಧೈರ್ಯವು ಯೆಂದಿಗೂ ಕುಂದುವಂಥಾದಲ್ಲ; ಅವನಲ್ಲಿ ಲೌಕಿಕ ಚಾತುರ್ಯವು ಬಹಳ ವಿತ್ತು; ಉದ್ಯೋಗದಲ್ಲಿ ಅವನ ಬುದ್ಧಿಯು ಜಾಗ್ರತೆಯಾಗಿ ನಡಿಯುತ್ತಿದ್ದಕಾರಣ ಅವನು ಒಳ್ಳೇ ಬುದ್ಧಿಶಾಲಿಯೆಂದೆನಿಸಿಕೊಳ್ಳುತ್ತಿದ್ದನು. ಒಂದು ಸಮಯದಲ್ಲಿ ಆರ್ಕರೈಟನು ತನ್ನ ಹಲವು ಕಾರಖಾನೆಗಳ ವ್ಯವಸ್ಥೆಯನ್ನು ನೋಡುವದರಲ್ಲಿಯೂ, ಅವುಗಳನ್ನು ನಡಿಸುವದರಲ್ಲಿ ಬಹು ಶಮದಿಂದ ಕಾಲ ಕಳೆಯ ಬೇಕಾಯಿತು; ಒಮ್ಮೊಮ್ಮೆ ಇವನು ಬೆಳಗಿನ ಯೆರಡು ತಾಸು ರಾತ್ರಿಯಲ್ಲಿ ಯೆದ್ದು ಕೆಲಸಕ್ಕೆ ಹತ್ತಿದವನು ಮೂರು ತಾಸು ರಾತ್ರಿಯಾಗುವ ವರೆಗೂ ಏಕ ಪ್ರಕಾರವಾಗಿ ದುಡಿಯುತ್ತಿದ್ದನು. ಐವತ್ತು ವರ್ಷದ ಮುದುಕನಾದಾಗ ಇವನು ತನ್ನ ಭಾಷೆಯ ವ್ಯಾಕರಣವನ್ನು ಕಲಿತು ತಕ್ಕ ಮಟ್ಟಿಗೆ ಶುದ್ಧವಾಗಿ ಬರೆಯುವ ಅಭ್ಯಾಸ ಮಾಡಿಕೊಂಡನು. ಇವನ ಯತ್ನದಲ್ಲಿ ಅಡ್ಡಾದ ತೊಂದರೆಗಳೆಲ್ಲ ಪರಿಹಾರವಾದಮೇಲೆ ಇವನು ತನ್ನ ಕ್ರಮ

ದ ಫಲವನ್ನು ಸುಖದಿಂದ ಅನುಭೋಗಿಸಿ ತೃಪ್ತನಾದನು.
ಇವನು ತನ್ನ ಮೊದಲಿನ ಯಂತ್ರವನ್ನು ರಚಿಸಿದನಂತರ
೧೮ ವರ್ಷಗಳಾದಮೇಲೆ ಜುಳೈ ಮಾಸಕ್ಕೆ ಯೋರಿ ಡರ್ಬೀ
ಶಾಯುರದಲ್ಲಿ ಹಾಯಶೆರಿಫನೆಂಬ ದೊಡ್ಡ ಅಧಿಕಾರವನ್ನು
ಹೊಂದಿದನು. ಅದರನಂತರ ಸ್ವಲ್ಪ ಕಾಲದೊಳಗೇ ೩ನೇ
ಜಾರ್ಜನೆಂಬ ಅರಸು ಇವನಿಗೆ ನೈಟ ಯೆಂಬ ಪದವಿಯು
ಕೊಟ್ಟು ದೊಡ್ಡ ಮನುಷ್ಯರ ವರ್ಗದಲ್ಲಿ ಇವನನ್ನು ತೆಗೆ
ದುಕೊಂಡನು. ಇವನು ಸನ್ ೧೭೯೨ನೇ ವರ್ಷ ಮರ
ಣ ಹೊಂದಿದನು. ಇಂಗ್ಲಂಡದಲ್ಲಿ ಇತ್ತಲಾಗಿ ಪ್ರಬಲವಾ
ದ ಕಾರಖಾನೆಗಳ ಪದ್ಧತಿಯನ್ನು ಆರ್ಕರೈಟನೇ ಉಂಟು
ಮಾಡಿದನು, ಇದು ಒಳಿತವೇ ಆಗಲಿ, ಹೀನವೆ ಆಗಲಿ; ಆ
ದರೆ ಈ ವಿಧವಾಗಿ ಉದ್ಯೋಗ ನಡಿಸುವ ಪದ್ಧತಿಯಿಂದ ಬ
ಹು ಮಂದಿ ವರ್ತಕರಿಗೂ, ಸಮುದಾಯತ್ವೇನ ಸಮಗ್ರ
ದೇಶಕ್ಕೂ ಅಪರಿಮಿತ ದ್ರವ್ಯ ಲಾಭವಾಯಿತೆಂಬದಕ್ಕೆ ಸಂ
ದೇಹ ವಿಲ್ಲ.

ಇಂಗ್ಲಂಡದೊಳಗಿನ ಬೇರೆ ಬೇರೆ ವಿಧದ ಕೈಗಾರಿಕೆಗ
ಳಲ್ಲಿ ಇದೇ ವಿಧವಾಗಿ ಸಾಹಸವುಳ್ಳ ಉದ್ಯೋಗಿಗಳ ಉ
ದಾಹರಣೆಗಳು ಸಿಕ್ಕುತ್ತವೆ. ಅಂಥವರಿಂದ ಅವರ ನೆರೆಯು
ವರಿಗೆ ಬಹು ಲಾಭವಾದದ್ದಲ್ಲದೆ ಸಾಧಾರಣವಾಗಿ ದೇಶಕ್ಕೆ
ಲ್ಲ ದೊಡ್ಡ ಸಂಪತ್ತಿಯೂ, ಸಾಮರ್ಥ್ಯವೂ ಪ್ರಾಪ್ತವಾಯಿ
ತು. ಬೆಲ್ಪರ ಗ್ರಾಮದ ಸ್ಟ್ರಟ್ಟ ಯೆಂಬ ಮನೆತನದವರೂ
ಗ್ಲಾಸಗೋ ಪಟ್ಟಣದ ಟನೆಂಟಯೆಂಬ ಮನೆತನದವರೂ ಇ
ದೇ ವಿಧದ ಜನರಾದರು. ಲೀಡ್ಸ ಗ್ರಾಮದ ಮಾರ್ಶಲಗಾ
ಟಯೆಂಬ ಮನೆತನಗಳೂ, ಲಾಂಕಾಶಾಯುರದ ದಕ್ಷಿಣಭಾಗ

ಪಲ್ಲಿದ್ದ ಪೀಲ, ಅಶ್ವರ್ಥ, ಬರ್ಲೀ, ಫೀಲ್ಡನ್, ಅಪ್ಟನ್, ಹೇವುಡ, ಏನಸ್ವರ್ಥ, ಯೆಂಬ ಮನೆತನಗಳೆಲ್ಲ ಇದೇ ವಿಧದವೇ ಇದ್ದವು. ಈ ಮನೆತನಗಳ ವಂಶಸ್ಥರಲ್ಲಿ ಕೆಲವರು ಇಂಗ್ಲಂಡದ ಇತಿಹಾಸದಲ್ಲಿ ಹೆಸರಾದವರು ಇದ್ದಾರೆ. ದಕ್ಷಿಣ ಲಾಂಕಾಶಾಯರದ ಪೀಲಯೆಂಬ ಮನೆತನದವರು ಮುಖ್ಯವಾಗಿ ಇದೇ ವಿಧದ ಜನರಿದ್ದರು.

ಈ ಮನೆತನವನ್ನು ಸ್ಥಾಪಿಸಿದ ಮೂಲ ಪುರುಷನು ಹದಿನೇಳನೇ ಶತಮಾನದಲ್ಲಿ ಮಧ್ಯಭಾಗದ ಸುಮಾರಿನಲ್ಲಿ ಒಬ್ಬ ಚಿಕ್ಕ ಒಕ್ಕಲಿಗನಾಗಿದ್ದನು. ಇವನು ಮೊದಲು ಬ್ಲಾಕಬರ್ನಯೆಂಬ ಊರಿನ ಹತ್ತಿರ ಹೋಲ ಹಾಉಸಫಾರ್ಮ ಯೆಂಬ ಹೊಲದಲ್ಲಿ ಇರುತ್ತಿದ್ದನು; ತರುವಾಯ ಆ ಪೂರಲ್ಲಿ ಫೀಶಲೇನ ಯೆಂಬ ಓಣಿಯಲ್ಲಿ ಒಂದು ಮನೆಯೊಳಗೆ ಬಂದು ನಿಂತನು. ಇವನ ಹೆಸರು ರಾಬರ್ಟಪೀಲನು; ಇವನಿಗೆ ಮೇಲೆ ಮೇಲೆ ಮಕ್ಕಳಾಗುತ್ತ ಹೋದದರಿಂದ ದಿನ ದಿನಕ್ಕೆ ಇವನ ಕುಟುಂಬವು ದೊಡ್ಡದಾಗುತ್ತ ಹೋಯಿತು. ಆದರೆ ಬ್ಲಾಕಬರ್ನದ ನೆರೆಯ ಭೂಮಿಯು ವಿಶೇಷವಾಗಿ ಫಲವುಳ್ಳದ್ದಲ್ಲೆಂದು ನೋಡಿ, ಒಕ್ಕಲತನದಲ್ಲಿ ತನ್ನ ಕುಟುಂಬದವರು ಯೆಷ್ಟು ಶ್ರಮ ಮಾಡಿದರೂ ಅದರಿಂದ ವಿಶೇಷ ಲಾಭ ವೇನು ಆಗಲಿಕ್ಕಿಲ್ಲೆಂದು ಅವನು ತಿಳುಕೊಂಡನು. ಆದರೆ ಬ್ಲಾಕಬರ್ನದಲ್ಲಿಯೂ, ಅದರ ನೆರೆಯಲ್ಲಿಯೂ ಬಹು ಕಾಲದಿಂದ ದಡವತಿಯ ಬಟ್ಟೆಗಳನ್ನು ವಿಶೇಷವಾಗಿ ಸಾಧಾರಣ ತರದ ಬಿಳೇ ವಸ್ತ್ರಗಳನ್ನು ನೇಯುವ ದೊಡ್ಡ ದೊಡ್ಡ ಕಾರಖಾನೆಗಳಿದ್ದಿಲ್ಲ; ಆದದರಿಂದ ಉದ್ಯೋಗಿಗಳಾದ ಒಕ್ಕಲಿಗರು ದೊಡ್ಡ ಕುಟುಂಬವುಳ್ಳವ

ರಿದ್ದರೆ, ಹೊಲದೊಳಗೆ ಯೇನು ಕೆಲಸವಿಲ್ಲದ ಕಾಲದಲ್ಲಿ ಮನೆಯೊಳಗೆ ನೇಯುವ ಕೆಲಸವನ್ನು ನಡಿಸುತ್ತಿದ್ದರು. ಆದದರಿಂದ ರಾಬರ್ಟಪೀಲನು ಕರಳೆಯ ವಸ್ತ್ರಗಳಿಗೆ ಅಚ್ಚು ಹಾಕುವ ಉದ್ಯೋಗವನ್ನು ತನ್ನ ಮನೆಯಲ್ಲಿ ಹೂಡಿದನು. ಇವನು ನಿಜಸ್ತಿಕೆಯುಳ್ಳವನಾಗಿದ್ದು ಒಳ್ಳೇ ಬದಕನ್ನು ಹುಟ್ಟಿಸುತ್ತಿದ್ದನು; ಇದಲ್ಲದೆ ಇವನು ಶ್ರಮದಿಂದ ಕೆಲಸ ಮಾಡಿ ಮಿತದಿಂದ ಹಣವನ್ನು ವೆಚ್ಚ ಮಾಡುತ್ತ ಹೋದದರಿಂದ ದಿನ ದಿನಕ್ಕೆ ಇವನ ವ್ಯಾಪಾರವು ಅಭಿವೃದ್ಧಿಯಾಗುತ್ತ ಬಾಗಿತು. ಇವನಲ್ಲಿ ಸಾಹಸ ಗುಣವಾದರೂ ಇದ್ದದರಿಂದ ಆ ಕಾಲದಲ್ಲಿ ಹೊಸದಾಗಿ ರಚಿಸಲ್ಪಟ್ಟ ಕಾರ್ಡಿಂಗಸಿಂದರಯೆಂಬ ಯಂತ್ರವನ್ನು ಇವನು ತನ್ನ ಕೆಲಸದಲ್ಲಿ ಉಪಯೋಗಿಸಲಾರಂಭಿಸಿದನು.

ಆದರೆ ರಾಬರ್ಟಪೀಲನ ಲಕ್ಷವು ವಿಶೇಷವಾಗಿ ವಸ್ತ್ರಗಳಿಗೆ ಅಚ್ಚು ಹಾಕುವ ಕೆಲಸದಲ್ಲಿಯೇ ಇರುವದು. ಈ ಕೆಲಸವು ಆಗ ಬಹು ಸ್ವಲ್ಪ ಜನರಿಗೆ ಮಾತ್ರ ಗೊತ್ತಾಗಿತ್ತು. ಇವನು ಈ ಅಚ್ಚಿನ ಕೆಲಸವನ್ನು ಕೆಲಕಾಲದವರೆಗೆ ತನ್ನ ಮನೆಯಲ್ಲಿಯೇ ಗುಪ್ತವಾಗಿ ಮಾಡುತ್ತಿದ್ದನು; ಅದಕ್ಕೆ ಅಗತ್ಯವಾಗಿದ್ದ ವಸ್ತ್ರವನ್ನು ನುಣುಪು ಮಾಡುವ ಕೆಲಸವನ್ನು ಅವನ ಮನೆಯ ಹೆಂಗಸರಲ್ಲಿಯೇ ಒಬ್ಬವಳು ಮಾಡುತ್ತಿದ್ದಳು. ಆ ಕಾಲದಲ್ಲಿ ಪೀಲನಂಥವರ ಮನೆಗಳಲ್ಲಿ ಕಂಚಿನ ಹರಿವಾಣಗಳಲ್ಲಿ ಉಂಣುವ ನಡತೆಯಿತ್ತು. ಇವನು ಒಂದು ಇಂಥಾ ಹರಿವಾಣವನ್ನು ತೆಗೆದುಕೊಂಡು ಅದರ ಮೇಲೆ ಒಂದು ಆಕೃತಿಯನ್ನು ಸಹಜ ವೃತ್ತಿಯಿಂದ ಕೊರೆಯಲಾಗಿ; ಅದೇ ಆಕೃತಿಯನ್ನು ವಿಪರೀತವಾಗಿ ಬ

ಣ್ಣದಿಂದ ವಸ್ತ್ರದ ಮೇಲೆ ಮೂಡಿಸಬಹುದೆಂಬ ಕಲ್ಪನೆಯು ಅವನಿಗೆ ತೋರಿತು. ಅವನ ಹೊಲದೊಳಗಿನ ಮನೆಯ ನೆರೆಯಲ್ಲಿ ಒಂದು ಗುಡಿಸಲಿನಲ್ಲಿ ಒಬ್ಬ ಹೆಂಗಸು ಇರುತ್ತಿದ್ದಳು. ಅವಳಲ್ಲಿ ವಸ್ತ್ರ ಕಾಗದ ಮುಂತಾದವುಗಳನ್ನು ಒತ್ತಿ ನುಣುಪು ಮಾಡುವ ಯಂತ್ರವಿತ್ತು. ಅದರಿಂದ ಪೀಲನು ಅವಳ ಮನೆಗೆ ಹೋಗಿ, ತನ್ನ ಹರಿವಾಣದ ಮೇಲಿನ ಆಕೃತಿಗೆ ಬಣ್ಣವನ್ನು ಹಚ್ಚಿ, ಅದರ ಮೇಲೆ ವಸ್ತ್ರವನ್ನು ಇಟ್ಟು, ಆ ಯಂತ್ರದಿಂದ ಒತ್ತಲಾಗಿ, ಅಚ್ಚು ಚನ್ನಾಗಿ ಮೂಡಿದ್ದನ್ನು ನೋಡಿ ಸಮಾಧಾನ ಪಟ್ಟನು. ಈ ವಿಧವಾಗಿ ಯಂತ್ರದಿಂದ ಅಚ್ಚುಹಾಕಿ ಕರಳೆಯ ಬಟ್ಟೆಗಳನ್ನು ಮೂಡುವ ಯುಕ್ತಿಯುಂಟಾಯಿತೆಂದು ಹೇಳುತ್ತಾರೆ. ತರುವಾಯ ರಾಬರ್ಟಪೀಲನು ತನ್ನ ಯುಕ್ತಿಯನ್ನು ತೀವ್ರವೇ ಕಡೆಗಾಣಿಸಿದನು. ಇವನು ಮೊದಲಿಗೆ ಮಾಡಿದ ಅಚ್ಚು ಪಾರಸ್ಲೀ ಯೆಂಬ ಒಂದು ಗಿಡದ ಎಲೆಯ ಹಾಗೆ ಇರುವ ಕಾರಣ ಇವನಿಗೆ ಬ್ಲಾಕಬರ್ನದ ಸುತ್ತಮುತ್ತು ಈಗಲೂ "ಪಾರಸ್ಲೀಪೀಲ" ನೆಂದೆನ್ನುತ್ತಾರೆ. ಇನ್ನೊಂದು ವಿಧದ ಅಚ್ಚು ಹಾಕುವ ಯತ್ನವನ್ನು ಇವನ ಒಬ್ಬ ಮಗನು ಉಪಯೋಗದಲ್ಲಿ ತಂದನು. ರಾಬರ್ಟಪೀಲನು ತನ್ನ ಯತ್ನವು ಸಫಲವಾದದ್ದನ್ನು ನೋಡಿ, ಹೊಲ ಮಾಡುವದನ್ನು ಬಿಟ್ಟುಕೊಟ್ಟು, ಬ್ಲಾಕಬರ್ನದಿಂದ ಸುಮಾರು ಎರಡು ಮೈಲು ದೂರವಾಗಿದ್ದ ಬ್ರೂಕಸೈಡ ಯೆಂಬ ಹಳ್ಳಿಯಲ್ಲಿ ಹೋಗಿ ನಿಂತು ಅಚ್ಚು ಹಾಕುವ ಕೆಲಸವನ್ನೇ ನಡಿಸಿದನು. ಅಲ್ಲಿ ತನ್ನಂತೆಯೇ ಚಟುವಟಿಕೆಯುಳ್ಳ ಮಕ್ಕಳ ಸಹಾಯದಿಂದ ಈ ವ್ಯಾಪಾರವನ್ನು ಬಹಳ ವರ್ಷಗ

ಳವರೆಗೆ ಭರದಿಂದ ನಡಿಸಿದನು. ಅವನ ಮಕ್ಕಳು ಪ್ರಬುದ್ಧರಾದ ಹಾಗೆ ಪೀಲಯೆಂಬ ಹೆಸರಿನ ಅಂಗಡಿಗಳು ಹೆಚ್ಚಾಗುತ್ತ ಹೋಗಿ, ಅವುಗಳೆಲ್ಲ ಜಾಗ್ರತೆಯಾದ ಉದ್ಯೋಗಸ್ಥಾನಗಳೂ, ಬಹುಜನ ಕೂಲಿಕಾರರಿಗೆ ಲಾಭದ ಆಶ್ರಯಗಳೂ ಆದವು.

ಈ ಮೊದಲಿನ ಅಪ್ರಸಿದ್ಧನಾದ ರಾಬರ್ಟ್‌ಪೀಲನ ಬಗ್ಗೆ ಈಗ ತಿಳಿದ ಸಂಗತಿಗಳಿಂದ ನೋಡಲಾಗಿ, ಅವನು ವಿಲಕ್ಷಣ ತರದ ಮನುಷ್ಯನಿದ್ದನೆಂದು ತೋರುತ್ತದೆ. ಧೂರ್ತತ್ವವೂ, ಚಾತುರ್ಯವೂ, ದೂರದರ್ಶಿತ್ವವೂ, ಈ ಗುಣಗಳೆಲ್ಲ ಅವನಲ್ಲಿ ಪೂರ್ಣವಾಗಿ ಸುತ್ತಿದ್ದವು. ಒಬ್ಬರಾಡುವದನ್ನು ಕೇಳಿ, ಇನ್ನೊಬ್ಬರು ಹೇಳುವ ಮಾತುಗಳನ್ನು ನಾವು ಕೇಳುತ್ತೇವಷ್ಟೇ ಹೊರ್ತು ಪ್ರತ್ಯಕ್ಷವಾಗಿ ಅವನನ್ನು ನೋಡಿದವರು ಈಗ ಯಾರು ಇಲ್ಲ; ಅಂಥವರ ಮಕ್ಕಳು ಸಹ ಈಗ ತ್ವರೆಯಾಗಿ ಈ ಲೋಕವನ್ನು ಬಿಡುತ್ತ ನಡೆದಿದ್ದಾರೆ. ರಾಬರ್ಟ್ ಪೀಲನ ಮಗನಾದ ಸರ ರಾಬರ್ಟನೆಂಬವನು ತನ್ನ ತಂದೆಯ ವಿಷಯವಾಗಿ ಮರ್ಯಾದೆಯಿಂದ ನುಡಿದದ್ದೇನಂದರೆ, "ನಮ್ಮ ಮನೆತನವನ್ನು ಮುಂದಕ್ಕೆ ತಂದವನು ನನ್ನ ತಂದೆಯೇ ಯೆಂದು ಹೇಳಬಹುದು. ವ್ಯಾಪಾರದಿಂದ ದೇಶಕ್ಕೆ ಉಂಟಾಗುವ ಸಂಪತ್ತಿಯು ಮಹತ್ವವು ಅವನಿಗೆ ಬಹು ಚನ್ನಾಗಿ ತಿಳಿದಿತ್ತು; ಆದದರಿಂದ ಅವನು ಮೇಲೆ ಮೇಲೆ ಅನ್ನುತ್ತಿದ್ದದ್ದು ಯೇನಂದರೆ, ವ್ಯಾಪಾರದಿಂದ ಸಮಗ್ರ ದೇಶಕ್ಕೆ ಉಂಟಾಗುವ ಸಂಪತ್ತಿಯನ್ನು ನೋಡಲಾಗಿ, ಒಬ್ಬೊಬ್ಬ ಮನುಷ್ಯನಿಗೆ ಉಂಟಾಗುವದು ಯೇನು ಅಲ್ಲ."

ಸರ್ ರಾಬರ್ಟನು ತನ್ನ ಕುಟುಂಬದವರಲ್ಲಿ ಬಾರೋನೆಟನೆಂಬ ಪದವಿಯುಳ್ಳ ಮೊದಲನೇ ಮನುಷ್ಯನಾದಾಗ್ಯೂ, ಈ ಹೆಸರಿನ ಕೈಗಾರಿಕೆಯವರಲ್ಲಿ ಯೆರಡನೇ ಮನುಷ್ಯನಾಗಿದ್ದನು. ಇವನು ತನ್ನ ತಂದೆಯಂತೆಯೇ ಕಷ್ಟಪ್ರಯತ್ನವುಳ್ಳವನೂ, ಸಾಮರ್ಥ್ಯವಂತನೂ, ಉದ್ಯೋಗಿಯೂ, ಇದ್ದನು. ಆರಂಭದಲ್ಲಿ ಇವನ ಸ್ಥಿತಿಯು ಕೆಲಸಮಾಡಿ ಹೊಟ್ಟೆ ತುಂಬಿಕೊಳ್ಳುವವರ ಸಾಧಾರಣ ಸ್ಥಿತಿಗಿಂತ ಬಹಳ ಮೇಲಾದದ್ದು ಇದ್ದಿಲ್ಲ. ಇವನ ತಂದೆಯು ಮುಂದಿನ

(ಮುಂದಕ್ಕೆ ಸಾಗುವದು.)

Champu Ramayen and Champu Bharata with Commentaries in Canarese by M. Shantaviraya.

||ಚಂಪೂ ರಾಮಾಯಣೇ ಸವ್ಯಾಖ್ಯಾನೇ ಬಾಲಕಾಂಡಃ||

||ಗದ್ಯ||

ತತಃ ಪರಮಹರ್ಷೇಣ ಮಹರ್ಷಿಣಾ ವಿಧಿವದಭ್ಯರ್ಚಿತಃ। ಪರಮೇಷ್ಠೀ ಭಾರತ್ಯಾ ಮರ್ತ್ಯಲೋಕೇಪಿ ಸ್ವಪ್ರವೃತ್ತಿಂ ಪ್ರಕಾಶಯಿತುಂ ಕಿಲ ಭವಂತಮೇವೋಪತಿಷ್ಠಮಾನಯಾ ರಾಮಚರಿತಂ ಯಥಾ ಕೃತಂ ವ್ಯಾಕ್ರಿಯತಾಮಿತಿ ವ್ಯಾಹೃತ್ಯಾಂತರಧಾತ್

||ಅನ್ವಯಃ||

ತತಃ=ಉಂಟಾದನಂತರದಲ್ಲಿ। ಪರಮಹರ್ಷೇಣ=ಪರಮಾನಂದವುಳ್ಳಂಥ। ಮಹರ್ಷಿಣಾ=ವಾಲ್ಮೀಕಿಯಿಂದ।ವಿಧಿವತ್=ವೇದವಿಧಾನದಂತೆ। ಅಭ್ಯರ್ಚಿತಃ=ಅರ್ಘ್ಯಾದಿಗಳಿಂದ ಪೂಜಿಸಲ್ಪಟ್ಟ। ಪರಮೇಷ್ಠೀ=ಬ್ರಹ್ಮನು। ಅಮರ್ತ್ಯಲೋ

ಕೇಪಿ=ಮನುಷ್ಯ ಲೋಕದಲ್ಲಿಯಾದರು। ಸ್ವವೃತಂ=ನಿಜ ಚರಿತ್ರವನ್ನು। ಪ್ರಕಾಶಯಿತುಂಕಿಲ = ಪ್ರಖ್ಯಾತ ಮಾಡುವಗೋಸ್ಕರಗಡ। ಭವಂತಂಏವ=ನಿನ್ನನ್ನು ಕುರಿತೇವೆ। ಉಪತಿಷ್ಟಮಾನಯಾ=ವಾಸಮಾಡಿದಂಥ। ಭಾರತ್ಯಾ = ವಾಗ್ದೇವಿಯಿಂದ। ರಾಮಚರಿತಂ=ರಘುರಾಮ ಚರಿತ್ರವು। ಯಥಾಶ್ರುತಂ=ಯಥಾಶ್ರವಣ ಪೂರ್ವಕವಾಗಿ। ವ್ಯಾಕ್ರಿಯತಾಂ=ರಚಿಸಲಿ। ಇತಿ=ಇಂತೆಂದು। ವ್ಯಾಹೃತ್ಯ=ನುಡಿದು।ಅಂತರಧಾತ್=ಬಯಲಾದನು ಅಥವಾ ಗುಪ್ತವಾದನು.

॥ಶಾಸ್ತ್ರವಿಷಯಃ॥

ರೂಪನಿಷ್ಪತ್ತಿಃ।—ಪರಮೇಷ್ಠೀ=(ಪರಮ+ಇ+ಷ್ಠಾ+ಸ್ಥಃ+ಷ್+ಇನ್=ಈ) ಪರಮೇತಿಷ್ಠತೀತಿಪರಮೇಸ್ಥಃ "ಕಿದಿನಿಪ್ರತ್ಯಯ ಉಣಾದಿಕಃ, ತತ್ಪುರುಷೇಕೃತಿಬಹುಳಮಿತಿಸಪ್ತಮ್ಯಾ ಅಲುಕ್, ಸ್ಥಾನೇಸ್ತ್ರೃಣಾಮಿತಿವಕ್ತವ್ಯಾತ್ ಷತ್ವಂ।" ಇನ್ ಎಂಬ ಪ್ರತ್ಯಯವು ಉಣಾದಿಕವು, ತತ್ಪುರುಷಪೂರ್ವಕವಾದ ಅಲುಕ್ ಸಮಾಸದಲ್ಲಿಯೂ ಏಕಾರದ ಮುಂದೆ ಪರವಾದಲ್ಲಿಯೂ ಸಕಾರಕ್ಕೆ ಷಕಾರವಾಗಿ ಇನ್ ಪ್ರತ್ಯಯವು ಹತ್ತಿತು. ಪ್ರ—

ಪರಮೇಷ್ಠೀಕರ್ತೃ, ಅಂತರಧಾತ್ ಕ್ರಿಯಾಪದ, ಅಕರ್ಮಕ, ಕ, ಪ್ರ.—ಅಂತರಧಾತ್=(ಅಂತರ್+ಅಧಾತ್) ಧಾ ಎಂಬುದು ಧಾತು, ಅ ಎಂಬುದು ಹಿಂದೆ ಲಜ್ ಲಕಾರಕ್ಕೆ ಬರುವದು, ತ್ ಎಂಬುದು ಮುಂದೆ ಭೂತಕಾಲ, ಪರಸ್ಮೈಪದ, ಪ್ರಥಮ ಪುರುಷ,ಏಕವಚನ,

॥ಭಾವಾರ್ಥಃ॥

ತನ್ನಲ್ಲಿ ಬ್ರಹ್ಮನು ಹುಟ್ಟಿದನೆಂಬ ಹರ್ಷವುಳ್ಳ ಶಾಪಾ

ನುಗ್ರಹ ಸಮರ್ಥನಾದ ವಾಲ್ಮೀಕಿಯಿಂದ ವಿಧಾನಪೂರ್ವಕವಾಗಿ ಪೂಜಿಸಿಕೊಂಡ ಬ್ರಹ್ಮನು ಮನುಷ್ಯ ಲೋಕದಲ್ಲಿಯಾದರು ರಾಜಚರಿತ್ರವನ್ನು ಪಸರಿಸುವಗೋಸ್ಕರ ನಿನ್ನಲ್ಲಿ ವಾಸಮಾಡಿದ ಸರಸ್ವತಿಯಿಂದ ಶ್ರೀರಾಮಚರಿತ್ರವು ಮಾಡಲ್ಪಡಲಿ ಎಂದು ಚನ್ನಾಗಿ ಬೋಧಿಸಿ ಬಯಲಾದನು.

॥ಚಂಪೂಭಾರತೇ ಸವ್ಯಾಖ್ಯಾನೇ ಪ್ರಥಮಸ್ತಬಕಃ॥

॥ವಸಂತತಿಲಕಾವೃತ್ತಂ॥

ಚಿತ್ರಂ ದಿದರ್ಶಯಿಷುಣಾ ಜನಿತಸ್ಯ ಯಸ್ಯಾಂ।
ಮಧ್ಯಂವಿನೈವ ವಿಧಿನಾ ಮಹಿಳಾಜನಸ್ಯ।
ಅಂಗನ್ನಿತಂಬಜಘನಾದಿ ಯತೋಯತೋಧಃ।
ಸ್ತುಂಗಂ ಕುಚಾದ್ಯುಪರಿಯಾತಿ ತತೋನುಕೂಲಂ॥೬೦॥

॥ಅನ್ವಯಃ॥

ಚಿತ್ರಂ=ಆಶ್ಚರ್ಯವನ್ನು। ದಿದರ್ಶಯಿಷುಣಾ=ನೋಡಲಿಚ್ಛೆಯುಳ್ಳಂಥ। ವಿಧಿನಾ=ಬ್ರಹ್ಮನಿಂದ। ಮಧ್ಯಂವಿನಾಏವ=ಮಧ್ಯಹೊರತಾಗೇವೆ। ಜನಿತಸ್ಯ=ಹುಟ್ಟಿದಂಥ। ಯಸ್ಯಾಂ=ಆ ಪಟ್ಟಣದಲ್ಲಿಯು। ಮಹಿಳಾಜನಸ್ಯ=ಸ್ತ್ರೀಜನದ। ನಿತಂಬಜಘನಾದಿ, ನಿತಂಬ=ಕಟಿಪಶ್ಚಾದ್ಭಾಗಗಳು, ಜಘನ=ತತ್ಪುರೋಭಾಗಗಳು, ಆದಿ=ಮೊದಲಾದಂಥ। ಅಂಗಂ=ಶರೀರವು। ಅಧಃ=ಕೆಳಭಾಗ ಪೂರ್ವಕವಾಗಿ। ಯತೋಯತಃ=ಎಲ್ಲೆಲ್ಲಿ। ಯಾತಿ=ಗಮಿಸುತ್ತದೆ। ತತಃ=ಅಲ್ಲಲ್ಲಿ। ಉಪರಿ=ಮೇಲುಭಾಗದ। ಕುಚಾದಿ=ಮೊಲೆಗಳು ಮೊದಲಾದಂಥ। ತುಂಗಂ ಅಗಂ=ಊರ್ಧ್ವಶರೀರವು। ಅನುಕೂಲಂ=ಅಧಃಕಾಯಾನುಕೂಲವಾಗಿ। ಯಾತಿ=ಗಮಿಸುತ್ತದೆ.

॥ಶಾಸ್ತ್ರವಿಷಯಃ॥

ರೂಪನಿಷ್ಪತ್ತಿಃ। —ದಿದರ್ಶಯಿಷುಣಾ=(ದ್+ಇ+ದೃಶ್ + ಅರ್ + ಏ + ಅಯ್ + ಇ + ಸ್=ಷ್+ಉ+ನಾ=ಣಾ) "ಣ್ಯಂತಾತ್ದೃಶೇಃ ಸನ್ನಂತಾದುಃ ಪ್ರತ್ಯಯಃ," ಣ್ಯಂತವಾದ ದೃಶಿರ್ ಎಂಬ ೧ನೇ ಗಣದ ಧಾತುವಿಗೆ ಸನ್ ಪ್ರತ್ಯಯವು ಹತ್ತಿಯಿದರ ಮೇಲೆ ಉ ಪ್ರತ್ಯಯುವು ಹತ್ತಿತು. । ಪ್ರ—ಅಂಗಂ ಕರ್ತೃ, ಯಾತಿ ಕ್ರಿಯಾಪದ, ಅಕರ್ಮಕ, ಕ, ಪ್ರ. ಯಾತಿ=(ಯಾ+ತಿ)ಯಾ ಎಂಬುದು ಎರಡನೇ ಗಣದ ಧಾತು, ತಿ ಎಂಬುದು ಲಟ್ ಲಕಾರ, ಪರಸ್ಮೈಪದ, ವರ್ತಮಾನಕಾಲ, ಪ್ರಥಮ ಪುರುಷ, ಏಕವಚನ. ಅ. — ಮಧ್ಯಶೂನ್ಯವಾಗಿ ನಿರ್ಮಿತವಾದ ಹೇತುತ್ವದಿಂದ ಪದಾರ್ಥ ಹೇತುಕವಾಗಲು ಕಾವ್ಯಲಿಂಗಾಲಂಕಾರವಾಯ್ತು— ಮಧ್ಯಶೂನ್ಯವಾದ ಜನನದ ಆ ಸಂಬಂಧದಲ್ಲಿ ತತ್ಸಂಬಂಧವಾಗಲು ರೂಪಾತಿಶಯೋಕ್ತ್ಯಲಂಕಾರವಾಯ್ತು. ಈ ಎರಡು ಕೂಡಿ ಸಂಕರಾಲಂಕಾರವಾಯ್ತು.

॥ಭಾವಾರ್ಥಃ॥

ಆಶ್ಚರ್ಯವನ್ನು ನೋಡಲಿಚ್ಛೆಯುಳ್ಳ ಬ್ರಹ್ಮನಿಂದ ಮಧ್ಯವಿಲ್ಲದೆ ಹುಟ್ಟಿಸಿದ ರಾಜಸ್ತ್ರೀಯರ ತಿಗಗಳು ಮೊದಲಾದ ಕೆಳಗಿನ ಶರೀರಗಳು ಎಲ್ಲೆಲ್ಲಿ ಗಮಿಸುತ್ತಾವೊ ಅಲ್ಲಲ್ಲಿಗೆ ತಿಗ ಮೊದಲಾದ ಕೆಳಗಿನ ಶರೀರಕ್ಕೆ ಅನುಕೂಲವಾಗಿ ಮೇಲುಭಾಗದ ಮೊಲೆಗಳು ಮೊದಲಾದ ಶರೀರಗಳು ಗಮಿಸುವವು.

ತಾತ್ಪರ್ಯ.

(ನಡುವೇನು ಇಲ್ಲದೆ ಎರಡುಕಡೆಯು ಶರೀರಗಳು ಅನುಕೂಲವಾಗಿ ಗಮಿಸುವವು ಎಂಬುದು ಆಶ್ಚರ್ಯ) (ಸೂ

ಕ್ಷತ್ರವಾದ ನಡುವು ಅಥವಾ ಬಡನಡು ಎಂದು ಹೇಳಲು ಆಕ್ಷ ಯರ್ಗಪರಿಹಾರ).

ಶಾಂತವೀರ ರಾಜದೇವ ಕಿತ್ತೂರ ಟ್ರೇನಿಂಗ ಕಾಲೇಜ್.

---

೧೭೨ ನೇ ಪುಟದಿಂದ ಮುಂದಕ್ಕೆ ಸಾಗಿದ್ದು.

॥ವ॥ ಇಂತನಂತಜನ ಕೋಲಾಹಲಮಾದ ಕಲ್ಮೆಯಬಲ್ಮೆಯಿಂ ಕಲ್ಪಿಸಲಶಕ್ಯಮಾಗಿ ಮೂರಾಪತ್ತಿಗುರಿಯಾಲಂತ್ಯದ ಯುದ್ಧದಲ್ಲಿ ಬುದ್ಧಿಮತಿವಿಶಾರದ ಸಪ್ಪಧಿಪತಿ ಬಂದು ಕಲಹಮಂಕಲಕಲಧ್ವನಿಯಂ ನಿಲಿಸೆ ಕಾಂತೆಯರ್ ಕಂಗೆಟ್ಟಕಾಂ ತರಂಕಂಗಳಿಂ ಕಂಡು ಕಾರುಣ್ಯದಿಂಗಿಂತೈಂದರ್—

॥ಮಂದಾಕ್ರಾಂತಾವೃತ್ತ॥

ಸನ್ನೆ? ಕಾಂತಾ! ಕೆಡಕುಸಮರಂ, ಪೋಗಬೇಡೆಂದು ಪೇಳಲ್।
ನನ್ನೀಮಾತಾಲಿಸದಲೆಶಯಕ್ರೋಧಮಂ ಗೈದಿರೆನ್ನೊಳ್॥
ನಾನೀಪ್ರಾಣಂಬಿಡುವೆನುನೆಯೊಳ್ ಹ್ಯಾಗಬಾಳ್ದರ್ಕುಮಾರರ್।
ಮಾನೀಯೆಂಬೀಪೆಸರುಜಗದೊಳ್ ಪೊಂದಿನಾನೆಂತುಬಾಳ್ವೆಂ॥೨॥

ಮ. ವಿ.

ಪತಿಪುತ್ರಾಂತರಶೋಕದಗ್ನಿಯು ಜನಂತಾಗಲ್ಕೆ ಹಾದುಃಖದಿಂ।
ಮತಿಗೆಟ್ಟೋಡುತ ಭೋಜನಂಶಯನಮಂ ಬಿಟ್ಟು, ರಡು

ಯಾಮಂಬರಲ್।
ಗತಿಗೆಟ್ಟರ್ ಕ್ಷುಧೆಯಿಂದ ತಾಳಲರಿಯರ್ ನಿದ್ರಾಂಗನಾಸಂ
ಗಮಂ
ರತಿಯಂತೊಪ್ಪುವಕಾಮಿನೀನಿಚಯಮಾಕಷ್ಟಂಗಳಂಬ
ಳ್ವುದೇ?॥೮।
ಪತಿಕೇಳೀಗವಿಚಾರಗೈಯದಿರಲಿಕ್ಕಿಲ್ಲೆಂಪುಸಂತಾಪದಿಂ
ಅತಿದುಃಖಕ್ಕೆಡೆಯಾದವಾರ್ತೆಯುಜನರ್ ವಿಶ್ವಾಸದಿಂಪೇ
ಳಿದರ್।
ಮತಿಗೆಟ್ಟಾಪ್ರವಿಶೇಷ ತಪ್ಪಿದವರೆಂ ಬೀವಾಕ್ಯಮಂಕೇ
ಳದೆ
ಖತಿಯಿಂದೆಲ್ಲರತಕ್ಕದಾಗಿರುವದೊಂದಾ ಶಾಸನಂಮಾ
ದಂ॥೯

ಶಾ. ವಿ.

ಇಂತೀಯುದ್ಧವನೋಡಿದರ್ ಕೆಲವರೀವೃತ್ತಂಗಳಂಕೇ
ಳಿದರ್
ಶಾಂತತ್ವಂ ಬಲುಬೇಗದಿಂಪಡೆದು ಸಾಕ್ಷ್ಯಯಾರ್ಗನ್ವಿತಾ
ದ್ದವರ್।
ಕಾಂತಂಯೋಗ್ಯವಿಚಾರಗೈದ ತಮಗೆಂಬೀಸಂತಸಂತ
ಳದರ್
ಶಾಂತಾಕಾರನನಾಮಧಾರಿಯು ಮಿದಂಸಂಕ್ಷೇಪದಿಂ ಪೇ
ಳದಂ॥೧೦।

ಶಿಗ್ಗಲಿ. ತಾ॥ ೨೯ ಮಾರ್ಚ ೧೮೭೩ ಇ॥ } ವಿಷ್ಣು ಪರಶುರಾಮ ಸ್ವಾ
ಮೊ. ಶಿಗ್ಗಿ.

NOTICES.

ನೋಟೀಸುಗಳು

ವಿದ್ಯಾಖಾತೆ.

ಮುಂಬಯಿಕೋಟೆ—

ತಾರೀಖು ೩ ನೇ ಜುಲಾಯಿ ೧೮೭೩.

ದಕ್ಷಿಣ ಭಾಗದ ಇ. ಇನ್‌ಸ್ಪೆಕ್ಟರರಾದ ರಸ್ಸೆಲ್ ದೊರೆಗಳಿಂದ ಕನ್ನಡ ಭಾಷೆಯಲ್ಲಿ ನಿಪುಣತೆಗಾಗಿ "ವರ್ಥ ಪ್ರಾಯಿಜ್" ಯೆಂಬ ಹೆಸರಿನದೊಂದು ಇನಾಮಿನ ಸಲುವಾಗಿ ಕೊಡಲ್ಪಟ್ಟ ೧೦೦೦ ರೂಪಾಯಿಯ ಸರಕಾರೀ ಪ್ರಾಮಿಸರೀ ನೋಟಿಗೆ (ಹುಂಡೀ ಚೀಟಿಗೆ) ಪ್ರತಿವರ್ಷಕ್ಕೆ ಶೇಕಡಾ ೪ ರೂಪಾಯಿಯಂತೆ ಬರುವ ಬಡ್ಡಿಯ ಸಂಬಂಧದ ಅಸಲು ಕಾಗದ ಪತ್ರಗಳು ಸಹಿತವಾಗಿ ಕಳುಹಲ್ಪಟ್ಟ ಅಕ್ಟಿಂಗ ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಇವರ ಪತ್ರ ನಂಬರು ೯೦೩ ತಾರೀಖು ೨೪ ನೇ ಮೇ ಸನ್ನ ೧೮೭೩ ನೇ ಇಸವಿಯದು, ಸದರೀ ಹಣವನ್ನು ಸ್ವೀಕರಿಸುವದಕ್ಕೋಸ್ಕರ ಸರಕಾರದವರ ಮಂಜೂರಿಯ ಸಲುವಾಗಿ ಬರೆಯಲ್ಪಟ್ಟದ್ದು.

ಸರಕಾರದವರ ಪತ್ರ ನಂಬರು೫೮೬ ಸನ್ನ ೧೮೭೩ ಇಸವಿಯದಕ್ಕೆ ಪ್ರತ್ಯುತ್ತರವಾಗಿ ಆಫೀಶಿಯೇಟಿಂಗ ಡಿಪ್ಯುಟೀ ಅಕೌಂಟೆಂಟ ಜನರಲ್ ಇವರಿಂದ ಕಳುಹಲ್ಪಟ್ಟ ರಿಪೋರ್ಟ ನಂಬರು ಎಲ್. ಎಫ್. ೨೯೪ ತಾರೀಖು೧೯ ನೇ ಜೂನ ಸನ್ನ ೧೮೭೩ ನೇ ಇಸವಿಯದು,—ರಸ್ಸೆಲ್ ದೊರೆಗಳು "ವರ್ಥ ಪ್ರಾಯಿಜದ" ಸಲುವಾಗಿ ೧೦೦೦ ರೂಪಾಯಿಯನ್ನು ಸ್ವತಃ ಕೊಟ್ಟದರಿಂದ, ಆ ಹಣವನ್ನು

ಸರಕಾರದವರು ಸ್ವೀಕರಿಸಿದರೆ, ಅದು ಸ್ವತಂತ್ರವಾದ ಲೋಕಲ ಫಂಡೆಂದು ದಾಖಲಾಗಲಿಕ್ಕೆ ಅಡ್ಡಿಯಿಲ್ಲೆಂಬ ತಾತ್ಪರ್ಯವದ್ದು.

ಠರಾವು (ರಿಝೊಲ್ಯೂಶನ್)

ಈ ಹಣವು ಸ್ವೀಕರಿಲ್ಪಡ ತಕ್ಕದ್ದು, ಮತ್ತು ರಸ್ಸೆಲ್ ಧೊರೆಗಳ ಸಾರ್ವಜನಿಕೋತ್ತೇಜಕ ಉದ್ದೇಶವನ್ನು ಕೊನೆಗಾಣಿಸುವದಕ್ಕೋಸ್ಕರ ಅದು ವೊಂದು ಲೋಕಲ ಫಂಡಾಗಿ ಯೆಣಿಸಲ್ಪಡತಕ್ಕದ್ದು.

(Signed) C. Gonne.

ಸರಕಾರದವರ ಸೆಕ್ರೆಟರಿ

ಯಥಾರ್ಥವಾದ ಭಾಷಾಂತರವು.

Venkat Rungo Katti Canarese Translator.

ದಕ್ಷಿಣ ಭಾಗದೊಳಗಿನ ಸೇಕಂಡ ಗ್ರೇಡ ಅಂಗ್ಲೋ ವ್ಹರ್ನ್ಯಾಕ್ಯುಲರ ಮತ್ತು ವ್ಹರ್ನ್ಯಾಕ್ಯುಲರ ಶಾಲೆಗಳ ಯಾವತ್ತು ಮಾಸ್ತರರಿಗೂ, ಅಸಿಷ್ಟಂಟ ಮಾಸ್ತರರಿಗೂ ತಿಳಿಯ ಪಡಿಸುವದೇನಂದರೆ, ಸರಕಾರೀ ಪತ್ರವ್ಯವಹಾರಗಳಲ್ಲಿ ಡಿಪ್ಯುಟೀ ಎಜುಕೇಶನಲ್ ಇನ್‌ಸ್ಪೆಕ್ಟರರಿಗೆ ತಕ್ಕ ವಿಳಾಸವೂ, ಅವರ ಹೆಸರುಗಳನ್ನು ಬರೆಯುವಾಗ ಅವುಗಳ ಹಿಂದೆ ಬರೆಯ ತಕ್ಕ ಶಬ್ದವೂ "ಅಝಂ" ಯೆಂಬದೇ ಹೊರ್ತು "ರಾವಸಾಹೇಬ" ಯೆಂಬದೂ, "ರಾವಬಾಹದೂರ" ಯೆಂಬದೂ ಅಲ್ಲ. ಆದದರಿಂದ ಇನ್ನು ಮುಂದೆ "ಅಝಂ" ಯೆಂಬ ಪದವಿಯನ್ನೇ ಮಾತ್ರ ಉಪಯೋಗಿಸತಕ್ಕದೆಂದು ನಮ್ಮ ಹುಕುಮುಂಟು. ಯಾರಾದರೂ ಡಿಪ್ಯುಟೀ ಎಜು

ಕೇಶನಲ್ ಇನ್ಸ್ಪೆಕ್ಟರರು "ಅಝುಂ" ಯೆಂಬದಲ್ಲದೆ ಬೇ
ರೆ ಯಾವದಾದರೂ ಪದವಿಗೆ ತಕ್ಕವರಾಗಿದ್ದರೆ, ಅಂಥಾ ಪ್ರ
ಸಕ್ತಿಯಲ್ಲಿ ನೋಟೀಸು ಪ್ರಸಿದ್ಧಿಸಲ್ಪಡುವದು.

(Signed) J. F. Fleet,

ಬೆಳಗಾವಿ ೧೪ನೇ ಜುಲಾಯಿ ೧೮೭೩

ಯೆ. ಇನಸ್ಪೆಕ್ಟರ ದಕ್ಷಿಣಭಾಗ.

ಕಾನಡಾ ಜಿಲ್ಲೆಯೊಳಗಿನದೊಂದು ಹ್ಯಾನ್ಯಾರ್ಕ್ಯುಲರ
ಶಾಲೆಯ ಹೆಡ್‌ಮಾಸ್ತರನು ಸರಕಾರೀ ಸೂಟೀ ಇಲ್ಲದಂಥಾ
ದಿವಸ ಅಪ್ಪಣೆಯ ಹೊರತರ್ ತನ್ನ ಶಾಲೆಯನ್ನು ಬಂದು
ಮಾಡಿದ್ದನೆಂದು ಕಂಡು ಬಂತು. ಹೀಗೆ ಮಾಡಿದ ಕಾರಣ
ವೇನೆಂದು ಅವನಿಗೆ ಕೇಳದಕ್ಕೆ ಅವನು ಕೆಲವು ನೆವಗಳನ್ನು
ಹೇಳಲಾಗಿ, ಆ ನೆವಗಳು ತೀರ ಸುಳ್ಳೆಂದು ಸಿದ್ಧವಾಯಿ
ತು. ಈ ಕಾರಣದ್ದೆಶೆಯಿಂದ ಮೆಹರ್ಬಾನ ಯೆ. ಇ
ನ್ಸ್ಪೆಕ್ಟರ ಸಾಹೇಬ ಬಹಾದ್ದೂರವರು ಸದರಹು ಮಾ
ಸ್ತರನನ್ನು ಮೂರು ತಿಂಗಳುಗಳ ವರೆಗೆ ಸಸ್ಪೆಂಡ ಮಾ
ಡಿರುತ್ತಾರೆ. ಇದಲ್ಲದೆ ಈ ಮಾಸ್ತರನು ಪುನಃ ಕೆ
ಲಸಕ್ಕೆ ನೇಮಿಸಲ್ಪಡುವಾಗ ಇವನ ಸಂಬಳವು ತಿಂಗ
ಳಿಗೆ ವೊಂದು ರೂಪಾಯಿಯಂತೆ ಕಡಿಮೆ ಮಾಡಲ್ಪಡುವದು.
ದಕ್ಷಿಣ ಭಾಗದೊಳಗಿನ ಸೆಕಂಡ ಗ್ರೇಡ ಅಂಗ್ಲೋ ಹ್ಯಾ
ನ್ಯಾರ್ಕ್ಯುಲರ ಮತ್ತು ಹ್ಯಾನ್ಯಾರ್ಕುಲರ ಶಾಲೆಗಳ ಮಾಸ್ತರ
ರೂ, ಅಸಿಸ್ಟಂಟರೂ ಈ ಪ್ರಕಾರ ವರ್ತಿಸದಂತೆ ಅವರನ್ನು
ಯೆಚ್ಚರಪಡಿಸುವದಕ್ಕೋಸ್ಕರ ಈ ನೋಟೀಸು ಪ್ರಸಿದ್ಧಿ

ಸಲ್ಪಟ್ಟಿದೆ.

(signed) J. F. Fleet.

ಬೆಳಗಾವಿ. ೧೬ನೇ } ಯೆ. ಇನಸ್ಪೆಕ್ಟರ ದಕ್ಷಿಣ
ಜುಲಾಯಿ ೧೮೭೩. } ಭಾಗ.

ದಕ್ಷಿಣಭಾಗದೊಳಗಿನ ಸೇಕಂಡ ಗ್ರೇಡ ಅಂಗ್ಲೋ ವ್ಹರ್ನ್ಯಾಕ್ಯುಲರ ಮತ್ತು ವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್ ಮಾಸ್ತರರಿಗೆ ಸೂಚನೆ—

ಧಾರವಾಡ ಜಿಲ್ಲೆಯ ಡಿಪುಟೀ ಯೆಜುಕೇಶನಲ್ ಇನಸ್ಪೆಕ್ಟರರು ವೊಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗುವಾಗ ಅಕಸ್ಮಿಕವಾಗಿ ವೊಂದು ವ್ಹರ್ನ್ಯಾಕ್ಯುಲರ ಶಾಲೆಗೆ ಹೋಗಲಾಗಿ, ಅಲ್ಲಿ ಆರು ಹುಡುಗರು ಮಾತ್ರ ಹಾಜರಿದ್ದರು, ಯೆರಡು ದಿವಸದ ಹಜರಿಯನ್ನು ತಕ್ಕೊಂಡಿದ್ದಿಲ್ಲ, ಯೆರಡು ದಿವಸದ ರಜಿಸ್ತರವು ತುಂಬಿದ್ದಿಲ್ಲ ಯೆಂದು ಕಂಡು ಬಂತು. ಹೆಡ್‌ಮಾಸ್ತರನಿಗೆ ಕಾರಣವನ್ನು ಕೇಳಲಾಗಿ, ಅವನು ಬಹಳ ಸುಳ್ಳು ಮಾತುಗಳನ್ನು ಹೇಳಿದನು. ಅವನ ಈ ನಡತೆಯು ಬಹಳ ಮಾನಗೇಡಿತನದ್ದು, ಅವನಿಗೆ ಕಡುತರದ ಶಿಕ್ಷೆಯು ತಕ್ಕದ್ದು. ಆದರೆ ಇದು ಅವನ ಮೊದಲಿನ ತಪ್ಪಾದಪರಿಂದ ಅವನ ಸಂಬಳದಲ್ಲಿ ವೊಂದು ರೂಪಾಯಿ ಕಡಿಮೆ ಮಾಡಿ ಮಾತ್ರ ಅವನಿಗೆ ಶಿಕ್ಷೆಯು ಕೊಡಲ್ಪಟ್ಟಿತು; ಇದಲ್ಲದೆ ಅವನು ಇನ್ನೊಮ್ಮೆ ತಪ್ಪಿದರೆ, ಇದಕ್ಕಿಂತ ಭಾರೀ ಶಿಕ್ಷೆಯಾಗಲಿ, ಬರತರ್ಫಾಗಲಿ

ಆಗುವದೆಂದು ಅವನಿಗೆ ತಿಳಿಸಿರುತ್ತದೆ.

(Signed) J. F. Fleet.

ಬೆಳಗಾವಿ
ತಾರೀಖು ೨೦ ನೇ
ಜುಲಾಯಿ ಸನ್ನ ೧೮೭೩ ಇ.

ಎ. ಇನಸ್ಪೆಕ್ಟರ ದಕ್ಷಿಣಭಾಗ.

ಮಾಡಿಕೆಯು ಪ್ರಸಕ್ತಿಗಳಲ್ಲಿ ಸೆಕೆಂಡ ಗ್ರೇಡ ಅಂಗ್ಲೋ ವ್ಹರ್ನ್ಯಾಕ್ಯುಲರ ಮತ್ತು ವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್ಮಾಸ್ತರರಿಗೆ, ಮೊದಲು ಡಿಪ್ಯುಟೀ ಇನಸ್ಪೆಕ್ಟರರ ಬಳಿಯಲ್ಲಿ ಅರ್ಜಿಯು ಮಾಡಿ ಅಪ್ಪಣೆಯು ಪಡಿದುಕೊಂಡ ಹೊರ್ತು, ತಮ್ಮ ಕೆಲಸವನ್ನು ಒಂದು ದಿವಸ ಸಹ ಬಿಟ್ಟು ಹೋಗಲಿಕ್ಕೆ ಅಧಿಕಾರವಿಲ್ಲ. ಪೂರ್ವದಲ್ಲಿ ಅಪ್ಪಣೆಯು ಪಡಿದುಕೊಳ್ಳುವದು ಅಶಕ್ಯವಾಗಿರುವಂಥಾ ತೀರ ಜರೂರಿನ ಪ್ರಸಂಗಗಳಲ್ಲಿ ಮಾತ್ರ ಆ ಅಪ್ಪಣೆಯು ಹೊರ್ತು ಅವರು ತಮ್ಮ ಕೆಲಸವನ್ನು ಬಿಟ್ಟು ಹೋದದ್ದು ಕ್ಷಮಿಸಲ್ಪಡಕೂಡುವದು. ಮತ್ತು ಅಂಥಾ ಜರೂರಿನ ಪ್ರಸಂಗಗಳಲ್ಲಿ ತಾವು ಕೆಲಸ ಬಿಟ್ಟು ಹೋಗಲಿಕ್ಕೆ ಅಗತ್ಯವಾಗಿದ್ದಂಥಾ ಕಾರಣಗಳನ್ನು ಸಮಗ್ರವಾಗಿ ಬರೆದು ತಾವು ಹೊರಡುವ ಸಮಯದಲ್ಲಿ ಡಿಪ್ಯುಟೀ ಇನಸ್ಪೆಕ್ಟರರ ಬಳಿಗೆ ರಿಪೋರ್ಟ ಕಳುಹುವದು ಅವರ ಕರ್ತವ್ಯವಾಗಿರುತ್ತದೆ. ಆದರೆ ಈ ದಕ್ಷಿಣ ಭಾಗದೊಳಗಿನ ಸೆಕೆಂಡ ಗ್ರೇಡ ಅಂಗ್ಲೋ ವ್ಹರ್ನ್ಯಾಕ್ಯುಲರ ಮತ್ತು ವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್ಮಾ

ಸ್ತರರು ಈ ಬಗ್ಗೆ ಬಹಳ ದುರ್ಲಕ್ಷ್ಯ ಮಾಡುತ್ತಿರುತ್ತಾರೆ. ಆದಕಾರಣ ಅವರಿಗೆ ತಿಳಿಸಲ್ಪಡುವದೇನಂದರೆ ಮೊದಲು ಡಿಪ್ಯುಟೀ ಇನಸ್ಪೆಕ್ಟರರ ಬಳಿಯಲ್ಲಿ ಅರ್ಜಿಯು ಮಾಡಿ ಅಪ್ಪಣೆಯು ಪಡಕೊಳ್ಳದೆ, ಇಲ್ಲವೆ ಕೆಲಸ ಬಿಟ್ಟು ಹೋಗುವ ಕಾರಣಗಳನ್ನು, ಅವು ಸರಕಾರೀ ಇರಲಿ ಖಾಸಗೀ ಇರಲಿ, ಸಮಗ್ರವಾಗಿ ಬರೆದು ತಾವು ಹೊರಡುವ ಸಮಯದಲ್ಲಿ ಡಿಪ್ಯುಟೀ ಇನಸ್ಪೆಕ್ಟರರಿಗೆ ರಿಪೋರ್ಟ ಕಳುಹದೆ, ಆ ಹೆಡ್‌ಮಾಸ್ತರರು ಕೆಲಸ ಬಿಟ್ಟು ಹೋದದ್ದು ಕಂಡು ಬಂದಲ್ಲಿ, ಅವರು ಹಿಂದುಗಡೆಯಲ್ಲಿ ಯೆಂಥಾ ನೆವಗಳನ್ನು ತೋರಿಸಿದರೂ ಅವು ಕೇಳಲ್ಪಡಲಿಕ್ಕಿಲ್ಲ, ಮತ್ತು ಅವರಿಗೆ ಶಿಕ್ಷೆಯು ಮಾಡಲ್ಪಡುವದು. ಹೆಡ್‌ಮಾಸ್ತರರು ಮೊದಲು ಅಪ್ಪಣೆಯನ್ನು ಪಡಕೊಳ್ಳುವದು ಯೆಷ್ಟು ಮಾತ್ರವೂ ಸಂಭವಿಸದಂಥಾ ತೀರ ಜರೂರಿನ ಪ್ರಸಂಗಗಳಲ್ಲಿ ಹೊರ್ತಾಗಿ ಬೇರೆ ಯಾವ ಬಗೆಯಿಂದಲೂ ಡಿಪ್ಯುಟೀ ಇನ್‌ಸ್ಪೆಕ್ಟರರ ಅಪ್ಪಣೆಯು ಪಡೆಯದೆ ತಮ್ಮ ಸ್ವಂತ ವಿಚಾರದಿಂದ ಕೆಲಸ ಬಿಟ್ಟು ಹೋಗಲಿಕ್ಕೆ ತಮಗೆ ಸ್ವಾತಂತ್ರ್ಯವುಂಟೆಂದು ಈ ಹುಕುಮಿನಿಂದ ತಿಳುಕೊಳ್ಳ ಕೂಡದು. ಮತ್ತು ಅವರು ಪೂರ್ಣವಾಗಿ ತಿಳಿಯತಕ್ಕದ್ದೇನಂದರೆ, ಅವರು ಮೊದಲು ಡಿಪ್ಯುಟೀ ಇನಸ್ಪೆಕ್ಟರರ ಅಪ್ಪಣೆಯು ಪಡಕೊಳ್ಳದೆ ಕೆಲಸ ಬಿಟ್ಟು ಹೋದ ಬಗ್ಗೆ ಬರೆದ ಕಾರಣಗಳು ಅಪರ್ಯಾಪ್ತವಾದವುಗಳೆಂದು ಅವರ ಮೇಲಧಿಕಾರಿಗಳು ಯೆಣಿಸಿದರೆ, ಆ ಕಾರಣಗಳ ರಿಪೋರ್ಟನ್ನು ಡಿಪ್ಯುಟೀ ಇನಸ್ಪೆಕ್ಟರರಿಗೆ ಕಳುಹಿದರೆಂಬದಿಷ್ಟರಿಂದಲೇ ಅವರಿಗೆ ಶಿಕ್ಷೆಯು ತಪ್ಪಲಿಕ್ಕಿಲ್ಲ.

(signed) J. F. Fleet.

ಬೆಳಗಾವ ೩೦ನೇ ಜುಲಾಯಿ ೧೮೭೩ } ಎ. ಇನಸ್ಪೆಕ್ಟರ ದಕ್ಷಿಣ ಭಾಗ.

Correspondence.
ಪತ್ರವ್ಯವಹಾರವು.

ರಾ. ರಾ. ದಕ್ಷಿಣ ಭಾಗದ ಕಾಲಾಪತ್ರಿಕದ ಎಡಿಟರ ಮಹಾರಾಯರಿಗೆ—

ವಿ. ವಿ. ಅನ್ಯಾ ನಾನು ತಮ್ಮ ಕಡೆಗೆ, ತಾರೀಖು ೩ ನೇ ಸಪ್ಟೆಂಬರ ಸನ್ ೧೮೭೩ನೇ ಇಸ್ವಿಯ ಪತ್ರವನ್ನು ಕಳುಹಿಸಿದ್ದು, 'ತಮ್ಮ ಅಂಗವಾದಂಥ (೮)ನೇ 'ಪುಸ್ತಕದ, ೯ನೇ ಸಂಚಿಕೆಯಲ್ಲಿ ತಮ್ಮಿಂದ ಮುದ್ರಿಸಲ್ಪಟ್ಟಿತು. ಇತ್ತಲಾಗಿ ನಮ್ಮ ಕರುಣ ಉಳ್ಳ ಧೊರೆಗಳಾದ ಮಿ. ಡಿ. ಇಜ್ಯುಕೇಶನಲ್ ಇನಸ್ಪೆಕ್ಟರ ಜಿಲ್ಲಾ ಧಾರವಾಡ, ಇವರು ನನ್ನ ರಿಪೋರ್ಟಿನ ಕೆಳಗೆ, ರಾಣೀಬಿಂನೂರ ತಾಲೂಕ ಮಾಮಲೇದಾರ ಸಾ. ರವರ ಕಡೆಗೆ ಬರದ್ದರಿಂದಾ ಸದರ ಮಾಮಲೇದಾರ ಸಾ. ರವರು ನಮ್ಮ ಗ್ರಾಮಕ್ಕೆ ತಾರೀಖ ೮ನೇ ಫೆಬ್ರುಆರಿ ೧೮೭೩ನೇ ಇಸ್ವಿ ದಿವಸಾ ಬಂದಾಗ್ಗ ನಮ್ಮ ರಿಪೋರ್ಟ ನಂಬರು ೫೫। ೬೭ ನೇದರ ಮೇಲಿಂದ ವಿಚಾರಮಾಡಿ, ನಮ್ಮ ಲಖೋಟಿ ಟಪಾಲಿಗೆ ಹೋಗೋವು, ಮತ್ತು ಫೀಯ ಹಣಾ ತಿಜೋರಿಗೆ ಕಳುಹಿಸುವ ಬಾಬದಿಯಲ್ಲಿ ನಾವು ಯಾವ ತಾರೀಖಿಗೆ ಕೊಡುತ್ತೇವೋ ಆ

ತಾರೀಖಿಗೆ ನಂಮ ಟಪಾಲು ಬುಕ್ಕಿಗೆ ಮುಟ್ಟಿದ ಬಗ್ಗೆ ಸಹಿ ಕೊಟ್ಟು ಅವತ್ತೇ ರವಾನೆ ಮಾಡುವಲ್ಲಿ ಬಹು ಜಾಗ್ರತೆಪಡಬೇಕೆಂದು ಗಾಮಸ್ತರರಿಗೆ ಲೇಖಿ ಹುಕುಂ ಕೊಟ್ಟಿರುತ್ತಾರೆ, ಕಾರಣ ನಂಮ ಬಂಧುಗಳಾದ ಹಳ್ಳೀ ಪೂರ ಮಾಸ್ತರ ಜನರಿಗೆ ತಿಳಿಯುವ ವುದ್ದೇಶ್ಯ ಈ ಪತ್ರವನ್ನು ತಂಮ ಸಂನಿಧಾನಕ್ಕೆ ಕಳುಹಿಸಿದ್ದೇನೆ. ಮುಂದೆ ಯಾವ ಪೂರಲ್ಲಿಯೂ ಈ ಏವರ ಚಿಕೀರ ನಡಿಸಬಾರದೆಂದು ಯಾವತ್ತು ಗೌಡ ಕುಲಕರ್ಣಿಯರಿಗೆ ನಂನ ಪ್ರಾರ್ಥನವಿದೆ. ಯಾವತ್ತು ಊರ ಗೌಡ ಕುಲಕರ್ಣೇರು ನಂಮ ಮಾಸ್ತರ ಜನರಿಗೆ ಹರಏಕವಿಷಯದಲ್ಲಿ ತಂಮ ಕೈಲಾದಮಟ್ಟಿಗೆ ಸಹಾಯಮಾಡಿ ತಂಮ ಊರ ಸರಕಾರಿ ಸಾಲಿ ಚನ್ನಾಗಿ ನಡಿಯುವ ಸಾಭಿಮಾನವನ್ನು ಕೈಕೊಂಡರೆ, ನಿಮಗೂ, ನಮಗೂ ಭೂಷಣವು ಮತ್ತು ಯಾವ ಊರ ಗ್ರಾಮಸ್ತರು ಸಾಲಿಯ ಕೆಲಸಕ್ಕೆ ಮದ್ದತು ಮಾಡುವರೋ ಅವರ ಹೆಸರುಗಳನ್ನು ಸ್ಕೂಲ್ ಪೇಪರಿನಲ್ಲಿ ಪ್ರಸಿದ್ಧ ಮಾಡಿ ಅವರ ಕೀರ್ತಿಯನ್ನು ಕೊಂಡಾಡದೆ ನಂಮ ಮಾಸ್ತರ ಜನರು ಎಂದೂ ನಿಲ್ಲಲಿಕ್ಕಿಲ್ಲ. ಎಡಿಟರ ಮಹಾರಾಯರೇ ನಾನು ಕಳುಹಿಸಿದ ಪತ್ರಕ್ಕೆ ಸ್ವಲ್ಪ ಸ್ಥಳ ಕೊಟ್ಟು ಮುಂದಿನ ಸಂಚಿಕೆಯಲ್ಲಿ ಮುದ್ರಿಸಿ ವಿದ್ಯಾಭಿವೃದ್ಧಿಯ ಕೆಲಸಕ್ಕೆ ಗೊಂದಲ ಬರದಂತೆ ಮಾಡುವಲ್ಲಿ ಮಾಲಿಕರೇ ಇದ್ದೀರೆಂದು ಮಹತ್ಕಾಂಕ್ಷೆಯಿಂದ ಬರೆದಿರುತ್ತೇನೆ. ನಂನ ಬಯಕೆಯನ್ನು ನೆರವೇರಿಸಬೇಕೆಂದು ಪ್ರಾರ್ಥನವಿದೆ. ದಯಮಾಡಿ ಅಚ್ಚು ಹಾಕುವ ಕ್ರಮವು ಕೈಕೊಂಡು ಬಡ ಮಾಸ್ತರನ ಮೇಲೆ ಮೇಹರ್ಬಾನಿ ಮಾಡಬೇಕು ಇಂತಿ ಬಿನ್ನಃ.

ತಾರೀಖು Vನೇ ಮೇ ಸನ್
೧೮೭೫ನೇ ಇ. ಮು. ಮೋ
ಟಿ ಬೆಂನೂರ ತಾ. ರಾಣೀಬೆಂ
ನೂರ ಜಿಲ್ಲಾ ಧಾರವಾಡ.

ಸಹಿ ಜಗಂನಾಥ ಶ್ರೀಧರ
ಗೋಖಲೇ ಹೆಡ್ಡಮಾಸ್ತ
ರ ಮೋಟಿ ಬೆಂನೂರ—

ರಾಜಮಾನ್ಯರಾಜಶ್ರೀ ಬೆಳಗಾಂವಿ ಮಿತ್ರಪತ್ರಿಕ ಕರ್ತರ ಸಂನಿಧಿಗೆ—

ವಿ. ವಿ. ಕೆಳಗೆ ಬರೆಯುವ ನಾಲ್ಕು ಸಾಲುಗಳಿಗೆ ತಂಮ ಮನೋಹರವಾದ ಪತ್ರದಲ್ಲಿ ಸ್ಥಳದೊರಿಯಬೇಕೆಂಬ ಆಶೆಯುಂಟು ಪೂರ್ಣ ಮಾಡೋದು ತಮ್ಮ ಆಧೀನ.

ಮೌಜೆ ಇಲಕಲ್ಲ ಪೇಠ ಅನಂತಪೂರ ಈ ಊರು ಹುನಗುಂದ ತಾಲೂಕದಲ್ಲಿ ದೊಡ್ಡದು ಜನಸಂಖೆ ಸುಮಾರು (೧೦೦೦೦) ಉಂಟು. ಊರಲ್ಲಿ ನೇಕಾರರೂ, ವ್ಯಾಪಾರಸ್ಥರೂ ಬಹು ಮಂದಿ; ಬ್ರಮ್ಹಣ್ಯಾ ಅತಿ ಸ್ವಲ್ಪ ಆದ್ದರಿಂದಾ ವಿದ್ಯಾದ ಅಭಿವೃದ್ಧಿಯು ಆಗೋಸಂಬವ ಇಲ್ಲ. ವ್ಯಾಪಾರದ ಪ್ರೀತಿ ಓದ ಬರೆಯುವದು, ಲೆಖ್ಖ ಇಷ್ಟೇ ಸಾಕಾಗಿರುತ್ತದೆ.

ಈಊರಲ್ಲಿ ಸರಕಾರೀ ಸಾಲಿ ಸ್ಥಾಪನವಾಗಿ ಸುಮಾರು ೧೭ ವರುಷಾದವು. ಇಷ್ಟು ಕಾಲದಲ್ಲಿ ಒಬ್ಬ ವಿದ್ಯಾರ್ಥಿಯಾದರು ಪರೀಕ್ಷೆ ಕೊಟ್ಟು ಸರಕಾರಿ ನೋಕರಿ ಮಾಡುವವ ಅಥವಾ ವಿದ್ವಾಂಸ ಒಬ್ಬನಾದರೂ ಇಲ್ಲ ಸಾವಕಾರರಲ್ಲಿ ಮುತಾಲೀಕತನ ಮಾಡುವವರೇ ಬಹು ಮಂದಿ ಇದರಿಂದ ತಿಳಿಯುವದೇನಂದರೆ— ಸರಕಾರಿ ಈ ಯತ್ತ್ನೇಡ ಪ್ರಕಾರ ಅಭ್ಯಾಸ ಯಾರಿಂಗೂ ಬೇಕಾಗಿಲ್ಲ. ಕಕ್ಕಷ್ಟು ಓದ ಬ

ರಿಯೋಣ ಬರೋಣದರಿಂದ ಅವರಿಗೆ ಬಹು ಉಪಯೋಗ ವದೆ. ಆಕಾರಣ ಊರಲ್ಲಿ ಊರ ಶಾಲೆಗಳು ಪ್ರಬಲವಾಗಿವೆ.

ಈಗ್ಗೆ ಈ ಸರಕಾರಿ ಶಾಲೆಗೆ ಉತ್ತೇಜನ ಕೊಡುವವರು ಯಾರೂ ಇಲ್ಲದ್ದರಿಂದ ಕ್ಷೀಣಗತಿ ಹೊಂದುತ್ತ ನಡೆದಿತ್ತು ಅಷ್ಟರಲ್ಲಿ ಸುದೈವಯೋಗದಿಂದ ಮೋಹಬ್ಬಾನ ಫರ್ಸ್ಟ್ ಅಸಿಸ್ಟಂಟ ಕಲೆಕ್ಟರ ಸಾಹೇಬಬಹಾದ್ದುರ ಜಿಲ್ಲಾ ಕಲಾದಗಿ ಇವರು ಹೋದ ಫೆಬ್ರುವಾರಿ ತಿಂಗಳದಲ್ಲಿ ೨೨ ನೇ ತಾರೀಖಿಗೆ ಈ ಶಾಲೆಯಲ್ಲಿ ಬಂದು ಹುಡುಗರನ್ನು ಪರೀಕ್ಷಿಸಿ ಹುಡುಗರು ಕಮ್ಮಿ ಇದ್ದ ಬಗ್ಗೆ ವಿಚಾರಿಸಿಕೊಂಡು ಪಂಚರು ಶಾಲೆಯಕಡೆಗೆ ಪೂರ್ಣ ಲಕ್ಷಕೊಡತಕ್ಕದ್ದು ಮತ್ತು ವರುಷದಲ್ಲಿ ಎರಡಾವರ್ತಿ ಚೈತ್ರ, ಮತ್ತು ಕಾರ್ತಿಕ ಈ ಎರಡು ಮಾಸಗಳಲ್ಲಿ ಒಂದು ದಿವಸ ಬಂದು ಹುಡುಗರ ಪರೀಕ್ಷೆ ತಕ್ಕೊಂಡು (೨೦) ರೂಪಾಯಿಗಳವರೆಗೆ ಇನಾಮು ಕೊಡತಕ್ಕದ್ದು, ಎಂದು ಸಭೆಯಲ್ಲಿ ಗೊತ್ತಾದಂತೆ ನಡೆಯುವ ತಿಂಗಳ ೧೦ನೇ ತಾರೀಖಿಗೆ ಮೋಹಬ್ಬಾನರವರು ಸ್ವತಃ ಬಂದು ಪಂಚರ ಸಮಕ್ಷ ಹುಡುಗರ ಪರೀಕ್ಷೆ ತೆಗೆದುಕೊಂಡು(೧೦ ರು. ೬ ಅ. ೬ ಪೈ.)ಬುಕ್ಕುಗಳನ್ನು ೫೧ ಹು ೪ ಬುಕ್ಕುಡುಗರಿಗೆ ಬಕ್ಷೀಸು ಹಂಚಿದರು ಇನ್ನು ೪ ಹುಡುಗರಿಗೆ ಕೊಡತಕ್ಕದ್ದಿರುತ್ತದೆಂದು ಹೇಳಿರುತ್ತಾರೆ(ಈ ಹಣಾ ಮುನಸಿಪಾಲಿಟಿ ಒಳಗಿಂದು) ಇದಲ್ಲದೆ ರಾವಸಾಹೇಬ ಮಾಮಲೇದಾರ ತಾಲೂಕ ಮುಜಕೂರ ಇವರು ಸ್ವತಃ ಖರ್ಚಿನಿಂದ(ಮೂರು ರುಪಾಯಿಗಳ) ಮಿಠಾಯಿ ಹಂಚಿದರು. ಸಾಹೇಬರವರ ಕಾಂಕ್ಷೆ ಏನಂದರೆ ಹುಡುಗರ ಸಂಖೆ ಹೆಚ್ಚಾಗಬೇಕು. ಮತ್ತು ವಿದ್ಯೆ ಅಭಿವೃದ್ಧಿ ಆಗಬೇಕೆಂದು ಉಂ

ಟು. ಅವರ ಕೋರಿಕೆಯು ಪೂರ್ಣ ಮಾಡಬೇಕೆಂದು ದೇವರನ್ನು ಪ್ರಾರ್ಥಿಸಿ ಸತತ ಮೇಹನತಿಯಿಂದ ಅಭ್ಯಾಸ ನಡಸಿದ್ದೇನೆ ಹಾಂಗು ಹುಡುಗರು ಉತ್ಸುಕತೆಯಿಂದ ಕಲಿಯುತ್ತಿದ್ದಾರೆ.

ದಯಾಳುಗಳಾದ ಸಾಹೇಬರವರ ಮನಸ್ಸು ಇದ್ದ ಪ್ರಕಾರ ಪಂಚರ ಮನಸ್ಸು ಇರಬೇಕೆಂದು ಆಶೆಗೈಯುತ್ತೇನೆ. ಮಾರ್ಚ ಅಖೈರಿಗೆ ೪೯ ಹುಡುಗರು ಇದ್ದರು. ಈಗ್ಗೆ ೬೩ ಕೂಡಿರುತ್ತಾರೆ. ವಿನಂತಿ ತಾರೀಖು ೧೯ ಮಾಹೆ ಮೇ ಸನ್ ೧೮೭೩ ಇಸವಿ.

ಇಲಕಲ್ಲ ತಾ. ೨೦।೫।೭೩.

ಅಂಣಾಜೀ ನಾರಾಯಣ ಗೋಡಬೋಲೆ ಹೆ. ಮಾ. ಇ.

ಮೆಹರಬಾನ ಕನ್ನಡ ಮಠಪತ್ರಿಕದ ಯೆಡಿಟರ ಇವರಿಗೆ—

ಕೆಳಗೆ ಬರದ ವಿಜ್ಞಾಪನೆ ತಮ್ಮ ಚಂದವಾದ ಪತ್ರದಲ್ಲಿ ಶೇರಿಸುವದಕ್ಕೆ ತಕ್ಕದ್ದಾಗಿದ್ದರೆ ಬರುವ ಸಂಚಿಕೆಯಲ್ಲಿ ಸ್ಥಲದೊರಿಯಬೇಕು.

ಹಳ್ಳಿಪೂರ ಸಾಲಿಗಳಿಗೆ ಖುರ್ಚಿ ಮೇಜು ಘಂಟೆ ಇವುಗಳ ಅವಶ್ಯಕತೆಯು ಕಡಿಮೆ ಇದ್ದಾಗ್ಯೂ ಸರಕಾರದಿಂದ ದೊರದಿರುತ್ತವೆ, ಸುಮಾರು ೧।೨ ವರ್ಷ ಈಚೆ ಹೊಸ ಸಾಲಿಗಳು ಸ್ಥಾಪಿಸಲ್ಪಟ್ಟಿರುತ್ತವೆ. ಮುಂಚಿತವಾಗಿ ಸ್ಥಾಪಿಸಲ್ಪಟ್ಟ ಸಾಲಿಗೆ ಯಾವ ಹೇತುವಿನಿಂದ ಕೊಟ್ಟಿರಬೇಕು, ಯೆಂದು ತರ್ಕ ಹುಟ್ಟುತ್ತದೋ ಆ ಸಮಂಧದಿಂದ ಹೊಸ ಸಾಲಿಗಳಿಗೆ ದೊರಿಯುವದು ಹೆಚ್ಚು ಅವಶ್ಯವದೆ. ಆದರೆ

ಯಿನ್ನು ವರಿಗೆ ಶಾಲಾವುಪಯೋಗದ ಪುಸ್ತಕಗಳು ಇರಿಸುವದಕ್ಕೆ ಪೆಟ್ಟಿಗೆ ಸಾಂಗು ಅವಶ್ಯವಾದ ನಕಾಶೆಗಳು(ಕರ್ನಾಟಕ, ಹಿಂದುಸ್ಥಾನ)ಇವುಗಳು ಸಹ ಇನ್ನುವರಿಗೆ ದೊರದಿಲ್ಲ. ಇದರ ಬಗ್ಗೆ ರಿಪೋರ್ಟ ಮಾಡಿದರೆ ಯೆಲ್ಲ ಸಾಲಿಸಂಗಡ ದೊರಕುವವು ಎಂದು ಹುಕುಮು ದೊರಿಯುತ್ತದೆ. ನಕಾಶೆದ ಹೊರ್ತು ಹುಡುಗರಿಗೆ ಕುರುಡನ ಕೈಯಲ್ಲಿ ಪುಸ್ತಕ ಇರಿಶಿದಂತೆ, ಆಗುತ್ತದೆ. ಕವಿತಾಪದ್ಧತಿ ಕಪಿತೆದ ವೊದಲನೇ ಪುಸ್ತಕ ಇವುಗಳುದೊರದಿರುತ್ತವೆ, ಹೊಸ ಸಾಲಿಗಳಿಗೆ ಇವುಗಳ ವುಪಯೋಗವೇ ತುರ್ತಕ್ಕೆ ಇರುವದಿಲ್ಲ, "ಅತ್ತೆ ಹೂಸು ಬಿಟ್ಟಾಗ ಸೊಸೆ ತಲೆ ತಗ್ಗಿಶಿದಳಂತೆ," ವುಪಾಯವಿಲ್ಲ. ತಮ್ಮ ದ್ವಾರದಿಂದ ಅಧಿಕಾರಿಯಾರ ಕಿವೆಯು ವೇಲೆ ಈ ಮಾತು ಹೋಗಿ ಯೋಗ್ಯ ತಜವೀಜ ಆಗುವದೆಂದು ಕೋರುತ್ತೇನೆ. ಇಂತಿ ಬಿನ್ನಹ.

ತಾ॥ ೨೦ ನೇ ಮಾಹ ಮೇ ೧೮೭೪ ಇ. ಹೊನವಾಡ ತಾ. ವಿಜಾಪೂರ. } ವಿಷ್ಣು ರಾಮಚಂದ್ರ ರಾಮದುರ್ಗಕರ ಸ್ಕೂಲಮಾಸ್ತರ.

ಶಾಲಾಪತ್ರಕವು.

---000---

ಪುಸ್ತಕ ೯] [ಸಂಚಿಕೆ ೬.

ಬೆಳಗಾವಿ, ಮಾಹೆ ಸಪ್ಟಂಬರ ೧೮೭೩.

SELF HELP.

ತನಗೆ ತಾನೇ ನೆರವಾಗುವದು.

ಸೊಡ್ಡಸ್ತ್ರಿಕೆಯ ಬೀಜಾರೋಪಣವನ್ನು ಮಾಡಿದಾಗ್ಯೂ,
ತಕ್ಕಷ್ಟು ಬಂಡವಲು ಅವನ ಹತ್ತಿರ ಇಲ್ಲದಕಾರಣ ಅವ
ನು ತೊಂದರೆಗಳಲ್ಲಿಯೇ ಕಾಲಕ್ಷೇಪ ಮಾಡಬೇಕಾಯಿತು.
ಎರಡನೇ ರಾಬರ್ಟನು ಇಪ್ಪತ್ತು ವರ್ಷದವನಾದಾಗ, ಅ
ವನು ನೂಲಿನ ಬಟ್ಟೆಗಳಿಗೆ ಅಚ್ಚು ಹಾಕಬೇಕೆಂದು ನಿಶ್ಚಯಿ
ಸಿಕೊಂಡನು. ಈ ವಿದ್ಯವನ್ನು ಅವನ್ನು ತನ್ನ ತಂದೆಯಿಂ
ದ ಕಲಿತುಕೊಂಡಿದ್ದನು. ಇವನ ಕಕ್ಕನಾದ ಜೇಮ್ಸ ಹಾ
ವರ್ಥನೆಂಬವನೂ, ಬ್ಲಾಕ್‌ಬರ್ನದ ವುಯಿಲಿಯಂ ಯೇತ್ಸ
ಯೆಂಬವನೂ ಈ ಕೆಲಸದಲ್ಲಿ ರಾಬರ್ಟನಿಗೆ ಪಾಲಕಾರರಾ
ದರು. ಆದರೆ ಇವರು ಮೂವರೂ ಕೂಡಿ, ಕೂಡಿಸಿದ ಬಂ
ಡವಲು ೫೦೦ ಪೌಂಡುಗಳಿಗಿಂತ ಹೆಚ್ಚು ಇದ್ದಿಲ್ಲ; ಇದರ
ಲ್ಲಿ ಸಹ ಯೇತ್ಸನ ಭಾಗವೇ ಹೆಚ್ಚಿತ್ತು. ಯೇತ್ಸನ ತಂದೆ
ಯು ಬ್ಲಾಕಬರ್ನದಲ್ಲಿ ಮನೆತನವುಳ್ಳವನೂ, ಒಳತಾಗಿ ಪ್ರ
ಸಿದ್ಧಿಯು ಹೊಂದಿದವನೂ, ಪ್ರತಿಷ್ಠಿತನೂ ಇದ್ದನು. ಆದ
ದರಿಂದ ಅವನು ತನ್ನ ಉದ್ಯೋಗದಲ್ಲಿ ಚನ್ನಾಗಿ ಹಣವ
ನ್ನು ಸಂಪಾದಿಸಿದ ಕಾರಣ ಅವನು ತನ್ನ ಮಗನಿಗೆ ಆ ಕಾ

ಲದಲ್ಲಿ ಅಪ್ರಸಿದ್ಧವಾದ ನೂಲಿನ ಬಟ್ಟೆಗಳಿಗೆ ಅಚ್ಚು ಹಾಕುವದಕ್ಕೆ ತಕ್ಕಷ್ಟು ಹಣವನ್ನು ಸ್ವಸಂತೋಷದಿಂದ ಕೊಟ್ಟನು. ರಾಬರ್ಟ ಪೀಲನು ನಿಜವಾಗಿ ನೋಡಿದರೆ ಚಿಕ್ಕವಯಸ್ಸಿನವನಾದಾಗ್ಯೂ ಆ ಕೆಲಸ ನಡಿಸುವ ಮಾರ್ಗವನ್ನು ತೋರಿಸುವವನು ಇವನೇ. ಇವನ ಬಗ್ಗೆ ಜನರು ಅನ್ನುವದೇನಂದರೆ, ಇವನು ತನ್ನ ಯೊಳೆಯ ಹೆಗಲುಗಳ ಮೇಲೆ ಮುದಿತಲೆಯನ್ನು ಹೊತ್ತುಕೊಂಡಿದ್ದನು; ಈ ಮಾತು ನಿಜವೇ ಯೆಂದು ಸಿದ್ಧವಾಯಿತು. ಆ ಕಾಲದಲ್ಲಿ ಅಪ್ರಸಿದ್ಧವಾದ ಬರೀ ಯೆಂಬ ಗ್ರಾಮದ ಹತ್ತರ ಒಂದು ಕೆಟ್ಟು ಹೋದ ಬೀಸುವ ಕಲ್ಲನ್ನೂ, ಅದರ ಸುತ್ತಮುತ್ತಲಿನ ಕೆಲವು ಭೂಮಿಯನ್ನೂ ಈ ಮೂವರು ಕೂಡಿ ಸ್ವಲ್ಪ ಹಣ ಕೊಟ್ಟು ಕೊಂಡರು. ಇಲ್ಲಿ ಇವರು ನಡಿಸಿದ ಕಾರಖಾನೆಗೆ "ದಿ ಗ್ರೌಂಡ" ಯೆಂಬ ಹೆಸರು ಮುಂದೆ ಬಹು ಕಾಲದ ವರೆಗೆ ನಡೆಯುತ್ತಿತ್ತು. ಇಲ್ಲಿ ಈ ವ್ಯಾಪಾರ ಸಂಘದವರು ಮೊದಲು ಕಟ್ಟಿಗೆಯ ಕೆಲವು ಗುಡುಸಲುಗಳನ್ನು ಹಾಕಿ ಬಡತನದ ರೀತಿಯಿಂದ ಸನ್ನ ೧೭೭೦ನೇ ವರ್ಷ ನೂಲಿನ ಬಟ್ಟೆಗಳಿಗೆ ಅಚ್ಚು ಹಾಕುವ ಕೆಲಸವನ್ನು ಆರಂಭ ಮಾಡಿದರು. ಮುಂದೆ ಸ್ವಲ್ಪ ವರ್ಷಗಳೊಳಗ ಅವರು ಹತ್ತಿಯನ್ನು ನೂಲುವ ಕಾರಖಾನೆಯನ್ನಾದರೂ ಅಲ್ಲಿ ಆರಂಭ ಮಾಡಿದರು. ಈ ಕೆಳಗೆ ಬರೆದ ಸಂಗತಿಯಿಂದ ಈ ಮೂವರು ಯಾವ ಬಗೆಯಾಗಿ ಮಿತವ್ಯಯದಿಂದ ಇರುತ್ತಿದ್ದರೆಂಬುದನ್ನು ತಿಳಿದುಕೊಳ್ಳಬಹುದು.

ವುಯಿಲಿಯಂ ಯೇತ್ಸನು ಹೆಂಡತಿ ಮಕ್ಕಳುಗಳುಳ್ಳವನಾದದರಿಂದ ಅವನು ಅಲ್ಲಿ ಒಂದು ಮನೆಯನ್ನು ಮಾಡಿ

ಬಡತನಪರೀತಿಯಿಂದ ತನ್ನ ಸಂಸಾರವನ್ನು ಪೋಷಿದನು. ಆಗ ಪೀಲನು ಒಬ್ಬನೇ ಇದ್ದ ಕಾರಣ ಅವನಿಗೆ ಉಪಕಾರ ಮಾಡುವ ಬುದ್ಧಿಯಿಂದ ಅವನನ್ನು ತನ್ನ ಮನೆಯಲ್ಲಿ ಇಟ್ಟುಕೊಳ್ಳುವದಕ್ಕೆ ಒಪ್ಪಿಕೊಂಡನು. ಪೀಲನು ಮನೆ ಬಾಡಿಗೆಗಾಗಿಯೂ, ತನ್ನ ಊಟಕ್ಕಾಗಿಯೂ, ವಾರಕ್ಕೆ *೪ ಶಿಲಿಂಗುಗಳಂತೆ ಮೊದಲು ಕೊಡುತ್ತಿದ್ದನು. ಆದರೆ ಯೋತ್ಸನು ಈ ಹಣವು ಸಾಕಾಗುವದಿಲ್ಲೆಂದು ತಿಳಿದು, ವಾರಕ್ಕೆ ಇನ್ನೊಂದು ಶಿಲಿಂಗಿನಂತೆ ಹೆಚ್ಚು ಕೊಡೆಂದು ಬಹಳ ಆಗ್ರಹ ಮಾಡಲಾಗಿ, ಪೀಲನು ಅದನ್ನು ಕೊಡಲಾರದೆ ಅವನ ಮನೆಯನ್ನು ಬಿಟ್ಟ ಕಾರಣ ಅವರಲ್ಲಿ ಒಡಕು ಹುಟ್ಟಿತು. ಆದರೆ ಕಡೆಯಲ್ಲಿ ಪೀಲನು ವಾರಕ್ಕೆ ೬ ಪೆನ್ಸಗಳಂತೆ ಹೆಚ್ಚು ಕೊಡುವದಕ್ಕೆ ಒಪ್ಪಿಕೊಂಡ ಕಾರಣ, ಇಬ್ಬರೂ ಪುನಃ ಕೂಡಿದರು. ಯೋತ್ಸನ ಹಿರಿಮಗಳಾದ ಎಲ್ಲನೆ ಯೆಂಬ ಹುಡುಗಿಯಲ್ಲಿ ಪೀಲನು ಮುಂದೆ ಸ್ವಲ್ಪ ದಿವಸಗಳೊಳಗೇ ಬಹಳ ಪ್ರೀತಿಯ ಮಾಡಹತ್ತಿದನು. ಅವನು ಕಾರಖಾನೆಯಲ್ಲಿ ಕೆಲಸ ಮಾಡಿ ದಣಿದು ಮನೆಗೆ ಬರುತ್ತಲೇ ಆ ಚಿಕ್ಕ ಬಾಲಿಕೆಯನ್ನು ತನ್ನ ತೊಡೆಯ ಮೇಲೆ ಕುಳ್ಳರಿಸಿಕೊಂಡು, ಯೇ ಎಲ್ಲೀ, ಚಲುವಾದ ಮುದ್ದು ಬಾಲಿಕೆಯೇ, ನೀನು ನನ್ನ ಹೆಂಡತಿಯಾಗುವಿಯಾ? ಎಂದು ಕೇಳುವನು; ಅದಕ್ಕೆ ಆ ಹುಡಿಗಿಯು, ಯೆಲ್ಲ ಹುಡಗರಂತೆ, ತತ್ಕಾಲವೇ, "ಹೂ, ಆಗುತ್ತೇನೆ," ಯೆಂದು ಅನ್ನುವದು. ಅದಕ್ಕೆ ಪೀಲನು, "ಹಾಗಾದರೆ ನೀನು ಮೊಡ್ಡಾಕೆಯಾಗುವ ವರೆಗೆ ನಿನ್ನ ದಾರಿಯ ನೋಡುತ್ತೇ

---

*ಅಂದರೆ ತಿಂಗಳಿಗೆ ಸುಮಾರು ೮ ರೂಪಾಯಿಗಳು.

ನೆ; ನಿನ್ನನ್ನೇ ಲಗ್ನ ಮಾಡಿಕೊಳ್ಳುವೆನು, ಬೇರೆಯಾರನ್ನು ಮಾಡಿಕೊಳ್ಳಲಿಕ್ಕಿಲ್ಲ," ಯೆಂದು ನುಡಿಯುವನು. ಪೀಲನು ಆ ಮೇರೆಗೆ ಮಾರ್ಗಪ್ರತೀಕ್ಷೆಯು ಮಾಡಿದನು. ಆ ಹುಡುಗಿಯು ದೊಡ್ಡವಳಾಗುತ್ತ ಹೋದ ಹಾಗೆ ಹೆಚ್ಚು ಹೆಚ್ಚು ಚೆಲುವೆಯಾಗಿ ತೋರಿದರಿಂದ ಪೀಲನ ನಿಶ್ಚಯವು ದಿನ ದಿನಕ್ಕೆ ದೃಢವಾಗುತ್ತ ಹೋಯಿತು. ಮುಂದೆ ಹತ್ತು ವರ್ಷಗಳನಂತರ ಈ ಕನ್ನಿಕೆಯು ೨೭ ವರ್ಷದವಳಾದಾಗ ಪೀಲನು ಅವಳನ್ನು ಲಗ್ನ ಮಾಡಿಕೊಂಡನು; ಈ ಹತ್ತು ವರ್ಷಗಳಲ್ಲಿ ಇವರ ಉದ್ಯೋಗವು ಬಹು ಸರಸಾಗಿ ನಡಿದು, ಸಂಪತ್ತಿಯು ಭರದಿಂದ ಬೆಳೆಯುತ್ತ ನಡೆದಿತ್ತು. ಯಾವ ಬಾಲಕಿಯನ್ನು ಅವಳ ತಾಯಿಯು ಮನೆಯಲ್ಲಿ ಒಕ್ಕಲಾಗಿದ್ದವನೂ, ತಂದೆಯು ಸಂಗಡ ಮಾಲಗಾರನೂ ಆದ ಪೀಲನು ತನ್ನ ತೊಡೆಯ ಮೇಲೆ ಕೂಳ್ಳಿರಿಸಿಕೊಂಡು ಉಣಿಸುತ್ತಿದ್ದನೋ, ಆ ಬಾಲಿಕೆಯು ಅವನ ಹೆಂಡತಿಯಾಗಿ, ಲೇಡೀ ಪೀಲ ಯೆಂದೆನಿಸಿಕೊಂಡು, ಇಂಗ್ಲಂಡದ ಮುಖ್ಯ ಪ್ರಧಾನನ ತಾಯಿಯಾದಳು. ಈ ಸ್ತ್ರೀಯಳು ಬಹು ದೊಡ್ಡಸ್ತಿಕೆಯುಳ್ಳವಳೂ, ಚಲುವೆಯೂ ಇದ್ದು ಜನರಲ್ಲಿ ದೊಡ್ಡ ಪದವಿಗೂ, ಬಹುಮಾನಕ್ಕೂ ತಕ್ಕವಳಾಗಿದ್ದಳು. ಯೆಷ್ಟೋ ದುರ್ಲಭವಾದ ಗುಣಗಳು ಅವಳಲ್ಲಿ ಇದ್ದವು; ಆಪತ್ತಿನ ಕಾಲದಲ್ಲಿ ಅವಳು ದೊಡ್ಡ ಮನಸ್ಸಿನಿಂದಲೂ, ವಿಶ್ವಾಸದಿಂದಲೂ ತನ್ನ ಗಂಡನಿಗೆ ಧೈರ್ಯ ಕೊಡುತ್ತಿದ್ದಳು. ಲಗ್ನವಾದ ಮೇಲೆ ಅವಳು ಕೆಲ ವರ್ಷಗಳ ವರೆಗೆ ಅವಳು ತನ್ನ ಗಂಡನ ವ್ಯಾಪಾರಸಂಬಂಧದ ಬರೆಯುವ ಕೆಲಸವನ್ನು ನಡಿಸುತ್ತಿದ್ದಳು; ಅವನ ಪ

ತ್ರ ವ್ಯವಹಾರವನ್ನು ಮುಖ್ಯವಾಗಿ ಅವಳೇ ನಡೆಸುತ್ತಿದ್ದಳು; ಯಾಕಂದರೆ ಪೀಲನ ಕೈಬರಹವು ಚನ್ನಾಗಿ ಇಲ್ಲದ ಕಾರಣ ಅದು ಜನರಿಗೆ ಸ್ಪಷ್ಟವಾಗಿ ತಿಳಿಯುತ್ತಿದ್ದಿಲ್ಲ. ಪೀಲನಿಗೆ ಬಾರೋನೆಟ ಯೆಂಬ ಪದವಿಯು ದೊರೆದನಂತರ ೩ ವರ್ಷಗಳ ಮೇಲೆ ಸನ್ನ ೧೮೦೩ನೇ ವರ್ಷದಲ್ಲಿ ಅವಳು ತೀರಿಕೊಂಡಳು. ಅವಳು ಲಂಡನ್ ಪಟ್ಟಣದಲ್ಲಿ ಹೋಗಿ ನಿಂತಮೇಲೆ ಅಲ್ಲಿಯ ದೊಡ್ಡಸ್ಥಿಕೆಯ ನಡತೆಯಂತೆ ನಡೆಯಬೇಕಾದ ಕಾರಣ ಅವಳ ಆರೋಗ್ಯಕ್ಕೆ ಹಾನಿ ಬಂತೆಂದು ಜನರು ಹೇಳುತ್ತಾರೆ. ಅವಳು ತನ್ನ ಊರಲ್ಲಿ ಇರುವಾಗ ಅವಳಿಗೆ ಅಭ್ಯಾಸವಾದ ನಡತೆಗೂ ಲಂಡನ್ ಪಟ್ಟಣದೊಳಗಿನ ದೊಡ್ಡವರ ಮನೆತನದ ಹೆಂಗಸರ ಸ್ಥಿತಿ ರೀತಿಗಳಿಗೂ ಬಹಳ ಅಂತರವಿತ್ತು. ಯೋತ್ಸನು ಮುಪ್ಪಿನಕಾಲದಲ್ಲಿ, "ರಾಬರ್ಟನು ನನ್ನ ದೊಡ್ಡಸ್ತಿಕೆಯ ಪದವಿಯನ್ನು ಕೊಡಿಸದಿದ್ದರೆ, ಆಕೆಯು ಇನ್ನೂ ಬದುಕುತ್ತಿದ್ದಳು," ಯೆಂದು ಮೇಲೆ ಮೇಲೆ ಅನ್ನುವನು.

Champu Ramayen and Champu Bharata with Commentaries in Canarese by M. Shantaviraya.

||ಚಂಪೂಭಾರತೆ ಸವ್ಯಾಖ್ಯಾನೆ ಪ್ರಥಮಸ್ತಬಕಃ||

||ವಸಂತತಿಲಕಾವೃತ್ತಂ||

ಪಂಕೇರುಹಾಣಿ ಪರಿಖಾ ಮವತೀರ್ಯ ಯಸ್ಯಾಂ।
ಪ್ರಾಕಾರಭಿತ್ತಿ ಮಭಿತಃ ಪರಿವೇಷ್ಟಯಂತಿ।
ಅಂತಿಸ್ಥಿತಿಂ ವಿದಧತಾ ಮಬಲಾಜನಾನಾ।
ಮಾಸ್ಯಾನಿ ಚೇತು ಮಖಿಲಾನಿ ಚ ಲಾಕ್ಷಭಾಸಾ||೧೧||

॥ಅನ್ವಯಃ॥

ಯಸ್ಯಾಂ=ಆ ಪಟ್ಟಣದಲ್ಲಿ, ಪಂಕೇರುಹಾಣಿ=ಕಮಲಗಳು, ಆತ್ಮಭಾಸಾ=ನಿಜಕಾಂತಿಯಿಂದ। ಅಂತಸ್ಥಿತಿಂ=ಕೋಟೆಯ ಅಂತರ್ವಾಸವನ್ನು। ವಿದಧತಾಂ=ಮಾಡಿದಂಥ। ಅಬಲಾಜನಾನಾಂ=ಸ್ತ್ರೀಜನರ। ಅಖಿಲಾನಿ=ಸಮಸ್ತವಾದಂಥ। ಆಸ್ಯಾನಿ=ಮುಖಗಳನ್ನು। ಜೇತುಂಕಿಲೇತಿ=ಜಯಿಸಲೋಸುಗವೆಂದು। ಪರಿಖಾಂ=ಕಂದಕವನ್ನು। ಅವತೀರ್ಯ=ದಾಂಟಿ। ಪ್ರಾಕಾರಭಿತ್ತಿಂ, ಪ್ರಾಕಾರ=ಕೋಟೆಯ, ಭಿತ್ತಿಂ=ಗೋಡೆಯನ್ನು। ಅಭಿತಃ=ಎಲ್ಲಾಕಡೆಯಲ್ಲಿ। ಪರಿವೇಷ್ಟಯಂತಿ=ಸುತ್ತಿಕೊಂಡಿರ್ಪವು.

॥ಶಾಸ್ತ್ರವಿಷಯಃ॥

ಪಂಕೇರುಹಾಣಿ, ಕರ್ತೃ; ಪ್ರಾಕಾರಭಿತ್ತಿಂ, ಕರ್ಮ; ಪರಿವೇಷ್ಟಯಂತಿ, ಕ್ರಿಯಾಪದ, ಸಕರ್ಮಕ, ಕ, ಪ್ರ.। ಪರಿವೇಷ್ಟಯಂತಿ= (ಪರಿ+ ವೇಷ್ಟ್ + ಅಯ್ + ಅಂತಿ) ಪರಿ ಎಂಬುದು ಉಪಸರ್ಗ, ವೇಷ್ಟ್ ಎಂಬುದು ಧಾತು, ಅಯ್ ಎಂಬುದು ವಿಕರಣ; ಅಂತಿ ಎಂಬುದು ಲಟ್ ಲಕಾರ-ಪರಸ್ಮೈಪದ, ಪ್ರಥಮ ಪುರುಷ, ಬಹುವಚನ.। ಆ—ಪಟ್ಟಣದ ಸ್ತ್ರೀಯರ ಮುಖಶೋಭೆಯನ್ನು ಜಯಿಸಲೋಸುಗ ಸುತ್ತುಗಟ್ಟಿಕೊಂಡಿರಲು ಫಲೋತ್ಪ್ರೇಕ್ಷಾಲಂಕಾರವು.

॥ಭಾವಾರ್ಥಃ॥

ಹಸ್ತಿನಾವತಿಯ ಪಟ್ಟಣದಲ್ಲಿರುವ ಸುಂದರಸ್ತ್ರೀಯರ ಮುಖಶೋಭೆಗಳನ್ನು ಜಯಿಸುವದಕ್ಕೆ ಬಂದಿರುವವೋ ಏನೋ ಎಂಬ ಹಾಗೆ ಆ ಪಟ್ಟಣದ ಕೋಟೆಯ ಸುತ್ತಿನ ಅಗಳದ ನೀರಲ್ಲಿ ಕಮಲಗಳು ಮನೋರಮ್ಯ

ವಾಗಿ ತೋರಿದವು.

॥ಚಂಪೂರಾಮಾಯಣೇ ಸವ್ಯಾಖ್ಯಾನೇ ಬಾಲಕಾಂಡಃ॥

॥ಮಾಲಿನೀವೃತ್ತಂ॥

ಅಥಸರಸಿಜಯೋನೇರಾಜ್ಞಯಾ ರಾಮವೃತ್ತಂ।
ಕರಬದರಸಮಾನಂಪ್ರೇಕ್ಷ್ಯ ದೃಷ್ಟ್ಯಾ ಪ್ರತೀಚ್ಯಾ॥
ಶುಭಮತನುತಕಾವ್ಯಂಸ್ವಾದುರಾಮಾಯಣಾಖ್ಯಂ।
ಮಧುಮಯಭಣಿತೀನಾಂ ಮಾರ್ಗದರ್ಶೀ ಮಹರ್ಷಿಃ॥೧೦॥

॥ಅನ್ವಯಃ॥

ಮಧುಮಯಭಣಿತೀನಾಂ, ಮಧುಮಯ=ಅಮೃತಮಯವಾದ, ಭಣಿತೀನಾಂ=ವಾಕ್ಯಗಳ। ಮಾರ್ಗದರ್ಶೀ, ಮಾರ್ಗ=ಪದ್ಧತಿಗಳನ್ನು, ದರ್ಶೀ=ತೋರಿಸುವಂಥ। ಮಹರ್ಷಿಃ=ಘನಮುನಿಯಾದ ವಾಲ್ಮೀಕಿಯು। ಸರಸಿಜಯೋನೇಃ=ಬ್ರಹ್ಮನ। ಆಜ್ಞಯಾ=ಅಪ್ಪಣೆಯಿಂದ। ರಾಮವೃತ್ತಂ=ಶ್ರೀರಾಮಚರಿತ್ರವನ್ನು। ಪ್ರತೀಚ್ಯಾ ದೃಷ್ಟ್ಯಾ=ಅಂತರ್ದೃಷ್ಟಿಯಿಂದ। ಕರಬದರಸಮಾನಂ, ಕರ=ಹಸ್ತದಲ್ಲಿಯ, ಬದರ=ಬೋರಿಯಹಣ್ಣಿನ ಜ್ಞಾನಕ್ಕೆ, ಸಮಾನಂ ಯಥಾ ಭವತಿ ತಥಾ=ಸದೃಶವಾಗೋಣ ಹ್ಯಾಂಗಹುದೋ ಹಾಂಗೆ। ಪ್ರೇಕ್ಷ್ಯ=ತಿಳಿದು(ನೋಡಿ)। ಶುಭಂ=ಮಂಗಲಕರವಾದಂಥ। ಸ್ವಾದುರಾಮಾಯಣಾಖ್ಯಂ, ಸ್ವಾದು=ಸವಿಯಾದ, ರಾಮಾಯಣಾಖ್ಯಂ=ರಾಮಾಯಣವೆಂಬ ಹೆಸರುಳ್ಳ। ಕಾವ್ಯಂ=ಪ್ರಬಂಧವನ್ನು। ಅತನುತ=ವಿಸ್ತರಿಸಿದನು.

॥ಶಾಸ್ತ್ರವಿಷಯಃ॥

ಮಹರ್ಷಿಃ, ಕರ್ತೃ, ಕಾವ್ಯಂ, ಕರ್ಮ, ಅತನುತ, ಕ್ರಿಯಾಪದ, ಇತಿ ಸಕರ್ಮಕ.। ಅತನುತ= (ಅ+ತನ್+ಉ+ತ)

ಅ ಎಂಬುದು ಆಗಮ, ತನ್ ಎಂಬುದು ಧಾತು, ಉ ಎಂ
ಬುದು ವಿಕರಣ, ತ ಎಂಬುದು ಲಙ್, ಆತ್ಮನೇಪದ ಪ್ರಥ
ಮ ಪುರುಷ, ಏಕವಚನ.। ದರ್ಶೀ=(ದೃಶ್+ಅರ್+ಇನ್)
"ತಾಚ್ಛೀಲ್ಯೇ ಣಿನಿಃ"। ಆ ಧಾತುವಿನ ಅರ್ಥದಂತೆ ಹೇಳುವಲ್ಲಿ
"ಣಿನಿ" ಪ್ರತ್ಯಯವು ಬರುವದು.। ಮಹರ್ಷಿಃ=(ಮಹತ್+
ಋಷಿಃ) ಮಹಾಶ್ಚ ಸಾಋಷಿಶ್ಚ, ಇದರಲ್ಲಿ ಗುಣ ಬರು
ವದು। ಬದರ=(ಬದರೀ+ಅ) "ಫಲೇಲುಕ್", ಬದರ್ಯಾಃ ಫ
ಲಂ।

॥ಭಾವಾರ್ಥಃ॥

ನವರಸಗಳಿಂದಲೂ ಶತಾಲಂಕಾರಗಳಿಂದಲೂ ರುಚಿಕರ
ವಾದ ವಚನ ರಚನೆಗಳ ಮಾರ್ಗಗಳನ್ನು ತೋರಿಸುವ ವಾ
ಲ್ಮೀಕಿಯು ಬ್ರಹ್ಮನ ಅಪ್ಪಣೆಯಿಂದ ಶ್ರೀರಾಮಚರಿತ್ರವ
ನ್ನು ಸಮ್ಯಕ್‌ಜ್ಞಾನದೃಷ್ಟಿಯಿಂದ ಕರತಳದಲ್ಲಿರುವ ಬೋ
ರಿಹಣ್ಣಿನ ತೋರಿಕೆಯು ಹಾಂಗೆ ವಾಚ್ಯಾಲ ಪೂರ್ವಕವಾಗಿ
ನೋಡಿ ಮಂಗಲಕರವಾದ ರಾಮಾಯಣವೆಂಬ ಹೆಸರುಳ್ಳ
ಕಾವ್ಯವನ್ನು ಮನೋಹರವಾಗಿ ರಚಿಸಿದನು.

ಶಾಂತವೀರ ರಾಚದೇವ ಕಿತ್ತೂರ ಟ್ರೇನಿಂಗ ಕಾಲೇಜ್.

NOTICES.

ನೋಟೀಸುಗಳು.

ದಕ್ಷಿಣಭಾಗದೊಳಗಿನ ಸೆಕಂಡಗ್ರೇಡ ಅಂಗ್ಲೊ ವ್ಹರ್ನ್ಯಾ
ಕ್ಯುಲರ ಶಾಲೆಗಳ ಹೆಡ್‌ಮಾಸ್ತರರಿಗೂ, ವ್ಹರ್ನ್ಯಾಕ್ಯು
ಲರ ಶಾಲೆಗಳ ಹೆಡ್ ಮಾಸ್ತರರಿಗೂ ತಿಳಿಯಪಡಿಸುವದೇ
ನಂದರೆ—

ಬೆಳಗಾವೀ ಜಿಲ್ಲೆಯೊಳಗಿನವನೊಬ್ಬ ಹ್ವರ್ನ್ಯಾಕ್ಯುಲ
ರಶಾಲೆಯು ಹೆಡ್ ಮಾಸ್ತರನು ಡಿ. ಯೆ. ಇನಸ್ಪೆಕ್ಟರರಿ
ಗನಾಲ್ಕು ಸರಕಾರೀ ರಿಪೋರ್ಟುಗಳನ್ನು ಕಳುಹಿ, ಅದೇ ಲ
ಖೋಟಿಯಲ್ಲಿ ಒಂದು ಖಾಸಗೀ ಪತ್ರವನ್ನು ಕಳುಹಿದನು
ಸರಕಾರೀ ಲಖೋಟಿಗೆ ಸರಫಿಸ್ ತಿಕೀಟು ಹಚ್ಚಿ, ಅದರೊ
ಳಗೆ ಖಾಸಗೀ ಪತ್ರ ಹಾಕಿ ಕಳುಹುವದು ಬಹು ದೊಡ್ಡ ತಪ್ಪಾ
ಗಿರುತ್ತದೆ. ಅದಕ್ಕೆ ಟಪಾಲು ಖಾತೆಯ ಕಾಯಿದೆಯಿಂದ
ಕಠಿಣವಾದ ಶಿಕ್ಷೆಯಾಗುವದುಂಟು. ಮುಂದೆ ಯಾವನಾ
ದರು ಮಾಸ್ತರನು ಸರಕಾರೀ ಲಖೋಟಿಯಲ್ಲಿ ಖಾಸಗೀ ಪ
ತ್ರವನ್ನು ಕಳುಹಿದರೆ, ಆ ಸಂಗತಿಯನ್ನು ಆ ಕ್ಷಣವೇ ನ
ಮಗೆ ತಿಳಿಸಬೇಕೆಂದು ದಕ್ಷಿಣ ಭಾಗದೊಳಗಿನ ಡಿ. ಯೆ.
ಇನಸ್ಪೆಕ್ಟರರಿಗೆ ಅಪ್ಪಣೆಗಳನ್ನು ಕಳುಹಿರುತ್ತೇವೆ. ಅಂ
ಥಾ ಯಾವನಾದರೂ ಮಾಸ್ತರನ ಮೇಲೆ ಟಪಾಲುಖಾತೆಯ
ಅಧಿಕಾರಿಗಳು ಕಾಯಿದೆಯ ಪ್ರಕಾರ ಖಟ್ಲೆ ನಡಿಸಬೇಕೆಂಬ
ದಾಗಿ ಅವನ ಹೆಸರು ಅವರಿಗೆ ತಿಳಿಸಲ್ಪಡುವದು.

(signed) J. F. Fleet

ಬೆಳಗಾವ ತಾ.
೨೨ ಆಗಸ್ಟ ಸನ್ನ
೧೮೭೭ ನೇ ಇ.

ಅ. ಯೆ. ಇನಸ್ಪೆಕ್ಟರ ದಕ್ಷಿಣಭಾಗ.

ದಕ್ಷಿಣ ಭಾಗದೊಳಗಿನ ಸೆಕೆಂಡಗ್ರೇಡ ಅಂಗ್ಲೋ ಹ್ವರ್ನ್ಯಾ
ಕ್ಯುಲರ ಶಾಲೆಗಳ ಹೆಡ್ ಮಾಸ್ತರರಿಗೂ ಹ್ವರ್ನ್ಯಾಕ್ಯುಲರ
ಶಾಲೆಗಳ ಹೆಡ್ ಮಾಸ್ತರರಿಗೂ ತಿಳಿಯಪಡಿಸುವದೇನಂದರೆ
ಬೆಳಗಾವೀ ಜಿಲ್ಲೆಯೊಳಗಿನವನೊಬ್ಬ ಹ್ವರ್ನ್ಯಾಕ್ಯುಲರ

ಶಾಲೆಯ ಹೆಡ್ ಮಾಸ್ತರನು ಒಂದು ರಿಪೋರ್ಟು ಕಳುಹಿ, ಪ್ರೊಬ್ಬ ತಾಲೂಕ ಮಾಸ್ತರನ ಮೇಲೆಯೂ. ಡಿ. ಯೆ. ಇನಸ್ಪೆಕ್ಟರರ ಕಚೇರಿಯೊಳಗಿನವನೊಬ್ಬ ಕಾರಕೂನನ ಮೇಲೆಯೂ ಬಹಳ ದೊಡ್ಡ ತಪ್ಪುಗಳನ್ನು ಹೊರಿಸಿದನು. ಯೆಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹಾದ್ದೂರವರು ಆ ಬಗ್ಗೆ ವಿಚಾರಣೆಯು ನಡಿಸಲಾಗಿ, ಸದರೀ ಹೆಡ್ ಮಾಸ್ತರನ ಕೈಯಿಂದ ತಾನು ಹೊರಿಸಿದ ಅಪರಾಧಗಳ ಪುರಾವೆ ಯೇನೂ ಕೊಡೋಣವಾಗಲಿಲ್ಲ; ಇದಲ್ಲದೆ ಅವನು ಕೇವಲ ಕೇಳಕೆಯ ಮಾತಿನಿಂದ ಸದರೀ ತಾಲೂಕ ಮಾಸ್ತರನ ಮೇಲೆ ಅಸಂಬದ್ಧವಾದ ಹೊಸ ದೋಷಗಳನ್ನು ಮಿತಿಮೀರಿ ಹೊರಿಸಿ, ವಿಚಾರಣೆಯೊಳಗೆ ಯೆಷ್ಟೋ ಅಸಂಗತವಾದ ಸಂಗತಿಗಳನ್ನು ನಿರರ್ಥಕವಾಗಿ ಬೆರಿಸುವ ಪ್ರಯತ್ನ ನಡಿಸಿದನು. ಆದದರಿಂದ ಯೆಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬಬಹಾದ್ದೂರವರು ಸದರೀ ಮಾಸ್ತರನಿಂದ ಹೊರಿಸಲ್ಪಟ್ಟ ದೋಷಗಳು ಸುಳ್ಳೆಂದು ನಿರ್ಣಯಿಸಿ, ಅವನನ್ನು ಕೆಲಸದಿಂದ ದೂರಮಾಡಿ, ಆರುತಿಂಗಳುಗಳ ವರೆಗೆ ಸಸ್ಪೆಂಡ ಮಾಡಿರುತ್ತಾರೆ. ಅವನಿಗೆ ಪುನಃ ಕೆಲಸ ಕೊಡುವಾಗ ಎರಡನೇ ಜಿಲ್ಲೆಯಲ್ಲಿ ಅಸಿಸ್ಟಂಟ ಮಾಸ್ತರನ ಕೆಲಸವು ಮಾತ್ರ ಕೊಡಲಾದೀತು.

ಬೆಳಗಾವ ತಾ॥ ೨೨ ಅಗಸ್ಟ ಸನ್ನ ೧೮೭೩ನೇ ಇ॥

(Signed) J. F. Fleet.
ಅ. ಯೆ. ಇನಸ್ಪೆಕ್ಟರ ದಕ್ಷಿಣಭಾಗ.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರ ವ ಅಸಿಸ್ಟಂಟರಿಗೆ—

ತಿಳಿಯ ಪಡಿಸುವದೇನಂದರೆ—ಮಾಸ್ತರ ವ ಅಸಿಸ್ಟಂಟರು, ರಯತ ವ ಯಿತರ ಜನರಿಗೆ, ಅರ್ಜಿಗಳನ್ನು ಬರೆದು, ಪಬರಿಸಿ, ಕೊಡುತ್ತಾರೆಂದು ಸಂಶಯವುಂಟಾಗುತ್ತದೆ. ಇದು ಅವರು ಮಾಡತಕ್ಕ ಕೆಲಸವಲ್ಲ. ಇದರಿಂದ ಕೆಲಸಕ್ಕೆ ಹರಕತ ಆಗಿ ಜನರಿಗೆ ಅಪ್ರಿಯರಾಗುವ ಸಂಭವ ಇರುತ್ತದಿಷ್ಟೇ ಅಲ್ಲ; ಜನರು, ಮತ್ತು ಮಾಸ್ತರ ಪ ಅಸಿಸ್ಟಂಟರು, ಇವರ ನಡುವೆ ತಂಟೆ ಉತ್ಪನ್ನವಾಗುತ್ತದೆ. ಆದರೆ ಈ ವಹಿವಾಟ ಯೇಕದಮ್ಮ ಬಂದಮಾಡಬೇಕು. ಇದು ಮುಂದೆ ನಮ್ಮ ನಜರಿಗೆ ಬಂದರೆ ಅವರನ್ನು ಕೆಲಸದಿಂದ ತೆಗದದ್ದಲ್ಲದೆ ನಜರಿಗೆ ಬಂದಂತೆ ಶಿಕ್ಷೆಯಾದರೂ ಕೊಡಲಾದೀತು. ತಿಳಿಯುವದು. ತಾರೀಖು ೨೨ ಆಗಸ್ಟ ೧೮೭೭ ಇಸವಿ.

Ramchandra. A. Sawanoor.
ಡಿ. ಎ. ಇ. ಜಿಲ್ಹಾ ಕಲಾದಗಿ.

A New Sanscrit Composition.

ಸಂಸ್ಕೃತ ಹೊಸಕವಿತೆಯು.

॥ ಶಾರ್ದೂಲವಿಕ್ರೀಡಿತವೃತ್ತಂ॥

ಶ್ರೀಮದ್ದೇವಕುಲಾನತಾಂಘ್ರಿಕಮಲಂ, ತೇಜೋನಿಧಿಂ,
ನಿಶ್ಚಲಂ, ।
ಶ್ರೀಪ್ರಹ್ಲಾದಸುಶೋಭಿತೋರುಯುಗಲಂ, ನಾಕ್ಷ್ಯಂ
ಬುಜಾತೋಜ್ವಲಂ॥
ಚಂಚತ್ಕೌಸ್ತುಭದಿವ್ಯದೀಪ್ತಿಸದಲಂಕಾರಾಂಕವಕ್ಷಸ್ಥ

ಲಂ।

ವಂದೇಽಹಂ ವನಮಾಲಿಕಾಧರಗಲಂ, ಭವ್ಯಾನನಂ, ಮಂಗಲಂ॥೧॥

॥ವಸಂತತಿಲಕಾವೃತ್ತಾನಿ॥

ಶ್ರೀಕೇಶವಪ್ರಣತರಕ್ಷಕ ರಕ್ಷ ಕಂಸಾ।
ರಾತೇಽರಮೇಶ ಪರಮೇಶ ಪದಾನತಂ ಮಾಂ॥
ಸ್ವಾಮಿನ್ ಮಹಾದುರಿತಭಂಗವಿಭಂಗವಿಶ್ವಾ।
ಮತ್ಯಾಽಧಿಮಾಪನತ ಪಾವನ ತತ್ತ್ವರೂಪಿನ್॥೨॥
ಹೇಮಾಂಬರಂ ಭಯಹರಂ ದನುಜಾಂತಕಾರಂ।
ಜ್ಞಾನಾಂಬರಾರುಣಕರಂ ನವನೀತ ಚೋರಂ॥
ರಾಧಾವರಂ ಸುಖಕರಂ ನಮ ನಿರ್ವಿಕಾರಂ।
ವಿಶ್ವಂಭರಂ ಸ್ಮರಮನೋಭವದೋಷದೂರಂ॥೩॥
ಘೋರಾಸುರಧೃತಿನಗೇಂದ್ರವಿಭೇದನೋದಂ।
ಭೀರೋರುಕೋಟಿ ಪವಿಘಾತಘನಾರವೇಣ॥
ನೇತ್ರಾವಲೋಕನಸುದುಃಸಹಕೋಟಿಭಾಸ್ವ।
ತ್ತೇಜೋಪ್ರಜಾವೃತತತಾರುಣಲೋಚನಾಭ್ಯಾಂ॥೪॥
ಜ್ವಾಲಾಕುಲಾಭರಸನಾಂ ಕವಿರಾಜಿತೋದ್ಯ।
ದ್ದಂಷ್ಟ್ರಾಕರಾಳತರುಣಾಗ್ನಿಸಮಾನನೇನ॥
ದೈತ್ಯೋರುದಾರಣಪಟೂನ್ನಖಪಂಜರೈಶ್ಚ।
ಕ್ರುದ್ಧತ್ರಿಲೋಕಭಯಭೀಷಣರೂಪಕೇನ॥೫॥
ತ್ರೈಲೋಕ್ಯಸಜ್ಜನಹಿತಾಯ, ಸುರಾವನಾಯ,।
ರಕ್ಷೋವಧಾಯ, ಭಜಕೋಕ್ತಿ ಸುರಕ್ಷಣಾಯ॥
ಸ್ತಂಭಾತ್ಸಮಾವಿರಭವದ್ಧರಿರೇವಸಾಯಂ।
ಕಾಲೇ ಕುಭಾರನಿಲಯಾಯ, ನೃಸಿಂಹರೂಪೀ॥೬॥

॥ಆರ್ಯಾವೃತ್ತಾನಿ॥

ತದ್ಭೀಷಣಾವತಾರಂ।
ದೃಷ್ಟ್ವಾಧಾವನ್ ದಿಗಂತರೇ ಭೀತಾಃ॥
ಸರ್ವೇ ಭೂಭರಭೂತಾ।
ಸ್ತತ್ಕ್ಷಣಮಾತ್ರೇ ಚ ದಿತಿದನೂದ್ಭೂತಾಃ॥೭॥
ಅಪತನ್ನುದತಿಷ್ಠನ್ನರು।
ದನ್ಪ್ರಾಣಭಯಾಂಧಕಾಃ ಪ್ರಧಾವಂತಃ॥
ಸೂರ್ಯಾಭ್ಯುದಯೇ ಘೂಕಾ।
ಇವ ವಾತಾತ್ತೂಲ ಇವ ಪಯೋದ ಇವ॥೮॥
ತ್ಯಕ್ತ್ವಾಸೂನ್ ಭೂಮೌ ಮುಹು।
ದಶನಿನಿಪಾತೇನ ಛಿನಭೂಜ ಇವ॥
ನಿಪಪಾತ ಹೇಮಕಶಿಪು।
ರ್ನರಹರಿ ದರ್ಪೇಣಕೋವದಜಿಜೀವ॥೯॥

॥ವಸಂತತಿಲಕಾವೃತ್ತಂ॥

ತ್ಯಕ್ತ್ವಾ ಧೃತಿಂ ಸುರನರೋರಗಯಕ್ಷನಾಥಾ।
ಬಿಭ್ಯುಃ ಪ್ರಕೋಪಶಿಖಿತಾಪಭಯಾಜ್ಜಗಂತಿ॥
ಸಂರಕ್ಷಿತುಂ ತದಜಿತಾಭಿಮುಖೇಪಿಗಂತುಂ।
ನಾಶಕ್ನುವನ್ನತಿಬಲಪ್ರವರೇಷು ಕೇಪಿ॥೧೦॥

॥ಉಪೇಂದ್ರವಜ್ರವೃತ್ತಂ॥

ತಥಾಪಿ ತತ್ರಾಪಿ ತದಾಪಿ ತಸ್ಥೌ।
ಗುಣಾಭಿರಾಮೋಚ್ಯುತಭಕ್ತಭೂಷಃ॥
ಸದಾ ಹರಿಧ್ಯಾನ ಪರಾಯಣೋನಿ।
ರ್ಥಯೋನಪ್ರಹ್ಲಾದ ಇತಿ ಪ್ರಸಿದ್ಧಃ॥೧೧॥

॥ಶಾರ್ದೂಲ ವಿಕ್ರೀಡಿತ ವೃತ್ತಂ॥

ಕೋಯಂ? ಶ್ರೀಪತಿಭಕ್ತಿಮೂರ್ತಿರಥವಾ ವೈಕುಂಠ ನಾ
ಮಾಕೃತಿಃ।
ಕಿಂವಾ ಕೇಶವ ಭಕ್ತರಾಜಸುಮನೋಭಾವೈಕ ರೂಪಂ
ಚವಾ॥
ಸತ್ವಶ್ರೀಪರಿಪೂರ್ಣಸದ್ಗುಣಗಣಾಕಾರೋಥವಾ ಶ್ರೀ
ನೃಸಿ।
ಹ್ಮಾಮರ್ಷಾನಲ ವಾರಿವಾ ನರಹರಿಪ್ರಾಣಃಪ್ರನಮೂರ್
ತಿಮಾನ್॥೯೨॥

॥ಇಂದ್ರವಜ್ರ ವೃತ್ತಮ್॥

ಏತೈಃ ಪ್ರಕಾರೈಃ ಸುವಿರಾಜಮಾನಃ।
ಪ್ರಹ್ಲಾದಭಕ್ತೋ ಭುವನಾವನಾರ್ಥಂ॥
ತುಷ್ಟಾವ ತದ್‌ಭೀಷಣರೂಪಿಣಂಚ।
ಚಿತ್ರಂಕಿಮೇತತ್? ಸುಜನಸ್ಯ ಕಾರ್ಯಂ॥೯೩॥

॥ಆರ್ಯಾವೃತ್ತಾನಿ॥

ಜಯಜಯನೃಸಿಹ್ಮರೂಪಿನ್।
ಜಯಜಯಸುಜನಾವನಾಸುರಧ್ವಂಸಿನ್॥
ಜಯಜಯವಿಶ್ವಕುಟುಂಬಿನ್।
ಜಯಜಯಭಯಕೃದ್‌ಭಯಾಂತಕಸ್ವಾಮಿನ್॥೯೪॥
ಜಯಜಯದೀನೋದ್ಧಾರಣ।
ಜಯಭಕ್ತಾವರಣ ಪಾಪಹರಚರಣ॥
ಜಯಜಯ ನರಕೋತ್ತಾರಣ।
ಜಯಜಯಸಂಸರಣದುಃಖಸಂಹರಣ॥೯೫॥
ಜಯತಾಪತ್ರಯನಾಶನ।

ಜಯಜಯಪವನಾಶನಪ್ರವರಶಯನ॥
ಜಯಸುರಪಾವನಪಾವನ।
ಜಯಜಯಕರುಣಾಘನಾಂಬುರುಹನಯನ॥೧೬॥
ಏಷಬ್ರಹ್ಮರ್ಷಿಸುಜನ।
ದೈವವಶ್ರೋಹಾಗ್ನಿದಗ್ಧಗತಸತ್ವಃ॥
ದೈತ್ಯಾಧಮಸ್ತ್ರಾಣಪ್ರಾ।
ಯಸ್ತವಗಣಿತೇಹರೇಪ್ರಭೋಭಗವನ್॥೧೭॥
ತಸ್ಮಾದಯಂ ವಿವಧ್ಯೋ।
ನಾಯಾಸೇನಚ ವಿಭೋತವಾಕೃಪಯಾ॥
ಇತ್ಯುಕ್ತೇತದ್ಧನಸಾ।
ಯ್ಯೃಷವಿರೋಷಃ ಕಿಮರ್ಥಮತಿರೌದ್ರಃ॥೧೮॥

॥ಅನುಷ್ಟುಪ್ಛಂದಃ ಶ್ಲೋಕಃ॥

ಏನಕೋಪೇನಸಂತಪ್ತಾಃ।
ಸರ್ವೇಲೋಕಾಶ್ಚಸಾಂಪತಂ॥
ಹಾಹಾಕಾರಮುಖಾಭೀತಾ।
ಲೋಕನಾಥಾಃ ಸನಾತನ॥೧೯॥

॥ಆರ್ಯಾವೃತ್ತೇ॥

ಅಹಹಾ ಹಮತಿ ಜಡಮತಿಃ।
ಖ್ಯಾತಂ ಬೀಜಂ ನೃಸಿಂಹಕೋಪಸ್ಯ॥
ತದಪಿಮಯಾಸಜ್ಞಾತಂ।
ಗತಕಾಲೇ ಸಂಪ್ರತಿ ಪ್ರತಿಜ್ಞಾತಂ॥೨೦॥
ತದಿತಿ ಪ್ರಾಯೋಮತ್ಪ್ರಿಯಾ।
ಭಜಕಫಲನಾಕರಃ ಖಲೋಯಾವಿತಿ॥
ಜ್ಞಾತ್ವಾಗತಬಹುರೋಷೋ।

ಸಹ್ಯೋಽಭೂದ್ಭಕ್ತವತ್ಸಲತಯಾತೇ||೨೧||

||ಶಾರ್ದೂಲವಿಕ್ರೀಡಿತವೃತ್ತಂ||

ಇತ್ಯಪ್ಯಸ್ತು ತಥಾಪಿ ಲೋಕಭಯಶಾಂತ್ಯರ್ಥೇ ತ್ವಯಾ ತ್ಯಜ್ಯತಾ| ವೇಷಕ್ರೋಧ ಇತಿ ತ್ವದೀಯಭಜಕಾ ವಾಂಛಂತಿ ಭಕ್ತಪ್ರಿಯ|| ತೇನೈನಂಹವಿ ಮುಂಚ ಸಿಂಚ ಕರುಣಾಪೀಯೂಷವರ್ಷಂಹರೇ| ಸರ್ವತ್ರೇಶವಿಲೋಕಯಸ್ವ ಕೃಪಯಾದ್ಧತ್ರ್ಯೋಮಮ ಕ್ಷಮ್ಯತಾಂ||೨೨||

||ಪದ ರಾಗದೇಶಿ ತಾಳತ್ರಿವಿಡಿ||

ಪಾಹಿಕಮಲಾಧರ ಸುಧಾಪ್ರಿಯ|ಭೋಹಿಮಾಂಶುಮುಖ ಕೃಪಾಲಯ||
ಶೋಹಿತ ಪ್ರಣತವ್ಯಥಾಲಯ| ದೇಹಿನಿತ್ಯಸುಖಂಚಪಾಲಯ||ಪಾಹಿಪಾಹಿಶ್ರೀಹರೇಪಾಹಿಪಾಹಿ||ಪಲ್ಲ||

ಜಯಜಯಶ್ರೀಕರಪರಿಗ್ರಹ|
ಜಯಜಯಸಲಕ್ಷಣಸುವಿಗ್ರಹ||
ಜಯಜಯಾಪಹೃತಾಸುರಾಗ್ರಹ|
ಜಯಜಯಜಿತೇಂದ್ರಿಯ ಮನೋಗ್ರಹ||೧||
ಜಯಜಯಾಭೀಷ್ಟಪ್ರದಾಯಕ|
ಜಯಜಯಾಖಿಳಲೋಕನಾಯಕ||
ಜಯಜಯಶ್ರೀಚಿತ್ತನೋಹಕ|
ಜಯಜಯಾವ್ಯಯದುಃಖದಾಹಕ||೨||
ಜಯಮನೋಹರಗಜಯಸುಖಂಕರ|

ಜಯಜಯಶ್ರೀವ್ಯಂಕಟೇಶ್ವರ॥
ಜಯಜಯಾಯಸ್ತಂಭಸಂಭವ।
ಜಯಕನಕವಾಸಾದಿಕೇಶವ॥೩॥ ॥೨೩॥

(ಮುಂದಕ್ಕೆ ಸಾಗುವದು.)

Correspondence.

ಪತ್ರವ್ಯವಹಾರ.

ಮ. ರಾ. ವಂದ್ಯರಾದ ಶಾಲಾಪತ್ರಕರ್ತರೇ—

ಮಂದಮತಿಯವನಾದ ನಾನು ತಮಗೆ ವಂದನೆಯನ್ನು ಮಾಡಿ ತಮ್ಮ ಅಂದವಾದ ಪತ್ರದ್ವಾರದಿಂದ ಈ ಚಂದವಾದ ಲೆಖ್ಖವನ್ನು ಪ್ರಕಟಿಸಿ ತಮ್ಮ ವಾಚಕರ ಕಡೆಯಿಂದ ಇದರ ರೀತಿಯನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳವನಾಗಿದ್ಧೇನೆ. ಅದನ್ನು ತಾವೂ ತಮ್ಮ ವಾಚಕರೂ ಕೈಗೂಡಿಸುವಿರೆಂದು ಕೋರುತ್ತೇನೆ.

೨೫ ಹಡಗಗಳು ಜಲಪರ್ಯಟಣ ಮಾಡುತ್ತಿರುವಲ್ಲಿ ಒಂದು ಮುಳುಗಲಾರಂಭಿಸಿತು. ಆದರೆ ಅದರ ಒಡೆಯನು ೨ನೇ ಹಡಗದಲ್ಲಿದ್ದಷ್ಟು ಜನರನ್ನು ಅದಕ್ಕೆ ಕೊಟ್ಟನು. ಅದೂ ಮುಳುಗಹತ್ತಲು ಮೂರನೇ ಹಡಗಕ್ಕೆ ಅದರಲ್ಲಿದ್ದಷ್ಟು ಜನರನ್ನು ೨ನೇ ಹಡಗದವನು ಕೊಟ್ಟನು. ಈ ಪ್ರಕಾರ ಎಲ್ಲರು ತಮ್ಮ ನೆರೆ ಹಡಗವು ಮುಳುಗುವಾಗ್ಯೆ ತಮ್ಮಲ್ಲಿದ್ದಷ್ಟು ಜನರನ್ನು ತೆಗೆದುಕೊಂಡರು. ೨೫ನೇ ಹಡಗದವನು ತೆಗೆದುಕೊಂಡಾಗ್ಯೆ ಎಲ್ಲ ಹಡಗಗಳಲ್ಲಿ ಸಮನಾಗಿ ಜನರುಳಿದರು. ಆದರೆ ಮೊದಲು ಪ್ರತಿಒಂದು ಹಡಗದಲ್ಲಿ ಎಷ್ಟೆಷ್ಟು ಜನರಿದ್ದರು? ಇದರ ರೀ

ತಿಯನ್ನೂ ಉತ್ತರವನ್ನೂ ತಿಳುಹಿದವರ ಉಪಕಾರವನ್ನು ಮಂನಿಸುತ್ತೇನೆ.

ತಾರೀಖು ೨೩ ಜೂನ ಸನ್ ೧೮೭೩ } ಹಾವೇರಿಯ ।ಅ।
ಇಸವಿ. ಮುಕ್ಕಾಮ ಹಾವೇರಿ } ವ್ಹಂ ಸ್ಕೂ. ವಿದ್ಯಾರ್ಥಿ

ಮಹಾರಾಜ ರಾಜಮಾನ್ಯರಾಜೆಶ್ರಿ ದಕ್ಷಿಣಭಾಗದ ಕನ್ನಡ ಶಾಲಾಪತ್ರಕರ್ತರ ಸಮುಖಕ್ಕೆ—

ಸೇವಕನು ಮಾಡುವ ಬಿನ್ನಃ ತಮ್ಮ ಕರಸಂಜರದಿಂದ ಹುಟ್ಟಲ್ಪಟ್ಟ ಮೇ ತಿಂಗಳ ಶಾಲಾಪತ್ರಿಕೆಯಲ್ಲಿ ನಮ್ಮ ಬಾಂಧವರಾದ ಮಾಧವ ನಾರಾಯಣ ಜಮಖಂಡಿಕರ ಇವರು ಕೆಲ ಪ್ರಶ್ನಗಳನ್ನು ಕೇಳಿದ್ದಾರೆ. ಅದಕ್ಕೆ ನಂನ ಯಥಾಮತಿಗೆ ತಿಳಿದಷ್ಟು ಕೆಳಗೆ ವಿವರಿಸಿದ್ದೇನೆ. ಅದನ್ನು ಅವಲೋಕಿಸಿ ತಮ್ಮ ಮನಸಿಗೆ ಪ್ರಶಸ್ತ ಕಂಡರೆ ಪ್ರಸಿದ್ಧಿಸಬೇಕೆಂದು ಪ್ರಾರ್ಥನೆಯುಂಟು.

ಪೃಥ್ವಿಯಮೇಲಿನ ಜಲಸಮೂಹದೊಳಗಿನ ನೀರು ಸೂರ್ಯಕಿರಣ ಮತ್ತು ಹವೆ ಅವುಗಳ ಸಾಧನೆಯಿಂದ ಬಾಷ್ಪಭವನ ಹೊಂದಿ ಮೇಲಕ್ಕೆ ಹೋಗುತ್ತದೆ. ಪೃಥ್ವಿಯ ಸಮೀಪದಲ್ಲಿರುವ ಹವೆಯಗಿಂತಲೂ ಉಗಿಯು ಹಗುರಾಗಿರುವದರಿಂದ ಆ ಉಗಿಯು ತನ್ನಷ್ಟು ತೂಕಕ್ಕೆ ಸರಿಯಾದ ಹವೆಯಲ್ಲಿ ಹೋಗಿ ಕೂಡಿಕೊಂಡಾಗ ಅದೃಶ್ಯವಾಗಿರುತ್ತದೆ. ಆ ಹವೆಗಿಂತಲು ಈ ಉಗಿಯು ಹೆಚ್ಚಾದರೆ ಅಥವಾ ಉಷ್ಣತೆ ಕಡಿಮೆಯಾಗಿ ಹವೆಯಲ್ಲಿ ಉಗಿಯನ್ನು ಕರಗಿಸುವ ಶಕ್ತಿ ಕಡಿಮೆಯಾದರೆ ಆ ಪುಗಿಯು ಮೇಘರೂಪದಿಂದ ಆಕಾಶದಲ್ಲಿ ಕಾಣಿಸುತ್ತದೆ. ಇಲ್ಲವೆ ಮಳೆ ಆಣೆಕ

ಲ್ಲು ಈ ರೂಪದಿಂದ ಭೂಮಿಯಮೇಲೆ ಬೀಳುತ್ತವೆ. ಕುಂತನಿಭ, ಪುಂಜನಿಭ, ವಿತಾನನಿಭ, ಈ ಮೂರು ಪ್ರಕಾರದ ಮೇಘಗಳುಂಟು. ಕುಂತನಿಭಮೇಘದಲ್ಲಿ ಘನತ್ವವು ಬಹಳ ಕಡಿಮೆ ಇರುತ್ತದೆ ಅದರಿಂದ ಅದು ಆಕಾಶದಲ್ಲಿ ಬಹು ಎತ್ತರ ಇರುತ್ತದೆ. ಪುಂಜನಿಭಮೇಘಗಳು ಗೋಲಪೃಷ್ಠಾಕೃತಿಯಂತೆ ಇರುತ್ತಿದ್ದು ಅವು ವಾತಾವರಣದ ಕೆಳಗೆ ಇರುತ್ತವೆ. ವಿತಾನನಿಭಮೇಘಗಳು ವಿಸ್ತಾರವಾಗಿದ್ದು ಬಹಳಮಾಡಿ ರಾತ್ರಿಕಾಲಕ್ಕೆ ಬರುತ್ತವೆ. ಈ ಮೇಘಗಳು ಒಮ್ಮೊಮ್ಮೆ ಭೂಮಿಗಾದರೂ ಹತ್ತುತ್ತವೆ.

ಈ ಮೇಘಗಳು ಪ್ರಾಣಿಮಾತ್ರರ ಉಪಯೋಗಕ್ಕಾಗಿ ದೇವರಿಂದ ನಿರ್ಮಿಸಲ್ಪಟ್ಟಿರಬೇಕು.

ವಾತಾವರಣದೊಳಗಿನ ಉಗಿಗೆ ಸೀತ ಹತ್ತಿ ಘಟ್ಟಿಯಾಗುತ್ತದೆ. ಅದಕ್ಕೆ ನೀರ ಹನಿ ಹತ್ತಿ ಮತ್ತಿಷ್ಟು ಘಟ್ಟಿ ಆದದ್ದೇ ಆಣೆಕಲ್ಲು. ಆಣೆಕಲ್ಲು ಗುಡುಗು ಮಿಂಚು ಇರುವ ಕಾಲದಲ್ಲಿಯೇ ಬಹಳಮಾಡಿ ಬೀಳುತ್ತವೆ. ಬೇರೆ ಕಾಲಗಳಲ್ಲಿ ಬೀಳುವದಿಲ್ಲ. ಇದರಮೇಲಿಂದ ವಿದ್ಯುಲ್ಲತೆಯಿಂದಾದರೂ ಆಣೆಕಲ್ಲು ಆಗುತ್ತಿರಬೇಕೆಂದು ತೋರುತ್ತದೆ.

ಇದರಲ್ಲಿ ಏನಾದರೂ ನ್ಯೂನಾಧಿಕವಿದ್ದರೆ ತಿದ್ದಿ ಪ್ರಕಟಿಸುವ ಮೋಹಬರ್ನನಿಗಿ ಆಗಬೇಕೆಂದು ಕೋರುತ್ತೇನೆ.

ಇಂತಿ ಬಿನ್ನಹ.

ಮುಕ್ಕಾಮ ಯಡೂರ ತಾ॥ ೨೨ನೇ ಮಾಹೆ ಜೂನ ಸನ್ನ ೧೮೭೩ ಇಸ್ವಿ.	ದತ್ತೋ ನಾರಾಯಣ ಕುರಬೇಟಕರ ಸ್ಕೂಲ. ಮಾಸ್ತರ.

ಮ. ರಾ. ರಾ. ದಕ್ಷಿಣಭಾಗದ ಶಾಲಾಪತ್ರಿಕೆಯ ಎಡಿಟರ ಮುಕ್ಕಾಮ ಬೆಳಗಾವ ಇವರ ಸಂನಿಧಿಗೆ—

ಕಸಬಾ ಗುತ್ತಲ ತಾಲೂಕ ಕರ್ಜಗಿ ಜಿಲ್ಲಾ ಧಾರವಾಡ ಇಲ್ಲಿಯ ಸರಕಾರ ಸಾಲಿ ಹೆಡ್ಡ ಮಾಸ್ತರ ನಾನು ಬರಕೊಂಡ ವಿಜ್ಞಾಪನಃ ಏನಂದರೆ ಕೆಳಗೆ ಬರೆದ ನಾಲ್ಕಾರು ಪಂಕ್ತಿಗಳನ್ನು ತಮ್ಮ ಕರದಲ್ಲಿ ಹುಟ್ಟುವ ಶಾಲಾಪತ್ರಿಕೆಯಲ್ಲಿ ಛಾಪಿಸುವಿರೆಂದು ಇಚ್ಛಿಸುತ್ತೇನೆ. ತಾರೀಖು ೯ನೇ ಮಾಹೆ ಜುಲಾಯಿ ಸನ್ನ ೧೮೭೩ ಇಸವಿ ದಿವಸಾ ಈ ಶಾಲೆಗೆ ಇಲ್ಲಿಯ ಕಮಾಟದಾರರು ನೀಲಪ್ಪಾಗೌಡರ ವ ಜೀವಪ್ಪಾ ಕುಲಕರ್ಣಿ ವ ಸ್ವಾಮಿರಾವ ಕಟ್ಟಿ ಇನ್ನು ಕೆಲವು ವಿದ್ವಜ್ಜನರು ಸಾವಕಾರರು ಹಾಗು ರೈತಜನರು ಈ ಯಾವತ್ತರು ಬಂದು ವಿದ್ಯಾರ್ಥಿಗಳ ಪರೀಕ್ಷಾ ತೆಗೆದುಕೊಂಡು ಪರೀಕ್ಷೆಯಲ್ಲಿ ಪಾಸಾದ ಪ್ರಕಾರಕ್ಕೆ ಇನಾಮುಗಳನ್ನು ಕೊಟ್ಟು ವಿದ್ಯಾರ್ಥಿಗಳ ಮನಸ್ಸು ಸಂತೋಷ ಪಡಿಸಿ ಹೋಗಿರುತ್ತಾರೆ. ಹಿಂದಕ್ಕೆ ತಾರೀಖು ೮ನೇ ಮಾಹೆ ಮಾರ್ಚ ಸನ್ನ ೧೮೭೩ ಇಸವಿ ದಿವಸಾ ಬಂದು ಕೆಲವು ಹುಡುಗರಿಗೆ ಈಗಿನಂತೆ ಇನಾಮುಗಳನ್ನು ಕೊಟ್ಟು ಹೋಗಿದ್ದರು. ಇವರ ಅಪೇಕ್ಷೆಯು ವಿದ್ಯಾವೃದ್ಧಿಯ ಕಡೆಗೆ ಇದ್ದು ವಿದ್ಯಾರ್ಥಿಗಳಿಗೆ ಉತ್ತೇಜನವನ್ನು ಕೊಡುವಲ್ಲಿ ಆಶೆಯುಳ್ಳವರಾಗಿದ್ದಾರೆ. ಕಾರಣ ದರತಿಂಗಳಿಗೆ ತಮ್ಮ ಕಡೆಯಿಂದ ಹೊರಡುವ ಪತ್ರಿಕೆಯಲ್ಲಿ ಛಾಪಿಸುವಿರಿ ಎಂದು ಬಹಳ ಅಪೇಕ್ಷೆಯಿಂದ ಬರಕೊಂಡಿದ್ದೇನೆ. ತಾರೀಖು ೯ನೇ ಮಾಹೆ ಜುಲಾಯಿ ಸನ್ನ ೧೮೭೩ ಇಸವಿ.

ಕೇಸೋ ಮಲ್ಲಗಿರಿ ಕುಲಕರ್ಣಿ ಸ್ಕೂಲ ಮಾಸ್ತರ ಗುತ್ತಲ.

ಮಹಾರಾಜ ರಾ॥ ರಾ॥ ಕನ್ನಡ ಮತಪತ್ರಕರ್ತರಿಗೆ.

ಮಿಂ ಮಿಂ ಈ ಕೆಳಗೆ ಬರೆದ ನಾಲ್ಕು ಓಳಿಗಳಿಗೆ ತಮ್ಮ ಪರಮಪಾವನವಾದ ಪತ್ರಕದಲ್ಲಿ ಸ್ಥಳಕೊಟ್ಟು ಪರಮಾನಂದಪಡಿಸುವಿರೆಂದು ಕೋರುತ್ತೇನೆ.

ನಾನು ಮಳೆಯವಿಷಯಕ್ಕೆ ಮಾರ್ಚತಿಂಗಳಲ್ಲಿ ಬರೆದದ್ದಕ್ಕೆ—ಚಿದಂಬರ ರುದ್ರೋ ಮಾಸ್ತರ ಹುಬ್ಬಳ್ಳಿ ಇವರು ಏನಕೆ ಪ್ರಶ್ನೆ ಮಾಡಿರುತ್ತಾರೆ. ಅದಕ್ಕೆ ಉತ್ತರ—ಹಬೆಯ ಕೂಡ ಪ್ರಾಣಿಗಳು ಹ್ಯಾಗೆ ಹೋಗುತ್ತವೆ; ಅಂಬುವ ಮಾತಿನ ಸಂಶಯಕ್ಕೆ, ಇನ್ನೊಂದೆರಡು ಓಳಿ ಮುಂದಕ್ಕೆ ಓದಿದ್ದರೆ ಸಂಶಯ ದೂರಾಗುತ್ತಿತ್ತು. ಮತ್ತು ಮೀನಗಳು ಮಳೆಯ ಕೂಡ ಬೀಳುವದಿಲ್ಲ ಅನ್ನುತ್ತಾರೆ. ಈ ಮಾತು ಚನ್ನಾಗಿ ಅವರು ಶೋಧಮಾಡಲಿಲ್ಲ. ಇದರ ಹೊರ್ತು ಮಿಕ್ಕ ಸಣ್ಣ ಜೀವರಾಸಿಗಳಾದರೂ ಬೀಳುತ್ತವೆ. ಆದರೂ ಅವು ಬಹಳವೇಳೆ ಭೂಮಿಯ ಮೇಲೆ ಬದುಕಲರಿಯವು. ಆಕಾರಣ ಅವರಿಗೆ ಬೀಳುವದಿಲ್ಲವೆಂಬಂತೆ ತೋರಿರಬಹುದು. ಕ್ಷಾರವು ಹಬೆಯಕೂಡ ಹೋಗಲಾರದು. ಯಾಕೆಂದರೆ, ನೀರು ಹಬೆಯರೂಪ ಹೊಂದಿದ ಮೇಲೆ ಕ್ಷಾರವು ಬುಡಕ್ಕೆ ಉಳಿಯುತ್ತದಲ್ಲದೆ, ಹಬೆಯಕೂಡ ಮಿಳಿತವಾಗಲಾರದು. ಉಪ್ಪು ನೀರಿನ ಹೊರ್ತು ಬೇರೆ ಅಲ್ಲ; ಈ ಯಾವತ್ತು ಮಾತಿನವಿಷಯಕ್ಕೆ ಇನ್ನೂ ಚನ್ನಾಗಿ ವಿಚಾರಮಾಡಿದರೆ ಸಂಶಯ ತಾನೇ ದೂರಾದೀತು. ಇನ್ನು ಹೆಚ್ಚಿಗೆ ಬರೆಯುವ ಅಗತ್ಯ ತೋರುವದಿಲ್ಲ.

ಸೂರ್ಯನಮಾಲಾ.

ಆಕಾಶವೆಂಬ ಈ ಅಮರ್ಯಾದೆಯುಳ್ಳ ಬೈಲಿನಲ್ಲಿ ದೇ

ವರು, ಅನೇಕ ಸ್ವಪ್ರಕಾಶ ಮತ್ತು ಪರಪ್ರಕಾಶ ವಸ್ತುಗಳನ್ನು ಉಂಟು ಮಾಡಿದ್ದಾನೆ. ಆ ಸ್ವಪ್ರಕಾಶವುಳ್ಳ ವಸ್ತುಗಳಲ್ಲಿ ಈ ಸೂರ್ಯನು (ನಮಗೆ ಪ್ರಕಾಶಮಯವಾಗಿ ತೋರುವ) ಒಬ್ಬನು. ಸೂರ್ಯನ ಸುತ್ತ ಅನೇಕ ಪರಪ್ರಕಾಶವುಳ್ಳ ಗ್ರಹಗಳು ದೀರ್ಘವರ್ತುಲದಿಂದ ತಿರುಗುತ್ತವೆ. ಈ ಬೇರೆ ಬೇರೆ ಗ್ರಹಗಳ ಅಂತರವು ಪೃಥ್ವಿಯಿಂದ ಎಷ್ಟು ದೂರವೆಂಬದು ತಿಳಿದರೆ ಸೂರ್ಯನಿಂದ ಎಷ್ಟು ಅಂತರದ ಮೇಲೆ ತಿರುಗುತ್ತವೆಂಬುವದು ಗಣಿತದಿಂದ ತಿಳಿಯುತ್ತದೆ. ಸೂರ್ಯನಿಂದ ಮೊದಲನೇ ವರ್ತುಲದಲ್ಲಿ ೩೭೦೦೦೦೦೦ ಮೈಲು ಅಂತರದ ಮೇಲೆ ಬುಧವೆಂಬ ಗ್ರಹ ತಿರುಗುತ್ತದೆ. ಇದು ಸೂರ್ಯನ ಸುತ್ತ ಒಂದು ಪ್ರದಕ್ಷಿಣ ಮಾಡಬೇಕಾದರೆ ೮೮ ದಿವಸಗಳು ಬೇಕಾಗುತ್ತವೆ. ಬುಧನ ಆಚೆಯ ವರ್ತುಲದಲ್ಲಿ ಶುಕ್ರನು ೬೮೦೦೦೦೦೦ ಮೈಲು ಅಂತರದ ಮೇಲೆ ತಿರುಗುತ್ತಿದ್ದು ೨೨೫ ದಿವಸಗಳಲ್ಲಿ ಒಂದು ಪ್ರದಕ್ಷಿಣ ಆಗುತ್ತದೆ. ಅಲ್ಲಿಂದ ಆಚೆಯಕಡೆಯಲ್ಲಿ ಅಂದರೆ ಮೂರನೇ ವರ್ತುಲದಲ್ಲಿ ಪೃಥ್ವಿ ೯೫೦೦೦೦೦೦ ಮೈಲುಗಳ ಮೇಲೆ ಸುತ್ತ ಹಾಕುತ್ತಿದ್ದು ೩೬೫¼ ದಿವಸಗಳಲ್ಲಿ ಒಂದು ಪ್ರದಕ್ಷಿಣ ಆಗುತ್ತದೆ; ಪೃಥ್ವಿಯ ಸುತ್ತ ತಿರುಗುವ ಉಪಗ್ರಹ (ಚಂದ್ರ) ಒಂದುಂಟು. ಪತ್ರ ವಿಸ್ತಾರವಾದ ಕ್ಷಮಾ ಇರಬೇಕು. ಮುಂದಕ್ಕೆ ಸಾಗುವದು.

ತಾ॥ ೩೦ ಜುಲಾಯಿ ೧೮೭೩ ಇ॥ — ಮಲ್ಲಪ್ಪಾ ಕೆಂಚಪ್ಪಾ ಮಾಸ್ತರ ಪ್ರಾಣಶೀಕಟ್ಟಿ.

ಮಹಾರಾಜ ರಾ॥ ರಾ॥ ರಾವಸಾಹೇಬ ಕನ್ನಡ ಮ

ಪತ್ರಿಕರ್ತರ ಚರಣಸನ್ನಿಧಿಗೆ—

ಸೇವಕನ ಬಿನ್ನಃ ತಾರೀಖು ೧೦ ಮಾಹೆಜುಲೈ ಸನ್ ೧೮೭೩ ಇಸ್ವಿ ನಾನು ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಅಂದವಾದ ಪತ್ರಿಕೆಯಲ್ಲಿ ಮುದ್ರಿಸಬೇಕೆಂದು ಕೋರುತ್ತೇನೆ—

$$೪ಷ^{೪}-೩೨ಷ^{೨}+ಷ^{೨}\left(೩\frac{೨}{೧೧}\right)+೫ಷ+(\sqrt{೫}+೧)\times(೧-\sqrt{೫})=೮೯\frac{೧}{೨}$$

$$೩ಷ^{೨}+ಷ^{೪}+೩ಷ^{೨}\{(\sqrt{೩}+\sqrt{೫})(\sqrt{೩}-\sqrt{೫})+೩\}=೦$$

ಇವೆರಡರಲ್ಲಿ ಷದ ಕಿಮತ್ತು ತೆಗೆಯಬೇಕು.

ಈ ಉದಾಹರಣಗಳು ನಾನು ಗಣಿತ ಮಾಡುತ್ತಿರಲಾಗಿ ಬಹಳ ಕಠಿಣ ಹೊರಟದ್ದರಿಂದ ಅದರ ನಿರಾಕರಣ ಮಾಡುವ ಮತಿಯು ನನಗೆ ಸಾಲದು. ಆದರೆ ನಮ್ಮ ಗುರುಗಳಾದ ವಿದ್ವಾನ್ ಮಾಸ್ತರರಿಗೆ ಕರದ್ವಯ ಮುಗಿದು ಬೇಡುತ್ತೇನಲ್ಲಾ ದಯಮಾಡಿ ನನ್ನ ಕೋರಿಕೆಯನ್ನು ನೆರವೇರಿಸುವರೆಂದು ಕಾಂಕ್ಷೆ ತಾಳಿದ್ದೇನೆ. ಇಂತಿ ಬಿನ್ನಃ

ಸಹಿ ದುಂಡಪ್ಪಾ ಬಿನ್ ಮಲ್ಲಪ್ಪಾ ಬುರಜೆ ವಿದ್ಯಾರ್ಥಿ ಮೋಜೆ ಭೋಜ ತಾ॥ ಚಿಕ್ಕೋಡಿ ಜಿ. ಬೆ.

ಶ್ರೀಮಂತ ರಾಜಮಾನ್ಯರಾಜಶ್ರೀ ಕಂನಡ ಮಠಪತ್ರಿಕೆ ಕರ್ತರಿಗೆ—

ವಿನಂತಿ ವಿಶೇಷ- ತಮ್ಮ ಕರದಲ್ಲುದ್ಭವಿಸುವಂಥ ಅಂದವಾದ ಪತ್ರಿಕೆಯಲ್ಲಿ ಈ ಕೆಳಗೆ ಬರೆದಿರುವ ಲೆಖ್ಖವನ್ನು ಮುದ್ರಿಸಿ ಎನ್ನ ಕಿಂಚಿನ್ಮನೋರಥವೆಂನು ಪೂರ್ಣಗೊಳಿಸುವಿರೆಂ

ಬುವ ಮಹತ್ಕಾಂಕ್ಷೆಯನ್ನು ವಹಿಸಿದ್ದೇನೆ.

ಉದಾಹರಣೆಯು

ಒಂದು ಕುದುರೆಯು ಮೊದಲನೇ ದಿವಸ ೮ ಹರದಾರಿ ಎರಡನೇ ದಿವಸ ೧೬ ಹರದಾರಿ ಮೂರನೇ ದಿವಸ ೩೨ ಹರದಾರಿ ಈ ಪ್ರಕಾರವಾಗಿ ನಡಿಯುತ್ತದೆ. ಮತ್ತು ಅದರ ಮರಿಯು ತಾಯಿಯು ಹೊರಟ ೬ ನೇ ದಿವಸ ಹೊರಟು ತನ್ನ ತಾಯಿಯನ್ನು ಕೂಡಿಕೊಳ್ಳ ಮನಸುಳ್ಳದ್ದಾಗಿತ್ತು. ಅದು ನಡಿಯುವ ಕ್ರಮವೆಂತೆಂದೊಡೆ— ಮೊದಲನೇ ದಿವಸ ೩ ಹರದಾರಿ ಎರಡನೇ ದಿವಸ ೯ ಮೂರನೇ ದಿವಸ ೨೭ ಈ ರೀತಿಯಿಂದ ನಡದರೆ ಅದರ ಇಚ್ಛಾಪೂರ್ಣ ಆಗುವದಕ್ಕೆ (ತಾಯಿಯನ್ನು ಕೂಡಿಕೊಳ್ಳುವದಕ್ಕೆ) ಎಷ್ಟು ದಿವಸಗಳು ಹತ್ತುವವು? ಇದರುತ್ತರನ್ನು ಯಾರಾದರೂ ಇದೇ ಪತ್ರದ್ವಾರದಿಂದ ರೀತಿಸಹಿತ ತಿಳಿಸುವರೆಂದು ವಿನಯಪೂರ್ವಕ ಬೇಡಿಕೊಳ್ಳುತ್ತೇನೆ. ಇಂತಿ ಕೃತಾನೇಕ ಬಿನ್ನಃ.

ತಾರೀಖು ೬ ನೇ ಅಗಸ್ಟ ೧೮೭೩ ಇಸ್ವಿ. ಮುಕ್ಕಾಮ ಮೋದಗಿ ತಾಲೂಕ ಬೆಳಗಾವ.

ರಾಮಚಂದ್ರ ದೇವರಾಚಾರ್ಯ ಹೊಂ ಮಾನಿಟರ ಮೋದಗಿ.

ಶಾಲಾಪತ್ರಕವು.

———000———

ಪುಸ್ತಕ ೯] [ಸಂಚಿಕೆ ೭.

ಬೆಳಗಾವಿ, ಮಾಹೆ ಅಕ್ಟೋಬರ ೧೮೭೩.

SELF HELP.

ತನಗೆ ತಾನೇ ನೆರವಾಗುವದು.

ಪೀಲನೂ, ಅವನ ಪಾಲಕಾರರೂ ಕೂಡ ನಡಿಸಿದ ವ್ಯಾಪಾರದಲ್ಲಿ ಮೊದಲಿನಿಂದ ಕಡೆತನಕ ಕುಂದದೆ ಲಾಭವಾಗುತ್ತ ಹೋಯಿತು. ಸರ್ ರಾಬರ್ಟ ಪೀಲನು ಆ ವ್ಯಾಪಾರದ ಮುಖ್ಯ ಸೂತ್ರಧಾರಿಯಾಗಿದ್ದನು. ಇವನಲ್ಲಿ ವ್ಯವಹಾರ ಚಾತುರ್ಯವಿದ್ದಂತೆ ಬುದ್ಧಿಕೌಶಲ್ಯವೂ, ಶರೀರ ಸಾಮರ್ಥ್ಯವೂ, ಉದ್ಯೋಗದ ಸ್ವಭಾವವೂ, ಯೆಂಬ ಗುಣಗಳಿದ್ದವು. ಈ ಗುಣಗಳು ಆರಂಭದಲ್ಲಿ ನೂಲುವ ಕಾರಖಾನೆಗಳನ್ನು ನಡಿಸುತ್ತಿದ್ದ ಯೆಷ್ಟೋ ಜನರಲ್ಲಿ ಬಹು ಕೊರತೆಯಾಗಿದ್ದವು. ಇವನ ಮನಸ್ಸೂ, ಶರೀರವೂ ಕೇವಲ ಕಬ್ಬಿಣದವೇ ಆಗಿದ್ದವು; ಆದದರಿಂದ ಇವನು ವಿಶ್ರಾಂತಿಯಿಲ್ಲದೆ ಶ್ರಮ ಮಾಡುತ್ತಿದ್ದನು. ತಾತ್ಪರ್ಯವೇನಂದರೆ, ಹತ್ತಿಯ ನೂಲನ್ನು ಮಾಡುವ ಕೆಲಸದಲ್ಲಿ ಆರ್ಕರೈಟನು ಹ್ಯಾಗೋ, ಹಾಗೆ ನೂಲಿನ ಬಟ್ಟೆಗಳಿಗೆ ಅಚ್ಚು ಹಾಕುವ ಕೆಲಸದಲ್ಲಿ ಪೀಲನಿದ್ದನು; ಇವನ ಕಾರ್ಯಸಿದ್ಧಿಯಾದರೂ ಅವನಂತೆಯೇ ದೊಡ್ಡದಾಗಿತ್ತು. ಇವನ ಕಾರಖಾನೆಯಲ್ಲಿ ಹುಟ್ಟುವ ಅಚ್ಚಿನ ವಸ್ತ್ರಗಳು ಮೇಲಾದವು ಇರುತ್ತಿದ್ದ ಕಾರಣ, ಮಾರಾ

ಟಿದ ಜನರಲ್ಲಿ ಇವನ ಕಾರಖಾನೆಗೆ ಮಾನ ಹೆಚ್ಚಾಯಿತು; ಲಾಂಕಾಶಾಯರದಲ್ಲಂತು ಇವನ ಕಾರಖಾನೆಯೇ ಯೆಲ್ಲಕ್ಕೂ ಹೆಚ್ಚಿನದೆಂದು ಜನರು ತಿಳಿದುಕೊಳ್ಳುತ್ತಿದ್ದರು. ಈ ಕಾರಖಾನೆಯಿಂದ ಬರೀಯೆಂಬ ಗ್ರಾಮಕ್ಕೆ ಬಹು ಲಾಭವುಂಟಾದದ್ದಲ್ಲದೆ ಅದರ ನೆರೆಯಲ್ಲಿ ಅರ್ವೆಲ್ಲ, ರೋಚ, ಯೆಂಬ ಸ್ಥಳಗಳಲ್ಲಿ ಸಹ ಈ ಸಂಘದವರು ಹೊಸ ಕಾರಖಾನೆಗಳನ್ನು ಸ್ಥಾಪಿಸಿದರು. ಜನರು ಈ ಸಂಘದವರನ್ನು ವಿಶೇಷವಾಗಿ ಹೊಗಳುವದೇನಂದರೆ, ಇವರು ತಾವು ಹುಟ್ಟಿಸುವ ಸರಕುಗಳು ಬೆಲೆಯುಳ್ಳವುಗಳು ಆಗಬೇಕೆಂದು ಯತ್ನಪಡುವಂತೆಯೇ ತಮ್ಮ ಕಾರಖಾನೆಗಳೊಳಗಿನ ಕೂಲಿಕಾರರು ಹೆಚ್ಚು ಸುಖಿಗಳಾಗುವಂತೆ ಅವರಿಗೆ ಹಿತಪಡಿಸುವದಕ್ಕೋಸ್ಕರವಾಗಿ ಯತ್ನಪಡುತ್ತಿದ್ದರು; ತಮಗೆ ಬಹು ಸ್ವಲ್ಪ ಲಾಭವಾಗುವ ಕಾಲದಲ್ಲಿ ಸಹ ಇವರು ಕೂಲಿಕಾರರಿಗೆ ಚನ್ನಾಗಿ ಲಾಭವಾಗುವಂಥ ಕೆಲಸಗಳನ್ನು ಕೈಲಾದಮಟ್ಟಿಗೂ ಹೇಳುತ್ತಿದ್ದರು.

ಸರ್ ರಾಬರ್ಟ್‌ಪೀಲನು ಹೊಸ ಸುಧಾರಣೆಗಳಿಗೂ, ಹೊಸ ಶೋಧಗಳಿಗೂ ಮಾನಕೊಡುವದಕ್ಕೆ ಯೆಷ್ಟು ಮಾತ್ರವೂ ಹಿಂದುಮುಂದಾಗುತ್ತಿದ್ದಿಲ್ಲ. ಇದರ ಉದಾಹರಣಾರ್ಥವಾಗಿ ಇಲ್ಲಿ ಒಂದು ಸಂಗತಿಯನ್ನು ಬರೆಯುಬಹುದು. ಒಬ್ಬ ಲಂಡನ್‌ಪಟ್ಟಣಕ್ಕೆ ಹೋಗುವ ಮಾರ್ಗಸ್ಥನು ಒಂದು ವಿಧದ ಹಿಟ್ಟನ್ನು ಹುಡುಕಿತೆಗಿದಿದ್ದನು. ಅದನ್ನು ಚನ್ನಾಗಿ ನಾದಿ, ಅಚ್ಚು ಹಾಕತಕ್ಕ ವಸ್ತ್ರಗಳ ಮೇಲೆ ಅಚ್ಚು ಕೂಡದಂಥ ಸ್ಥಳದಲ್ಲೆಲ್ಲ ತೆಳುವಾಗಿ ಸಾರಿಸಿದರೆ, ಅಚ್ಚಿನ ಕೆಲಸವು ಬಹು ಸರಸಾಗಿ ನಡೆಯುವಹಾಗಿತ್ತು. ಪೀಲನು ಈ ಸಂ

ಗತಿಯನ್ನು ತತ್ಕಾಲವೇ ಗ್ರಹಿಸಿ, ಆ ಮನುಷ್ಯನಿಗೆ ಸ್ವಲ್ಪ
ಹಣ ಕೊಟ್ಟು ಅವನ ಹಿಟ್ಟನ್ನು ಕೊಂಡುಕೊಂಡನು. ಆ
ದರೆ ಅದನ್ನು ಉಪಯೋಗಿಸುವ ಕ್ರಮವು ಕೆಲಸಕ್ಕೆ ತ
ಕ್ಕಂತೆ ಸುಧಾರಿಸಬೇಕಾದರೆ, ಷೀಲನು ಒಂದೆರಡು ವರ್ಷ
ಗಳವರೆಗೆ ವಿಶೇಷ ಶ್ರಮಪಡಬೇಕಾಯಿತು. ಆದಾಗ್ಯೂ,
ಅದನ್ನು ಸಾರಿಸಿದನಂತರ ಹೊಡೆದ ಅಚ್ಚುಗಳು ಕೇವಲ ರೇ
ಖಿಸಿದಂತೆ ಮಾಡಹತ್ತಿದಕಾರಣ, ಅದರಿಂದ ಉಂಟಾದ ಕರ
ಳೆಯ ವಸ್ತ್ರಗಳು ಅತಿಸುಂದರವಾಗಹತ್ತಿದವು. ಆದದ
ರಿಂದ ಆ ದೇಶದಲ್ಲೆಲ್ಲ ಷರೀ ಗ್ರಾಮದ ಕಾರಖಾನೆಯು ಅ
ಚ್ಚು ಹಾಕುವ ಕಾರಖಾನೆಗಳು ಮೇಲಾದದ್ದೆಂದು ಹೆಸರಾಯಿ
ತು. ಈ ಕಾರಖಾನೆಯಂತೆಯೇ ಆವೇಶದಿಂದ ಸಾಗಿಸಲ್ಪ
ಟ್ಟ ಬೇರೆ ಕಾರಖಾನೆಗಳು ಷೀಲನ ಮನೆತನದವರಿಂದಲೇ
ಲಾಂಕಾಶಾಯರದೊಳಗೆ ಬರ್ನಲೀ, ಫಾಕ್ಸಹಿಲ್ಲ, ಅಲ್ತಾಂ,
ಯೆಂಬ ಸ್ಥಳಗಳಲ್ಲಿಯೂ, ಯಾರ್ಕಶಾಯರದೊಳಗೆ ಸಾ
ಲ್ಲೀ, ಅಬೀ ಯೆಂಬ ಸ್ಥಳಗಳಲ್ಲಿಯೂ; ಸ್ಟಾಫರ್ಡಶಾಯ
ರದಲ್ಲಿ ಬರ್ಟನ್ ಆನ್‌ಟ್ರೆಂತ ಯೆಂಬ ಸ್ಥಳದಲ್ಲಿಯೂ,
ಸ್ಥಾಪಿಸಲ್ಪಟ್ಟಿದ್ದವು. ಈ ಬೇರೆ ಬೇರೆ ಕಾರಖಾನೆಗಳನ್ನು
ನಡಿಸಿದವರಿಗೆ ಹೇರಳ ಲಾಭವಾದದ್ದಲ್ಲದೆ, ಇವುಗಳಿಂದ ಅ
ರಳೆಯ ವ್ಯಾಪಾರಕ್ಕೆ ಉತ್ತೇಜನವುಂಟಾಗಿ, ಲಾಂಕಾಶಾ
ಯರದಲ್ಲಿ ಅತಿ ಚತುರರಾದ ಅಚ್ಚು ಹಾಕುವವರೂ, ಕೈಗಾ
ರಿಕೆಯವರೂ ಉಂಟಾದರು.

ಬೇರೆ ಹೆಸರಾದ ಕಲಾಕೌಶಲ್ಯ ಸ್ಥಾಪಕರಲ್ಲಿ ಕಾಲುಚೀ
ಲಗಳ ಯಂತ್ರವನ್ನು ಹುಟ್ಟಿಸಿದರೆವರೆಂಡ ವುಯಿಲಿಯಂ
ಲೀ ಯೆಂಬವನನ್ನೂ, ಜರಮಾಡುವ ಯಂತ್ರವನ್ನು ಹುಟ್ಟಿ

ಸಿದ ಜಾನಹೀಥಕೋಟ್ ಯೆಂಬುವನನ್ನೂ ವರ್ಣಿಸತಕ್ಕದ್ದು. ಇವರಲ್ಲಿ ಯಂತ್ರಗಳನ್ನು ರಚಿಸುವ ಚಾತುರ್ಯವೂ, ದೃಢನಿಶ್ಚಯವೆಂಬ ಸದ್ಗುಣವೂ ತುಂಬಾ ವಾಸಿಸುತ್ತಿದ್ದವು. ಇವರ ಶ್ರಮದಿಂದ ನಾಟಿಂಗಂ ಶಾಯರದಲ್ಲಿಯೂ, ಅದರ ನೆರೆಯಲ್ಲಿಯೂ ಇರುವ ಜನರಿಗೆ ಬಹು ಲಾಭಕರವಾದ ಕೆಲಸಗಳು ಉಂಟಾಗಿವೆ. ಕಾಲುಚೀಲದ ಯಂತ್ರವು ಹ್ಯಾಗೆ ಉಂಟಾಯಿತೆಂಬುದರ ಬಗ್ಗೆ ಈಗ ಜನರು ಹೇಳುವ ಸಂಗತಿಗಳು ಬಹು ತೊಂದರೆಯುಳ್ಳವುಗಳುಂಟು; ಅವುಗಳಲ್ಲಿ ಯೆಷ್ಟೋ ಒಂದಕ್ಕೊಂದು ವಿರುದ್ಧವಾಗಿ ಕಾಣುತ್ತವೆ. ಆದಾಗ್ಯೂ ಈ ಯಂತ್ರವನ್ನು ಮೊದಲು ಮಾಡಿದವನು ಯಾವನೆಂಬುದರ ಬಗ್ಗೆ ಸಂಶಯವೇನು ಇಲ್ಲ. ವುಯಿಲಿಯಂಲೀ ಯೆಂಬುವನೇ ಇದನ್ನು ಉಂಟುಮಾಡಿದನು. ಇವನು ನಾಟಿಂಗಂ ಪಟ್ಟಣದಿಂದ ಸುಮಾರು ಯೇಳು ಮೈಲುಗಳಮೇಲೆ ಇರುವ ವುಡ್ಬರೋಯೆಂಬ ಗ್ರಾಮದಲ್ಲಿ ಸನ್ನ ೧೫೬೩ ನೇ ವರ್ಷ ಹುಟ್ಟಿದನು. ಇತನಿಗೆ ಸ್ವಲ್ಪ ಇನಾಮು ಭೂಮಿಯಿತ್ತೆಂದು ಕೆಲವರು ಹೇಳುತ್ತಾರೆ; ಆದರೆ ಬೇರೆ ಕೆಲಜನರು ಹೇಳುವದೇನಂದರೆ, ಇವನು ಒಬ್ಬ ಬಡವನಾದ ವಿದ್ವಾಂಸನಿದ್ದು, ಚಿಕ್ಕಂದಿನಿಂದ ಬಡತನದಲ್ಲಿ ಬಹಳ ಶ್ರಮಪಟ್ಟನು. ಇವನು ಕೆಂಬ್ರಿಜ್ಜ ಪಟ್ಟಣದ ಖ್ರಾಯಿಸ್ತಕಾಲೇಜ ಯೆಂಬ ವಿದ್ಯಾಮಂದಿರದಲ್ಲಿ ಅಭ್ಯಾಸಮಾಡಿ, ಸನ್ನ ೧೫೭೯ ನೇ ವರ್ಷ ಅಲ್ಲಿ ವಿದ್ಯಾರ್ಥಿಗಳಿಗೆ ದೊರಕತಕ್ಕ ಸಂಬಳವನ್ನು ಸಂಪಾದಿಸಿದನು. ಆ ಮೇಲೆ ತೀವ್ರವೇ ಸೇಂಟ ಜಾನ್ಸ ಯೆಂಬ ಮಹಾವಿದ್ಯಾಲಯಕ್ಕೆ ಹೋಗಿ ಸನ್ನ ೧೫೮೨-೩ ನೇ ವರ್ಷ ಬೀ., ಏ, ಯೆಂಬ ಪದವಿ

ಯನ್ನು ಸಂಪಾದಿಸಿದನು. ತರುವಾಯ ಸನ್ನ ೧೫೮೬
ನೇ ವರ್ಷ ಇವನು ಎಮ್, ಏ, ಯೆಂಬ ಪದವಿಯನ್ನು
ಹೊಂದಿದನೆಂದು ಜನರ ನಂಬಿಕೆಯುಂಟು. ಆದರೆ ಈ ವಿ
ಷಯವಾಗಿ ಆ ಮಹಾ ವಿದ್ಯಾಲಯದ ಲೇಖಗಳಲ್ಲಿ ತೊಂ
ದರ ಯುಂಟೆಂದು ತೋರುತ್ತದೆ. ಇವನು ಆ ಮಹಾವಿ
ದ್ಯಾಲಯದ ಕಟ್ಟಳೆಗಳಿಗೆ ವಿರುದ್ಧವಾಗುವ ಹಾಗೆ ಲಗ್ನ
ಮಾಡಿಕೊಂಡದ್ದರಿಂದ ಇವನನ್ನು ಅಲ್ಲಿಂದ ಹೊರಗೆ ಹಾಕಿ
ದರೆಂಬ ಜನವಾರ್ತೆಯು ಸುಳ್ಳು. ಯಾಕಂದರೆ ಅಲ್ಲಿ
ಇವನು ಫೆಲ್ಲೊ ಯೆಂಬ ಪದವಿಯುಳ್ಳವನು ಯೆಂದು ಆ
ಗಿದಿಲ್ಲ. ಆದದರಿಂದ ಈ ವಿಧದ ಕೃತ್ಯದಿಂದ ಇವನಿಗೆ ಈ
ಅವಮಾನ ವಾಯಿತೆಂದು ನೆನಸುವ ಕಾರಣವಿಲ್ಲ.

ವೃಯಿಲಿಯಂಲೀಯು ಕಾಲುಚೀಲದ ಯಂತ್ರವನ್ನು ಹು
ಟ್ಟಿಸಿದಾಗ ನಾಟಿಂಗ ಪಟ್ಟಣದಹತ್ತರ ಕಾಲ್ವರ್ಟನ್ ಯೆಂ
ಬ ಗ್ರಾಮದಲ್ಲಿ ಜನರಿಗೆ ಧರ್ಮೋಪದೇಶ ಮಾಡುವ ಕೆಲ
ಸ ನಡಿಸುತ್ತಿದ್ದನು. ಇವನು ಒಬ್ಬ ಸ್ತ್ರೀಯಳಲ್ಲಿ ಪ್ರೀ
ತಿಯನ್ನು ಇಟ್ಟಿರಲಾಗಿ ಅದರಲ್ಲಿ ಇವನ ಆಶಾ ಭಂಗವಾದ
ಮೂಲಕವಾಗಿ ಇವನು ಈ ಯಂತ್ರವನ್ನು ಹುಟ್ಟಿಸನೆಂದು
ಕೆಲವು ಗ್ರಂಥಕರ್ತರು ಪ್ರತಿಪಾದಿಸುತ್ತಾರೆ. ಆ ವೂರಲ್ಲಿ
ಇರುವ ಒಬ್ಬ ತರುಣಸ್ತ್ರೀಯಳು ಕಾಲುಚೀಲಗಳನ್ನು ಹೆ
ಣೆಯುವ ಕೆಲಸಮಾಡುತ್ತಿದ್ದಳು. ಇವನು ಅವಳಲ್ಲಿ ತುಂ
ಬಾ ಪ್ರೀತಿಯುಳ್ಳವನಾಗಿ ಅವಳ ಭೆಟ್ಟಿಗೆ ಹೋಗುತ್ತಿರಲಾ
ಲಗಿ, ಅವಳು ಇವನ ಪ್ರೀತಿಮಾತು ಕಥೆಗಳಿಗೆ ವಿಶೇಷ ಲ
ಕ್ಷ್ಯಕೊಡದೆ ತನ್ನ ಹೆಣೆಯುವ ಕೆಲಸದಲ್ಲಿಯೂ, ಆ ಕೆಸವ
ನ್ನು ತನ್ನ ಕೈಕೆಳಗೆ ಕಲಿಯುವ ಬಾಲಿಕೆಯರಿಗೆ ಕಲಿಸುವ

ದರಲ್ಲಿಯೂ ಯಾವಾಗಲೂ ಮಗ್ನಳಾಗಿರುತ್ತಿದ್ದಳು; ಆದ ದರಿಂದ ಇವನು ತಾನು ಮಾಡುವಂತೆ ಅವಳ ಪ್ರೀತಿಯು ತನ್ನಲ್ಲಿ ಇಲ್ಲೆಂದು ನೋಡಿ, ಅವಳ ದುರ್ಲಕ್ಷದ ಮೂಲವಾಗಿ, ಕೈಯಿಂದ ಹೆಣಿಯುವ ಕೆಲಸವನ್ನು ತಿರಸ್ಕರಿಸಹತ್ತಿದನು. ಅದರಿಂದ ಅವನು ಈ ಕೆಲಸಕ್ಕೆ ಉಪಯೋಗವಾಗುವಂಥ ಒಂದು ಯಂತ್ರವನ್ನು ರಚಿಸಿ, ಕೈಯಿಂದ ಹೆಣಿಯುವ ಉದ್ಯೋಗದಲ್ಲಿ ಲಾಭವೇನು ಇಲ್ಲದಹಾಗೆ ಮಾಡುವದಕ್ಕೆ ನಿಶ್ಚೈಸಿಕೊಂಡನು. ಆ ಮೇರೆಗೆ ಈ ತನ್ನ ಕಲ್ಪನೆಯನ್ನು ಕಡೆಗಾಣಿಸುವದರಲ್ಲಿ ತನ್ನ ಹತ್ತರ ಇದ್ದದ್ದನೆಲ್ಲ ವೆಚ್ಚಮಾಡಿ ಮೂರು ವರ್ಷಗಳ ವರೆಗೆ ಯತ್ನ ನಡಿಸಿದನು. ಕಾರ್ಯಸಿದ್ಧಿಯಾಗುವಲಕ್ಷಣವು ಹೆಚ್ಚು ಹೆಚ್ಚು ವ್ಯಕ್ತವಾಗಿ ತೋರುತ್ತ ಹೋದಹಾಗೆ ಇವನು ತನ್ನ ಧರ್ಮೋಪದೇಶದ ಕೆಲಸವನ್ನು ಬಿಟ್ಟುಕೊಟ್ಟು ಯಂತ್ರದಿಂದ ಕಾಲುಚೀಲುಗಳನ್ನು ಮಾಡುವ ಉದ್ಯೋಗಕ್ಕೆ ಹತ್ತಿದನು. ಈ ಇತಿಹಾಸವನ್ನು *ಹೆನ್ಸನ್ನನೆಂಬ ಒಬ್ಬ ಗ್ರಂಥಕರ್ತನು ಕಾಲುಚೀಲುಗಳನ್ನು ಮಾಡುವ ಉದ್ಯೋಗದವನಾದ ಒಬ್ಬ ಮುದುಕನ ಹೇಳಿಕೆಯಂತೆ ಬರೆದಿದ್ಧಾನೆ. ಆ ಮುದುಕನು ಅನ್ನಳೆಂಬ ರಾಣಿಯು ಕಾಲದಲ್ಲಿ ನಾಟಿಂಗಂ ಪಟ್ಟಣದಲ್ಲಿ ವೈದ್ಯಕ ವಿದ್ಯವನ್ನು ಕಲಿಯುತ್ತಿದ್ದು, ಅದೇ ಪಟ್ಟಣದಲ್ಲಿ ಕಾಲಿನ್ಸ ಆಸ್ಪಿತಲ್ ಯೆಂಬ ವೈದ್ಯಶಾಲೆಯೊಳಗೆ ತೊಂಬತ್ತೆರಡನೇ ವರ್ಷದ ವಯಸ್ಸಿನಲ್ಲಿ ತೀರಿದನು. ಡಿಯರಿಂಗ, ಬ್ಲಾಕನರ ಯೆಂಬ ಗ್ರಂಥಕರ್ತರು ಸಹ ಇದೇ ಸಂಗತಿಯನ್ನು ನೆರೆಹೊರೆಯ ಜನರು ಹೇಳುವ ಕಥೆಯು ಇದೇ ಯೆಂ

* ಯಂತ್ರದಿಂದ ಹೆಣೆಯುವದರ ಇತಿಹಾಸವು.

ನು ಬರೆದಿದ್ದಾರೆ. ಮತ್ತು ಲಂಡನ್ ಪಟ್ಟಣದ ಯಂತ್ರದಿಂದ ಹೆಣೆಯುವ ಸಂಘದವರ ಬಿರುದಿನ ಚಿಹ್ನದಿಂದಾದರೂ ಇದೇ ಸಂಗತಿಯು ನಿಜವೆಂದು ತೋರುತ್ತದೆ. ಆ ಚಿಹ್ನದಲ್ಲಿ ಒಂದು ಕಾಲುಚೀಲಗಳ ಯಂತ್ರವನ್ನು ಒಂದು ಬದಿಯಲ್ಲಿ ಒಬ್ಬ ಉಪಾಧ್ಯಾಯನೂ, ಇನ್ನೊಂದು ಬದಿಯಲ್ಲಿ ಒಬ್ಬ ಸ್ತ್ರೀಯೂ ಕೂಡಿ ಹಿಡಿದಹಾಗೆ ಚಿತ್ರ ವಿರುತ್ತದೆ.*

---

*ಆದರೆ ಈ ಮನುಷ್ಯನ ಇತಿಹಾಸವನ್ನು ಬೇರೆ ಕೆಲಜನರು ಬೇರೆ ವಿಧವಾಗಿ ಹೇಳುತ್ತಾರೆ. ಒಂದು ಸಂಗತಿಯು ಹ್ಯಾಗಂದರೆ, ಲೀಯು ಒಂದು ಹಳ್ಳಿಯೊಳಗೆ ಒಬ್ಬ ಬಾಲಿಕೆಯಲ್ಲಿ ಮನಸ್ಸನ್ನು ಇಟ್ಟಿದ್ದನು; ಅವಳು ಹೆಣೆಯುವ ಉದ್ಯೋಗದವಳಾದ ಕಾರಣ ಅವಳ ಶ್ರಮವನ್ನು ಕಡಿಮೆ ಮಾಡುವದಕ್ಕೋಸ್ಕರ ಅವನು ಕಾಲುಚೀಲಗಳನ್ನು ಮಾಡುವ ಯಂತ್ರವನ್ನು ರಚಿಸುವ ಪ್ರಯಾಸಕ್ಕೆ ಬಿದ್ದನು. ಇನ್ನೊಂದು ಸಂಗತಿಯು ಹ್ಯಾಗಂದರೆ, ಇವನು ಬಡನಾದ ಕುಟುಂಬಸ್ಥನಾದ್ದ ಕಾರಣ ಇವನಿಗೆ ಹೆಂಡತಿಯು ಹೆಣಿಕೆಯ ಕೆಲಸವನ್ನು ಮಾಡಿ, ಹೊಟ್ಟೆಯ ಉದ್ಯೋಗದಲ್ಲಿ ಇವನಿಗೆ ಸಹಾಯ ಮಾಡುತ್ತಿದ್ದಳು; ಹೀಗಿರಲಾಗಿ ಲೀಯು ತನ್ನ ಹೆಂಡತಿಯು ಹೆಣೆಯುವಾಗ ಅವಳ ಬೊಟ್ಟುಗಳನ್ನು ಲಕ್ಷ್ಯಪೂರ್ವಕವಾಗಿ ನೋಡಿ, ಅವುಗಳಂತೆ ಯಂತ್ರದಿಂದ ಕೃತಿಯನ್ನು ಮಾಡಬೇಕೆಂದು ಭಾವಿಸಿಕೊಂಡನು. ಈ ಕಥೆಯನ್ನು ಅರನ್ನ ಹಿಲ್ಲ ಯೆಂಬವನು ರಚಿಸಿ ತನ್ನ 'ಬೀಚಯೆಂಬ ಗಿಡದಯೆಣ್ಣೆಯ ಉತ್ಪತ್ತಿಯೂ ಅಭಿವೃದ್ಧಿಯೂ, (ಲಂಡನ್ ೧೭೧೫) ಯೆಂಬ ಇತಿಹಾಸಗ್ರಂಥದಲ್ಲಿ ಬರೆದಿದ್ದಾನೆ; ಆದರೆ ಇದು ನಂಬತಕ್ಕಂಥಾದಲ್ಲ. ಲೀಯು ಆಕ್ಸಫರ್ಡದ ಒಂದು ಮಹಾವಿದ್ಯಾಲಯದಲ್ಲಿರಲಾಗಿ ಒಬ್ಬ ಅಂಗಡಿ ಕಾರನ ಮಗಳನ್ನು ಲಗ್ನ ಮಾಡಿಕೊಂಡದ್ದರಿಂದ ಅವನನ್ನು ಹೊರಗೆಹಾಕಿದರೆಂದು ಸಹ ಇವನೇ ಬರೆದಿದ್ದಾನೆ. ಆದರೆ ಲೀಯು ಆಕ್ಸಫರ್ಡದಲ್ಲಿ ಯೆಂದು ವಿದ್ಯಾಭ್ಯಾಸನ್ನು ಮಾಡಲಿಲ್ಲ. ಅಲ್ಲಿ ಲಗ್ನವನ್ನು ಮಾಡಿಕೊಳ್ಳಲಿಲ್ಲ. ಈ ಗ್ರಂಥಕರ್ತನು ಕಡೆಯಲ್ಲಿ ಬರೆದದ್ದೇನಂದರೆ, "ಈ ಯಂತ್ರದ ಶೋಧದಿಂದ ಲೀಯೂ, ಅವನ ಕುಟುಂಬದವರೂ ಸುಖಿಗಳಾದರು." ಆದರೆ ದುಃಖವಾದ ಸಂಗತಿಯು ಹ್ಯಾಗಂದರೆ ಲೀಯೂ, ಈ ಶೋಧದಿಂದ ದುಃಖಕ್ಕೆ ಮಾತ್ರಗುರಿಯಾಗಿ, ಪರದೇಶದಲ್ಲಿ ದಾರಿದ್ರ್ಯದೊಳಗೆ ಮರಣ ಹೊಂದಿದನು.

Champu Ramayen and Champu Bharata with Commentaries in Canarese by M. Shantaviraya.

॥ಚಂಪೂರಾಮಾಯಣೆ ಸವ್ಯಾಖ್ಯಾನೆ ಬಾಲಕಾಂಡಃ॥

॥ಗದ್ಯ॥

ಏನಂಪ್ರಬಂಧಂ ಪ್ರಣೋಕ್ತುಂಕಸ್ಸಮರ್ಥ ಇತಿ ಚಿಂತಾಮುಪಗತವತಿವಾಲ್ಮೀಕೌ.

॥ಅನ್ವಯಃ॥

ವಾಲ್ಮೀಕೌ=ವಾಲ್ಮೀಕಿಯೆಂಬ ಮುನಿಯು।ಏನಂ=ಈ। ಪ್ರಬಂಧಂ=ರಾಮಾಯಣ ಎಂಬ ಹೆಸರುಳ್ಳ ಕಾವ್ಯವನ್ನು। ಪ್ರಯೊಕ್ತುಂ=ಪಠಿಸುವಗೋಸ್ಕರ। ಕಃ=ಯಾವಾತನು। ಸಮರ್ಥಃ ಪರಾಕ್ರಮನು। ಇತಿ=ಇಂತೆಂದು। ಚಿಂತಾಂ=ಆಲೋಚನೆಯನ್ನು। ಉಪಗತವತಿಸತಿ=ಹೊಂದುತ್ತಿರಲಾಗಿ॥

॥ಭಾವಾರ್ಥಃ॥

ರಾಮಾಯಣ ಎಂಬ ಹೆಸರುಳ್ಳ ಕಾವ್ಯವನ್ನು ರಚಿಸುವಂಥ ಪರಾಕ್ರಮಿಯಾದ ಕವಿಯು ಆವನೋ? ಎಂದು ಆ ವಾಲ್ಮೀಕಿಯು ಚಿಂತೆಯನ್ನು ಮಾಡುತ್ತಿರಲಾಗಿ।

॥ಪದ್ಯ॥

॥ರುಚಿರಾವೃತ್ತಂ॥

ಉಪಾಗತೌವಿಳಿತಪರಸ್ಪರೋಪಮೌ।
ಬಹುಶ್ರುತೌಶ್ರುತಿಮಧುರಸ್ವರಾನ್ವಿತೌ॥
ವಿಚಕ್ಷಣೌವಿವಿಧನರೇಂದ್ರಲಕ್ಷಣೌ।
ಕುಶೀಲವೌಕುಶಲವನಾಮಧಾರಿಣೌ॥೨॥

॥ಅನ್ವಯಃ॥

ಉಪಗತೌ=ಸಾನಿಧ್ಯರಾದಂಥ। ವಿಳಿತಪರಸ್ಪರೋಪಮ

ಮೌ, ವಿಳಿತ=ಯುಕ್ತವಾದ। ಪರಸ್ಪರ=ಅನ್ಯೋನ್ಯವಾ
ದ। ಉಪಮೌ=ಸಮಾನರಾದಂಥ। ಬಹುಶ್ರುತೌ=ಸಕಲ ವಿ
ದ್ಯಾವಿಶಾರದರಾದಂಥ। ಶ್ರುತಿಮಧುರಸ್ವರಾನ್ವಿತೌ, ಶ್ರುತಿ=ಕಿ
ವಿಗಳ್ಗೆ (ತಾರಾದಿಶ್ರುತಿ)। ಮಧುರ=ರುಚಿಕರವಾದ। ಸ್ವರಾ
ನ್ವಿತೌ=ಸ್ವರಯುಕ್ತರಾದಂಥ। ವಿಚಕ್ಷಣೌ=ವಿದ್ವಾಂಸರಾದಂ
ಥ। ನರೇಂದ್ರಲಕ್ಷಣೌ=ರಾಜ ಲಕ್ಷಣಗಳುಳ್ಳಂಥ। ಕುಶಲ
ವನಾಮಧಾರಿಣೌ, ಕುಶ ಎಂಬ ಲವ ಎಂಬ ನಾಮಗಳನ್ನು
ಧರಿಸಿದಂಥ। ಕುಶೀಲವೌ=ಕವಿಗಳಾದಂಥ (ಗಾಯಕರಾದಂ
ಥ).

॥ಭಾವಾರ್ಥ॥

ತನ್ನ ಸಮೀಪಕ್ಕೆ ಬರಲ್ಪಟ್ಟಂಥ ಜವಳಿ ಹುಟ್ಟಿವಿಕೆ
ಯಂತೆ ಪರಸ್ಪರ ಸಮಾನವಾದಂಥ। ಬಾಳ ಬಲ್ಲವರಾದಂಥ
ತಾರಾದಿ ಶಂತ್ರಿಯಸುನಾದದ ಹಾಂಗೆ ಕಿವಿಗಳ್ಗೆ ಇಂಪಾದ
ಧ್ವನಿಯುಳ್ಳಂಥ ಬಹು ವಿಚಾರಿಕರಾದಂಥ, ಆಜಾನುಬಾಹು
ತ್ವ ಮೊದಲಾದ ಸಕಲ ರಾಜಲಕ್ಷಣಗಳುಳ್ಳಂಥ, ಗಾಯನದ
ಲ್ಲಿಯೂ ಕವಿತ್ವದಲ್ಲಿಯೂ ಪ್ರಬಲರಾದಂಥ, ಕುಶ ಎಂಬ
ಲವ ಎಂಬ ಹೆಸರುಳ್ಳಗಳನ್ನು ಧರಿಸಿದಂಥ ಸೀತಾದೇವಿಯ
ಮಕ್ಕಳನ್ನು.

॥ಚಂಪೂಭಾರತೆಸವ್ಯಾಖ್ಯಾನೆ ಪ್ರಥಮಸ್ತಬಕಃ॥

॥ಗದ್ಯ॥

ಯಃ ಖಲುಪುರಾ ಕುರುಧರಾಧಿ ಪಾಪರಾಧಸಮೇಧಿತ
ಕ್ರೋಧೇನಹಲಧರೇಣ ನಿಜಾಯುಧೇನ ಹಠಾತ್ಕರ್ಷಣ
ಶಿಷ್ಟಯಾಸಮುತ್ಕ್ಷಿಪ್ತ ದಕ್ಷಿಣಕ್ಷಿತಿಭಾಗಾಂತದೀಯ ಭುವನ
ಭೂಷಣಾಯ ಮಾನಾಂಭೋಗವತೀ ಮಾತ್ಮನಾವಿಜೇತುಂಕಿ

ಲ ಭಾಗೀರಥೀ ಪಾಥಃಪಥೇನಾವತೀರ್ಯ ಕೃತಪ್ರಸ್ಥಾನೇವಾದ್ಯಾಪಿ ಪರಿದೃಶ್ಯತೇ ॥೮೨॥

॥ಅನ್ವಯಃ॥

ಯಾ=ಆ ಹಸ್ತಿನಾವತಿಯು। ಪುರಾ=ಪೂರ್ವದಲ್ಲಿ। ಕುರುಧರಾಧಿಪ=ಕುರುಭೂಮಿಪಾಲಕನಾದ ದುರ್ಯೋಧನನ ಅಪರಾಧದಿಂದ, ಸಮೇಧಿತ=ವೃದ್ಧಿಸಿದ, ಕ್ರೋಧೇನ=ಕೋಪವುಳ್ಳಂಥ। ಹಲಧರೇಣ=ಬಲರಾಮನಿಂದ। ನಿಜಾಯುಧೇನ=ತನ್ನ ಆಯುಧದಿಂದ। ಹಠಾತ್=ಬಲದಿಂದ। ಕರ್ಷಣಶಿಕ್ಷಯಾ=ಆಕರ್ಷಣಾತ್ಮಕವಾದ ಶಿಕ್ಷೆಯಿಂದ। ಸಮುತ್ಕ್ಷಿಪ್ತಾ=ಎತ್ತಿಸಿದ। ದಕ್ಷಿಣಕ್ಷಿತಿಭಾಗಾಂ=ದಕ್ಷಿಣ ಭೂಭಾಗವುಳ್ಳಂಥ। ತದೀಯಭೂವನಭೂಷಣಾಯಮಾನಾಂ, ತದೀಯ=ಆ ಬಲರಾಮನ ಸಂಬಂಧವಾದ, ಭುವನ=ಪಾತಾಳ ಲೋಕದ, ಭೂಷಣಾಯಮಾನಾಂ = ಅಲಂಕಾರದಂತೆ ಆಚರಿಸುವಂಥ। ಭೋಗವತೀಂ=ಭೋಗವತಿ ಎಂಬ ಹೆಸರುಳ್ಳ ಪಟ್ಟಣವನ್ನು। ಆತ್ಮನಾ=ನಿಜಸ್ವರೂಪದಿಂದ। ವಿಜೇತುಂಕಿಲ= ಜಯಿಸಲೆಂದು। ಭಾಗಿರಥೀ ಪಾಥಃಪಥೇನ, ಭಾಗಿರಥಿಯ ಜಲಪಥದಿಂದ। ಅವತೀರ್ಯ=ಇಳಿದು। ಕೃತಪ್ರಸ್ಥಾನಾ ಇವ=ಮಾಡಲ್ಪಟ್ಟ ಪ್ರಯಾಣವುಳ್ಳೋಪಾದಲ್ಲಿ। ಅದ್ಯಾಪಿ= ಈಗಾದರು। ಪರಿದೃಶ್ಯತೇ= ಚೆನ್ನಾಗಿ ಕಾಣಲ್ಪಡುತ್ತದೆ। ಖಲು = ನಿಶ್ಚಯವು.

॥ಭಾವಾರ್ಥಃ॥

ಪೂರ್ವದಲ್ಲಿ ದುರ್ಯೋಧನನ ಅಪರಾಧ ನಿಮಿತ್ತದಿಂದ ವೃದ್ಧಿಸಿದ ಕೋಪವುಳ್ಳ ಬಲರಾಮನು ತನ್ನ ಹಲಾಯುಧದಿಂದಲು ಹಠದಿಂದಲು ಆಕರ್ಷಣ ಶಿಕ್ಷೆಯಿಂದಲೂ ಎತ್ತಿದ

ದಕ್ಷಿಣಭೂಭಾಗವುಳ್ಳಂಥ, ಬಲರಾಮನ ಪೂರ್ವ ಶೇಷಾವತಾರದ ಪಾತಾಳಲೋಕಕ್ಕೆ ಅಲಂಕಾರವಾದಂಥ, ಭೋಗವತೀ ಪಟ್ಟಣವನ್ನು ಜಯಿಸುವಗ್ಕೋಸ್ಕರ ಭಾಗೀರಥಿಯು ಜಲಮಾರ್ಗದಿಂದ ಗಮಿಸುವದೋ ಏನೋ ಎಂಬ ಹಾಂಗೆ ಈಗಾದರು ಆ ಹಸ್ತಿನಾವತೀ ಪಟ್ಟಣವು ಕಣ್ಗೆ ರಮ್ಯವಾಗಿ ತೋರಿತು. .

ಶಾಂತವೀರ ರಾಜದೇವ ಕಿತ್ತೂರ ಟ್ರೇನಿಂಗಕಾಲೇಜ್.

A New Sanscrit Composition.

ಸಂಸ್ಕೃತ ಹೊಸಕವಿತೆಯು.

॥ಆರ್ಯಾವೃತ್ತಂ.॥

ವೇದಾಸ್ತುತ್ವಾ ಸ್ತುತ್ವಾ।
ತ್ವಾಂಚಸದ್ಯೈವಂದಿಕುಂಠಿತಾಸ್ತದಪಿ॥
ತವಗುಣ ಪಾರಧಿಕೂಲಂ।
ನಯಯುಃಸುಜಡೇನಕಿಂಮಯಾಶಕ್ಯಂ॥೨೪॥
ತತ್ರಾಪಿ ಭಕ್ತವಶಗೋ।
ಹರಿರಿತಿಸಂಗೀಯಸೇಮಹಾವಿಷ್ಣೋ॥
ತೇನಸ್ವೀಕುರುಬಾಲಾ।
ನಕ್ಷರವಾಚಂಪಿತೇವಮೊಲ್ಪನುತಿಮ್॥೨೫॥

॥ಶಾರ್ದೂಲ ವಿಕ್ರೀಡಿತ ವೃತ್ತಂ॥

ತ್ರಾಹಿತ್ರಾಹಿ!! ಪರಾತ್ಪರೋದ್ಧರಣವಾನ್ಮಾಂಸಾವಧಾನೋ
ಭವೇ।
ಶ್ರೀಪಾರ್ಥಸ್ಯಸ್ಮಮುಹೂರ್ತತ್ರೋ ಕ್ಷ ಶಿರಸಾಷ್ಟಾಂಗೈಪದಾಬ್ಜೇಷು
ನಮತ್॥

ಪ್ರಲ್ಹಾದೋ ವರವೈಷ್ಣವೋಽರ್ಭಕಶಿರೋರತ್ನಂ ಜಗನ್ಮೋಹನಃ।
ಶ್ರೀವಿಷ್ಣೋಃ ಪದಭಕ್ತಿಧಿಕ್ಕೃತಸಮಸ್ತಾನಂದ ಭೋಗೋತ್ಸವಃ॥೨೬॥

॥ವಿಬುಧಪ್ರಿಯಾ॥

ತಂ ಲಲಾಟತಟಸ್ಥಲೀವಿಲಸತ್ಕೃತಾಂಜಲಿಸಂಪುಟಂ।
ದಂಡವನ್ನಿಜಪಾದಯೋರ್ನತಮರ್ಭಕಂ ಮುನಮೋಹನಂ॥
ವೀಕ್ಷ್ಯ ತೋ ನೃಹರೇರ್ಮನೋ ದಯಯಾದ್ರವನ್ನನುತತ್ಕ್ಷಣೇ।
ಚಾಬ್ರವಿನ್ನ ಭಿಭೀಹಿ ಬಾಲಕ ಮಾ ಬಿಭೀಹಿ! ಶಿಶೋ ವಿಭುಃ॥೨೭॥

॥ಶಾರ್ದೂಲವಿಕ್ರೀಡಿತಮ್॥

ವತ್ಸೋತ್ತಿಷ್ಠ! ತಾತೋಽಪತೇ ಸುಗುಣ! ಮತ್ಪ್ರಾಣ ಪ್ರಿಯೋತ್ತಿಷ್ಠ! ಮೇ
ಭಕ್ತೋತ್ತಿಷ್ಠ! ಶಿಶೋ ಗೃಹಾಣ ಮದಭೀ ಹಸ್ತಂ ಸಮುತ್ತಿಷ್ಠ! ವೈ॥
ಬಾತೋತ್ತಿಷ್ಠ! ತವಾಸ್ಯಯೋರ್ಧರಣ ಕರ್ತೋರ್ತ್ತಿಷ್ಠ! ಲೋಕಪ್ರಿಯೋ।
ತ್ತಿಷ್ಠೇತ್ಯೇವ ಪುನಃ ಪುನಃ ಸಮವದತ್ಸ್ವಾಂಕೇ ತಮಾಸ್ಥಾಪಯತ್॥೨೮॥

॥ಇಂದ್ರವಜ್ರಮ್॥

ವಾಮಾಂಕಭಾಗೇ ನಿದಧಾರ ಮಾಂಪ್ರ।
ಹ್ಲಾದಾನುಗಾಂಶ್ವಾಕೃತಿರಾದ್ರಭೀತಾಂ॥
ಆಲೋಕ್ಯ ತತ್ತ್ವಂ ಪಕರಾನನೇಂದುಂ।

ರೋಷಂವಿಸೃಜ್ಯಪ್ರತುತೋಷದೇವಃ॥೧೯॥

॥ಶಾರ್ದೂಲ ವಿಕ್ರೀಡಿತವೃತ್ತಂ॥

ತಚ್ಛ್ರೀಕಾಂತಮನಃ ಪ್ರಶಾಂತಿಸಮಯೇ ಬ್ರಹ್ಮಾದಿ ದೇವಾಭಯಂ।
ತ್ಯಕ್ತ್ವಾಸಂದಧರಾನೃಸಿಂಹಸಮುಖಂಗತ್ವಾಪ್ರಣಮ್ಯಾನುವನ್॥
ಶ್ರೀ ಪ್ರಹ್ಲಾದಯುತಂಪ್ರಭುಂ ಜಯಜಯೇದ್ಘೋಷೈರ್ದದಾನಿರ್ಭಯಂ।
ಸರ್ವೇಭ್ಯಃ ಸಮದರ್ಶಯತ್ಸದಯಯಾಭಕ್ತ್ಯಾನ್ನತಿಂ ಶ್ರೀಪತಿಃ॥೨೦॥

॥ಶ್ಲೋಕ॥

ಕಲ್ಪಾಂತೇಷ್ವಪಿನಿರ್ಭೀತ್ಯಾ।
ಸ್ವಾಸಕ್ತಾಂತಾಂರಮಾಮಪಿ॥
ತ್ರಾಸಯಿತ್ವಾತ್ಮಭೂಮುಖ್ಯಾ।
ನಪಿಭಕ್ತಸ್ತ್ವವೈವರ್ಶಃ॥೨೧॥

॥ವಸಂತ ತಿಲಕಾ ವೃತ್ತಂ॥

ಕಿಂತ್ವಾಕರಣೇನಚ ಸದ್ವೈವ ದಯಾಕರೋಸೌ।
ಭಕ್ತಪ್ರಿಯೋಹರಿರಿತಿ ಪ್ರವದಂತಿಸಂತಃ॥
ಕಿಂಮಾಂನಭಾವತಿ? ನಿಜಾಂಘ್ರಿನತಂಕಿಮೇತಾಂ।
ನಾಂಗೀಕರೋತಿ? ನುತಿಪದ್ಯಮಣಿಸ್ರಜಂಮೇ॥೨೨॥
ತೇಜೋನೃಸಿಂಹಕವನಂಸ್ತವನಂಸುಪೂರ್ಣಂ।
ಲೋಕೇಶಕೇಶವಮನೋದಯ ಸೂಚಕೇನ॥
ಕೃಷ್ಣಾರ್ಪಣಂ ಭೃಗುದಿನೇಸ್ತ್ವಸಿತತೃತೀಯಾ
ಯಾಂಶ್ರೀಮುಖಾಬ್ದರಜನೀಸಮಯೇಸುಶುಕ್ರೇ॥೨೩॥

॥ಇತಿಶ್ರೀ ಲಕ್ಷ್ಮೀನೃಸಿಂಹಾದಿಕೇಶವನುತಿಪ॥
ದ್ಯಮಣಿಸ್ರಕ್ ಸಮಾಪ್ತಾ ಭವತ್॥

ತಾ. ೨೩ ಮಾಹೆ ಅಗಸ್ಟ ೧೮೭೫ ಇಸವಿ ಮುಕ್ಕಾಮು ಕಾಗಿನೆಲ್ಲಿ.	ಧೋಂಡೋ ನರಸಿಂಹ ಸ್ಕೂಲಮಾಸ್ತರ ಕಾಗಿನೆಲ್ಲಿ.

NOTICES.

ನೋಟೀಸುಗಳು.

ಸರಕಾರದವರು ಪ್ರೊಳಗಡೆಯಲ್ಲಿ ಯಾವತ್ತು ಮಾಮಲೇದಾರರಿಗೆ ಅವರು ಹಿಂದೂ ಇದ್ದರೆ "ರಾವಸಾಹೇಬ,, ಯೆಂತಲೂ, ಮುಸಲ್ಮಾನರಿದ್ದರೆ "ಖಾನ ಸಾಹೇಬ,, ಯೆಂತಲೂ ಕಿತಾಬುಗಳನ್ನು ಕೊಟ್ಟು, ಈಗ ಡಿ. ಎ. ಇನಸ್ಪೆಕ್ಟರರಿಗೆ ಸಹ ಅವೇ ಕಿತಾಬುಗಳನ್ನು ಕೊಟ್ಟಿರುತ್ತಾರೆ. ಆಹ ಕಾರಣ ಕನ್ನಡ ಶಾಲಾಪತ್ರಕದ ೨೯೮ ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟ ಹುಕುಮು ರದ್ದು ಮಾಡಲ್ಪಟ್ಟಿರುತ್ತದೆ. ಮತ್ತು ದಕ್ಷಿಣಭಾಗದೊಳಗಿನ ಸೇಕಂಡಗ್ರೇಡ ಅಂಗ್ಲೋಹ್ವರ್ನಾಕ್ಯುಲರ ಮತ್ತು ಹ್ವರ್ನಾಕ್ಯುಲರ ಶಾಲೆಗಳ ಯಾವತ್ತು ಹೆಡ ಮಾಸ್ತರರೂ, ಅಸಿಸ್ಟಂಟ ಮಾಸ್ತರರೂ, ಡಿ. ಯೆ. ಇನಸ್ಪೆಕ್ಟರರಿಗೆ, ಇಲ್ಲವೆ ಅವರ ಬಗ್ಗೆ ಬರಿಯುವಾಗ ರಾವಸಾಹೇಬ ಇಲ್ಲವೆ ಖಾನ ಸಾಹೇಬ ಯೆಂತ, ಅವರವರ ಜಾತಿಯ ಪ್ರಕಾರ ಬರಿಯಬೇಕೆಂದು, ಈಗ ನಮ್ಮ ಅಪ್ಪಣೆಯುಂಟು. ಸರಕಾರೀ ಪತ್ರವ್ಯವಹಾರಗಳಲ್ಲಿ ಡಿ. ಯೆ. ಇನಸ್ಪೆಕ್ಟರರಿಗೆ ಇದರ ಹೊರ್ತು ಬೇರೆ ಯಾವದೂ ಪದವಿಯು ಬರಿಯಕೂಡದು.

(Signed) J. F. Fleet.

ಬೆಳಗಾವ
೨೨ ಸಪಟಂಬರ
೧೮೭೨ ನೇ ಇ॥ } ಯು. ಇನಸ್ಪೆಕ್ಟರ ದಕ್ಷಿಣಭಾಗ.

ಬೆಳಗಾವಿಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ಕೆಲವು ಮಾಸ್ತರರ ಕಡೆಯಿಂದ ಬರುವ ಯಾವತ್ತು ಕಾಗದ ಪತ್ರಗಳು ಅಗದೀ ತೆಳ್ಳಾನ ಕಾಗದದ ಮೇಲೆ ಬರೆಯುವದರಿಂದ ಹಿಂದೆ ಮುಂದೆ ಒಡೆದು ಬಹಳ ಹೊಲಸಾಗಿ ಅಕ್ಷರಗಳು ಕಾಣುವದಿಲ್ಲ. ಇಂನಮೇಲೆ ಯಾವತ್ತು ಕಾಗದ ಪತ್ರಗಳು ಒಡೆಯದಂಥ ಕಾಗದದಮೇಲೆ ಬರೆದು ಕಳುಹಿಸುತ್ತಾ ಬರಬೇಕು. ತಿಳಿಯುವದು ತಾರಿಖು ೨೨ ಸಪ್ಟೆಂಬರ ೧೮೭೨ ಇಸವಿ.

(Signed) Chanbussappa B. Dharwar,
ಡೆ. ಇ. ಇನಸ್ಪೆಕ್ಟರ ಜಿಲ್ಹಾ ಧಾರವಾಡ.
ಡೆ. ಇ. ಇನಸ್ಪೆಕ್ಟರ ಜಿಲ್ಹಾ ಬೆಳಗಾವಿ.

Correspondence.

ಪತ್ರವ್ಯವಹಾರ.

ಯಾರಾದರೂ ವಿದ್ವಾವಜನರು ಈ ಕೆಳಗಿನ ಶ್ಲೋಕದ ಅರ್ಥಮಾಡಿ ಇದೇ ಪತ್ರದ್ವಾರದಿಂದ ತಿಳಿಸುವರೆಂದು ಕೋರುತ್ತೇನೆ.

ಜಯಮಿನಿ ೬ನೇ ಸಂಧಿ.

೮ನೇ ಶ್ಲೋಕ.

ಸಮುದ್ರವರ್ಣನೆ —ಸುಳಿದೊಂದುಮೀನ ಮೀನ್ನುಂಗಿ
ತಾಮೀನನಾ।
ಗಳನುಂಗಿತೊಂದುಮೀನಾಮೀನುಂಗಿದುದು।
ಬಳಿಕೊಂದು ಮೀನದಂ ಮತ್ತೊಂದು ಮೀನುಂಗಿತಾಮೀನ
ನುಂಗಿತೊಂದು॥
ತೊಳಲು ತೊಂದೊಂದನೊಂದಿಂತು ನುಂಗಲ್ತಿಮಿಂ।
ಗಿಲ ಮಲ್ಲಮಂ ನುಂಗುತಿರ್ಪುದನೆ ಬೆದರಿಮೀ।
ನ್ಗಳ್ ತಿರುಗುತಿರ್ದನೆರೆಕೆಗಳೊಡನೆ ಮುಂಪೊಕ್ಕಗಿರಿ ಗ
ಳೆಡೆಯಾಡುವಂತೆ॥೮॥

ಈಶ್ಲೋಕದಲ್ಲಿ "ಮೀನ,, ಯೆಂಬ ಪದಕ್ಕೆ ಬೇರೆ ಬೇರೆ ಅರ್ಥ ಮಾಡತಕ್ಕದ್ದು. ಮೊದಲು ಅನ್ವಯ ಆ ಮೇಲೆ ಅರ್ಥವನ್ನು ಬರಿಯತಕ್ಕದ್ದು.

ನಾರಾಯಣ ಶೇಣಾಚಾರ್ಯ ಕೂರವಾಲಿ॥

ಮ॥ ರಾ॥ ರಾಜಶ್ರೀ ಶಾಲಾಪತ್ರಿಕೆಯ ಕರ್ತರಯಿವರಿಗೆ—

ಸ್ನೇಹಿತನಾದ ವೀರಪ್ಪಾ ಮುಣಶಿನಕಾಯಿ ವಕೀಲ ಜಜ್ಜ ಕೋಡತ ಧಾರವಾಡ ನಾನು ವಿನಯೋಕ್ತಿಯಿಂದಾ ಬೇಡಿಕೊಳ್ಳುವದೇನಂದರೆ ನಿಂಮ ಶಾಲಾಪತ್ರಿಕೆಯಲ್ಲಿ ಕೆಳಗೆ ಬರದ ವಿಚಾರಸಮವಾದ ನಿಬಂಧನವನ್ನು ಬರದದ್ದು ಛಾಪಿಸಿ ಪ್ರಸಿದ್ಧಮಾಡಿ ಇದರ ಉತ್ತರ ಕೊಟ್ಟದ್ದು ಪ್ರಶಿದ್ಧ ಮಾಡಬೇಕೆಂದ ಬೇಡಿಕೊಳ್ಳುತ್ತೇನೆ.

ಜಗದಲ್ಲಿ ನಾಲ್ಕು ತರೆಹೆದ ಮೂರ್ಖರಿರುವರು ಅವರು ಯಾರೆಂದರೆ ದೇವರು ಇಲ್ಲಯೆಂಬವನು ವಬ್ಬನು ಜಗತ್ತು ತಂನಿಂದ ತಾನೆ ಹುಟ್ಟಿರುವದು ಯೆಂದು ಹೇಳುವವನೊಬ್ಬವನು ಈ ಜಗತ್ತು ಮಾಡುವದಕ್ಕೆ ಅನೇಕಮಂದಿ ಕರ್ತರು ಇರುವರು ಯೆಂದು ಅಂನುವವನೊಬ್ಬವನು ದೇವರು ಇದ್ಧಾನೊ ಇಲ್ಲೋಯೆಂದು ತಿಳಿಯುವದಿಲ್ಲ ಯೆಂಬವನೊಬ್ಬವನು ಈಪ್ರಕಾರ ಅಂನುವವರಿಗೆ ನಾನು ಕೇಳುವದೇನಂದರೆ—

೧. ದೇವರು ಇಲ್ಲ ಯೆಂಬುವವನಿಗೆ ನಂನ ಪ್ರಶ್ನೆಯೇನಂದರೆ ಇಲ್ಲಯೆಂಬುವದು ನಿನಗೆ ಹ್ಯಾಗೆ ತಿಳಿಯಿತು ತಿಳಿದದ್ದು ತಿಳಿಸುವ ಧರ್ಮಮನುಷ್ಯರದು ಆವಾಗ್ಯ ದೇವರು ಯಿಲ್ಲವೆಂಬುವದು ನೀನು ಹ್ಯಾಂಗೆ ತಿಳಿದಿ ಅದರಂತೆ ನನಗೆ ತಿಳಿಸು ತಿಳಸಲಿಕ್ಕೆ ಬಾರದೆಹೋದರೆ ಮನುಷ್ಯರ ಸ್ವಭಾವದವರಲ್ಲವೆಂದು ಶಿದ್ಧವಾಗುವದು.

೨. ದೇವರು ಯಿಲ್ಲವೆಂಬುವದು ಯಾತರಿಂದ ಅಂನುತ್ತಿಯೆಂತ ನಿಂನ ಕೇಳಿದರೆ ದೇವರು ಕಾಣುವದಿಲ್ಲ ಆದಕಾರಣ ಯಿಲ್ಲವೆಂದು ಹೇಳುವಿ ಆವರೆ ಕಾಣದಪದಾರ್ಥಯಿರುವದಿಲ್ಲವೇ ಹ್ಯಾಂಗೆ ಕಟ್ಟಿಗೆಯಲ್ಲಿ ಬೆಂಕಿ ಹಾಲಿನಲ್ಲಿ ಬೆಂಣೆ ಮೆಣಿಶಿನಲ್ಲಿ ಉಷ್ಣತೆಕಾಣದೇ ಯಿರುವವು ಆಗ್ಯೆ ಕಾಣದ ಪದಾರ್ಥ ಯಿರುವದೆಂದು ಶಿದ್ಧವಾದ ಮೇಲೆ ಕಾಣದ ಪದಾರ್ಥ ಯಿರುವದಿಲ್ಲ ಯೆಂಬುವದು ಭ್ರಾಂತರ ಪಕ್ಷವೇಸರಿ.

೩. ದೇವರು ಯಿಲ್ಲಯೆಂಬವನು ಇರುವನು ಅವನಿಗೆ ಕರ್ತಯಾರೆಂದು ಕೇಳಿದರೆ ತನ್ನ ತಾಯಿ ತಂದೆ ಯೆಂದು ಹೇಳುವವನಲ್ಲವೆ ಯಾರಡನೇ ಉತ್ತರವಿಲ್ಲ ಆದರೆ ಮಕ್ಕ

ಳಿಗೆ ತಾಯಿತಂದಿಗಳು ಕರ್ತರಾದರೆ ತಾಯಿತಂದಿಗಳು ಮಕ್ಕಳಾಗಬೇಕೆಂದು ಇಚ್ಛಾ ಮಾಡಿದಾಗ್ಯೂ ಯಾಕೆ ಮಕ್ಕಳು ಆಗುವದಿಲ್ಲ ಮತ್ತು ಗರ್ಭನಿಂತದ್ದು ಹಾಂಗು ಗರ್ಭದಲ್ಲಿ ಹೆಂಣಾಗಿ ಅಥವಾ ಗಂಡಾಗಿ ಇಲ್ಲವೇ ಕುರುಡು ಕಿವಡಕುಂಟರೋಗಿ ಆಗಿ ಪಿಂಡ ಬೆಳೆಯುವದು ನಿಂಮ ತಾಯಿತಂದೆಗಳಿಗೆ ಠಾವಿಕೆಯಾಗುವದಿಲ್ಲ ಮತ್ತು ನಿನ್ನ ಹುಟ್ಟಿಸಿದವರು ತಾಯಿತಂದಿಗಳು ಖರೆ ಇದ್ದರೆ ಮೃತ್ಯುವಿನಿಂದ ಯಾಕೆ ಉಳಿಸಿಕೊಳ್ಳುವದಿಲ್ಲ ಹಾಂಗು ಒಂದು ಬಿಂದುರೇತುವಿನಿಂದ ನಿನ್ನ ಚಮತ್ಕಾರವಾದ ದೇಹಇಂದ್ರಿಯಗಳು ಅವಯುವಗಳು ನಖರೋಮಗಳು ನಿನ್ನ ತಾಯಿತಂದಿಗಳು ಮಾಡುವರೇ? ಆಗದು, ಇಂಥಾ ಚಮತ್ಕಾರ ಚೇತನಯುಕ್ತದೇಹವನ್ನು ಸರ್ವತ್ರಾಣಉಳ್ಳ ದೇವರು ಮಾಡಿದನೆಂದು ಸಿದ್ಧ ಇರಲಾಗಿ ಇವಕ್ಕೆ ನಿನ್ನ ಉತ್ತರವೇನು. ಉತ್ತರ

೮. ಇನ್ನು ಜಗತ್ತು ತಂನಿಂದ ತಾನೆ ಹುಟ್ಟಿರುವದೆಂದು ಯಂಬುವನಿಗೆ ಪ್ರಶ್ನೆ—ಜಗತ್ತಿನಲ್ಲಿ ತಂನಿಂದ ತಾನೆ ಯಾವ ಪದಾರ್ಥ ಹುಟ್ಟುವದಿಲ್ಲ ಹ್ಯಾಗಂದರೆ ಪೃಥ್ವಿ ಅಪ ತೇಜ ವಾಯು ಆಕಾಶ ಈ ೫ತತ್ವಗಳು ಒಂದಕ್ಕೊಂದು ಕೂಡುವದರಿಂದವೇ ಪದಾರ್ಥ ಉತ್ಪನ್ನವಾಗುತ್ತದೆಯೋ ೫ ತತ್ವಗಳು ಜಡ ಅಂದರೆ ಚೇತನಯಿಲ್ಲದವು ಆಗ್ಯೂ ಯಿವುಗಳು ಬೆರಕಿಗೆ ಅಥವಾ ಕೂಡುವಿಕೆಗೆ ಚೇತನಸರೂಪವಾದ ವಸ್ತುವಿನಿಂದ ಕೂಡಿದರೆ ಉತ್ಪತ್ತಿಗೆ ಕಾರಣವಾದೀತೆ ಹೊರ್ತು ಇಲ್ಲದಿದ್ದರೆ ತಂನಿಂದತಾನೆ ಉತ್ಪತ್ತಿಯಾಗಲಾರವು ಆದರೆ ಪನಿಕೆ ವಿಚಾರಹೀನರು ಸಗಣಿಯಲ್ಲಿ ಹುಳಗಳು ಹುಟ್ಟುವದಿಲ್ಲವೇ ಯೆಂದು ಹೇಳುವರು ಆದರೆ ಯಿಶ್ವರೀ ಅಂಶರೂಪ

ವಾದ ಚೇತನ ಪಡದ ಪಶುವಿನ ಶಗಣೆಯಲ್ಲಿ ಹುಳಗಳು ಹು
ಟ್ಟಲಿಕ್ಕೆ ಕಾರಣವಾದೀತೇ ಹೊರ್ತು ತಂಪಿಂದತಾವೇ ಹುಟ್ಟ
ಲಾರವು. ಮತ್ತು ತಂನಿಂದತಾನೆ ಜಗಹುಟ್ಟಿ ಅದೆಂಬುವನು
ಒಬ್ಬನು ಯಿರುವನು ಅವನು ತನಿಂದತಾನೆ ಹುಟ್ಟದ್ದು ಖರೆ
ನೆ ಯಿದ್ದರೆ ಜಗತ್ತು ಮೊದಲಾದ ಪದಾರ್ಥವೆಲ್ಲ ತಂನಿಂದ
ತಾನೆ ಹುಟ್ಟರಬಹುದೆಂದು ಹೇಳಿದರೆ ವಂದು ವೇಳೆವಡಂಬ
ಡಬಹುದು ಕಾರಣವೇನಂದರೆ ಮೇಲೆ ಬರದ ಮಾತಗಳ
ಮೇಲಿಂದಾ ಮನುಷ್ಯನ ಉತ್ಪತ್ತಿಗೆ ದೇವರು ಕಾರಣವೆಂಬ
ದಾಗಿ ಶಿದ್ಧವಾಗಿರುವದರಿಂದ ಮತ್ತು ಜಗತ್ತ್ಯವು ತಂನಿಂದ
ತಾನೇ ಹುಟ್ಟದ್ದರೆ ಅದಕ್ಕೆ ನಾಶನವಿಲ್ಲದೇ ಯಿರತಿತ್ತು.
ಹಾಂಗಿಲ್ಲದಕಾರಣ ಹುಟ್ಟುವದಕ್ಕೆ ಮತ್ತು ನಾಶವಾಗುವದ
ಕ್ಕೆ ಈ ಯರಡು ಕೃತ್ಯಕ್ಕೂ ಒಬ್ಬ ಕರ್ತಯಿರುವನೆಂದು
ಶಿದ್ಧವಾಗುತ್ತದೆ.

೨. ಯಿನ್ನು ಈ ಜಗತ್ತ್ಯಕ್ಕೆ ಅನೇಕ ಮಂದಿ ಕರ್ತರು
ಯಿರಬಹುದೆಂದು ಆಡುವ ವಿಚಾರಹೀನರಿಗೆ ನಾನು ತಿಳಿಸುವ
ದೇನಂದರೆ, ಯೀಗ ಜಗತ್ತಿನಲ್ಲಿ ಉತ್ಪಂನವಾದ ಸಕಲ ಜ
ಡಚೇತನವೆಂದರೆ ಸ್ಥಾವರ ಜಂಗಮವಾದ ವಸ್ತುಗಳ ಸ್ವಭಾ
ವದ ನೇಮುಗಳ ಮೇಲಿಂಧ ನೋಡಿದರೆ ಜಗತ್ತ್ಯಕ್ಕೆ ಕರ್ತ ಒ
ಬ್ಬನೆ ಯಂದು ಶಿದ್ಧವದೆ ಯಾಕಂದರೆ ಸೂರ್ಯ ಚಂದ್ರಾದಿ
ಗಳು ಯಿಷ್ಟೇದೊಡ್ಡವರು, ಅವರ ಕೆಲಸವು ಯಿಂಥಾದ್ದು
ಯಂದು ಬಹುದಿವಸದಿಂದ ನೋಡೋಣದರಲ್ಲಿ ವಂದೇ ತರ
ದ ನೇಮವಾಗಿ ಯಿರುವದು ಕಾಣುತ್ತದೆ. ಅನೇಕಮಂದಿ
ಕರ್ತರುಗಳು ಯಿರತಿದ್ದರೆ ಒಬ್ಬನು ಸಣ್ಣ ಸೂರ್ಯಚಂದ್ರ
ರನ್ನು ಮಾಡಿದ್ದರೆ ಮತ್ತೊಬ್ಬನು ಅವಕ್ಕಿಂತಲು ದೊಡ್ಡವ

ಗಳನ್ನು ಮಾಡುತ್ತಿದ್ದನು. ರಾತ್ರಿಯಲ್ಲಿ ಸೂರ್ಯ ಹಗಲಿ ನಲ್ಲಿ ಚಂದ್ರ ಈಪ್ರಕಾರ ಅನೇಕ ಭೇದರೂಪವಾದವಸ್ತು ಗಳು ಮತ್ತು ಅವುಗಳ ಗುಣಗಳು ಉತ್ಪನ್ನವಾಗುತ್ತಿದ್ದವು. ಯಿದಕ್ಕೆ ಯಿನ್ನು ವಂದು ದೃಷ್ಟಾಂತ–ಬಹಳ ಮಂದಿ ಕರ್ತ ರು ಯಿರುತ್ತಿದ್ದರೆ ವಬ್ಬ ಕರ್ತನು ಹುಬ್ಬಿನ ಕೆಳಗೆ ಕಣ್ಣು ಗಳನ್ನು ಮಾಡಿದ್ದರೆ ಯೆರಡನೇಯವನು ನೆತ್ತಿಯ ಮೇಲೆ ಕಣ್ಣುಗಳನ್ನು ಮಾಡುತ್ತಿದ್ದನು. ಒಬ್ಬನು ಕಾಲಿನಿಂದ ನಡಿ ಯುವದುಮಾಡಿದರೆ ಎರಡನೇಯವನು ತಲೆಯಿಂದ ನಡಿಯು ವ ನೇಮ ಮಾಡುತ್ತಿದ್ದನು, ಹಿಂಗೆ ಅನೇಕ ತರದ ನೇಮುಗ ಳು ಆಗುತ್ತಿದ್ದವು ಹಾಂಗೆಯಿಲ್ಲದೆ ಜಗತ್ತಿನಲ್ಲಿ ದಾವ ದಾವ ಜಾತಿಯ ವಸ್ತುವಿಗೆ ದಾವ ದಾವ ರೂಪ ಹಾಂಗು ದಾವ ದಾ ವ ನೇಮ ಮತ್ತು ದಾವ ದಾವ ಗುಣ ಇರಬೇಕೋ ಅವು ಯಲ್ಲವು ವಂದೆ ರೀತಿಯಾಗಿ ಇರುವವು ಅದರಿಂದ ಜಗ ತ್ತಿನ ಉತ್ಪತ್ತಿಗೆ ವ ಸ್ಥಿತಿಲಯಕ್ಕೆ ಒಬ್ಬನೇ ದೇವರೆಂದು ಸಿದ್ಧವದೆ.

೩ ಇನ್ನು ದೇವರು ಇದ್ದಾನೋ ಇಲ್ಲವೋ ತಿಳಿಯುವ ದಿಲ್ಲ ಯಂಬುವ ಮೂರ್ಖರಿಗೆ ತಿಳಿಸುವದೇನಂದರೆ ದಾವದಾ ದರು ವಂದು ಕ್ರುತ್ಯವಾಗಬೇಕಾದರೆ ಕರ್ತಯಿಲ್ಲದೆ ಆಗುವ ದಿಲ್ಲ ಯಂಬುವದು ಸಕಲರ ಅನಭವ ಶಿದ್ಧವಾದ ಮಾತು. ಯಾಕಂದರೆ ಈ ವಿಚಿತ್ರ ರೂಪವಾದ ಸಚರಾಚರ ಪದಾರ್ಥಗ ಳಗೆ ಒಬ್ಬ ಕರ್ತನು ಇರಬೇಕು. ಇಂಥಾ ಜಗದ ಸೃಷ್ಟಿ ಮನುಷ್ಯರಿಂದ ಆಗಲಾರದು ಆಗ್ಯ ಸೃಷ್ಟಿ ಕರ್ತನು ಮನು ಷ್ಯರೊಳಗಿನವನಲ್ಲ ಅವನು ಸರ್ವತ್ರಾಣಿ ಸರ್ವವ್ಯಾಪಿ ಕಾನು ಯಾವಾಗಲು ಇರವವನು ಅವನು ಹುಟ್ಟ ಸಾವು

ಇಲ್ಲದಂಥವನು ಯಾಕೆಂದರೆ ಸರ್ವಕಾಲದಲ್ಲಿ ಸರ್ವಠಿಕಾಣೆ
ಯಲ್ಲಿ ಉತ್ಪತ್ತಿ ಸ್ಥಿತಿ ಲಯ ಈ ಮೂರು ಕೆಲಸಗಳು ರಾ
ತ್ರಿ ದಿವಸಗಳಲ್ಲಿ ಬಿಡದೆ ಸರ್ವಠಿಕಾಣೆಯಲ್ಲಿ ನಡೆದಿರುವ ಕೃ
ತ್ಯಕ್ಕೆ ಸರ್ವ ಪ್ರಾಣವುಳ್ಳ ದೇವರ ಹೊರ್ತು ಎರಡನೇಯ
ವನು ಇಲ್ಲವೆಂದು ಪ್ರತ್ಯಕ್ಷ ತಿಳಿಯುತ್ತಿದ್ದು ದೇವರು ಇದ್ದಾ
ನೋ ಇಲ್ಲವೋ ಎಂದು ತಿಳಿಯುವ ಎಂಬುವನು ಮೂರ್ಖ
ನೇ ಸರಿ.

ರಾವಸಾಹೇಬ ಕನ್ನಡ ವೃತ್ತಪತ್ರದ ಯೆಡಿಟರರಿಗೆ.

ಬಿನ್ನಹ ಯೇನಂದರೆ ಕೆಳಗೆಬರದ ವನಸ್ಪತಿಗಳಿಂದ ಸ
ರ್ಪದಂಶದ ವಿಷವು ನಿಶ್ಚಿತವಾಗಿ ನಾಶವಾಗುತ್ತದೆ. ತಮ್ಮ
ಅಂದುಳ್ಳ ಸಂಚಿಕೆಯಲ್ಲಿ ಇಂಥಾ ಔಷಧದ ಸಂಗ್ರಹ ಕಂ
ಡು ಬಂದದರಮೇಲಿಂದ ಬಹು ಪ್ರಯಾಸದಿಂದ ಯೆಲ್ಲಾ ಜ
ನರಿಗೆ ಪ್ರಕಟವಾಗುವದರಗೋಸ್ಕರ ಈ ಪೂರ ನಿವಾಸಿಯಾ
ದ ಗಿರಿಮಲ್ಲ ಬುರುಡರ ಯೆಂಬವನ ಕಡೆಯಿಂದ ತಿಳವಾ
ಡಿಕೊಂಡೆ ನಾನು ಸ್ವತಃ ಒಂದು ಯಾತ್ರಿಗೆ ಹಾಂಗು ಒಬ್ಬ
ಮನುಷ್ಯನಿಗೆ ಈ ವನಸ್ಪತಿಗಳು ಪ್ರಯೋಗಿಸಿ ನೋಡ
ಲಾಗಿ ತಾತ್ಕಾಲವೇ ವಿಷ ಹಿಮ್ಮೆಟ್ಟಿತು.

ಆ ಗಿಡಗಳು ಯಾವವೆಂದರೆ—೧ ಹಚ್ಚಿಬಟ್ಟನ ಗಿಡ ಅ
ಥವಾ ತರುಬಿ ಗಿಡದ (ಹುಡುಗರು ಅದರ ಕಾಯಿಗಳನ್ನು
ಮುದ್ರೆಮಾಡಿ ಆಡುತ್ತವೆ) ಬೇರು ಯಿದ್ದರೆ ಒಳ್ಳೇದೇ ಅ
ದನ್ನು ತೆಯಿದು ಕಣ್ಣೊಳಗೆ ಸ್ವಲ್ಪ ಹಚ್ಚತಕ್ಕದ್ದು—ನಾ
ಗ, ನಾಲಿಗೆಗೆ ಒಳ್ಳೆತಾಗಿ ಅದರ ರಬಡಿಯನ್ನು ತಿಕ್ಕಬೇಕು.
ಬೇರು ಶಿಗದೇ ಹೋದಲ್ಲಿ ಅದರ ತೊಪ್ಪಲ ಅರಿದು ತಿನಿಸ

ಬೇಕು. ದನಗಳಿಗೆ ಗೊಜ್ಜು ಹಾಕಬೇಕು ಕಣ್ಣೊಳಗಾ ವರು ಅದರ ರಸ ಹಾಕಬೇಕು.

೨ ಅಡಿವೆ ಲಾವಂಗದ ಗಿಡ ಅಥವಾ ಕರಿಬಂಟನ ಗಿಡ, ಅದರ ಹೂವು ಯೆಳ್ಳಿನ ಹೂವಿನಂತೆ ಕೆಂಪು, ಬಿಳವು ಯಿರುತ್ತವೆ; ಅದರ ಎಲೆಗಳು ಅರ್ಧ ದುಡ್ಡಿನಷ್ಟು ದುಂಡಗಾಗಿ ಯಿರುತ್ತವೆ. ಯಿದರ ತೊಪ್ಪಲ ಅರೆದು ತಿನಿಸಬೇಕು. ದನಗಳಿಗೆ ಸಹಾ ಇದೇಪ್ರಕಾರ ಮಾಡತಕ್ಕದ್ದು. ಈ ಯೆರಡು ಗಿಡದ ತೊಪ್ಪಲ ಬಣಗಿದ್ದರೂ ಯೇನು ಗೋಜು ವಿಲ್ಲ. ಯೆರಡನೇ ಗಿಡ ಬಹಳೇ ಪ್ರಶಸ್ತವಾದದ್ದು ಯೆಂಥಾ ವಿಷಾರಿ ಹಾವು ಕಚ್ಚಿದರೂ ಅದರ ಕಾಟ ಸಾಗುವದಿಲ್ಲ. ಯಿದಕ್ಕೆ ಸ್ಥಲ ಅವಶ್ಯವಾಗಿ ದೊರೆಯಬೇಕು. ಯಿಂತಿ ಬಿನ್ನಹ.

ತಾ॥ ೨೫ ಅಗಸ್ಟ ೧೮೭೪ } ವಿಷ್ಣು ರಾಮಚಂದ್ರ ರಾವು
ಹೊನವಾಡ ತಾ. ವಿಜಾಪೂರ } ದುರ್ಗಕರ ಸ್ಕೂಲಮಾಸ್ತರ

ಮ. ರಾ. ಕನ್ನಡ ಶಾಲಾಪತ್ರ ಕರ್ತರ ಸನ್ನಿಧಿಗೆ—

ಅರ್ಜಿಮಾಡಿಕೊಳ್ಳುವದೇನಂದರೆ, ಕಳೆದ ಫೆಬ್ರುವಾರಿ ತಿಂಗಳಿನ ಸಂಚಿಕೆಯಲ್ಲಿ ಕನ್ನಡ ಶಾಲೆಗಳಲ್ಲಿ ಕನ್ನಡ ಲೆಕ್ಖ ಮುಂತಾದವುಗಳು ಮಾಡುವಾಗ್ಯೆ ಮಹಾರಾಷ್ಟ್ರ ಶಬ್ದಗಳು ಪ್ರಯೋಗಿಸ ಬಾರದೆಂದು ಕಟ್ಟಳೆ ಮಾಡಿದ್ದಾರೆ. ಇದರ ಮತಲಬು ಕನ್ನಡ ಭಾಷೆಯನ್ನು ಪ್ರೋತ್ಸಹಿಸುವದಕ್ಕಾಗಿ ಬಹಳಾಗಿ ಯಿರಬಹುದು. ಹೋದ ಜೂನ ತಿಂಗಳಿನ ಅಂಕೆಯಲ್ಲಿ ಸ್ವೀಕೃತಿ ಸ್ಪಷ್ಟತೆಗಳಿಗಾಗಿ ಯೆಲ್ಲಾ ಮಾಸ್ತರರು ಇಂಗ್ಲೀಷ ಅಂಕೆಗಳನ್ನು ಕಲಿತು ವಿದ್ಯಾರ್ಥಿ

ಗಳಿಗೆ ಲೆಕ್ಖ ಈ ಅಂಕೆಗಳಲ್ಲಿ ಸಹ ಕಲಿಸಬೇಕು ಎಂದು ನಿಬಂಧನೆ ಮಾಡಿದ್ಧಾರೆ. ಯಿದರಮೇಲಿಂದ "ಮನಃಪೂತಂ ಸಮಾಚರೇತ್" ಈ ಗಾದೆಯು ಹೋಲುವಿಕೆ ಇದರಲ್ಲಿ ತೋರುವದು. ಯಾಕೆಂದರೆ ಕನ್ನಡ ಬರಹದಲ್ಲಿಯೇ ನಮಗೆ ಸಾಕಷ್ಟು ಸ್ವಚ್ಛತೆ ಸ್ಪಷ್ಟತೆ ತರಬಹುದು. ಕೆಲವು ವೇಳೆಯಲ್ಲಿ ಪರಭಾಷೆಯ ಶಬ್ದಗಳು ಪ್ರಯೋಗಿಸಿದ ಹೊರ್ತು ನಮ್ಮ ಹೇತು ಪರರಿಗೆ ಸ್ಪಷ್ಟವಾಗುವದಿಲ್ಲ ಇಂಥಾ ಸಮಯದಲ್ಲಿ ಮಾತ್ರ ಉಪಾಯವಿಲ್ಲ. ಮೇಲಿನ ನಿಬಂಧನೆಯಲ್ಲಿ ಇಂಥಾ ತೊಂದರೆ ಯೇನು ಕಾಣಿಸುವದಿಲ್ಲ. ಇದರ ಸಲುವಾಗಿ ತಮಗೆ ಪ್ರಾರ್ಥನೆ ಮಾಡುವದೇನಂದರೆ, ಅಂಕೆಗಳನ್ನು ಕಲಿಯುವದು ಸುಲಭವಾಗಿ ತೋರಿದರೂ ಯೇನು ಅರಿಯದವರಿಗೆ ಅವುಗಳ ಸ್ವಚ್ಛತೆ, ಸ್ಪಷ್ಟತೆಗಳನ್ನು ತಿಳಿದುಕೋಬೇಕಾದರೆ ಹಳ್ಳಿವೂರ ಮಾಸ್ತರರಿಗೆ ಅತಿ ದುಸ್ತರ. ಇದರಂತೆಯೇ ವ್ಯವಹಾರದಲ್ಲಿ (ಸರಕಾರ ಲೆಕ್ಖ ಮುಂತಾದವುಗಳಲ್ಲಿ) ಬರುವ ಪರಿಭಾಷಿಕ ಶಬ್ದಗಳು ಯಲ್ಲ ಒಂದು ಮಾಡಿ ಪುಸ್ತಕ ರಚಿಸಿ ಸಂತೋಜಿಗಳಿಗೆ ಕಲಿಸರೆಂದು ಕೊಡಬಹುದು. ಇಂಥಾ ಸಂಗತಿ ನಡೆದರೆ ಬಲಹೀನ ಶಿಕ್ಷಕರು ಯೆಷ್ಟು ಮೋಸಹೊಂದುವರು? ಇವರ ಕಳವಳಿಕೆ ತಮಗೆ ಬರಬೇಕೆಂಬ ಕಾಂಕ್ಷೆಯಿಂದ ಸೂಚನಾರ್ಥ ಬಿನ್ನಹ ಮಾಡಿಕೊಂಡಿದ್ಧೇನೆ. ಆದರೆ ವರಿಷ್ಟ ಘೊರಗಳಿಗೆ ನಮ್ಮವು ದಾಸಿನ್ಯವನ್ನು ತೋರಿಸಿ ಶೈಲಾದಮುಷ್ಟಿಗೂ ಹಿತಾವಹಮಾಡಿ (ನಿದಾನ ಮುಂದೆ) ಕೀರ್ತಿ ಪಡೆದುಕೋಬೇಕು. ಸ್ಥಳಸಂಕೋಚ ಭಯಕ್ಕಾಗಿ ವಿಸ್ತರಿಸಲಿಲ್ಲ. ಕೃತವಿರಬೇಕು.

೪೫೬

ತಾ॥ ೨೭ ಆಗಸ್ಟ ೧೮೭೩ ವಿಷ್ಣು ರಾಮಚಂದ್ರ ರಾಮದು ರ್ಗಕರ ಸ್ಕೂಲಮಾಸ್ತರ.	}	ಹೊನವಾಡ ತಾ. ವಿಜಾಪೂ ರ.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಶಾಲಾಪತ್ರಕವು.

ಪುಸ್ತಕ ೯] [ಸಂಚಿಕೆ V.

ಬೆಳಗಾವಿ, ಮಾಹೆ ನವಂಬರ ೧೮೭೩.

SELF HELF

ತನಗೆ ತಾನೇ ನೆರವಾಗುವದು.

ಕಾಲುಚೀಲಗಳ ಮಗ್ಗದ ಉತ್ಪತ್ತಿಯು ನಿಜವಾದ ಮೂಲವು ಹ್ಯಾಗೇ ಇರಲಿ, ಅದನ್ನು ಸೃಷ್ಟಿಸಿದವನಲ್ಲಿ ಅಪ್ರತಿಮ ಯಾಂತ್ರಿಕ ಕೌಶಲ್ಯವಿತ್ತೆಂಬದಕ್ಕೆ ಸಂದೇಹವಿಲ್ಲ. ಒಂದು ಮೂಲೆಯ ಹಳ್ಳಿಯಲ್ಲಿ ಇರುವ ಧರ್ಮೋಪದೇಶಕನು ಬಹುಶಃ ತನ್ನ ಆಯುಷ್ಯವನ್ನೆಲ್ಲ ಪುಸ್ತಕಗಳನ್ನು ಓದುವದರಲ್ಲಿಯೇ ಕಳೆದಾಗ್ಯೂ, ಇಂಥಾ ಸೂಕ್ಷ್ಮವೂ, ಕ್ಲಿಷ್ಟವೂ ಇದ್ದು ಆದ ಯಂತ್ರವನ್ನು ರಚಿಸಿ ಹೆಣೆಯುವ ವಿದ್ಯೆಯನ್ನು ಮುಂದಕ್ಕೆ ತಂದನೆಂಬದು ಆಶ್ಚರ್ಯಕರವಾದ ಸಂಗತಿಯೇ ಸರಿ. ಪೂರ್ವದಲ್ಲಿ ಹೆಂಗಸರು ತಂಮ ಮೂರು ಬೊಟ್ಟುಗಳಲ್ಲಿ ಅಂಗುಸ್ತಾನೆಗಳನ್ನು ಹಾಕಿಕೊಂಡು ಯೆಳೆಯೊಳಗಿಂದ ಯೆಳೆಯನ್ನು ಒಂದೊಂದಾಗಿ ಹಾಯಿಸುತ್ತಾ ಹೆಣೆಯುವದು ಬಹು ಬೇಸರದ ಕೆಲಸವಾಗಿದ್ದದ್ದು ಈಗ ಈ ಯಂತ್ರದ ಸಹಾಯದಿಂದ ಅತಿ ತ್ವರೆಯಾಗಿಯೂ, ಸುಲಭವಾಗಿಯೂ, ನಡೆಯುತ್ತದೆ. ಆದದರಿಂದ ಇಂಥಾ ವಿಧದ ಸಾಧಾರಣೆಯು ಉದಾಹರಣೆಯು ಯಂತ್ರ ಶೋಧದ ಇತಿಹಾ

ಸದಲ್ಲಿ ಇಂನೊಂದು ಸಿಕ್ಕುವದು ದುರ್ಲಭವು. ಲೀಯು ಕಾಲದಲ್ಲಿ ಕೈಗಾರಿಕೆಯು ವಿದ್ಯವು ಕೇವಲ ಬಾಲ್ಯಾವಸ್ಥೆಯಲ್ಲಿ ಇದ್ದು, ಆ ಕೆಲಸಗಳ ಸಲುವಾಗಿ ಯಂತ್ರ ಸಹಾಯಕ್ಕೆ ಜನರು ಇನ್ನು ಅಷ್ಟು ಲಕ್ಷವನ್ನು ಕೊಡುತ್ತಿದ್ದಿಲ್ಲಾದ ಕಾರಣ ಅವನ ಯೋಗ್ಯತೆಯನ್ನು ವಿಶೇಷವಾಗಿ ವರ್ಣಿಸತಕ್ಕದ್ದು. ಅವನು ತನ್ನ ಹತ್ತಿರ ಇದ್ದಷ್ಟು ಸಾಹಿತ್ಯದಿಂದ ತನ್ನ ಯಂತ್ರದ ಬೇರೆ ಬೇರೆ ಭಾಗಗಳನ್ನು ಕೈಲಾದ ಮಟ್ಟಿಗೆ ತ್ವರೆಯಾಗಿ ರಚಿಸಬೇಕಾಯಿತು; ಇದಲ್ಲದೆ ಮೇಲೆ ಮೇಲೆ ವಿಘ್ನಗಳು ಬಂದ ಹಾಗೆ ಅವುಗಳನ್ನು ನೀಗುವ ಉಪಾಯಗಳನ್ನು ಯೋಚಿಸಬೇಕಾಯಿತು; ಅವನ ಹತ್ತಿರ ಇದ್ದ ಸಾಹಿತ್ಯವೂ, ಶಸ್ತ್ರಗಳೂ ತಕ್ಕಂಥವುಗಳಲ್ಲ; ಚತುರರಾದ ಶಿಲ್ಪಿಗಳು ಅವನಿಗೆ ಯಾರು ಸಹಾಯಕರು ಇದ್ದಿಲ್ಲ. ಜನವಾರ್ತೆಯಿಂದ ತಿಳಿಯುವದೇನಂದರೆ, ಅವನು ಮೊದಲು ರಚಿಸಿದ ಯಂತ್ರವು ಬಹುಶಃ ಯೆಲ್ಲ ಕಟ್ಟಿಗೆಯದೇ ಇತ್ತು. ಅದರೊಳಗಿನ ಸೂಜಿಗಳು ಕಟ್ಟಿಗೆಯ ತುಂಡುಗಳಲ್ಲಿಯೇ ನಡಿಸಲ್ಪಟ್ಟಿದ್ದವು. ಲೀಯು ಕಾಲದಲ್ಲಿ ಸೂಜಿಗಳಿಗೆ ಆಧಾರವಿಲ್ಲದಿದ್ದ ಕಾರಣ, ಅವನಿಗೆ ಬಹಳ ಶ್ರಮಪಡಬೇಕಾಯಿ*ತು. ಕಡೆಯಲ್ಲಿ ಒಂದರ ಹಿಂದೆ

---

* ಬ್ಲಾಕಸರನು ತಾನು ಬರೆದ ನಾಟಿಂಗಮ್ಮದ ಇತಿಹಾಸದಲ್ಲಿ ಬರೆದದ್ದೇನಂದರೆ, "ಆ ಕಾಲದ ಜನರು ಮೊದಲುಗೊಂಡು ಅವರ ಮಕ್ಕಳು ಮೊಮ್ಮಕ್ಕಳು ಮುಂತಾದವರ ಮುಖದಿಂದ ಈ ಕಾಲದವರೆಗೆ ಜನರಲ್ಲಿ ತಿಳಿದು ಬಂದ ಸಂಗತಿ ಯೇನಂದರೆ, ೧೬ನೇ ಶತಮಾನದ ಕಡೆತನಕ ಒಬ್ಬ ಮನುಷ್ಯನಿಂದ ಒಂದು ಯಂತ್ರವನ್ನು ನಡಿಸುವದಾಗುತ್ತಿದ್ದಿಲ್ಲ. ಯಂತ್ರ ನಡಿಸುವ ಮುಖ್ಯ ಮನುಷ್ಯನು ತನ್ನ ಕೈ ಕೆಳಗೆ ಒಬ್ಬ ಕೂಲಿಕಾರನನ್ನು ಇಟ್ಟುಕೊಂಡು ಅವನ ಕೈಯಿಂದ ಯಂತ್ರದ ಹಿಂದೆ ನಿಂತು ನಡಿಸತಕ್ಕ ಕೆಲಸವನ್ನು ಮಾಡಿಸುತ್ತಿದ್ದನು.

ಮತ್ತೊಂದು ವಿಘ್ನಗಳು ಬಂದ ಹಾಗೆ ಅವುಗಳನ್ನು ಪರಿಹ
ರಿಸಿ, ಮೂರು ವರ್ಷಗಳವರೆಗೆ ಶ್ರಮಪಟ್ಟು ಅವನು ತನ್ನ
ಯಂತ್ರವು ಕೆಲಸಕ್ಕೆ ಬರುವ ಹಾಗೆ ಮಾಡಿಕೊಂಡನು. ಲೀ
ಯು ಈ ಉದ್ಯೋಗದಲ್ಲಿ ತನ್ನ ಮೊದಲಿನ ಕೆಲಸವನ್ನು ಕ
ಳೆದು ಕೊಂಡದ್ದರಿಂದ ಈ ತನ್ನ ಹಸ್ತಕೌಶಲ್ಯಕ್ಕಾಗಿ ಬಹಳ
ಅಭಿಮಾನಪಟ್ಟು ಆವೇಶದಿಂದ ಕಾಲು ಚೀಲಗಳನ್ನು ಹೆಣೆ
ಯುವ ಕೆಲಸವನ್ನು ಕಾಲ್ವರ್ಟನ್ ಗ್ರಾಮದಲ್ಲಿ ನಡಿಸಿದ
ನು. ಆ ಊರಲ್ಲಿ ಎಷ್ಟೋ ವರ್ಷಗಳವರೆಗೆ ಈ ಕೆಲ
ಸವನ್ನು ನಡಿಸುತ್ತಾ, ತನ್ನ ತಮ್ಮನಾದ ಜೇಮ್ಸನೆಂಬವನಿ
ಗೂ, ಬೇರೆ ಎಷ್ಟೋ ಆಪ್ತ ಜನರಿಗೂ, ಈ ವಿದ್ಯವನ್ನು
ಕಲಿಸುತ್ತಾ ಕಾಲಕ್ಷೇಪ ಮಾಡಿದನು.

ಈ ಮೇರಿಗೆ ಅವನು ತನ್ನ ಯಂತ್ರವನ್ನು ತಕ್ಕ ಮಟ್ಟಿ
ಗೆ ಕಡೆಗಾಣಿಸಿದನಂತರ, ಇಲಿಜಾಬೆಥರಾಣಿಯು, ರೇಶಿಮೆ
ಯ ಕಾಲು ಚೀಲಗಳನ್ನು ಹೆಣೆಯುವದಕ್ಕೆ ಬಹು ಮೆಚ್ಚಿ
ಕೊಂಡವಳಾದದರಿಂದ ಅವಳ ಆಶ್ರಯವ ಸಂಪಾದಿಸುವ ಆ
ಪೇಕ್ಷೆಯಿಂದ ಲಂಡನಕ್ಕೆ ಹೋದನು. ಅಲ್ಲಿ ಅವನು ತ
ನ್ನ ಯಂತ್ರವನ್ನು ಮೊದಲು ಎಷ್ಟೋ ದರ್ಬಾರದ ಜನ
ರಿಗೆ ತೋರಿಸಿದನು. ಅವರಲ್ಲಿ (ಹಿಂದಿನೀದ ಲಾರ್ಡನೆಂ
ಬ ಪದವಿಯನ್ನು ಹೊಂದಿದ) ಸರ್ ವ್ಯಯಿಲಿಯಂ ಹನ್ಸಡನ್ನೆಂ
ಬವನಿಗೆ ಯಂತ್ರವನ್ನು ನಡಿಸುವದಕ್ಕೆ ಕಲಿಸಿದನು. ಈ
ಮೇರಿಗೆ ಅವನ ಗುರುತದವರಾದ ದರ್ಬಾರದ ಜನರ ಸಹಾ
ಯದಿಂದ ಅವನಿಗೆ ರಾಣಿಯ ಭೆಟ್ಟಿಯಾಗಿ, ಅವಳಿಗೆ ಯಂ
ತ್ರವನ್ನು ನಡಿಸಿ ತೋರಿಸಿದನು. ಆದರೆ ಅವನ ಕೋರಿ
ಕೆಯಂತೆ ಅವಳು ಆಶ್ರಯ ಕೊಡಲಿಲ್ಲ. ಈ ಯಂತ್ರ

ದಿಂದ ಬಹು ಮಂದಿ ಬಡ ಜನರ ಕೈ ಕೆಲಸದ ಉದ್ಯೋಗಕ್ಕೆ ಹಾನಿ ಬರುವದೆಂದು ನೋಡಿ, ಇದನ್ನು ವ್ಯವಹಾರದೊಳಗೆ ತರಬಾರದೆಂದು ಅವಳು ಆಜ್ಞೆಯು ಮಾಡಿದಳೆಂದು ಹೇಳುತ್ತಾರೆ; ಇದಲ್ಲದೆ ಬೇರೆ ಯಾರಿಂದಲೂ ಅವನಿಗೆ ಆಶ್ರಯವು ಸಿಕ್ಕಲಿಲ್ಲ. ಈ ಮೇರೆಗೆ ಅವನು ತಾನೂ, ತನ್ನ ಯಂತ್ರವೂ ಧಿಕ್ಕರಿಸಲ್ಪಟ್ಟದ್ದನ್ನು ನೋಡಿ, ನಾಲ್ಕನೇ ಹೇನರಿಯು ಚತುರ ಪ್ರಧಾನನೆಂದೆನಿಸಿಕೊಂಡ ಸಲ್ಲಿ ಯೆಂಬವನು ಹೇಳಿದಂತೆ ಫ್ರಾನ್ಸದೊಳಗಿನ ಲಿಯೋನ ಪಟ್ಟಣದ ಕೈಗಾರಿಕೆಯ ಜನರಿಗೆ ತನ್ನ ಯಂತ್ರ ಕೆಲಸವನ್ನು ಕಲಿಸುವದಕ್ಕೋಸ್ಕರವಾಗಿ ಅಲ್ಲಿಗೆ ಸನ್ ೧೬೦೫ನೇ ವರ್ಷ ಹೋದನು. ಆ ಕಾಲದಲ್ಲಿ ಆ ಪಟ್ಟಣವು ಕಲಾಕೌಶಲ್ಯಗಳಲ್ಲಿ ಹೆಸರಾಗಿತ್ತು. ಅವನು ತನ್ನ ಸಂಗಡ ತನ್ನ ತಮ್ಮನನ್ನೂ, ಏಳು ಜನ ಕೂಲಿಕಾರರನ್ನೂ ಕರೆದುಕೊಂಡು ಹೋಗಿದ್ದನು. ಅಲ್ಲಿಯ ಜನರು ಅವನಿಗೆ ಬಹಳ ಮಾನ ಮಾಡಿದ್ದರಿಂದ ಅವನು ಒಂಬತ್ತು ಯಂತ್ರಗಳನ್ನು ಹೂಡಿ ಒಳ್ಳೇ ಭರದಿಂದ ಕೆಲಸ ನಡಿಸಿದನು. ಆದರೆ ದುರ್ದೈವವು ಅವನ ಬೆನ್ನು ಬಿಡಲಿಲ್ಲ. ಆ ದೇಶದ ಅರಸನಾದ ನಾಲ್ಕನೇ ಹೇನರಿಯು ಅವನಿಗೆ ಆಶ್ರಯ ಕೊಟ್ಟಿದ್ದನು. ಅವನ ವಚನವನ್ನು ನಂಬಿ ಲೀಯು ತನಗೆ ಇನಾಮುಗಳೂ, ಸನ್ಮಾನವೂ, ಹೊಸ ಹಕ್ಕುದಾರಿಯು ಸಿಕ್ಕುವವೆಂದು ಬಹಳವಾಗಿ ನೆನಸಿಕೊಂಡಿದ್ದನು. ಆದರೆ ರಾವೇಲಾಕನೆಂಬ ಒಬ್ಬ ಹುಚ್ಚ ದಂಗಗಾರನು ಅದೇ ಸಮಯದಲ್ಲಿ ಆ ಅರಸನನ್ನು ಕೊಂದು ಹಾಕಿದ್ದರಿಂದ ಅವನಿಂದ ಪ್ರಾಪ್ತವಾದ ಸಹಾಯವೆಲ್ಲ ತತ್ಕಾಲವೇ ನಷ್ಟವಾಯಿತು. ಆದರೂ ಲೀ

ಯು ಪಾರಿಸಕ್ಕೆ ಹೋಗಿ ತನಗೆ ಪ್ರಾಪ್ತವಾಗತಕ್ಕದ್ದನ್ನು ಸಂಪಾದಿಸುವ ಯತ್ನ ಮಾಡಿದನು. ಆದರೆ ಅವನು ಪರದೇಶಸ್ಥನೂ, ಪ್ರಾತಸ್ತಂತ ಮತದವನೂ ಆವದರಿಂದ ಅವನ ಅರಿಕೆಯನ್ನು ಚನ್ನಾಗಿ ಮನಸ್ಸಿಗೆ ತಂದು ಯಾರೂ ವಿಚಾರಿಸಲಿಲ್ಲ. ಆವದರಿಂದ ಈ ಹೆಸರಾದ ಶೋಧಕನು ನಿರಾಶೆಯ ದುಖ್ಖದಿಂದಲೂ, ಶ್ರಮದಿಂದಲೂ ಕಳೆಗುಂದಿ ತೀರ ಬಡತನದಲ್ಲಿ ದಿಕ್ಕಿಲ್ಲದವನಾಗಿ ಪಾರಿಸಪಟ್ಟಣದಲ್ಲಿಯೇ ಮರಣ ಹೊಂದಿದನು.

ಲೀಯು ತಮ್ಮನು ತನ್ನ ಸಂಗಡಿಗರಾದ ಏಳು ಜನ ಕೆಲಸದವರೊಂದಿಗೆ ಯಂತ್ರಗಳನ್ನು ತೆಗೆದುಕೊಂಡು ಫ್ರಾನ್ಸದೇಶದೊಳಗಿಂದ ಓಡಿ ಹೋದನು. ಆದರೂ ಯೆರಡು ಯಂತ್ರಗಳು ಹಿಂದೆ ನಿಂತವು. ಜೇಮ್ಸಲೀಯು ನಾಟಿಂಗಂ ಶಾಯರಕ್ಕೆ ತಿರುಗಿ ಬಂದ ಮೇಲೆ ಥೋರೋಟನ್ನೆಂಬ ಗ್ರಾಮದಲ್ಲಿದ್ದ ಆಶತನ್ನೆಂಬ ಹಿಟ್ಟುಗಾರನು ಅವನಿಗೆ ಪಾಲಕೂಡಿದನು. ಲೀಯು ಇಂಗ್ಲಂಡವನ್ನು ಬಿಡುವದಕ್ಕೆ ಮುಂಚೆ ಇವನಿಗೆ ತನ್ನ ಯಂತ್ರದ ಕೆಲಸವನ್ನು ಕಲಿಸಿದ್ದನು. ಇವರಿಬ್ಬರೂ ಕೂಡಿ ಮೇಲೆ ಹೇಳಿದ ಏಳು ಜನರ ಸಹಾಯದಿಂದ ಥೋರೋಟನ್ನ ಗ್ರಾಮದಲ್ಲಿ ತಕ್ಕ ಮಟ್ಟಿಗೆ ಒಳಿತಾಗಿ ಯಂತ್ರದ ಕೆಲಸವನ್ನು ನಡಿಸಿದರು. ಈ ಯಂತ್ರದ ಕೆಲಸಕ್ಕೆ ಆ ವೂರು ವಿಶೇಷವಾಗಿ ಅನುಕೂಲವುಳ್ಳದ್ದಾಗಿತ್ತು; ಯಾಕೆಂದರೆ ಅದರ ನೆರೆಯಲ್ಲಿದ್ದ ಶೆರವುಡ್ ಯೆಂಬ ಪ್ರಾಂತದೊಳಗಿನ ಕುರಿಗಳಿಂದ ಬಹುಕಾಲದಿಂದ ಜನರಿಗೆ ಮೆಚ್ಚಿಕೆಯಾದ ಉಣ್ಣೆಯು ಹುಟ್ಟುತ್ತಿತ್ತು. ಆಶತನ್ನನು ಈ ಯಂತ್ರದಲ್ಲಿ ಒಂದು ದೊಡ್ಡ ಸುಧಾರಣೆ

ಯನ್ನು ಮಾಡಿದನೆಂದು ಹೇಳುತ್ತಾರೆ. ಮುಂದೆ ಕ್ರಮ ಕ್ರಮವಾಗಿ ಇಂಗ್ಲಂಡದ ಬೇರೆ ಬೇರೆ ಪ್ರಾಂತಗಳ ನಿವಾಸಿಗಳು ಈ ಯಂತ್ರವನ್ನು ಉಪಯೋಗಿಸ ಹತ್ತಿದರಿಂದ ಸ್ವಲ್ಪ ಕಾಲದೊಳಗೆ ಕಾಲುಚೀಲಗಳನ್ನು ಮಾಡುವ ಕಾರಖಾನೆಯು ಆ ದೇಶದಲ್ಲಿ ನಡೆಯುವ ದೊಡ್ಡ ದೊಡ್ಡ ಕಾರಖಾನೆಗಳಿಗೆ ಸರಿಯಾಯಿತು.

ಇತ್ತಲಾಗಿ ಈ ಯಂತ್ರದಲ್ಲಿ ಒಂದು ದೊಡ್ಡ ಸುಧಾರಣೆಯಾದದರಿಂದ ಇದರಿಂದ ಗೋಟುಗಳು * ಬಹಳವಾಗಿ ಹುಟ್ಟಹತ್ತಿದವು. ಸನ್ನು ೧೭೭೭ ನೇ ವರ್ಷದಲ್ಲಿ ಫ್ರಾಸ್ತನೂ, ಹೋಮ್ಸನೂ ಯೆಂಬ ಇಬ್ಬರು ಶಿಲ್ಪಿಗರು ಈ ಯಂತ್ರದಲ್ಲಿ ಕೆಲವು ಹೆಚ್ಚು ಕಡಿಮೆಯನ್ನು ಮಾಡಿ, ಅದರಿಂದ ಗೋಟುಗಳನ್ನು ಮಾಡಹತ್ತಿದರು. ಅದರನಂತರ ಸುಮಾರು ೩೦ ವರ್ಷಗಳೊಳಗೆ ಅವುಗಳ ಕಾರಖಾನೆಯು ಅತಿಶಯವಾಗಿ ಬೆಳೆದದರಿಂದ ೧೫೦೦ ಯಂತ್ರಗಳುಂಟಾಗಿ ಅವುಗಳಿಂದ ೧೫೦೦೦ ಕ್ಕಿಂತ ಹೆಚ್ಚು ಜನರು ಹೊಟ್ಟೆತುಂಬಿಕೊಳ್ಳಹತ್ತಿದರು. ಆದರೂ ಮುಂದೆ ಉಂಟಾದ ಕಾಳಗದ ಮೂಲಕವಾಗಿಯೂ ದೇಶಾಚಾರದಲ್ಲಿ ಹೆಚ್ಚು ಕಡಿಮೆಯುಂಟಾದದರಿಂದಲೂ, ಬೇರೆ ಯೆಷ್ಟೋ ಕಾರಣಗಳಿಂದಲೂ ನಾಟಿಂಗಂಮದ ಗೋಟುಗಳ ಕಾರಖಾನೆಗಳು ಬೇಗ ಹಿಂಮೆಟ್ಟಿದವು. ಆಗಿನಿಂದ ಜಾನಹೀಥಕೋಟನೆಂಬವನು ಬಾಬಿನ್‌ನೆಟ ಮೇಶಿನ ಯೆಂಬ ಯಂತ್ರವನ್ನು ರಚಿಸುವ ವರೆಗೂ ಆ ಕಾರಖಾನೆಗಳು ಮಂದವಾಗಿಯೇ ನಡಿಯುತ್ತಿದ್ದವು.

---

* ಇಂಗ್ಲೀಷ ಜನರು ವಿಶೇಷವಾಗಿ ಅವರ ಸ್ತ್ರೀಯರು ಅಲಂಕಾರಾರ್ಥವಾಗಿ ಮೈಮೇಲೆ ಧರಿಸುವದಕ್ಕೋಸ್ಕರ ಚಿತ್ರವಿಚಿತ್ರವಾಗಿ ಹೆಣೆದ ಜಾಳಿಗೆಗಳು.

ಹೀಥಕೋಟನು ತಿವರ್ತನಗ್ರಾಮದ ಪ್ರತಿನಿಧಿಯಾಗಿ ಪಾರ್ಲಿಮೆಂಟ ಸಭೆಯಲ್ಲಿದ್ದನು. ಇವನ ಯಂತ್ರದಿಂದ ಗೋಟುಗಳ ಕಾರಖಾನೆಗಳು ಪುನಃ ಮೊದಲಿನಂತೆ ಶೀಘ್ರವೇ ಬೆಳೆದವು.

Champu Ramayen and Champu Bharata with Commentaries in Canarese by M. Shantaviraya.

॥ಚಂಪೂಭಾರತೆ ಸವ್ಯಾಖ್ಯಾನೆ ಪ್ರಥಮಸ್ತಬಕಃ॥

॥ವಂಶಸ್ಥವೃತ್ತಂ॥

ಉಪೇತ್ಯ ತಾಂ ಪಾಂಡುರುದಾರವಿಕ್ರಮಃ।
ಪ್ರಜಾಮನಃ ಪಲ್ಲವಯನ್ ಪ್ರಶಾಸನಾತ್।
ಯಶಃಪ್ರಕಾಶೈರ್ಯಮುನಾಸಖೀಸಖೈಃ।
ವಿನಾಯ ಲೋಕಂ ನಿಜನಾಮವಾಚ್ಯತಾಂ॥೧೨॥

ಅನ್ವಯಃ

ತಾಂ=ಆ ಹಸ್ತಿನಾವತೀ ಪಟ್ಟಣವನ್ನು। ಉದಾರವಿಕ್ರಮಃ=ಮಹಾಪರಾಕ್ರಮವುಳ್ಳಂಥ। ಪಾಂಡುಃ=ಪಾಂಡುಚಕ್ರ ಮಹಾರಾಜನು। ಉಪೇತ್ಯ=ಪಡೆದು। ಪ್ರಜಾಮನಃ=ಪ್ರಜೆಗಳ ಮನವನ್ನು। ಪ್ರಶಾಸನಾತ್=ಪರಿಪಾಲನಪ್ಪೆಸೆಯಿಂದ। ಪಲ್ಲವಯನ್=ವಿಸ್ತರಿಸುತ್ತಿರ್ದವನಾಗಿ। ಯಮುನಾಸಖೀ=ಭಾಗೀರಥಿಯು। ಸಖೈಃ=ಆಪ್ತರೂಪವಾದಂಥ। (ಸದೃಶವಾದಂಥ) ಯಶಃಪ್ರಕಾಶೈಃ=ಕೀರ್ತಿಪ್ರಕಾಶಗಳಿಂದ। ಲೋಕಂ=ಜನವನ್ನು। ನಿಜನಾಮವಾಚ್ಯತಾಂ, ನಿಜ=ತನ್ನ। ನಾಮ=ಪಾಂಡು ಎಂಬ ಹೆಸರಿನ, ವಾಚ್ಯತಾಂ, ಅರ್ಥವನ್ನು (ಧವಲನಾದನೆಂಬರ್ಥವನ್ನು) ವಿನಾಯ=ಪಡೆದನು.

ಶಾಸ್ತ್ರವಿಷಯಃ

ಪಾಂಡುಃ ಕರ್ತೃ, ಲೋಕಂ ಕರ್ಮ, ನಿಜ ಸಾಮ್ರಾಜ್ಯಶ್ರಿಯಂ ಕರ್ಮ, ನಿನಾಯ ಕ್ರಿಯಾಪದ. ಇಂತುದ್ವಿಕರ್ಮಕ, ಕ, ಪ್ರಯೋಗ.। ಅ.—ಸ್ವಗುಣತ್ಯಾಗದ್ದೆಸೆಯಿಂದ ಅನ್ಯೋತ್ಕೃಷ್ಟಗುಣವನ್ನು ಅಪಹರಿಸಲು, ಶ್ಲೇಷಸಂಕೀರ್ಣವಾಗಲು, ತದ್ಗುಣಾಲಂಕಾರವೆನಿಸಿತು.।

॥ಭಾವಾರ್ಥ॥

ರಾಜಧಾನಿಯಾದ ಹಸ್ತಿನಾವತೀಪಟ್ಟಣದಲ್ಲಿ ಶೋಭಿಸುವ ಪಾಂಡುಚಕ್ರ ಮಹಾರಾಜನು ಪರಾಕ್ರಮನಾಗಿ ಪ್ರಜೆಗಳ ಮನಸ್ಸನ್ನು ರಕ್ಷಣೆಯಿಂದ ಹಬ್ಬಿಸಿ ಭಾಗೀರಥಿಯಂತೆ ಹೊಳೆವ ಕೀರ್ತಿಕಾಂತಿಗಳಿಂದ ಲೋಕವನ್ನು ತನ್ನ ಸಾಮ್ರಾಜ್ಯವನ್ನೂ ಪಡೆದನು.

॥ಚಂಪೂರಾಮಾಯಣೇ ಸವ್ಯಾಖ್ಯಾನೇ ಬಾಲಕಾಂಡಃ॥

॥ಗದ್ಯಂ॥

ಏತೌ ಮುನಿಃ ಪರಿಗೃಹ್ಯ ಸ್ವಾಂ ಕೃತಿಮಪಾಠಯತ್।೮೩॥

॥ಅನ್ವಯಃ॥

ಮುನಿಃ=ವಾಲ್ಮೀಕಿಯು। ಏತೌ=ಈ ಕುಶಲವರುಗಳನ್ನು। ಪರಿಗೃಹ್ಯ=ಶಿಷ್ಯತ್ವದಿಂದ ಅಂಗೀಕರಿಸಿ। ಸ್ವಾಂ=ಸ್ವಕೀಯವಾದಂಥ। ಕೃತಿಂ=ಕಾವ್ಯವನ್ನು। ಅಪಾಠಯತ್=ಪಾಠಮಾಡಿಸಿದನು.

॥ಭಾವಾರ್ಥಃ॥

ಕಾಮಕ್ರೋಧಾದಿಗಳ ಬಿಡುಗಡೆಯಿಂದ ದ್ರವ್ಯವನ್ನು ಉದಾಸೀನಮಾಡಿ ಧ್ಯಾನಸ್ಥನಾದ ವಾಲ್ಮೀಕಿಯು ತನ್ನ ಶಿ

ಸ್ಯರಾದ ಕುಶಲವರ್ಗೆ ರಾಮಾಯಣವನ್ನು ಬೋಧಿಸಿದನು.

॥ಗದ್ಯ॥

ತೌ ಪುನರಿತಸ್ತತೋ ಗಾಯಮಾನೌ ದೃಷ್ಟ್ವಾ ರಾಮಃ ಪ್ರಹೃಷ್ಟಮನಾಃ ಸ್ವಭವನಮಾನೀಯ ಭ್ರಾತೃಭಿಃ ಪರಿವೃತಶ್ಚರಿತಂ ನಿಜಂ ಗಾತುಮನ್ವಯುಙ್ಕ್ತ ॥೮೫॥

। ಅನ್ವಯಃ ॥

ಇತಸ್ತತಃ=ಅಲ್ಲಲ್ಲಿಯೂ। ಗಾಯಮಾನೌ=ರಾಮಾಯಣವನ್ನು ಪಠಿಸುವಂಥ। ತೌ=ಆ ಕುಶಲವರನ್ನು। ದೃಷ್ಟ್ವಾ=ನೋಡಿ। ರಾಮಃ=ಶ್ರೀರಾಮನು। ಪ್ರಹೃಷ್ಟಮನಾಃ=ರೂಪಗಾನ ಸಂಪತ್ತುಗಳಿಂದ ಸಂತೃಪ್ತಮನಸುಳ್ಳವನಾಗಿಯೂ। ಸ್ವಭವನಂ, ಸ್ವ=ತನ್ನ, ಭವನಂ=ಮನೆಯನ್ನು ಕುರಿತು, ಆನೀಯ=ಕರಿಸಿಕೊಂಡು। ಭ್ರಾತೃಭಿಃ=ಲಕ್ಷ್ಮಣಾದಿಗಳಿಂದ। ಪರಿವೃತಃ=ಪರಿವೇಷ್ಟಿತನಾಗಿಯೂ "ಕಿಂಕರ್ತುಂ=ಏನು ಮಾಡುವಗೋಸ್ಕರ" ನಿಜಂ=ತನ್ನ। ಚರಿತಂ=ಚರಿತ್ರವನ್ನು। ಗಾತುಂ=ಗಾನಮಾಡುವಗೋಸ್ಕರ। ಅನ್ವಯುಙ್ಕ್ತ=ಕೇಳಿದನು.

॥ಭಾವಾರ್ಥಃ॥

ಯಾವಾಗಲು ರಾಮಾಯಣಪಠಣದಿಂದ ಯುಕ್ತರಾದ ಕುಶಲವರನ್ನು ನೋಡಿ ಸಂತುಷ್ಟನಾಗಿಯೂ ಲಕ್ಷ್ಮಣಾದಿಗಳಿಂದ ಯುಕ್ತನಾಗಿಯೂ ತನ್ನ ಮನೆಯಲ್ಲಿ ಕರಿಸಿಕೊಂಡು ಅವರಿಂದ ಶ್ರೀರಾಮಚಂದ್ರನು ರಾಮಾಯಣವನ್ನು ಕೇಳಿದನು.

ಶಾಂತವೀರ ರಾಜದೇವ ಕಿತ್ತೂರ ಟ್ರೇನಿಂಗಕಾಲೇಜ.

NOTICES.

ನೋಟೀಸುಗಳು.

ಮುಹೆರಬಾನ ರಸಲ ಸಾಹೇಬ ಬಹಾದ್ದೂರ ಯೆ. ಇನಸ್ಪೆಕ್ಟರ ದಕ್ಷಿಣಭಾಗ ಇವರು ಸ್ಥಾಪಿಸಿದಂಥ "ವರ್ಥ ಪ್ರಾಯಿಜ" ಯೆಂಬ ಇನಾಮಿನ ಬಗ್ಗೆ—

೧೮೭೩ನೇ ಇಸವಿಯ ಅಕ್ಟೋಬರ ತಿಂಗಳಲ್ಲಿ ಮೇಲೆ ಹೇಳಿದ ಇನಾಮಿನ ಪರೀಕ್ಷೆಯು ಸಲುವಾಗಿ ಇಬ್ಬರು ಉಮೇದವಾರರು ಮುಹೆರಬಾನ ಯೆ. ಇನಸ್ಪೆಕ್ಟರ ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರ ಮುಂದೆ ಹಜರಾದರು ಇವರಲ್ಲಿ, ಲಕ್ಷ್ಮೇಶ್ವರ ತಾಲೂಕಿನ ಪೈಕಿ ಶಿಗ್ಲೀ ಶಾಲೆಯ ಹೆಡ್‌ಮಾಸ್ತರನಾದ ವಿಷ್ಣು ಪರಶುರಾಮ ಹ್ರೈಸಕರ ಈತನು ಯೆಲ್ಲಕ್ಕೂ ಹೆಚ್ಚಂದರೆ ೧೩೫ ಗುಣಗಳನ್ನು ಪಡೆದನು. ಯೆರಡನೇ ಉಮೇದವಾರನಾದ ರಾಮಚಂದ್ರ ದಾದಾಚಾರ್ಯ ಜೋಶಿ, ಬೆಳಗಾವೀ ಟ್ರೇನಿಂಗಕಾಲೇಜದ ವಿದ್ಯಾರ್ಥಿ, ಇವನು ೧೩೨ ಗುಣಗಳನ್ನು ಪಡೆದನು. ಒಟ್ಟಿಗೆ ಪಡೆಯತಕ್ಕ ಗುಣಗಳು ೨೫೦ ಇದ್ದವು. ವಿಷ್ಣು ಪರಶುರಾಮ ಹ್ರೈಸಕರನು ವ್ಯಾಕರಣ ಕವಿತಾಪದ್ಧತಿ ಮುಂತಾದವುಗಳಲ್ಲಿ ತಕ್ಕಷ್ಟು ಜ್ಞಾನವುಳ್ಳವನಲ್ಲೆಂದು ತೋರಿಬಂತು. ಮತ್ತು ಅವನು ಪಡೆದ ಗುಣಗಳು ಒಟ್ಟಿಗೆ ಪಡೆಯತಕ್ಕ ಗುಣಗಳ ಅರ್ಧಕ್ಕಿಂತ ಹತ್ತು ಮಾತ್ರ ಹೆಚ್ಚಾಗಿರುತ್ತವೆ. ಆದರೆ ರಸಲ್ ದೊರೆಗಳಿಂದ ಸ್ಥಾಪಿಸಲ್ಪಟ್ಟ ನಿಯಮಗಳ ಪ್ರಕಾರ ಉಮೇದವಾರನು ಒಟ್ಟು ಗುಣಗಳಲ್ಲಿ ನಿಕೃಷ್ಟ ಪಕ್ಷಕ್ಕೆ ನೂರಕ್ಕೆ ಯಪ್ಪತ್ತೈದು ಗುಣಗಳನ್ನು ಪಡೆದರೆ ಮಾತ್ರ ಅವನು ಈ ಇನಾಮಿಗೆ ಯೋಗ್ಯನಾಗುತ್ತಾನೆ. ಇ

ದರಂತೆ ನೋಡಲಾಗಿ ವಿಷ್ಣು ಪರಶುರಾಮ ಮ್ಹೈಸಕರನು ಈ ಇನಾಮಿಗೆ ಯೋಗ್ಯನಾಗುವದಿಲ್ಲ. ಆದಕಾರಣ ಈ ಸನ್ನ ೧೮೭೩ನೇ ವರ್ಷದ ಇನಾಮಿನ ಹಣವು ಕೊಡಲ್ಪಡಲಾಗದು.

ಬೆಳಗಾವಿ
ತಾ|| ೨೫ ನೊವ್ಹೆಂಬರ
೧೮೭೩.

(Signed) J. F. Flet.
ಯು ಇನಸ್ಪೆಕ್ಟರ ದಕ್ಷಿಣಭಾಗ.

ನಿಜವಾದ ಭಾಷಾಂತರವು.

Venkat Rango Katti.
ಕನ್ನಡ ಟ್ರಾನ್ಸಲೇಟರ.

ದಕ್ಷಿಣ ಭಾಗದೊಳಗಿನ ಫಸ್ಟ್ ಗ್ರೇಡ ಮತ್ತು ಸೆಕಂಡಗ್ರೇಡ ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್‌ಮಾಸ್ತರರಿಗೂ ವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್‌ಮಾಸ್ತರರಿಗೂ ಸೂಚನು—

ಫಸ್ಟ್ ಗ್ರೇಡ ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್‌ಮಾಸ್ತರರು ನೊಂದು ಬದಿಯಲ್ಲಿ, ಸೆಕಂಡಗ್ರೇಡ ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್‌ಮಾಸ್ತರರಾಗಲಿ ವ್ಹರ್ನ್ಯಾಕ್ಯುಲರ ಶಾಲೆಗಳ ಹೆಡ್‌ಮಾಸ್ತರರಾಗಲಿ ಮತ್ತೊಂದು ಬದಿಯಲ್ಲಿ ಇದ್ದು, ಅವರು ಸರಕಾರೀ ಸಂಗತಿಗಳ ಸಲುವಾಗಿ ತಮ್ಮ ತಮ್ಮೊಳಗೆ ಪತ್ರವ್ಯವಹಾರ ನಡಿಸುವ ಪ್ರಸಂಗ ಬಂದಾಗ ಅವರು ಯಾವಾಗಲೂ ತಮ್ಮ ಕಾಗದ ಪತ್ರಗಳನ್ನು ಡಿ. ಯು. ಇನಸ್ಪೆಕ್ಟರರ ಮುಖಾಂತರವಾಗಿ ಕಳುಹತಕ್ಕದ್ದು; ಮತ್ತು ಅವರು ನ್ನೊಬ್ಬರಿಗೊಬ್ಬರು ವಿನಯವು

ಮರ್ಯಾದೆಯುಳ್ಳ ಭಾಷೆಯಿಂದ ಪರಸ್ಪರ ವಿಚಾರ ಬರೆಯುವದರಲ್ಲಿ ಜಾಗ್ರತೆವಹಿಸತಕ್ಕದ್ದು.

ಬೆಳಗಾವೀ
ತಾ॥ ೫ ನೋವ್ಹೆಂಬರ
೧೮೭೯.

(Signed) J. F. Fleet.
ಯು. ಇನಸ್ಪೆಕ್ಟರ ದಕ್ಷಿಣಭಾಗ.

ನಿಜವಾದ ಭಾಷಾಂತರವು.

Venkat Rango Katti.
ಕನ್ನಡ ಟ್ರಾನ್ಸಲೇಟರ.

A new Government Resolution.

ಸರಕಾರಿ ಹೊಸ ಠರಾವು.

ತಾಪ್ರದ ನಾಣ್ಯಗಳು.

ನಂಬರು ೯೮೫೯.

ವಸೂಲೀ ಖಾತೆ.

ಮುಂಬಯಿ ಕೋಟೆ. ತಾ. ೨೮ನೇ ಅಗಟಂಬರ ಸನ್ನ ೧೮೭೯—

ಆಕ್ಟಿಂಗ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಇವರು ತಮ್ಮ ಪತ್ರ ನಂಬರು ೯೯೦೯ ತಾ. ೧೦ನೇ ಅಗಟಂಬರಿನದರಲ್ಲಿ ಶಾಲೆಗಳ ಫೀಯು ಮೂಲಕವಾಗಿಯೂ ಪುಸ್ತಕಗಳ ವಿಕ್ರಯದ ಮೂಲಕವಾಗಿಯೂ ಭರಣಾ ಮಾಡಲಿಕ್ಕೆ ತರಲ್ಪಟ್ಟ ತಾಪ್ರದ ಹಣವನ್ನು ತಿಜೋರಿಗಳ ಅಧಿಕಾರಸ್ಥರು ಸ್ವೀಕರಿಸ ತಕ್ಕದ್ದೆಂತ ಪ್ರಸಿದ್ಧಿಸಲ್ಪಡಬೇಕೆಂದು ಪ್ರಾರ್ಥಿಸುತ್ತಾರೆ; ಪೊಳಗಡೆಯಲ್ಲಿ ಪ್ರೊಬ್ಬ ತಿಜೋರಿಯ ಅಧಿಕಾರಸ್ಥನು ಪುಸ್ತಕಗಳ ಮೂಲಕವಾಗಿ ಬಂದ

ತಾಮ್ರದ ನಾಣ್ಯಗಳನ್ನು ಸ್ವೀಕರಿಸಲಿಕ್ಕೆ ಅಡ್ಡಿಯು ತಕ್ಕೊಂಡಪನೆಂದು ಬರಿಯುತ್ತಾರೆ; ಮತ್ತು ತಾಮ್ರದ ನಾಣ್ಯಗಳನ್ನು ಬದಲು ಮಾಡಿ ಬೆಳ್ಳಿಯ ನಾಣ್ಯಗಳನ್ನು ತರಲಿಕ್ಕೇ ಬೇಕೆಂದು ಹೇಳಿದರೆ ಅದು ಮಾಸ್ತರ ಜನರ ಮೇಲೆ ಬಲಾತ್ಕಾರವಾಗುವದೆಂತಲೂ, ಆ ವಹಿವಾಟಿನಿಂದ ದುರಾಚರಣೆಗೆ ಮಾರ್ಗವಾಗುವದೆಂತಲೂ ತಿಳಿಸುತ್ತಾರೆ.

ಠರಾವು—ಶಾಲೆಗಳ ವಿದ್ಯಾರ್ಥಿಗಳಿಂದ ಬಂದಂಥಾ ಫೀಹಣದಲ್ಲಿಯೂ ಪುಸ್ತಕಗಳ ವಿಕ್ರಯದ ಹಣದಲ್ಲಿಯೂ ತಾಮ್ರದ ನಾಣ್ಯಗಳೇ ಹೆಚ್ಚಾಗಿ ಇರುತ್ತಿದ್ದದರಿಂದ ಆ ಹಣವನ್ನು ತಾಮ್ರದ ನಾಣ್ಯಗಳ ರೂಪದಿಂದ ಸ್ವೀಕರಿಸಲಿಕ್ಕೆ ತಿಜೋರಿಗಳ ಅಧಿಕಾರಸ್ಥರು ನಾಕಾರಿಸಲಾಗದು.

(Signed) F. S. Chapman.
ಸರಕಾರದವರ ಮುಖ್ಯ ಸೆಕ್ರೆಟರಿ.
ನಿಜವಾದ ಭಾಷಾಂತರವು.

Venkat Rango Katte
ಕನ್ನಡ ತ್ರಾನ್ಸಲೇಟರ.

PRIDE.
ಅಭಿಮಾನವು.

ನಾವು, ನಮ್ಮ ಮೇಲೆ ಅಥವಾ ನಮ್ಮ ಇಷ್ಟ ಮಿತ್ರರ ಮೇಲೆ ಯಾವ ದೃಢ ಮಮತೆಯನ್ನಿಡುತ್ತೇವೋ ಆ ಮನೋಭಾವದ ಹೆಸರು ಅಭಿಮಾನವು. ಈ ಗುಣವು ಯಾವತ್ತರಲ್ಲ್ಯೂ ಉಂಟು. ನಮಗೆ ಇಲ್ಲವೆ ನಂಮ ಇಷ್ಟ ಮಿತ್ರರಿಗೆ ಯಾರಾದರು ಪೀಡೆ ಮಾಡ ತೊಡಗಿದರೆ, ಕ್ರೈ

ಲಾದ ಮುಷ್ಟಿಗೂ ಯತ್ನ ಮಾಡಿ, ಅದಕ್ಕಡ್ಡ ಬರೋಣ, ಅ
ಥವಾ ಅವರ ದುಷ್ಟ ಸಂಕಲ್ಪ ಮುರಿಯೋಣ, ಮತ್ತು ಅ
ವರಿಂದ ದುಃಖ ಹೊಂದಿದ್ದಾಗ ತಂಮ ತಂಮವರನ್ನು ಕಾಪಾ
ಡೋಣ, ಇಂಥಾ ಅನೇಕ ದೊಡ್ಡ ದೊಡ್ಡ ಸಮಯಗಳಲ್ಲಿ
ಇವರ ಉಪಯೋಗವದೆ; ಪ್ರಾಣಿಗಳಲ್ಲಿ ಒಂದು ವೇಳೆ ಈ
ಗುಣವನ್ನು ಜಗದ್ವಂಧ್ಯನು ಇಡದೇ ಇದ್ದರೆ, ಇಂದಿಗೆ ಈ
ಸೃಷ್ಟಿ ವ್ಯವಹಾರಗಳಲ್ಲೇನೇನೂ ಚಮತ್ಕಾರ ಉಳಿಯು
ತ್ತಿದ್ದಿಲ್ಲವು. ಅಭಿಮಾನವದಂತೇ ಜನರು ಒಬ್ಬರಿಗೊಬ್ಬ
ರು ಈರ್ಷೆಯಿಂದ ಕಲಾ, ಕೌಶಲ್ಯ, ನೀತ್ಯಾಚರಣಮುಂ
ತಾದ ಸದ್ಗುಣಗಳಲ್ಲಿ ಒಬ್ಬರಿಂದೊಬ್ಬರು ಮೇಲಾಗಿ, ಕೀ
ರ್ತಿಯನ್ನು ಪಡಿಯಬೇಕೆಂಬ ಸಾಹಸ ಮಾಡುತ್ತಾರೆ.

ಶಸ್ತ್ರದ ಉಪಯೋಗ ಹ್ಯಾಗೆ ಮಾಡೀತು ಹಾಗೆ ಆಗು
ತ್ತದೆ. ಮತ್ತು ಬೆಂಕಿಯನ್ನು ಯಾವ ಕಟ್ಟಿಗೆಗೆ ಹಚ್ಚೀ
ತು ಅದನ್ನು ಸುಡುತ್ತದೆ; ಉಂಬಡಿಗನು ತಂನ ಶಸ್ತ್ರಗಳಿಂ
ದ ಬೇಕಾದ ಕಟ್ಟಿಗೆಯನ್ನು ಕೆತ್ತಿ ತಯಾರ ಮಾಡುತ್ತಾ
ನೆ. ಕಲ್ಲುಕುಟಿಕನು ತಂನ ಉಳಿಯಿಂದ ಎಂಥಾ ಕಲ್ಲನ್ನಾ
ದರೂ ಒಡೆದು ರೂಪಕ್ಕೆ ತರುತ್ತಾನೆ; ಕುಂಭಾರನು ತಿಗಟಿ
ಸಾಧನದಿಂದ ತರ ತರದ ಮಣ್ಣು ಪಾತ್ರೆಗಳನ್ನು ತಯಾರ
ಮಾಡುತ್ತಾನೆ; ಹೀಗೆ ಮಾಡದೆ ಆ ಶಸ್ತ್ರಗಳನ್ನು ವಿಪರೀತ
ಉಪಯೋಗ ಮಾಡಿದರೆ ಅದಕ್ಕವು ಹಿಮ್ಮೆಟ್ಟಲಾರವು.
ಯಾಕಂದರೆ ಸಾಧನಗಳಂತಿಷ್ಟವೋ ಅವು ಯಾವತ್ತು ಪರ
ತಂತ್ರಗಳವೆ. ಅವುಗಳನ್ನು ಯಾವ ಕಡೆಗೆ ಹ್ಯಾಗೆ ಪ್ರ
ಯೋಗ ಮಾಡೀತು ಆ ಕಡೆಗೆ ಅವು ತಂಮ ಸ್ವಧರ್ಮದಂ
ತೇ ಕೆಲಸ ಮಾಡುವವು. ಹ್ಯಾಗಂದರೆ ಬೆಂಕಿಯನ್ನು ಅಡಿ

ಗೆಯು ಉಪಯೋಗ ಮಾಡವೆ ಮನಿ ಮುಂತಾದ ಪದಾರ್ಥ
ಗಳಿಗೆ ಹಚ್ಚಿದರೆ ಇದು ನಂನ ಯಜಮಾನನ ವಸ್ತುವೆಂದು
ಸುಡದಲೆ ಬಿಟ್ಟತೇ? ಬಿಡಲಿಕ್ಕಿಲ್ಲೆಂಬರ್ಥ. ಕಾರಣ ಅದು
ಜಡವೆಂಬು ಸಿದ್ಧ. ಪರಂತು ಇಲ್ಲಿ ಚಲೋ, ಕೆಡಕು, ಇದ
ರ ವಿಷಯಕ್ಕೆ ಅವುಗಳ ಪ್ರವರ್ತಕರಂನು ಕುರಿತು ವಿಚಾರ
ಮಾಡತಕ್ಕದ್ದು; ಒಕ್ಕಲಿಗನು ಕುಡುಗೋಲಿನಿಂದ ತಂನ
ಕೊರಳಂನು ಕೊಯಿಕೊಳ್ಳಲು, ಬಡಿಗನು ಬಾಚಿಯಿಂದ ತ
ನ್ನ ಕಾಲನ್ನೇ ಕೆತ್ತಿ ಕೊಳ್ಳಲು, ಕಲ್ಲುಕುಟಿಕನು ಉಳಿಯಿಂ
ದ ತಂನ ಬೊಟ್ಟನಮೇಲೆ ಹೊಡಕೊಂಡು ಘಾಯ ಮಾಡಿ
ಕೊಳ್ಳಲು, ಮತ್ತು ಕುಂಬಾರನು ತಾನೇ ಚಕ್ರದಮೇಲೆ
ಕೂತು ಗರ್ರನೆ ತಿರಿವಿಕೊಂಡು ಮೂರ್ಛ ಹೊಂದಲು, ಈ ಅ
ಚೇತನ ಸಾಧನಗಳಿಂದಾದ ಅಪಾಯಕ್ಕೆ ಅವುಗಳ ಕಡಿಗೇ
ನು ದೋಷವು? ಸೂತ್ರಧಾರನು ಸೂತ್ರ ಎಳದಂತೇ ಗೊಂ
ಬಿಗಳು ಕುಣಿಯುವವು. ಇದರಿಂದ ತಿಳಿಯುವದೇನಂದರೆ;
ಈ ಈ ಪ್ರಕಾರದಿಂದಾದ ಸರ್ವ ಅನರ್ಥಗಳ ದೋಷವು
ಅವುಗಳ ಪ್ರವರ್ತಕರ ಕಡಿಗೇ ಉಂಟು. ಈ ಕಾರಣದ್ದೆ
ಸೆಯಿಂದ ಸೃಷ್ಟಿ ಕರ್ತನಾದ ದೇವರು ಯಾವತ್ತು ಗುಣ
ಸಾಧನಗಳಂನು ಚಲೋ ರೀತಿಯಿಂದುಪಯೋಗ ಮಾಡಿ
ಕೊಂಬೋ ತ್ರಾಣವೂ, ಅದರಿಂದುಂಟಾಗುವ ಕಲ್ಯಾಣವೂ,
ಈ ನಂಮ ತಿಳುವಳಿಕೆಯವರ ಕಡಿಗೆ ಒಪ್ಪಿಸಿದ್ದಾನೆ. ಮ
ತ್ತು ಬೇಕಾದಲ್ಲಿ ಉಪಯೋಗ ಮಾಡಲಿಕ್ಕೂ ಸ್ವತಂತ್ರತೆ
ಕೊಟ್ಟದ್ದಾನೆ; ಹಾಗಲ್ಲವೆ ಅವುಗಳಂನು ನಾವು ನಂಮ ವಿ
ವೇಕ ಬುದ್ಧಿಯಂನು ಒತ್ತಟ್ಟಗೆ ದೊಬ್ಬಿ ದುಷ್ಕೃತ್ಯಕ್ಕೆ ಉ
ಪಯೋಗಿಸಿದರೆ ಅದರಿಂದುಂಟಾದ ದೋಷವು ಆ ಗುಣಗ

ಳ ಕಡೆಗೆ ಇಲ್ಲವೆ ಗುಣಕರ್ತನ ಕಡೆಗೆ ಹತ್ತದೆ ಸರ್ವ ಪ್ರಕಾರದಿಂದಲೂ ಅದಕ್ಕೆ ನಾವೇ ಪಾತ್ರರಾಗುತ್ತೇವೆ. ದೇವರು ನಮ್ಮಲ್ಲಿ ಉತ್ತಮ ಗುಣಗಳನ್ನೇ ಇಟ್ಟಿದ್ಧಾನೆ; ಪರಂತು ನಾವು ಅವುಗಳನ್ನು ಯಾವಾಗ್ಯ ದುಷ್ಟ ಕೆಲಸದ ಕಡೆಗೆ ಯೋಜನಾ ಮಾಡುತ್ತೇವೋ? ಆಗ್ಯ ಅವುಗಳಿಗೆ ದುರ್ಗುಣಗಳೆನ್ನುತ್ತಾರೆ; ಮತ್ತು ಅವನ್ನು ಹೊಸದಾಗಿ ನಾವೇ ಉತ್ಪನ್ನ ಮಾಡಿದೆವೆಂತ ಸಿದ್ಧವಾಗುತ್ತದೆ. ಇಂಥಾ ಗುಣಗಳಿಂದಾದ ಪರಿಣಾಮದ ಉದಾಹರಣವು. ಪ್ರಾಣಿಗಳಲ್ಲಿ ಯಾವ ಅಭಿಮಾನದ ಗುಣ ಕಾಣುತ್ತದೋ ಅದನ್ನು ಮನುಷ್ಯರಲ್ಲಿ ಯಾರೂ ಎಲ್ಲಿಂದ ತಂದು ಹಾಕಿರೋದಿಲ್ಲವು; ತನ್ನಿಂದ ತಾನೇ ಉಂಟು. ಅಂದರೆ—ಶರೀರವನ್ನ್ಯಾವ ನಿರ್ಮಾಣ ಮಾಡಿದನೋ ಅದೇ ಜಗತ್ಕರ್ತನು ಸಂರಕ್ಷಣದ್ದೆಸೆಯಿಂದ ಇದನ್ನಿಟ್ಟನೆಂದು ತೋರುತ್ತದೆ; ಇದು ಕೆಟ್ಟದೆಂತ್ಯಾರೆಂದಾರು? ಒಂದು ವೇಳೆ ಉದ್ಧಟತನದಿಂದ ಅಂದರೆ ಅದನ್ನು ಬಿಡುವದಕ್ಕೆ ಯಾರು ಸಮರ್ಥರಾದಾರು? ಇದರ ಉಪಯೋಗವನ್ನು ಮೊದಲು ಸ್ವಲ್ಪದರಲ್ಲೇ ಹೇಳಿದೆ; ಅದನ್ನು ಪುನಃ ತಿರಿಗಿ ಇಲ್ಲಿ ವರ್ಣನ ಮಾಡೋ ಕಾರಣ ಇಲ್ಲ. ಪರಮೇಶ್ವರನು ನಮಗೆ ನಿಷ್ಕಲಂಕ ಹಾಗೂ ಉತ್ತಮ, ಇಂಥಾ ಗುಣವನ್ನು ಕೊಟ್ಟಿದ್ಧಾನೆ. ಅದನ್ನು ಉಚಿತ ಸ್ಥಳದಲ್ಲಿ ಪ್ರಯೋಗಮಾಡಿ ನಿರ್ಮಲವಾದ ಸುಖವೂ, ಕಲ್ಯಾಣವೂ, ದೊರಕಿಸಬೇಕು. ಹೀಗೆ ಮಾಡದಲೆ ಅವಿಚಾರದಿಂದ ನಾವು ನಮ್ಮ ಅಲ್ಪ ಗುಣದಲ್ಲೇ ಅದರ ದೃಢತ್ವ ಸ್ಥಾಪನ ಮಾಡಿದರೆ ಹ್ಯಾಗೆ ಸ್ಫಟಿಕದ(ಒಂದು ತರದ ಹೊಳೆಯುವ ಕಾಜಿನ)ಮಣಿಯಮೇಲೆ ಯಾವ ಬಂಣ

ದ ಹೂವಿನ ಛಾಯೆಯಾದರೂ ಅದರ ಮೇಲೆ ಬರ ಮಾಡಿದರೆ ಆ ಹೂವಿನ ಬಣ್ಣದಂತೇ ಆ ಮಣಿಯು ಕಾಣುತ್ತದೆ. ಇದಕ್ಕನುಸಾರವಾಗಿಯೇ ಈ ಶುದ್ಧ ಅಭಿಮಾನದ ಮೇಲೆ ಗರ್ವನ ಆರೋಪ ಬಂದೀತು; ನಾ ಶಹಾಣ್ಯಾ, ನಾ ದೊಡ್ಡವನು, ಮತ್ತು ಬಲಾಢ್ಯನು, ಅತಿ ಧನವಂತನು ಎಂದು ತಿಳಿದು ಅಲ್ಪ ಗುಣದ್ದು ಗುಡ್ಡದಷ್ಟು ಅಭಿಮಾನ ಹಿಡಿಯೋಣಕ್ಕೆ ಗರ್ವವೆನ್ನುತ್ತಾರೆ. ಈ ದುರ್ಗುಣವು ಜನರಲ್ಲಿ ಹ್ಯಾಗೆ ಅಪ್ರಿಯವೋ ಹಾಗೆ ಎರಡನೇವು ಥೋಡೇನೇ ಇದ್ಧವು; ಯಾಕಂದರೆ ಗರ್ವಿನವನು ಎರಡನೇದವರಲ್ಲಿ ಎಂಥಾ ಉತ್ತಮ ಗುಣಗಳಿದ್ದರೂ ಅವನ್ನು ತುಚ್ಛ ಮಾಡದಲೆ ಬಿಡಲಾರನು. ಅದರಂತೆ ಜನರಾದರೂ ಅವನನ್ನು ಧಿಕ್ಕರಿಸುವರು. ಈ ಗುಣದಿಂದ ಬಹಳೇ ಕೆಟ್ಟ ಗತಿಯಾಗುತ್ತದೆಂಬದು ಯಾವತ್ತರಿಗೂ ಗೊತ್ತದೆ. ಪೂರ್ವಕಾಲದಲ್ಲಿ ಲಂಕೇಶ್ವರನು ಎಂಥಾ ಸಮರ್ಥನಿದ್ದಾಗ್ಯೂ ಗರ್ವದಿಂದ ನಷ್ಟ ಹೊಂದಿದನು. ಇದು ಪುರಾಣ ಪ್ರಸಿದ್ಧವೇ ಅದೆ; ಇದಕ್ಕೇನಿಕೇ ಕಾಲದವಳಗಡೆ ಸೋನಪತ್ತ ಪಾನಪತ್ತದ ಬಳಿಯಲ್ಲಿ ಶ್ರೀಮಂತ ಭಾವೂಸಾಹೇಬನು ಅಲ್ಪಗರ್ವದಿಂದೇ ಅಫಗಾಣಿಯರ ಅಧರ್ಮಿಕ ಕಾಳಗದಲ್ಲಿ ತನ್ನ ಪ್ರಬಲವಾದ ದಳವನ್ನಾಹುತಿ ಕೊಟ್ಟನು. ಆ ದುಃಖದಿಂದ ಯಾವತ್ತು ಮಹಾರಾಷ್ಟ್ರದೇಶವು ತುಂಬಿಕೊಂಡಿತ್ತು. ಇದು ವಳಗಡೆಯ ಇತಿಹಾಸದಲ್ಲಿ ಪ್ರಸಿದ್ಧ ಯುಂಟು. ಮೊನ್ನೆ ಮೊನ್ನೆ ಅಂದರೆ ಸುಮಾರು (೬೫) ವರುಷಕ್ಕೆ ಹಿಂದೆ ರಸಿಯನ್ ಬಾದಶಹಾ ನಿಕೋಲ್ಸ ಎಂಬವನ ಗರ್ವದಿಂದ ಯಾವತ್ತು ಯುರೋಪಖಂಡೇ ಡಳಮಳಸಿತ್ತು; ಆ ಕಾಲದಲ್ಲಿ ಮನು

ಸ್ವೈರದೂ, ಪ್ರವೃದ್ಧೂ, ಮತ್ತು ವ್ಯಾಪಾರದ್ದು ಬಹಳೇ ಕೇಡಾಯಿತು. ಎಷ್ಟೋ ಜನರು ಮಕ್ಕಳ ಶೋಕದಲ್ಲಿ ಮುಳುಗಿದರು, ಮತ್ತೇನಿಕೆ ಸ್ತ್ರೀಯರು ರಂಡೆ ಮುಂಡೆಗಳಾಗಿ ಗೊತ್ತು ಗುರಿ ಯಿಲ್ಲದವರಾದರು; ಮತ್ತು ಸಾವಿರಾರು ಚಿಕ್ಕ ಚಿಕ್ಕ ಮಕ್ಕಳು ಪರದೇಶಿಗಳಾದವು. ಇದೇ ಮೇರಿಗೆ ಅನೇಕ ಸಿಪಾಯಿಗಳು ಚಂನಾಗಿ ಪ್ರಾಯಪಟ್ಟವರಾಗಿದ್ದರು; ಹಾಗು ಏನಿಕೇ ವೀರರು ರಣದಲ್ಲಿ ಮಡಿದರು. ಅವರ ಹೆಂಡರು ಮಕ್ಕಳದೆಸೆಯಿಂದ ಕೆಲವು ರಾಜರಿಗೆ ಭಿಕ್ಷೆ ಸುದ್ಧಾ ಬೇಡ ಬೇಕಾಯಿತು. ಇದೇ ಪ್ರಕಾರ ಫ್ರಾನ್ಸ ದೇಶದ ನೇಪ್ರೋಲಿಯನ್ ಬಾದಶಹಾನ ಗರ್ವದಿಂದ ಫ್ರಾನ್ಸ ಮತ್ತು ಜರ್ಮನಿ ಈ ಉಭಯ ಪಕ್ಷದಲ್ಲಿ ಕಲಹ ನಡೆದು ಕೊನೆಗೆ ಫ್ರಾನ್ಸದ ಮರಿಣಾಮವಾದ್ದು ಈಗಿನ ವರ್ತಮಾನ ಪತ್ರಗಳಲ್ಯಾದರೂ ಪ್ರಸಿದ್ಧವದೆ. ಸಾರಾಂಶ ಗರ್ವವೆಂಬುವದು ಬಹಳೇ ಕೆಟ್ಟ ದುರ್ಗುಣವು ಸರಿ. ಕಾರಣಾ ಸೊಕ್ಕು ಧಿಃಕ್ಕರವೆಂದು ನುಡಿಯುವ ಗಾದೆಯು ಸತ್ಯವೇ. ಈ ಪ್ರಕಾರವಾಗಿ ಗರ್ವವು ಬಹಳ ನಷ್ಟಪಡಿಸುವ ದುರ್ಗುಣವಾಗಿಧೆ. ಇದನ್ನು ಜಗದೀಶನು ಕೊಟ್ಟಿದ್ದು ಅಥವಾ ಮಾಡಿದ್ದಲ್ಲವು; ನಾವೇ ಈ ಶುದ್ಧ ಅಭಿಮಾನವನ್ನು ಅಯೋಗ್ಯ ಸ್ಥಳದಲ್ಲಿ ಉಪಯೋಗ ಮಾಡೋಣದರಿಂದ ಉತ್ಪನ್ನವಾಗುತ್ತದೆ. ಇದರ ಸಲುವಾಗಿ ದುರ್ಗುಣವು ಮನುಷ್ಯರಿಂದುಂಟಾದದ್ದೆಂದು ತಿಳಿಯತಕ್ಕದ್ದು. ಗರ್ವದಿಂದ ಏನೂ ಕೇಡಾಗದಿದ್ದರು ಅಂತಃಕರಣ ಕಳೆಗುಂದಿಸೋ ನಾಚಿಕೆಯನ್ನುಂಟುಮಾಡುತ್ತದೆ. ಆದರೆ ಇದೇನು ಸ್ವಲ್ಪ ಕೇಡೇ? ಅಲ್ಲೆಂಬರ್ಥವು ಇದರದೆಸೆಯಿಂದ ನಮ್ಮಾಪತ್ತುರಿಗೂ ಗರ್ವವಂನೆಳ್ಳಷ್ಟು ಸಹ ಹಿಡಿಯದ

ಲೇ ಬಿಟ್ಟು ಬಿಡತಕ್ಕದ್ದು ಚಿತವದೆ.

ನಾವು ಅಭಿಮಾನವನ್ನ್ಯವಸ್ಥಳದಲ್ಲಿ ಉಪಯೋಗ ಮಾಡತಕ್ಕದ್ದು, ಇದು ವಿವೇಕ ಪ್ರಕಾಶದಿಂದ ಝಗ್ಗನೆ ಕಾಣುವದು. ಹ್ಯಾಗೆಂದರೆ ಉಚಿತ ಕಾರ್ಯಕ್ಕೆ ಅಭಿಮಾನವನ್ನುಪಯೋಗ ಮಾಡಬೇಕು. ಮತ್ತು ನಾವು ಸದ್ಗುಣಗಳಲ್ಲಿ ಯಾವಾಗಲೂ ಕೊರತೆಯುವರಾಗಿರುತ್ತೇವೆ. ಇದರಪೆಸೆಯಿಂದ ನಾವು ಯಾವದಾದರೂ ಮಹತ್ವ ಹಿಡಿದ್ದರಲ್ಲಿ ಏನಾದರೂ ಸತ್ಯಾಂಶ ಕಡಿಮೆ ಇದ್ದದ್ದು ಪೂರ್ಣ ಮಾಡೋ ಅಭಿಮಾನ ಹಿಡಿಯಬೇಕು. ಅನಾಥ ಹಾಗೂ ಪರದೇಸಿಯರು ನಂಮ ಮಾನುಷ್ಯ ಬಾಂಧವರೆಂದು ದಯದಿಂದಲೂ, ದೊಡ್ಡಸ್ಥಿಕೆಯಿಂದಲೂ, ನಡೆಯೋ ಅಭಿಮಾನವಿರತಕ್ಕದ್ದು. ನಮ್ಮ ಸ್ವಜನದ್ದು, ಇಷ್ಟ ಮಿತ್ರರದೂ ಕಲ್ಯಾಣ ಮಾಡೋ ಅಭಿಮಾನ ಹಿಡಿಯ ಬೇಕು. ಮತ್ತು ನಂಮ ತಂದೆ ತಾಯಿಗಳ ದೊಡ್ಡಸ್ಥಿಕೆಯನ್ನು ನಡಿಸೋ ಅಭಿಮಾನವಿರಬೇಕು. ನಮ್ಮ ದೇಶ ಬಾಂಧವರ ಕೆಟ್ಟಸ್ಥಿತಿಯ ವಿಷಯಕ್ಕೆ ಕಳಕಳಿಕೆಬಿಟ್ಟು ಸ್ವದೇಶದ್ದು ಒಳ್ಳೇ ಅಭಿಮಾನ ಹಿಡಿಯೋದಕ್ಕೆ ಯೋಗ್ಯವಾಗಿಧೆ. ಇವೆಲ್ಲವುಗಳಿಗೂ ಮೇಲಾದ ನಮ್ಮೊಡಿಯನಾದ ಶ್ರೀಸಕಲ ಭುವನ ನಾಥನ ಸರ್ವವ್ಯಾಪಕ ಸತ್ಯೇದ್ದೂ ಅವನ ಅತ್ಯುತ್ತಮವಾದ ಪೂರ್ಣಸದ್ಗುಣದ್ದೂ ನಾವು ದೃಢ ಅಭಿಮಾನವನ್ನಿಡಿಯಬೇಕು. ಮುಂದಕ್ಕೆ ಸಾಗುವದು.

Correspondence.

ಪತ್ರವ್ಯವಹಾರವು.

ರಾಜಶೇಖರದೊಳಗಿನ ಮೂರನೇ ಆಶ್ವಾಸದ ಕಡೇ ಭಾಗದಲ್ಲಿರುವ ಪಾರ್ವತಿಯ ಸ್ತುತಿ ರೂಪವಾದ ಶ್ಲೋಕವು.

॥ವೃತ್ತ (ಅನುಗತಪ್ರಾಸ)

ಸಾರ ಸಾರ ಸಮಾನ ಲೋಚನ ಕಾಂತ ಕಾಂತಿಯುತಾನನೆ।
ಭೂರಿ ಭೂರಿಪು ಸಂಘ ಸಂಹೃತಿ ಶಕ್ತಿ ಶಕ್ತಿ ಸಮನ್ವಿತೆ।
ಮಾರ ಮಾರಣ ದಕ್ಷ ದಕ್ಷ ಮದಾಪಹಂತ್ರಿ ವಿರಾಜಿತೆ।
ಧೀರ ಧೀರತಿ ಪಾಲ ಪಾಲನ ಶೀಲೆ ಪಾಲಿಪುದಂಬಿಕೆ ॥೧॥

ಅರ್ಥ—ಸಾರಸ=ಕಮಲದ, ಅರ=ಯೆಸಳುಗಳಿಗೆ, ಸಮಾನ=ಸರಿಯಾದ, ಲೋಚನ=ಕಣ್ಣುಗಳ, ಕಾಂತ ಕಾಂತಿಯುತಾನನೆ, ಕಾಂತ=ಮನೋಹರವಾದ, ಕಾಂತಿ=ತೇಜಸ್ಸಿನಿಂದ, ಯುತ=ಯುಕ್ತವಾದಂಥ, ಆನನೆ=ಮುಖದವಳೇ, ಭೂರಿ=ಬಹಳವಾದ, ಭೂ=ಭೂಮಿಗೆ, ರಿಪು=ವೈರಿಯಾದ ರಾಕ್ಷಸರುಗಳ, ಸಂಘ=ಸಮೂಹದ, ಸಂಹೃತಿ=ಸಂಹರಣದ ವಿಷಯದಲ್ಲಿ। ಶಕ್ತಿ=ಬಲವುಳ್ಳ। ಶಕ್ತಿ=ಶಕ್ತಿಯೆಂಬೀ ಹೆಸರುಳ್ಳ ಆಯುಧದಿಂದ, ಸಮನ್ವಿತೆ=ಯುಕ್ತಳಾದಂಥವಳೇ (ಅದನ್ನು ಧರಿಸಿದಂಥವಳೇ)। ಮಾರ=ಮರಣರೂಪವಾದ, ಮಾರಣ=ಮಾರಣವೆಂಬ ಯಜ್ಞಕ್ಕೆ। ದಕ್ಷ=ಮುಖ್ಯನಾದ, ದಕ್ಷ=ದಕ್ಷಬ್ರಹ್ಮನ, ಮದ=ಗರ್ವವನ್ನು। ಅಪಹ=ಅಪಹಾರ

ಪಾಡಿದಂಥ ವೀರಭದ್ರನೇ। ಅಂಕ=ತೊಡೆಯಲ್ಲಿ। ವಿರಾಜಿತೆ=ಶೋಭೆಯುಳ್ಳವಳೇ। ಧೀರ=ಕುಶಲವಾದ। ಧೀ=ಬುದ್ಧಿಯುಳ್ಳಂಥ। ರತಿ=ರತಿಗೆ। ಪಾಲ=ತಂದೆಯಾದ ಚಂದ್ರನಿಗೆ। ಪಾಲನ=ಒಡೆಯನಾದ (ಧರಿಸಿದ ಈಶ್ವರನ)। ಶೀಲ=ಸ್ವಭಾವವುಳ್ಳಂಥ। ಅಂಬಿಕೆ=ಪಾರ್ವತಿಯೇ। ಪಾಲಿಪುದು=ರಕ್ಷಿಸುವದು॥೮॥

॥ಭಾವಾರ್ಥ॥

ಕಮಲದ ಎಲೆಗಳಂತೆ ಒಪ್ಪುವ ಕಣ್ಣುಗಳಿಂದ ಯುಕ್ತವಾದ ಮುಖವುಳ್ಳವಳೇ, ಭೂಮಿಗೆ ಭಾರಭೂತರಾದ ದೈತ್ಯರುಗಳನ್ನು ಕೊಲ್ಲುವದಕ್ಕೆ ಬಲವುಳ್ಳ ಶಕ್ತ್ಯಾಯುಧವನ್ನು ಧರಿಸಿದಂಥವಳೇ, ಮಾರಣವೆಂಬ ಯಜ್ಞಕ್ಕೆ ಮುಖ್ಯನಾದ ದಕ್ಷಬ್ರಹ್ಮನನ್ನು ಕೊಂದಂಥ ವೀರಭದ್ರನನ್ನೇ ತೊಡೆಯಲ್ಲಿ ಕುಳ್ಳಿರಿಸಿ ಕೊಂಡಂಥವಳೇ, ಅತಿ ಕುಶಲ ಬುದ್ಧಿಯುಳ್ಳ ರತಿ ಜನಕನಾದ ಚಂದ್ರನನ್ನು ಧರಿಸಿದಂಥ ಶಿವನ ಸ್ವಭಾವವುಳ್ಳಂಥ ಪಾರ್ವತಿಯೇ ನನ್ನನ್ನು ರಕ್ಷಿಸುವದು.

ನಾರಾಯಣ ವೇಣು ಗೋಪಾಲಶೂರಬಾಲ್ಲಿ.

ಮಹಾರಾಜ ರಾಜಪೂಜಿತ ರಾಜಮಾನ್ಯ ರಾಜಶ್ರೀ ದಕ್ಷಿಣ ಭಾಗದ ಶಾಲಾಪತ್ರ ಕರ್ತರ ಚರಣ ಸನ್ನಿಧಿಗಳಿಗೆ—

ಸೇವಕನು ಮಾಡುವ ಬಿನ್ನಃ ತಮ್ಮ ಕರಪಂಜರದಿಂದ ಪುಟ್ಟಲ್ಪಟ್ಟ ಮಾಹೆ ಸಪ್ಟಂಬರ ಸನ್ನ ೧೮೭೧ ಇಸ್ವಿ ಶಾಲಾಪತ್ರಿಕೆಯಲ್ಲಿ ನಮ್ಮ ಬಾಂಧವರಾದ ಹಾವೇರಿಯ ವಿದ್ಯಾ

ಫ್ರ್ ಇವರು ೪೭೫ನೇ ಪುಟದಲ್ಲಿ ಬರೆದ ಪ್ರಶ್ನೆ ಏನಂದರೆ ೨೫ ಹಡಗಗಳು ಜಲಪರ್ಯಾಟನ ಮಾಡುತ್ತಿರುವಲ್ಲಿ ಒಂದು ಮುಳುಗಲಾರಂಭಿಸಿತು. ಆದರೆ ಅದರ ಒಡೆಯನು ೨ನೇ ಹಡಗದಲ್ಲಿದ್ದಷ್ಟು ಜನರನ್ನು ಅದಕ್ಕೆ ಕೊಟ್ಟನು. ಅದು ಮುಳುಗಹತ್ತಲು ಮೂರನೇ ಹಡಗಕ್ಕೆ ಅದರಲ್ಲಿದ್ದಷ್ಟು ಜನರನ್ನು ೨ನೇ ಹಡಗದವನು ಕೊಟ್ಟನು. ಈಪ್ರಕಾರ ಎಲ್ಲರೂ ತಮ್ಮ ನೆರೆ ಹಡಗವು ಮುಳುಗುವಾಗ್ಗೆ ತಮ್ಮಲ್ಲಿದ್ದಷ್ಟು ಜನರನ್ನು ತೆಗೆದುಕೊಂಡರು. ೨೫ನೇ ಹಡಗದವನು ತೆಗೆದುಕೊಂಡಾಗ್ಗೆ ಎಲ್ಲ ಹಡಗಗಳಲ್ಲಿ ಸಮನಾಗಿ ಜನರುಳಿದರು ಆದರೆ ಮೊದಲು ಪ್ರತಿ ಒಂದು ಹಡಗದಲ್ಲಿ ಎಷ್ಟೆಷ್ಟು ಜನರಿದ್ದರು? ಇದರ ವಿವರವು ಕೆಳಗೆ ಬರೆದ ಮೋರಿಗೆ.

೨೬	೮೦೧	೨೫೬೦೧
೫೧	೧೬೦೧	೫೧೨೦೧
೧೦೧	೩೨೦೧	೧೦೨೪೦೧
೨೦೧	೬೪೦೧	೨೦೪೮೦೧
೪೦೧	೧೨೮೦೧	೪೦೯೬೦೧

೮೧೯೨೦೧	೨೬೨೧೪೪೦೧
೧೬೩೮೪೦೧	೫೨೪೨೮೮೦೧
೩೨೭೬೮೦೧	೧೦೪೮೫೭೬೦೧
೬೫೫೩೬೦೧	೨೦೯೭೧೫೨೦೧
೧೩೧೦೭೨೦೧	೪೧೯೪೩೦೪೦೧

ಕೊನೆಗೆ ಪ್ರತಿ ಒಂದು ಹಡಗದಲ್ಲಿ ೩೩೫೫೪೪೩೨ ಈ

ಪ್ರಕಾರ ಸವನಾಗಿ ಜನರು ಆದರು— ದಿವ್ಯ ಚಿತ್ರಕ್ಕೆ ಅರಕಿ
ಇರಬೇಕು ಇಪೇ ಬಿನ್ಹಃ—

ತಾರೀಖು ೧೨ ಅಕ್ಟಂಬರ
ಸನ್‌೧೮೭೭ಇಸವಿ. ಮು
ಕ್ಕಾಮ ಮನಗೋಳಿ ತಾ
ಲೂಕ ಬಾಗೇವಾಡಿ ಜಿಲ್ಲಾ
ಕಲಾದಗಿ.

ಮನಗೋಳಿಯ ಸಾಲಿ ವಿದ್ಯಾ
ರ್ಥಿ ಭೀಮಾಜಿ ಅಂಣಾಜಿಗು
ಮಾಸ್ತೆ ಪಾಟೀಲ.

ಮಾ॥ ರಾ॥ ರಾ॥ ಕಂನಡ ಮಠಪತ್ರಕಕರ್ತರ ಪಾದ
ಕಮಲಗಳಿಗೆ—

ಶಿರಸಾಷ್ಟಾಂಗವೆರಗಿ ನಾನು ಬರೆಕೊಳ್ಳುವ ಸಾಲ್ಕು ವ
ಳಗಳಗೆ ಆಶ್ರಯದೊರಕಬೇಕು. ನಂಮ ಸ್ಕೂಲ್ ಅಸಿ
ಷ್ಟಂಟ ಮಾಸ್ತರರು ಮೇ ತಿಂಗಳಲ್ಲಿ ಮಠಪತ್ರಿಕೆಯ ದ್ವಾ
ರಾ—ಕೇಳಕೊಂಡೈದು ಪ್ರಶ್ನಗಳಿಗೆ ದತ್ತೋ ನಾರಾಯಣ
ಕುರಬೇಟಕರ ಸ್ಕೂಲ್ ಮಾಸ್ತರರು ಜೂನತಿಂಗಳಲ್ಲಿ ರಚಿ
ಸಿದ ಉತ್ತರವು ನನಗೆ ಸಪಟಂಬರದ ಮಠಪತ್ರಿಕೆಯಲ್ಲಿ ದ
ರ್ಶನವಾಗಿ ಅದರಲ್ಲಿ ಆರವಾಗದ್ದನ್ನು ಬೇಡಿಕೊಂಡರೆ ಪ್ರಾ
ನಃ ಸಮಂಜಸವಾಗಿ ಜ್ಞಾನ ಕೊಟ್ಟರೆಂದು ನಂಬಿ ಪ್ರಾರ್ಥ
ನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಮುರ್ವ ವ ನೋಡ ಇ
ವೆರಡರ ವಿಷಯ ಕಿಂಚಿದರವಾಗುತ್ತದೆ. ಶಿದ್ಲ ವ ಗುಡಗು
ಹಾಂಗು ಮುಗಲು ಇವುಗಳ ಉತ್ತರ ಇಲ್ಲವೇ ಇಲ್ಲಾ ಆ
ಸೀಕಲ್ಲಿನ ವಿಷಯ ಇದು ಸೀತದಿಂದ ಘಟ್ಟಿ ಆಗಿ ಬೀಳುವ
ದಾದರೆ ಮಳೆಗಾಲ ವಿರುವಕಡೆಗೂ ಆಸೀಕಲ್ಲು ಬೀಳಬೇ
ಕಾದೀತು. ವಿದ್ಯುಲ್ಲತೆಯಿಂದ ಆಸೀಕಲ್ಲು ಬೀಳುವದನಕಾ

ಅಸಂಭವವೇ ಸರಿ. ಅಂದಾಗ್ಯೂ ಬಾಕಿ ದಿವಸದಲ್ಲಿ ಕೊಂಚವಾದರೂ ಮಿಂಚುವದು ಎಲ್ಲವರ ದೃಷ್ಟಿಗೂ ಗೋಚರವಾದಮೇಲೆ ಆನೀಕಲ್ಲು ಬೀಳುವದು ಯಾಕೆ ಅವಲೋಕನ ವಾಗುವದಿಲ್ಲಾ? ಮೇಘ ಮಾಲೇ ಅನ್ನುವದು ಜ್ಯೋತಿಶ್ಶಾಸ್ತ್ರದಲ್ಲಾದರೂ ಕಂಡಿದ್ದರೆ ಆಧಾರವಾಗಿ ಬರೆಯುಬೇಕು ಹಾಂಗು ಮೇಘದವರ್ಣ ಆಕಾರ ತಿಳಿಯಲಿಲ್ಲ ಮಳೆಯು ವಿಷಯು ಇಷ್ಟಭಿಪ್ರಾಯು ಕನ್ನಡಾ ೫।೬ ಪುಸ್ತಕಗಳ ಮೇಲಿಂದ ಕ್ವಚಿತ್ ಜ್ಞಾನವಾಗುತ್ತದೆ ಬಾಕಿ ಉಳಿದ ಯಾವತ್ತಕ್ಕೂ ನನ್ನಂಥ ಮಂದಮತಿಗಳಿಗೆ ಅರವಾಗುವ ರೀತಿಯಿಂದ ಪ್ರಕಟಿಸಬೇಕೆಂದು ಬೇಡಿಕೊಳ್ಳುತ್ತೇನೆ. ಅಯ್ಯಾ. ಮಾಸಪತ್ರಕರೇ ಪತ್ರಹಬ್ಬಿಗೆಗೆ ಲಕ್ಷಕೊಡದೇ ನನ್ನ ಅಜ್ಞಾನವನ್ನು ಬಾಟಿಸಿಕೊಳ್ಳುವ ಈ ಅಭಿಪ್ರಾಯುವನ್ನು ಪ್ರಕಟಿಸುವಲ್ಲಿ ಸುಜ್ಞರೇ ಇರುವಿರಿ ಇಂತಿ ಬಿನ್ನಹ.

ತಾರೀಖು ೩ನೇ ಅಗಸ್ಟಂ ಬರಸನ್ ೧೮೭೭ ನೇ ಇಸವಿ.	ಶ್ರೀಪಾದ ಶಂಕರ ಶಟ್ಟಿ ವಿದ್ಯಾರ್ಥಿ ಆಲೂರ ತಾಲೂಕ ಹಾನಗಲ್ಲ.

ಸತ್ಕಾರ್ಯಗಳಿಂದಲೂ. ಆದರೆ ಈ ಸಂಗತಿಗಳೆಲ್ಲ ನಮ್ಮ ನಡತೆಗಳಲ್ಲಿ ಹೆಚ್ಚು ಕಡಿಮೆಯನ್ನುಂಟು ಮಾಡುವ ದೊಡ್ಡ ಕಾರಣಗಳೆಂದು ಸಮಸ್ತರೂ ಒಡಂಬಡುತ್ತಿದ್ದಾಗ್ಯೂ, ನಮ್ಮ ಸ್ವಹಿತವನ್ನೂ, ಒಳ್ಳೇ ನಡತೆಯನ್ನೂ ಕಾಯ್ದುಕೊಳ್ಳುವದಕ್ಕೆ ನಾವೇ ಮುಖ್ಯ ಕಾರಣವಾಗಿರುವದು ಅತ್ಯವಶ್ಯಕವಾಗಿರುತ್ತದೆಂಬುದಾದರೂ ಸ್ಪಷ್ಟವೇ ಉಂಟು. ಗುಣವಂತರೂ ಬುದ್ಧಿವಂತರೂ ಪರರಿಂದ ಯೆಷ್ಟು ಉಪಕಾರಪಟ್ಟವರಾದಾಗ್ಯೂ, ಅವರು ತಮ್ಮ ಮೇಲಾದ ಸಹಾಯಕರು ತಾವೇ ಆಗಿರತಕ್ಕದ್ದೆಂಬುದು ಸ್ವಾಭಾವಿಕವೇ.

———

೨ ನೇ ಸಂಧಿ.

ಉದ್ಯೋಗದಲ್ಲಿ ಹೆಸರಾದವರು—
ಹೊಸ ವಸ್ತುಗಳನ್ನು ಶೋಧಿಸಿದವರೂ,
ಹೊಸ ವಸ್ತುಗಳನ್ನು ಮಾಡಿದವರೂ.

ಇಂಗ್ಲಿಷಜನರ ಲಕ್ಷಣಗಳಲ್ಲಿ ಪ್ರಬಲವಾಗಿ ಒಡೆದು ತೋರುವ ಮುಖ್ಯ ಲಕ್ಷಣವು ಯಾವದೆಂದರೆ, ಉದ್ಯೋಗಕ್ಕೆ ಮೆಚ್ಚುವದೆ; ಈ ಲಕ್ಷಣವು ಇಂಗ್ಲಂಡದ ಪೂರ್ವಕಾಲದ ಇತಿಹಾಸದಲ್ಲಿ ಸಹ ಈಗಿನಂತೆಯೇ ವ್ಯಕ್ತವಾಗಿ ಕಾಣಿಸುತ್ತದೆ. ಇಂಗ್ಲಂಡದ ಪ್ರಜೆಗಳು ಇದೇ ಗುಣದಿಂದ ತಮ್ಮ ರಾಜ್ಯವನ್ನು ನೆಲೆಗೊಳಿಸಿ ಅದರ ಉದ್ಯೋಗ ಸಂಬಂಧದ ಮಹತ್ವವನ್ನು ಯೋರ್ಪಡಿಸಿದರು. ಈ ದೇಶದ ಬಲವಾದ ಬೆಳವಣಿಗೆಯು ಒಬ್ಬೊಬ್ಬ ಮನುಷ್ಯನ ಅಪ್ರತಿಬಂಧವಾದ ಸಾಮರ್ಥ್ಯದಿಂದಲೇ ಉಂಟಾಯಿತು. ಅಂದರೆ ಚಿಕ್ಕಲತನದವರಾಗಿಯೂ, ಉಪಯೋಗದ ಪದಾರ್ಥಗ

ಳನ್ನು ಹುಟ್ಟಿಸುವವರಾಗಿಯೂ, ಶಸ್ತ್ರಗಳನ್ನು ಮಾಡುವವರಾದಯಂತ್ರಿಕರಾಗಿಯೂ, ಪುಸ್ತಕಗಳನ್ನುಬರೆಯುವವರಾಗಿಯೂ, ಕೌಶಲ್ಯದಕೆಲಸಗಳನ್ನುಂಟು ಮಾಡುವ ಶಿಲ್ಪಿಗರಾಗಿಯೂ, ಶಾರೀರ ಮಾನಸಿಕ ಉದ್ಯೋಗಗಳಿಂದ ಈ ಬೆಳವಣಿಗೆಯನ್ನು ಯೇರ್ಪಡಿಸಲೆತ್ನಿಸುವವರು ವೇಳ್ಯ ವೇಳ್ಯಕ್ಕೆ ಹ್ಯಾಗೆ ಹ್ಯಾಗೆ ಹೆಚ್ಚಾದರೋ, ಹಾಗೆ ಹಾಗೆ ಇದು ಹೆಚ್ಚಾಗುತ್ತ ಬಂತು. ಭರದಿಂದ ಉದ್ಯೋಗ ನಡಿಸುವ ಬಲವು ಈ ದೇಶದವರ (ಇಂಗ್ಲಂಡದವರ) ನಡತೆಯ ಮುಖ್ಯ ಕುರುಹಾಗಿದೆ; ಇದರಿಂದಲೇ ಕಾಯ್ದೆಗಳೊಳಗಿನ ತಪ್ಪುಗಳೂ, ಸರಕಾರದ ರಚನೆಯೊಳಗಿನ ನ್ಯೂನತೆಗಳೂ, ಆಗಾಗ್ಗೆ ತಿದ್ದಲ್ಪಟ್ಟು, ದೇಶವು ಕಾಪಾಡಲ್ಪಟ್ಟಿತು.

ಇಂಗ್ಲಿಷಜನರ ಉದ್ಯೋಗದ ನಡತೆಯೋ ಮೇಲಾದ ಅವರ ವಿದ್ಯಾಸಾಧನೆ ಯೊಂದು ಸಹ ತಿಳಿಯಬಂದದೆ. ಸ್ಥಿರವಾದ ಮನಸ್ಸಿನಿಂದ ಯಾವದೊಂದು ಕೆಲಸವನ್ನು ಕೈಕೊಳ್ಳುವದು ಒಬ್ಬೊಬ್ಬ ಮನುಷ್ಯನಿಗೆ ಅತ್ಯುತ್ತಮವಾದ ವಿದ್ಯಾಸಾಧನೆಯಾಗಿರುವಂತೆಯೇ, ರಾಜ್ಯಕ್ಕಾದರೂ ಅತ್ಯುತ್ತಮವಾದ ವ್ಯವಸ್ಥೆಯು ಸಾಧನವಾಗಿರುತ್ತದೆ. ಮಾನವುಳ್ಳ ಉದ್ಯೋಗವು ಮನುಷ್ಯನ ಕರ್ತವ್ಯಕರ್ಮಕ್ಕೆ ಸರಿಯಾಗಿರುತ್ತದೆ. ಈ ಯೆರಡುಗಳಿಂದಲೂ ಮನುಷ್ಯನಿಗೆ ಸುಖವಾಗಬೇಕೆಂದು ಜಗನ್ನಿಯಾಮಕನ ಕಟ್ಟಳೆಯುಂಟು. ಸ್ವರ್ಗದ ಮಾರ್ಗದಲ್ಲಿ ದೇವತೆಗಳು ಶ್ರಮವನ್ನೂ, ಕಷ್ಟವನ್ನೂ ಇಟ್ಟಿದ್ಧಾರೆಂದು ಒಬ್ಬ ಕವಿಯು ಹೇಳಿದ್ಧಾನೆ. ಮನುಷ್ಯನಿಗೆ ತನ್ನ ಸ್ವಂತ ಶ್ರಮದಿಂದ ಸಂಪಾದಿಸಿದರೊಟ್ಟೆಯು ಹ್ಯಾಗೆ ಸವಿಯಾಗಿರುತ್ತದೆಯೋ, ಹಾಗೆ ಯಾವದೂ ಅಲ್ಲ.

ಬದು ನಿಶ್ಚಯವು. ಶ್ರಮದಿಂದಲೇ ಈ ಲೋಕವು ಮನುಷ್ಯನಿಗೆ ವಶವಾಯಿತು; ಶ್ರಮದಿಂದಲೇ ಮನುಷ್ಯನು ಕಾಡು ಸ್ಥಿತಿಯಿಂದ ಉದ್ಧರಿಸಲ್ಪಟ್ಟನು; ಈ ಲೋಕದ ಸುಧಾರಣೆಯು ಶ್ರಮದ ಹೊರ್ತು ಒಂದು ಹೆಜ್ಜೆಯಾದರು ಮುಂದವರಿಯಲಿಲ್ಲ. ಶ್ರಮವು ಮನುಷ್ಯನಿಗೆ ಅವಶ್ಯಕವಾದದ್ದು, ಅವನ ಕರ್ತವ್ಯಕರ್ಮವೂ ಯೆಂಬದಿಷ್ಟೇ ಅಲ್ಲ, ಅದರಿಂದ ಅವನಿಗೆ ಅನೇಕ ಸುಖಗಳಾದರೂ ಉಂಟಾಗುತ್ತವೆ; ಸೋಮಾರಿಗಳು ಮಾತ್ರ ಅದನ್ನು ಹಳಿಯುತ್ತಾರೆ. ಮನುಷ್ಯನ ನರಗಳೂ, ಶಿರಗಳೂ, ಕೈಗಳೂ, ಮಿದುಳನ ಭಾಗಗಳೂ, ಹ್ಯಾಗೆ ರಚಿಸಲ್ಪಟ್ಟವೆಂದು ತಿಳದು ನೋಡಿದರೆ, ಅವನು ಶ್ರಮಮಾಡಿಯೇ ಬದುಕತಕ್ಕವನೆಂದು ಸ್ಪಷ್ಟವಾಗುತ್ತದೆ; ಈ ಯೆಲ್ಲ ಅವಯವಗಳ ಕುಂದಿಲ್ಲದ ವ್ಯಾಪಾರಗಳು ಜಟ್ಟುಗೊಡಲಾಗಿ ನಮಗೆ ಸುಖವೂ ಸಂತೋಷವೂ ಉಂಟಾಗುತ್ತದೆ. ಶ್ರಮವೆಂಬ ಶಾಲೆಯಲ್ಲಿ ಮೇಲ್ತರದ ವ್ಯವಹಾರ ಚಾತುರ್ಯ ಕಲಿಸಲ್ಪಡುತ್ತದೆ. ಶಾರೀರ ಶ್ರಮವು ಮೇಲಾದ ಮಾನಸಿಕ ಸುಧಾರಣೆಗೆ (ವಿದ್ವತ್ತಿಗೆ) ವಿರುದ್ಧವಾಗಿರುವದಿಲ್ಲ; ಇದನ್ನು ಕುರಿತು ಮುಂದೆ ಬರೆಯುವಾ.

ಹ್ಯೂಮಿಲ್ಲರನೆಂಬವನಿಗಿಂತ ಶ್ರಮದ ಮರ್ಮವನ್ನು ಹೆಚ್ಚು ಬಲ್ಲವರು ಯಾರು ಇಲ್ಲ. ಇವನು ತನ್ನ ಸ್ವಂತ ಅನುಭವದಿಂದ ಹೇಳಿದ್ದೇನಂದರೆ, ಅತಿ ಕಠಿಣವಾದ ಕೆಲಸದಲ್ಲಿ ಮನುಷ್ಯನಿಗೆ ತುಂಬಾ ಸಂತೋಷವುಂಟೆಂಬದಲ್ಲದೆ, ಅದರಿಂದ ಅವನ ಸುಧಾರಣೆಗೆ ಆಸ್ಪದವಾಗುತ್ತದೆ. ನಿಜವಾದ ಶ್ರಮವು ಮೇಲಾದ ಶಿಕ್ಷಕನಿಗೆ ಸರಿಯಾಗಿರುತ್ತದೆಂತಲೂ, ಕ್ರಿಸ್ತೀಧರ್ಮದ ಶಾಲೆಯು ಹೊರ್ತಾಗಿ ಶ್ರಮದ

ಶಾಲೆಯೇ ಮೇಲಾದ ಶಾಲೆಯೆಂತಲೂ, ಇವನ ಅಭಿಪ್ರಾಯ
ವಿತ್ತು. ಈ ಶಾಲೆಯಲ್ಲಿ ನಾವು ಪ್ರಯೋಜಕರಾಗುವ ಶ
ಕ್ತಿಯನ್ನು ಪಡಕೊಳ್ಳುವದಲ್ಲದೆ, ಸ್ವಾತಂತ್ರ್ಯವೆಂಬ ಗು
ಣವನ್ನು ಕಲಿತು, ದೃಢನಿಶ್ಚಯದಿಂದ ಯತ್ನ ನಡಿಸುವ
ಸ್ವಭಾವವನ್ನು ಸಂಪಾದಿಸುತ್ತೇವೆಂದು ಇವನು ಅನ್ನುತ್ತಿದ್ದ
ನು. ಇದಲ್ಲದೆ ಶಸ್ತ್ರಗಳಿಂದ ಕೆಲಸ ಮಾಡುವವರು ತ
ಮ್ಮ ವಿಚಾರಶಕ್ತಿಗೆ ಆಗಾಗ್ಗ ಉಂಟಾಗುವ ಚಲನೆಯಿಂದ
ಲೂ, ವ್ಯವಹಾರದ ವಸ್ತುಗಳು ನಿರಂತರದಲ್ಲಿ ಪ್ರತ್ಯಕ್ಷವಾ
ಗಿ ತಮ್ಮ ಕೈಯಲ್ಲಾಡುತ್ತಿರುವದರಿಂದಲೂ, ತಮಗೆ ಪ್ರತಿ
ದಿವಸದಲ್ಲಿ ಉಂಟಾಗುವ ನಿಕಟವಾದ ಅನುಭವಗಳಿಂದಲೂ,
ಬೇರೆ ಯಾವ ವಿಧವಾಗಿಯೂ ವಿದ್ಯಾ ಸಾಧನೆ ಮಾಡುವವರಿ
ಗಿಂತ ಹೆಚ್ಚು ಚತುರರಾಗಿ, ತಮ್ಮ ಆಯುಷ್ಯ ಕ್ರಮದಲ್ಲಿ
ತಮಗೆ ತಕ್ಕ ಮಾರ್ಗವನ್ನು ಹುಡುಕಿಕೊಳ್ಳುವದಕ್ಕೆ ಹೆಚ್ಚು
ಯೋಗ್ಯರಾಗಿಯೂ, ಮನುಷ್ಯತ್ವದ ಬೆಳವಣಿಗೆಗೆ ಹೆಚ್ಚು
ಅನುಕೂಲವುಳ್ಳವರಾಗಿಯೂ ಇರುತ್ತಾರೆಂದು ಸಹ ಅವನ
ಅಭಿಪ್ರಾಯವಿತ್ತು.

ಉದ್ಯೋಗದಿಂದ ಹೊಟ್ಟೆ ತುಂಬಿಕೊಳ್ಳುವ ಜನರಲ್ಲಿ
ಹುಟ್ಟಿ, ಶಾಸ್ತ್ರಾಭ್ಯಾಸದಲ್ಲಿಯೂ, ವರ್ತಕತನದಲ್ಲಿಯೂ,
ಕವಿತೆಯಲ್ಲಿಯೂ, ಕಲೆಗಳಲ್ಲಿಯೂ, ಕೀರ್ತಿಯನ್ನು ಸಂ
ಪಾದಿಸಿದಂಥ ದೊಡ್ಡ ಮನುಷ್ಯರ ಹೆಸರುಗಳನ್ನು ನಾವು ಹಿಂ
ದೆ ಸಂಕ್ಷೇಪವಾಗಿ ವರ್ಣಿಸಿದ್ದೇವೆ. ಆದರಿಂದ ತಿಳಿಯು
ವದೇನಂದರೆ ಶ್ರಮದ ಮೂಲಕವಾಗಿಯೂ, ಬಡತನದ ಮೂ
ಲಕವಾಗಿಯೂ ಉಂಟಾಗುವ ವಿಘ್ನವು ಯಾವ ಬಗೆಯಿಂದ
ಲೂ ಅನಿವಾರ್ಯವಲ್ಲ. ಇನ್ನು ಈ ದೇಶಕ್ಕೆ (ಇಂಗ್ಲಂ

ದಕ್ಕೆ) ಇಷ್ಟು ಸಂಪತ್ತಿಯೂ, ಇಷ್ಟು ಸಾಮರ್ಥ್ಯವೂ ಉಂಟಾಗುವದಕ್ಕೆ ಕಾರಣವಾದ ದೊಡ್ಡ ದೊಡ್ಡ ಕಲ್ಪನೆಗಳನ್ನೂ, ಹೊಸ ಶೋಧಗಳನ್ನೂ ಕುರಿತು ನೋಡಲಾಗಿ, ಅವುಗಳಾದರೂ ಹೆಚ್ಚಾಗಿ ಬಡ ಜನರಲ್ಲಿ ಹುಟ್ಟಿದವರಿಂದಲೇ ಉಂಟಾದವೆಂಬದಕ್ಕೆ ಸಂದೇಹವಿಲ್ಲ. ಈ ಜನರು ಮಾಡಿದ ಈ ವಿಧದ ಕೃತ್ಯಗಳನ್ನು ಒಂದು ಕಡೆಯಲ್ಲಿ ತೆಗೆದು ಇಡಲಾಗಿ, ಬೇರೆಯವರು ಮಾಡಿದ್ದು ಬಹು ಸ್ವಲ್ಪ ಮಾತ್ರ ಉಳಿಯುತ್ತದೆಂದು ತಿಳಿಯುವದು.

POURANIC GEOGRAPHY.
ಪೌರಾಣಿಕ ಭೂವರ್ಣನೆ.

॥ಕಂದ॥ ಇಂಬಾಗಿರೆಭೂಲೋಕದ। ಜಂಬೂದ್ವೀಪವನೆ ಪೇಳ್ದನಿಂತ್ರೊಳಿದುಬಳಿ। ಕ್ಕಂಬೇರುಳಿದದ್ವೀಪಕ। ದಂಬಂಗಳನಂಬುಧಿಗಳನಭಿವರ್ಣಿಸುವೆಂ॥ ।ಗದ್ಯ॥ ಅದೆಂತೆಂದೊಡೆ। ಪೂರ್ವೋಕ್ತಮಾದಜಂಬೂದ್ವೀಪದಸುತ್ತಲುಂ। ಸಗರಸುತನಿಖಾತಮುಮಾಗರ್ತನಿಘೃತಜಲಸಂಮಿಶ್ರಬಹಿರ್ವಲಯಮೊಳಗನಾದಿಯಾಗಿಪ್ರಸರಿಸಿರ್ಪಲವಣಜಲಧಿ॥

ಲವಣಸಮುದ್ರ.

ಲವಣಸಮುದ್ರವೊಂದು ಲಕ್ಷಯೋಜನವಿಶಾಲ ಮಾಗಿಪ್ಪುದದರೊಳು। ಮೀನು। ಮಹಾಮೀನು। ರಾಜಿಲ। ಆಮೆ। ಜಿಗಣೆ। ನೆಗಳು। ಕುಂಭಿ। ಚಕ್ರ। ಕೊಕ್ಕರಿ। ಕಪ್ಪೆ। ಹಾವು। ಮುಂತಾದದಶಲಕ್ಷಮಹಾಜಲಚರಪ್ರಾಣಿಗಳಗಾಶ್ರಯಮಾಗಿ। ಮುತ್ತು। ಮಾಣಿಕ್ಯ। ಪವಳ। ರತ್ನಂಗಳುದಿಸುವೆಡೆಯೆನಿಸಿ। ಫೇನತರಂಗಾದಿಗಳಿಂಕಂಗೊಳಿಸಿ। ಲಕ್ಷಯೋಜನಖಾತದಿಂ

ಕೂಡಿ। ಭೀಕರಶಬ್ದಗಳಿಂ। ಷಷ್ಟಿಯೋಜನಗಂಭೀರಮಹಾ
ವರ್ತದಿಂ। ಬಡಬಾಮುಖಸಮಾಕೃಷ್ಯಮಾಣಜಲಪ್ರವಾಹದಿಂ
ದೊಪ್ಪಿ। ಬಹುದ್ವೀಪೋಪದ್ವೀಪನಗರ ಪರ್ವತಾದಿಗರ್ಭಿತಮಾಗಿ
ರ್ಪ್ಪುಂ॥

ಶಾಕದ್ವೀಪವು.

ಮತ್ತಮಾಲವಣಸಮುದ್ರಮಂಪೊರಗಾವರಿಸಿ— ಶುಭ್ರವ
ರ್ಣದಭೂಮಿಯುಳ್ಳ ಶಾಕದ್ವೀಪವೆರಡು ಲಕ್ಷಯೋಜನದಿಂದಿ
ಪ್ಪುದದಕೆಮೇಧಾತಿಥಿಯೆಂಬಾತನರಸಾಗಿರ್ಪನಾತಂಗೆಶಾಂತಭ
ಯ। ಶಿಶಿರ। ಸಂಬೋಧ। ಅನಂತ। ಶಿವ। ಕ್ಷೇಮಕಧ್ರುವರೇ
ಳುಮಂದಿಮಕ್ಕಳು। ಬಳಿಕಾದ್ವೀಪವನೇಳುಭಾಗವಂಮಾಡಿ
ಕೊಡಲವರವರಪೆಸರಿನಲ್ಲಿ ಆಯಾಖಂಡಗಳಪರ್ವವವುಗಳವಿಭಾ
ಗಶೈಲಂಗಳಾವಾವವೆಂದೊಡೆ। ಪೂರ್ವಾದಿಪ್ರದಕ್ಷಿಣಮಾಗಿ।
ಗೋಮೇಧಗಿರಿ। ಚಂದ್ರಗಿರಿ। ನಾರದಗಿರಿ ದುಂದುಭಿಗಿರಿ। ಸು
ಮನೋಗಿರಿ। ಅಲಂಪ್ಷ್ಯಗಿರಿ। ವೈಭ್ರಾಜಗಿರಿಗಳೆಂಬ ಇವಗಳ
ಲ್ಲಿ ಜನಿಸಿದನದಿಗಳಾವಾವವೆನೆ। ಅನುತಪ್ತ। ಶಿಖಿ। ವಿಪಾಶೆ। ತ್ರಿ
ದಿವೆ। ಕ್ರಮುಹರೆ। ಅಮೃತೆ। ಸುಕೃತೆಗಳೆಂಬವೇಳುನದಿಗಳಾ
ಯಾಖಂಡಂಗಳಲ್ಲಿ ಕ್ರಮದಿಂಸುಳಿದು ಸಮುದ್ರಗಾಮಿನಿಗಳಾ
ದವಾಖಂಡಂಗಳೇಳರಲ್ಲಿಯೂ ಯೇಳೇಳುಕುಲಪರ್ವತಂಗ
ಳುಂಕ್ಷುದ್ರಗಿರಿನದೀವನಾದಿಗಳುಂಪುಟ್ಟಿರ್ಪವಲ್ಲಿ ಯುಣಜನ
ರುಮೂರುತಾಳದುದ್ದಮಾಗಿ ಕಲ್ಪವೃಕ್ಷಫಲಾಹಾರದಿಂದಿ
ಪ್ಪತ್ತುಸಾವಿರವರುಷದಾಯುಷ್ಯದಿಂ ಜರೆ ರೋಗಂಗಳಿಲ್ಲ
ದೆಹರನಾಮಕಲಿಂಗಪೂಜಕರಾಗಿಪರಮೈಶ್ವರ್ಯದಿಂದಿರ್ಪರು॥

ಕ್ಷೀರಸಮುದ್ರ.

ಮತ್ತಮಾಶಾಕದ್ವೀಪಮಂಪೊರವಳಸಿಕ್ಷೀರಸಮುದ್ರವೆರ

ಡು ಲಕ್ಷಯೋಜನದಿಂದಿಹುದಾದೊಡೆ ಅಹಲ್ಯೆ। ಸಿರಿ। ತಾರಾ ದೇವಿ। ಸುಧೆ। ಸುಧಾಂಶು। ಸುರತರು। ಸುರಧೇನು। ಚಿಂತಾ ಮಣಿ। ಮೊದಲಾದಶ್ರೇಷ್ಠವಸ್ತುಗಳುದಿಸಿದೆಡೆಯೆನಿಸಿ ಶೋ ಭಿಸು ತ್ತಿಹುದಲ್ಲಿ ಹತ್ತುಸಾವಿರಯೋಜನವಿಶಾಲದಕನಕಮ ಯವಾದರಮನೆಯಲ್ಲಿ ನಾರಾಯಣನನಂತಶಯನನಾಗಿವಿಷ್ವ ಕ್ಸೇನಾನಂತಖಗಾದಿಸೂರಿಷದರಿಂವಂದಿಸಿಕೊಳುತಿರ್ಪಂ॥

॥ಕುಶದ್ವೀಪ॥

ಮತ್ತ ಮಾಕ್ಷೀರಸಮುದ್ರ ಹೊರವಳಸಿನ ನೀಲವರ್ಣದ ಭೂಮಿಯುಳ್ಳ ಕುಶದ್ವೀಪವು ನಾಲ್ಕು ಲಕ್ಷಯೋಜನದಗಲ ವಿ ಹ್ರದದಕ್ಕೆ ವಪುಷ್ಮಂತನೆಂಬಾತನಧಿಪತಿಯಾಗಲಾತಂಗೆ। ಶ್ವೇ ತ। ಹರಿತ। ಜೀಮೂತಲೋಹಿತಕ। ವೈದ್ಯುತಕ। ಮಾನಸಕ। ಸುಪ್ರಭನೆಂಬೇಳುಮಕ್ಕಳವರ್ಗೆ ಭಾಗಂಮಾಡಿಕೊಡಲವರವ ರಪೆಸರಿನಲ್ಲಿ ಆಯಾಖಂಡಗಳಿರ್ಪವವುಗಳಸೀಮಾಪರ್ವತಂ ಗಳೇಪೂರ್ವಾದಿಪ್ರದಕ್ಷಿಣಮಾಗಿ। ಕುಮುದನಗ। ಉನ್ನತ। ವರಾಹ। ಕೇತು। ದ್ರೋಣ। ಮಹಿಷ। ಕಕುಷ್ಮಂತಗಳೆಂಬ ವುಗಳಲ್ಲಿ ಪುಟ್ಟಿದನದಿಗಳು। ಯೋಗಿನಿ। ತ್ರೋಯಿ। ವಿತೃ ಷ್ಣೆ। ಚಂದ್ರೆ। ಶುಕೆ। ವಿರೋಚನಿ। ನಿವೃತ್ತಿಯೆಂಬವೇಳು ನದಿಗಳಾಪರ್ವತಂಗಳಲ್ಲಿ ಕ್ರಮದಿಂಸುಳಿದು ಸಮುದ್ರದಲ್ಲಿ ಬೆರತವಾಖಂಡಂಗಳಲ್ಲಿ ಯಾಯೆಯೊಳೇಳುಕುಲಾಚಲಂಗಳುಂ ಸಾಮಾನ್ಯಗಿರಿನದೀನಂದನಾದಿಗಳಸಂಖ್ಯಾತಂಗಳುಂಟಲ್ಲಿಯು ಣಜನರೊಂದೊಂದುತಾಳದುದ್ದದವರು ಕಲ್ಪವೃಕ್ಷಫಲಾಹಾ ರದಿಂಪತ್ತುಸಾವಿರ ವರುಷಜೀವಿಗಳೆನಿಸಿ ಜರೆರುಜಗಳಲ್ಲದೆ ರುದ್ರನಾಮಕಲಿಂಗಪೂಜಕರಾಗಿ ನಿತ್ಯಸುಖಿಗಳಾಗಿರ್ಪರಾತಾ ಳವೃಕ್ಷಪರಿಮಾಣವೆಂತೆಂದೊಡೆನರರನಾಲ್ವತ್ತು ಗೇಣುಗಳಂ

ನೈದಾಳುದ್ದ ವಿಂಶತಿಪರಿಮಾಣದಿಂದವರೊಡಗೂಡಿರ್ಕುಂ||

ದಧಿಸಮುದ್ರ ಕ್ರೌಂಚದ್ವೀಪ.

ಮತ್ತಮಾಕುಶದ್ವೀಪಮಂಪೊರಗಾವಿಸಿರ್ದ ದಧಿಸಮುದ್ರಮೇನಾಲ್ಕು ಲಕ್ಷಯೋಜನದಗಲಮಾಗಿರ್ಕುಂ| ಬಳಿಕದನಾವರಿಸಿದಕಪಿಲವರ್ಣದ ಭೂಮಿಯುಳ್ಳ ಕ್ರೌಂಚದ್ವೀಪ ಮೆಂಟು ಲಕ್ಷಯೋಜನ ವಿಶಾಲಮದಕ್ಕೆ ಜ್ಯೋತಿಷ್ಮಂತನೆಧೊರೆಯಾಗಳಾತಂಗೆ| ವೃದ್ಧಿದ| ನೇಣುಮಂತ| ಸ್ವೈರದ| ಲಂಬ| ಧೃತಿ| ಪ್ರಭಾಕರ| ಕಪಿಲರೆಂಬವರೇಳುಮಕ್ಕಳು| ಬಳಿಕವರಿಗಾದ್ವೀಪವನೇಳುಭಾಗಂಮಾಡಿಕೊಡಲವರವರ ಪೆಸರಿನಲ್ಲಾಯಾ ಖಂಡಗಳಿರ್ಪವವುಗಳಸೀಮಾಪರ್ವತಂಗಳೇ ಪೂರ್ವಾದಿಪ್ರದಕ್ಷಿಣಮಾಗಿ| ವಿದ್ರುಮ| ಹೇಮ| ದ್ಯುತಿಮಂತ| ಪುಷ್ಪವಂತ| ಕುಶೇಶಯ| ರತ್ನ| ಮಂದರಪರ್ವತಂಗಳವುಗಳಲ್ಲಿ ಪುಟ್ಟಿದನದಿಗಳೋ| ಧೂತಪಾಪೆ| ಶಿವೆ| ಪವಿತ್ರೆ| ಸಮ್ಮತಿ| ದ್ಯುತಿ| ದಂಭೆ| ಮಹೇಚಕೆ| ಸರ್ವಪಾಪಹಾರಿಗಳೆಂಬೇಳುನದಿಗಳಾಪರ್ವತಂಗಳಲ್ಲಿ ಕ್ರಮದಿಂಚರಿಸಿ ಸಮುದ್ರಂಕೂಡುವವಾ ಖಂಡಂಗಳಲ್ಲಿಯುಂ ಯೋಳೇಳುಕುಲಗೋತ್ರಂಗಳುಂ ಸಾಧಾರಣಗಿರಿನದೀವನಾದಿಗಳನೇಕಂಗಳುಂಟಾವರುಷದಲ್ಲಿಯುಜನರುಮೂರುತಾಳದುದ್ದದವರಾಗಿ ಕಲ್ಪವೃಕ್ಷಫಲಾಹಾರದಿಂಪತ್ತುಸಾವಿರವರುಷ ದಾಯುಷ್ಮಂತರೆನಿಸಿ ಜರೆರೋಗಗಳಿಲ್ಲದೆಸ್ಥಾಣುನಾಮಕಲಿಂಗಪೂಜಕರಾಗಿ ಸದಾನಂದಿಗಳೆನಿಸಿರ್ಕುಂ||

ಘೃತಸಮುದ್ರ ಶಾಲ್ಮಲಿದ್ವೀಪ.

ಅನಂತರದೊಳಾಕ್ರೌಂಚದ್ವೀಪದಪೊರಗಾವರಿಸಿದಘೃತಸಮುದ್ರ ಮೆಂಟುಲಕ್ಷಯೋಜನದಗಲಮಾಗಿರ್ಕುಂ| ಬಳಿಕದನಾ

ಪರಿಸಿದ ರಕ್ತವರ್ಣದಭೂಮಿಯುಳ್ಳ ಶಾಲ್ಮಲಿದ್ವೀಪವೆ ಹದಿನಾರುಲಕ್ಷಯೋಜನವಗಲವದಕ್ಕೆ ದ್ಯುತಿಮಂತನೆಂಬಾತನೇ ರಾಜನಾಗಲಾತಂಗೆ। ಕುಶಲ। ಮನೋನುಗ। ಪ್ರರೋನುಗ। ಪ್ರವರ। ಅಂಧಕಾರ। ಮುನಿ। ವರಿಷ್ಠ। ರೆಂಬವರೇಳುಮಕ್ಕಳು। ಬಳಿಕಾದ್ವೀಪವನೇಳುಭಾಗಂಮಾಡಿಕೊಡಲವರವರಪೆಸರಿನಲ್ಲಿ ಆಯಾಖಂಡಳಿರ್ಪವವುಗಳಸೀಮಾ ಪರ್ವತಂಗಳೇಪ್ರಾಚ್ಯಾದಿಪ್ರದಕ್ಷಿಣಮಾಗಿ। ಕ್ರೌಂಚ। ವಾಮನ। ಅಂಧಕಾರ। ದಿವಾವೃತ್। ವಿವಿಧ। ಶಿಖರ। ಪುಂಡರೀಕಾದ್ರಿ। ದುಂದುಭಿಗೋತ್ರವೆಂಬವಿವುಗಳಲ್ಲಿ ದೇವಗಂಧರ್ವಾದಿಗಳಿರ್ಪರಲ್ಲಲ್ಲಿ ಜನಿಸಿದ ನದಿಗಳೇ। ಗೌರಿ। ಕುಮುದ್ವತಿ। ಸಂಧ್ಯೆಗ। ಮನೋಜವೆ। ಖ್ಯಾತಿ। ಪುಂಡರೀಕೆ। ಪುಣ್ಯವತಿಗಳೆಂಬೇಳುನದಿಗಳಾಯಾಖಂಡಗಳಲ್ಲಿ ಕ್ರಮದಿಂಪರಿದುಸಮುದ್ರದಲ್ಲಿ ಕೂಡುವವಾಖಂಡಂಗಳೇಳರಲ್ಲಿಯೂ ಯೇಳೇಳು ಕುಲಗೋತ್ರಂಗಳುಂ ಸಾಮಾನ್ಯಗಿರಿನದೀನಂದನಾದಿವಿಚಿತ್ರಂಗಳುಮನೇಕಂಗಳುಂ ಟಾವರುಷದಲ್ಲಿಯುಂಜನರುಮೂರುತಾಳದುದ್ದದವರುಕಲ್ಪವೃಕ್ಷಫಲಾಹಾರದಿಂ ಪತ್ತುಸಾವಿರ ವರುಷದಾಯುಷ್ಯದಿಂಜರೆರೋಗಗಳಲ್ಲದೆ ಭೀಮೇಶ್ವರನಾಮಕಲಿಂಗಪೂಜಕರಾಗಿತದನುಗ್ರಹಬಲದಿಸುಖದಿಂದಿರ್ಕುಂ॥

ಇಕ್ಷುಸಮುದ್ರ ಗೋಮೇಧಿಕದ್ವೀಪ

ಅನಂತರದೊಳಾಶಾಲ್ಮಲಿದ್ವೀಪದಹೊರಗಾವರಿಸಿದ ಇಕ್ಷುಸಮುದ್ರವೇ ಹದಿನಾರುಲಕ್ಷಯೋಜನದಗಲಮಕ್ಕುಂ। ಬಳಿಕ್ಕದನಾವರಿಸಿದರಕ್ತವರ್ಣದಭೂಮಿಯುಳ್ಳ ಗೋಮೇಧಿಕದ್ವೀಪವೇ ಮೂವತ್ತೆರಡುಲಕ್ಷಯೋಜನದಗಲವದಕ್ಕೆ ಭವ್ಯನೆಂಬಾತನೇ ವಲ್ಲಭನಾಗಲಾತಂಗೆ। ಜಲದ। ಕುಮಾರಕ। ಮನೋ

ಚಕ। ಸುಕರ। ಉತ್ತ್ರಮ। ಸುದಾಕೆ। ಏಶಿಖ। ರೂಪರೆಂಬವರೇಳು ಮಕ್ಕಳವರಿಗಾದ್ವೀಪವನೇಳುಭಾಗಂಮಾಡಿಕೊಡಲವರವರಪೆಸರಿನಿಂದಾಯಾಖಂಡಂಗಳಪರ್ವವುಗಳ ಸೀಮಾಪರ್ವತಂಗಳೇ ಪೂರ್ವಾದಿಪ್ರದಕ್ಷಿಣಮಾಗಿ। ಉದಯಾಚಲ। ಜಲದಾಚಲ। ರೈವತಕ। ಮಹೇಂದ್ರ। ಶಾಮಾದ್ರಿ। ಅಂಭೋಗಿರಿಯೆಂಬವುಗಳಲ್ಲಿ ಜನಿಸಿದನದಿಗಳು। ಪಾಪಘಮು। ಮಹಾಪ್ರಜ್ಞೆ। ಕುಮಾರಿ। ಸುಕುಮಾರಿ। ನಳಿನೀ। ವೇಣುಕೆ। ಜಯೆಗಳೆಂಬೇಳುನದಿಗಳಾಯಾಖಂಡಂಗಳಲ್ಲಿ ಚರಿಸಿಸಮುದ್ರಗಾಮಿನಿಗಳಾದವಾಖಂಡಗಳೇಳರಲ್ಲಿಯೂ ಯೇಳೇಳು ಕುಲಗಿರಿಗಳುಂ ಕ್ಷುದ್ರನದೀವನಾದಿಗಳನಂತಂಗಳುಂಟಾವರುಷದಲ್ಲಿ ಜನರುಮೂರುತಾಳದುದ್ದದಾಕಾರದಿಂಕಲ್ಪವೃಕ್ಷ ಫಲಾಹಾರಿಗಳಾಗಿಯಿಪ್ಪತ್ತುಸಾವಿರವರುಷದಾಯುಷ್ಯ ದಿಂಜರೆರುಜೆಗಳಿಲ್ಲದೆವಿಶ್ವೇಶ್ವರನಾಮಕಲಿಂಗಪೂಜಕತ್ವದಿಂ ಸ್ಥಿರಸುಕೃತಸಂಪದುಸ್ವಸ್ಥಚಿತ್ತರಾಗಿರ್ಕುಂ॥

ಸುರಾಸಮುದ್ರ ಪುಷ್ಕರದ್ವೀಪ,

ಅನಂತರಮೊಳಾಗೋನೇಧಿಕದ್ವೀಪದ ಪೊರಗಾವರಿಸಿದಸುರಾಸಮುದ್ರವು ಮೂವತ್ತೆರಡುಲಕ್ಷಯೋಜನದಗಲಮಕ್ಕುಂ॥ ಬಳಿಕದರಪೊರವಳಸಿನ ಧವಳವರ್ಣದಭೂಮಿಯುಳ್ಳ ಪುಷ್ಕರದ್ವೀಪವರತ್ತುನಾಲ್ಕು ಲಕ್ಷಯೋಜನ ದಗಲವದಕ್ಕೆ ಶಿವನೆಂಬನೇನೃಪನಾತಂಗೆ—ಧಾತಕೆ—ಸುಖೋತ್ಕರರೆಂಬೀರ್ವರು ಮಕ್ಕಳು। ಬಳಿಕವರಿಗಾದ್ವೀಪವ ನೆರಡುಭಾಗಂ ಮಾಡಿಕೊಡಲವರವರಪೆಸರಿನಿಂದಾಯಾ ಖಂಡಗಳಪರ್ವತಮಾಮಧ್ಯದಲ್ಲಿ ವೃತ್ತಾಕಾರಮಾದಮಾನಸೋತ್ತರವೆಂಬುದೊಂದುಪರ್ವತವಿಪ್ಪುದದರಮೇಲೆ ಯಕ್ಷರಕ್ಷೋಗರುಡಗಂಧರ್ವಾದಿಗಳಪಟ್ಟ

ಣಂಗಳನಂತಗಳುಂಟಾಗಿರಿಯ ಉತ್ತರಭಾಗವೇ ಧಾತಕಿಯೆಂ ಬಾತನದು। ದಕ್ಷಿಣಭಾಗವೇ ಶುಷೋತ್ಕರನೆಂಬಾತನದು। ಆಖಂಡದ್ವಯದಲ್ಲಿ ಯೀ ಮಹಾನದಿಗಳುಂ ಕ್ಷುದ್ರಗಿರಿನದೀ ನಂದನಾದಿಗಳುಂ ನಾನಾರಂಜನೆಗಳುಂಟಾವರುಷದಲ್ಲಿ ಜನರು ಮೂರುತಾಳದುದ್ದದ ವರುಕಲ್ಪವೃಕ್ಷಫಲಾಹಾರದಿಂ ಪತ್ತುಸಾವಿರ ವರುಷದಾಯುಷ್ಯದಿಂ ಜರೆರೋಗಗಳಿಲ್ಲದೆ ಸೋಮೇಶ್ವರ ನಾಮಕಲಿಂಗಪೂಜಕರಾಗಿ ನಿತ್ಯಸುಖಿಗಳೆನಿಸಿರ್ಪರ್॥

ಸ್ವಾದೂದಕ ಸಮುದ್ರ.

ಮತ್ತಮದರಹೊರಗಾವರಿಸಿರ್ದ ಸ್ವಾದೂದಕ ಸಮುದ್ರದ ಅರವತ್ತುನಾಲ್ಕು ಲಕ್ಷಯೋಜನದಗಲವಾಗಿ ಸಮಸ್ತಮೇಘಮಾಲೆಗಳುದಕವನಿತ್ತು ಸಕಲಲೋಕೋಪಕಾರವಾಗಿರ್ಪರ್। ಬಳಿಕದರಹೊರವಳಸಿ ಸರ್ವದೇವತಾಕ್ರೀಡಾರ್ಥ ಮಾದಹಿರಣ್ಮಯಭೂಮಿಯುದಶಕೋಟಿಯೋಜನದಗಲದಿಂಜಂಭಾಮಾತ್ರಜಲಮಯವಾಗಿನಿರ್ಜನ ಪ್ರದೇಶವೆನಿಸಿರ್ಪರ್॥

ಲೋಕಾಲೋಕ ಮಹಾಗಿರಿ.

ಮತ್ತಮದನಾವರಿಸಿದಮಹಾತಮಸ್ಸಿನೊಳು ಸುರಸಂತತ್ರಿಗಾತ್ರಯಮಾದಸೂರ್ಯನ ರಥಪ್ರಸರಣೆಯಿಲ್ಲದರಿಂದಾಲೋಕವಮಡಗಲಾಗಿರಿಯುಲೋಕಾಲೋಕವೆಂಬ ಪೆಸರ್ಪಡೆದಿರ್ಪುದಾಮಹಾಶೈಲದ ಕೋಟಿಯುಹಿರಣ್ಮಯಭೂಮಿಯಿಂಬಳಸಿಹತ್ತುಸಾವಿರಯೋಜನದುದ್ದವಾಗಿರ್ಪುದಾಗಿರಿಯಮೇಲೆತನೋಭೂಮಿಯೊಳುಸೂರ್ಯನರಥಕ್ಕೆ ವಿಘ್ನವಾಗದಂತೆಇಂದ್ರಾದಿದಿಕ್ಪಾಲಕರ ಪದಾತಿಮೊದಲಾದಬಲವುತಮ್ಮತಮ್ಮದೆಸೆಯೊಳಿಕಾಯ್ದುಕೊಂಡಿರ್ಪರ್॥

ತಪೋಭೂಮಿ.

ಮತ್ತಮದರಛಾಯೆಯಲ್ಲಿ ಬರಿಯುತ್ತ ಮುಸ್ಸುಮುಸುಕಿದ ಭೂಮಿಮೂವತ್ತೈದುಕೋಟಿಯುಂಹತ್ತೊಂಬತ್ತುಲಕ್ಷಮುಂ ನಾಲ್ವತ್ತುಸಾವಿರಯೋಜನದ ಪರಿಮಾಣವದರಲ್ಲಿ ನಿಶಾಚರ ರಾಕ್ಷಸಾದಿಗಳುನೆಲೆಗೊಂಡು ಸ್ವಸ್ವತಪೋಜ್ಯೋತಿಯಿಂಬೆಳಗುತ್ತಲ್ಲಿಯುಃಪ್ರಾಂತಂಗಳಂ ಕಂಡುಪಭೋಗಿಸಿಸುಖದಿಂ ಸಂಚರಿಸುತ್ತಿರ್ಪರಂ||

ಗರ್ಭೋದಕ ಸಮುದ್ರ.

ಮತ್ತಮದರಾಚೆಯಲ್ಲಿ ಗರ್ಭೋದಕಸಮುದ್ರ ಮೊಂದು ಕೋಟಿಯುಂಇಪ್ಪತ್ತೇಳುಲಕ್ಷಯೋಜನಂಗಳ ವಿಶಾಲಮಾಗಿ ಹ್ರದಲ್ಲಿ ಬಲಮುರಿಯ ಶಂಖದಗಿರಿಯುಂತಿಮಿ ತಿಮಿಂಗಿಲಾದಿ ಮಹಾಜಲಚರ ಪ್ರಾಣಿಗಳುಂ ವಿಹರಿಸುತ್ತಿರ್ಪವಾ ಮಾನುಗಳೊಂದೊಂದಸೀಕ್ಷಿಸಿಬೆರಸಿಸೆಯೋಗಮಥನದಿಂದಗರ್ಭೋದಕಸಮುದ್ರ ತುಳುಕಿ ತೆರೆಗಳದುಸಮಸ್ತ ದ್ವೀಪಂಗಳನೊಳಕೊಂಡುಜಲಪ್ರಳಯಮಾಗದಂತರಮಧ್ಯದಲ್ಲಿ ಮಹಾಸರ್ವತಾಕಾರನಾದಕಮಠನೊಂದು ಮಲಿಯಾಗಿನೆಲಸಿರಲದರಾಚೆಯಲ್ಲಿ ಬ್ರಹ್ಮಾಂಡಕಟಾಹಾಂತ ಪ್ರಮಾಣಬಯಲೊಂದುಕೋಟಿಯೋಜನಮಕ್ಕುಂ||

ಭೂಲೋಕಯೋಜನ ಸಂಖ್ಯೆ.

ಬಳಿಕೀಕ್ರಮದಿಂಯೋಜನಸಂಖ್ಯೆಯನೆಣಿಸಿದೊಡೆ ಜಂಬೂದ್ವೀಪಮೊದಲಾದದ್ವೀಪಸೇಳುಕೋಟಿಯೂ ಇಪ್ಪತ್ತೇಳುಲಕ್ಷಯೋಜನಪರಿಮಾಣವಹುದು। ಆಹಿರಣ್ಮಯ ಭೂಮಿಯುದಶಕೋಟಿಯೋಜನಪರಿಮಿತವಹುದು। ಲೋಕಾಲೋಕಪರ್ವತವೇಹತ್ತುಸಾವಿರ ಯೋಜನಪರಿಮಿತವಹುದು। ಆತ

ಪೋಭೂಮಿಯುಮೂವತ್ತೈದುಕೋಟಿಯುಂತೊಂಬತ್ತುಲಕ್ಷಮುಂ ಮೂವತ್ತುನಾಲ್ಕು ಸಾವಿರಯೋಜನಪರಿಮಿತವಪ್ಪುದು। ಅದರಾಚೆಯ ಗರ್ಭೋದಕಸಮುದ್ರ ವೊಂದುಕೋಟಿಯುಂ ಇಪ್ಪತ್ತೇಳುಲಕ್ಷಯೋಜನ ವಪ್ಪುದು।ಮತ್ತದರಾಚೆಯುಬಯಲೊಂದುಕೋಟಿಯೋಜನವಪ್ಪುದಿಂ ತ್ರೈವತ್ತು ಕೋಟಿಯುಮೈವತ್ತುಸಾವಿರಯೋಜನಗಳೊಳು ಜಂಬೂದ್ವೀಪವೊಂದು ಲಕ್ಷಯೋಜನಮಾಗಿ ಮೇರುವು ಸರ್ವಮಧ್ಯವಾದ ಕಾರಣದಿಂ ಮೇಲಣೈವತ್ತುಸಾವಿರ ಯೋಜನಮಂಕಳೆದು ಮೇರುವಿನರ್ಧದಿಂ ಬ್ರಹ್ಮಾಂಡಕಟಾಹಾಂತಭೂಮಿ ಪಂಚಾಶತ್ಕೋಟಿಯೋಜನಮಿತವಪ್ಪುದೀಕ್ರಮದಿಂ ಮೇರುವಿನಪೂರ್ವ ಪಶ್ಚಿಮದಕ್ಷಿಣೋತ್ತರಗಳೊಳುನೋಡೆಬ್ರಹ್ಮಾಂಡದಾಯತಂನೂರುಕೋಟಿಯೋಜನವಪ್ಪುದೆಂದುನಿಶ್ಚಿತಮಾಗಿರ್ಕುಂ॥

ಇಂತೆಂಬಲ್ಲಿಗೆನಿಜಗುಣಶಿವಯೋಗೀಂದ್ರವಿರಚಿತಮಾದ
ವಿವೇಕಚಿಂತಾಮಣಿಯೆಂಬಗ್ರಂಥದಲ್ಲಿ ಸಪ್ತ
ದ್ವೀಪವರ್ಣನವೆಂಬಐದನೆಯಪ್ರಕರಣಕ್ಕೆ
ಮಂಗಳಮಸ್ತು.

NOTICES.

ನೋಟಿಸುಗಳು.

ಸನ್ ೧೮೬೨ ನೇ ಇಸವಿಯ ದಿಜಂಬರ ತಿಂಗಳ ೧೨ ನೇ ತಾರೀಖಿನ ಮುಂಬಯಿ ಸರಕಾರೀ ಗ್ಯಾಝೆಟ ನಿಂದ—

ರೆವ್ಹಿನ್ಯೂ ಖಾತೆ.

ನಾಮದಾರ ಗವ್ಹರ್ನರ ಇನ್ ಕಾವುನ್ಸಿಲ್ಲ ನವರು,

ಮ್ಮೇದವಾರರ ಮುಲಕೀ ಪರೀಕ್ಷೆಯಸಲುವಾಗಿ ಕೆಳಗೆ ಬರೆದ ನಿಯಮಗಳನ್ನು ಶಾಂಕಶನ್ನು ಮಾಡಿರುತ್ತಾರೆ. ಈ ನಿಯಮಗಳು, ಸನ್ ೧೮೭೧ ನೇ ಇಸವಿಯ ಮೇ ತಿಂಗಳ ೪ ನೇ ತಾರೀಖಿನ ಗ್ಯಾಝುಟಿನಲ್ಲಿ ಪ್ರಸಿದ್ಧಿಸಲ್ಪಟ್ಟ ನಿಯಮಗಳ ಭಾಗವೆಂದು ತಿಳಿಯತಕ್ಕದ್ದು.

ಮೊದಲನೇ ವರ್ಗದ ಸರಟಿಫಿಕೇಟಗಳನ್ನು ಪಡೆಯಲಿಚ್ಛಿಸುವ ಉಮೇದವಾರರು ಮೂರು ರೂಪಾಯಿ ಫೀ ಕೊಡತಕ್ಕದ್ದು.

ಎರಡನೇ ವರ್ಗದ ಸರಟಿಫಿಕೇಟಗಳನ್ನು ಪಡೆಯಲಿಚ್ಛಿಸುವ ಉಮೇದವಾರರು ಒಂದು ರೂಪಾಯಿ ಫೀ ಕೊಡತಕ್ಕದ್ದು. ಜಿಲ್ಹೆಯ ಮುಖ್ಯ ಸ್ಥಳದಲ್ಲಿ ಪರೀಕ್ಷೆಯಸಲುವಾಗಿ ನೇಮಿಸಿದ ಕಮಿಟಿಯ ಅಧ್ಯಕ್ಷರಿಗೆ, ಈ ಫೀಯನ್ನು ಮೊದಲಿಗೆ ಕೊಡತಕ್ಕದ್ದು.

ಧಾರವಾಡ ೧ ನೇ ಮಾರ್ಚ ೧೮೭೨

(Signed) J. F. FLEET.

ಇ. ಇನ್ಸಪೆಕ್ಟರ ದಕ್ಷಿಣ ಭಾಗ.

दक्षीण भागातिल मास्तर लोकांस कळविण्यात येतें कीं-शाळेची फी ते चलना बरावर पाठवितात त्या चलनांत शाळेचें नांव दाखल करण्याविषयीं हुकुम असतां त्या प्रमाणें कितीएक मास्तर कलादगी जिल्ह्यातील करीत नाहींत येणेंकरून हिशेबी कामास फार अडचण येते याजकरितां या हुकमा व-

रून सर्वत्रांस जाहिर करण्यांत येतें कीं या पुढें चलना मध्यें शाळेचें नांव दाखल केल्यावांचून कोणी मास्तरानें फी भरणा केल्याचें आमचे नजरेस आल्यास त्याजबद्दल योग्य रीतिप्रमाणें तजवीज केली जाईल. कळावें ता० २४ मार्च १८७३ ई०

[Signed] J. F. Fleet.

एज्युकेशनल इनस्पेक्टर दक्षीण भाग.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ತಿಳಿಯಪಡಿಸುವದೇನಂದರೆ—ಕೆಲವು ಮಾಸ್ತರರು ವೇಳೆ ವೇಳೆಕ್ಕೆ ದರಮಹಾ ಲೆಕ್ಕಾ ಕಳುಹಿಸುವದಿಲ್ಲ ಮತ್ತು ಕೆಲವರು ತಪ್ಪುಮಾಡಿ ಲೆಕ್ಕಾ ಕಳುಹಿಸುತ್ತಾರೆ. ಅದನ್ನು ದುರಸ್ತಮಾಡಿ ತಿರಗಿ ಕಳಿಸುವದಕ್ಕೆ ಹುಕುಮು ಕೊಟ್ಟರೆ ವೇಳೆಕ್ಕೆ ಕಳಿಸದೆ ಒಂದೊಂದು ವೇಳೆ ಅಜ್ಜಿ ಕಳಿಸುವದೇ ಇಲ್ಲ. ಈ ಪ್ರಕಾರ ಆದದರಿಂದ ಇತ್ತ ಕಡಿಯು ಕೆಲಸಕ್ಕೆ ಬಹಳ ಹರಕತು ಆಗುತ್ತದೆ ಕಾರಣ ಈ ನೋಟೀಸು ಕೊಟ್ಟದೆ ಇನ್ನು ಮೇಲೆ ಯಾರಾದರು ಮೇಲೆ ಬರೆದ ಪ್ರಕಾರ ವಹಿವಾಟ ಮಾಡಿದರೆ ಅವರ ಬಗ್ಗೆ ಯೋಗ್ಯ ತಜವೀಜ ಆಗುವ ಬಗ್ಗೆ ಮೋ॥ ಇ. ಇನಸ್ಪೇಕ್ಟರ ಸಾಹೇಬ ಬಹಾದ್ದೂರವರ ಕಡಿಗೆ ಶಿಫಾರಸ ಮಾಡಲಾದೀತು ತಿಳಿಯುವದು ತಾರೀಖು ೨೭ ಫೇಬ್ರುವಾರಿ ಸನ್ನ ೧೮೭೨ ಇಸ್ವಿ.

Ramchandra A. Sawnoor.

ಡಿ. ಇ. ಇ. ಜಿಲ್ಲಾ ಕಲಾದಗಿ.

ಸರಕ್ಯೂಲರ ನೋಟೀಸು.

ಧಾರವಾಡ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ--

ತಿಳಿಸುವದೇನಂದರೆ—೧ನೇ ಮತ್ತು ೨ನೇ ಸ್ಟ್ಯಾಂಡರ್ಡ ಕಲಿಯುವ ಹುಡುಗರನ್ನು ಬಿಟ್ಟು ೩ನೇ, ೪ನೇ, ೫ನೇ, ಸ್ಟ್ಯಾಂಡರ್ಡ ಕಲಿಯುವ ಹುಡುಗರಿಗೆ ಇಂಗ್ಲಿಷ ಅಂಕಿಗಳಿಂದ ಮತ್ತು ಕನ್ನಡ ಅಂಕಿಗಳಿಂದ ಲೆಕ್ಕಗಳನ್ನು ಮಾಡಲಿಕ್ಕೆ ಬರಬೇಕು.

ಮುಂದಿನ ವರ್ಷ ಪರೀಕ್ಷೆಯ ವೇಳೆಕ್ಕೆ ಕೆಲವು ಲೆಕ್ಕಗಳನ್ನು ಇಂಗ್ರೇಜಿ ಅಂಕಿಗಳಿಂದ ಮತ್ತು ಕೆಲವು ಲೆಕ್ಕಗಳನ್ನು ಕನ್ನಡ ಅಂಕಿಗಳಿಂದ ಮಾಡಿಸುವೆವು. ತಿಳಿಯುವದು ತಾರೀಖು ೧೯ನೇ ಮಾಹೆ ಮಾರ್ಚ ಸನ್ನ ೧೮೭೨ನೇ ಇಸ್ವಿ

(Signed) Chanbussappa B. Dharwar,
ಡಿ. ಯು. ಇ. ಜಿಲ್ಹಾ ಧಾರವಾಡ

Correspondence.

ಪತ್ರವ್ಯವಹಾರವು.

ರಾಜಮಾನ್ಯರಾಜೇಶ್ರೀ ಬೆಳಗಾಂವಿ ಕನ್ನಡ ಮಠಪತ್ರಿಕರ್ತರ ಇವರ ಸಂನಿಧಿಗೆ—

ಶೇವಕ ರಾಮಚಂದ್ರ ಶೇಷಭಟ್ಟ ಕೈರೆಣಿಕರ ಗರ್ಲಸ್ಕೂಲ ಮಾಸ್ತರ ಶಾಳಾಬಂಕಿಕೊಡ್ಲ ತಾಲೂಕ ಕುಮಟಾ ಈತನ ಕೃತಾನೇಕ ವಿನಂತಿ.

ಈ ತಿಂಗಳ ಮಠಪತ್ರಿಕೆಯು ೨೩೨ನೇ ಪಾನಿನಲ್ಲಿ ನಿರೋ

ಏಸೋಣ್ಣಾದನೋರೆಗೆ ಆ ಶ್ಲೋಕದ ಅರ್ಥವು ಅಲ್ಪ ಮತಿಯಾದ ನನ್ನ ಬುದ್ಧಿಗೆ ಸೂಚಿಸಿದಂತೆ ಶಬ್ದಾರ್ಥ ಕುರಿತು ಕೆಳಗೆ ಬರೆಯುತ್ತೇನೆ. ಅದರಲ್ಲಿ ಹಸ್ತದೋಷದಿಂದಾಗಲೀ, ಅಜ್ಞಾನದಿಂದಾಗಲೀ ತಪ್ಪುಗಳು ಇದ್ದರೆ, ಅವುಗಳು ಪ್ರಾಜ್ಞರಾದ ತಮ್ಮಿಂದ ತಿದ್ದಲ್ಪಟ್ಟು ಅದರಲ್ಲಿರುವ ಸುರಸವಾದ ಗೌರವಾರ್ಥವು ಏನೆಂಬುವದು ವಿಸ್ತರಿಸಲ್ಪಡುವರೇ ಬರುವತಿಂಗಳ ತಮ್ಮ ಸುಂದರವಾದ ಮಾಸಪತ್ರಿಕೆಯಲ್ಲಿ ಸ್ಥಲದೊರೆಯುವದೆಂದು ನಂಬುತ್ತೇನೆ.

(ಶ್ಲೋಕ.)

ಏಕಾಂತೆಸಹನಾಯಕೇನಕಮಲಾರಂತುಂಪ್ರವೃತ್ತಾಮುದಾ।
ದೃಷ್ಟ್ವಾನ್ಯಂಪುರುಷಂಪ್ರಿಯಸ್ಯ ನಯನಂವಾಮೇತರಂರುಂಧತೀ॥
ಏಣಾಂಕಂರಮಣಶ್ಚವೀಕ್ಷ್ಯಚಕಿತಾಪದ್ಮಾಕ್ಷಿಪದ್ಮದ್ವಯಂ।
ಪಾಣಿಭ್ಯಾಂಸಮರುಂಧಯತ್ಸ ಮಘವಚ್ಛತ್ರಂವೇಮೇತದ್ವ್ಯಾದ ॥೯॥

(ಶಬ್ದಾರ್ಥವು.)

ಏಕಾಂತೇ=ವಿಜನಸ್ಥಲದಲ್ಲಿ। ಸಹ=ಯುಕ್ತಳಾಗಿ। ನಾಯಕೇನ=ಪತಿಯಿಂದ (ವಿಷ್ಣುವಿನಿಂದ), ಕಮಲಾ=ಲಕ್ಷ್ಮಿಯು। ರಂತುಂ=ರಮಿಸಲಿಕ್ಕೆ। ಪ್ರವೃತ್ತಾ=ಉದ್ಯುಕ್ತಳಾದಳು। ಮುದಾ=ಸಂತೋಷದಿಂದ। ದೃಷ್ಟ್ವಾ=ನೋಡಿ। ಅನ್ಯಪುರುಷಂ=ಬೇರೆ ಪುರುಷನನ್ನು (ವಿಷ್ಣುವಿನ ನಾಭಿಕಮಲದಲ್ಲಿರುವ ಬ್ರಹ್ಮನನ್ನು) ಪ್ರಿಯಸ್ಯ=ಗಂಡನ। ನಯನಂ=

ಕಣ್ಣುಗಳು। ವಾಮೇ=ಯೆಡದ।ಯಿತರಂ=ಬೇರೆ। (ವಾಮೇತರಂ=ಯೆಡಗಣ್ಣಿನ ಸಾಲಿಗಿರುವ ಇನ್ನೊಂದು ಕಣ್ಣು ಅಂದರೆ ವಿಷ್ಣುವಿನ ಬಲಗಣ್ಣೆಂಬ ಸೂರ್ಯನನ್ನು) ರುಂಧತೀ=ಮುಚ್ಚಿದಳು॥

ಏಣಾಂಕಂ=ಚಂದ್ರನನ್ನು। ರಮಣಸ್ಯ=ಗಂಡನಿಗೆ। ವೀಕ್ಷ್ಯ=ನೋಡಿ। ಚಕಿತಾ=ಅಂಜಿ। ಪದ್ಮಾ=ಲಕ್ಷ್ಮಿಯು। ಅಕ್ಷಿಪದ್ಮ=ನೇತ್ರಕಮಲ। ದ್ವಯಂ= ಎರಡನ್ನು। ಪಾಣಿಭ್ಯಾಂ=ಕೈಗಳಿಂದ। ಸಮರುಂಧಯತ=ಮುಚ್ಚಿದಳು। ಅಭವತ=ಆಯಿತು। ಚಿತ್ರಂ=ಆಶ್ಚರ್ಯವು। ಕಿಂ=ಏನು। ಏತತ=ಇದು। ವದ=ಹೇಳು।

(ಪದ್ಯಾರ್ಥವು.)

ಏಕಾಂತದಲ್ಲಿ ಲಕ್ಷ್ಮಿಯು ತನ್ನ ಪತಿಯಾದ ವಿಷ್ಣುವಿನ ಸಮೇತಳಾಗಿ ಕ್ರೀಡಾವಿನೋದಕ್ಕೋಸ್ಕರ ಸಂತೋಷದಿಂದ ಉದ್ಯುಕ್ತಳಾದಾಗ ಅನ್ಯ ಪುರುಷನಾದ ವಿಷ್ಣುವಿನ ನಾಭಿಕಮಲದಲ್ಲಿದ್ದ ಬ್ರಹ್ಮನಿಗೆ ನೋಡಿ, ಗಂಡನ ಬಲಗಂಣೆಂಬ ಸೂರ್ಯನನ್ನು ಮುಚ್ಚಿದಳು ಹಾಂಗೆ ಚಂದ್ರನನ್ನು ನೋಡಿ ಲಕ್ಷ್ಮೀಯು ಹೆದರಿ ಗಂಡನ ಎಡಗಂಣೆಂಬ ಚಂದ್ರನನ್ನು ಕೈಗಳಿಂದ ಮುಚ್ಚಿದಳು.

(ತಾತ್ಪರ್ಯ.)

ಅನ್ಯ ಪುರುಷನಾದ ಬ್ರಹ್ಮನು ನಾಭಿಕಮಲದಲ್ಲಿ ಉದ್ಭಾದ ಆಗಬೇಕೆಂದು ಸೂರ್ಯನಿಗೆ ಮುಚ್ಚುತ್ತಿರಲು, ಚಂದ್ರನು ದೃಷ್ಟಿಗೆ ಬಿದ್ದು, ಇವನಿಗೆ ಸಹ ಮುಚ್ಚಿದಳು (ಅಂ

ದರೆ, ವಿಷ್ಣುವಿನ ಎರಡು ಕಂಣುಗಳೆಂಬ, ಸೂರ್ಯ, ಚಂದ್ರಗಳಿಗೆ ಎರಡು ಕೈಗಳಿಂದ ಮುಚ್ಚಿದಳು). ಇಂತಿಬಿನ್ನಹ

ತಾರೀಖು ೨೯ನೇ ಜನವರಿ ೧೮೭೩ ನೇ ಇಸವಿ.

ರಾಮಚಂದ್ರ ಶೇಷಭಟ್ಟ ಸ್ತ್ರೀ. ಕಾಳಾಮಾಸ್ತರ ಬಂಕಿಕೊಡ್ಲ ತಾಲೂಕ ಕುಮಟಾ ಜಿಲ್ಲಾ ಕಾನಡಾ.

ಶ್ರೀಮಂತ ರಾಜಮಾನ್ಯ ರಾಜಶ್ರೀ ಕನ್ನಡ ವೃತ್ತಪತ್ರಕರ್ತರಿಗೆ—

ವಿನಂತಿ ಬಿನ್ನಃ ತಮ್ಮ ಕರದಲ್ಲುದ್ಭವಿಸುವಂಥ ಮಾಹೆ ಮಾರ್ಚ ತಿಂಗಳದ ವೃತ್ತಪತ್ರಕದ ೨೮೬ನೇ ಪಾನಿನಲ್ಲಿ ಹೊನವಾಡಕರ ಇವರು ಶ್ಲೋಕರೂಪವಾಗಿ ಹಾಕಿರುವ ಲೆಕ್ಕವನ್ನು ಎಥಾಮತಿಯಿಂದ ಮಾಡಿ ಕಳುಹಿಸಿದ್ದಕ್ಕೆ ಸುಂದರವಾದ ಪತ್ರಿಕೆಯಲ್ಲಿ ಸ್ಥಳದೊರದೀತೆಂಬ ಪ್ರಾರ್ಥನೆಯುಂಟು.

	೧೦೦೦		೧೦೦೦		೧೦೦೦
೧೦೦೦	೨೪೧	೨೪೭	೨೫೩	೨೫೯	
೧೦೦೦	೨೫೩	೨೫೯	೨೪೧	೨೪೭	೧೦೦೦
೧೦೦೦	೨೪೭	೨೪೧	೨೫೯	೨೫೩	
೧೦೦೦	೨೫೯	೨೫೩	೨೪೭	೨೪೧	
	೧೦೦೦		೧೦೦೦		೧೦೦೦

ದರಸಾಲಿನ ಉದ್ದ ಹಾಗು ಅಡ್ಡ ಬೇರಿಜು ಮತ್ತು ಯೆರಡೂ ಮೂಲೆಗಳ ಬೇರಿಜಾದರೂ ಹಾಕಿದವರ ಅಪೇಕ್ಷೆಯ,

ಕಾರ ಸಾವಿರಕ್ಕೆ ಮೇಲು ಕೂಡಿರುತ್ತದೆ. ಇಂತಿ ವಿಜ್ಞಾಪನಃ.

ತಾ॥೩೦ನೇ ಮಾಹೆ ಮಾರ್ಚ ಸಂನ ೧೮೭೩ ಇ. ಮು॥ ಬಾಗೇವಾಡಿ ತಾ॥ ಬೆಳಗಾವಿ.	ರಾಮಚಂದ್ರ ದೇವರಾಚಾರ್ಯ ಹೊಸೂರ ಶಿಕ್ಷಕ ಬಾಗೇವಾಡಿ.

ಮೇಹರ್ಬಾನ ದಕ್ಷಿಣಭಾಗ ಶಾಲಾಪತ್ರಿಕೆಯ ಏಡಿಟರ ಮುಕ್ಕಾಮ ಬೆಳಗಾವ ಇವರ ಶೇವಿಗೆ.

ಮೌಜೆ ಅಂಜೂಟಗಿ ತಾಲೂಕ ಇಂಡಿ ಜಿಲ್ಲಾ ಕಲಾದಗಿ ಇಲ್ಲಿಯ ಮಾಸ್ತರನ ವಿನಂತಿ ಏನಂದರೆ ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಪತ್ರದಲ್ಲಿ ಪ್ರಕಟಿಸುವಿರಿ ಎಂದು ಅಪೇಕ್ಷೆಯುಂಟು.

ಮೌಜೆ ಮುಜಕೂರ ಶಾಲಿಯ ವಾರ್ಷಿಕ ಪರೀಕ್ಷಕ್ಕೆ ಮೆ. ಡಿ. ಎ. ಇ. ಜಿಲ್ಲಾ ಮುಜಕೂರ ಇವರ ಸ್ವಾರಿ ಬಂದು ಪರೀಕ್ಷೆಯನ್ನು ಕನ್ನಡ ವಿಷಯದಲ್ಲಿ ತೆಗೆದುಕೊಂಡಾಗ ನಡೆದ ಸಂಗತಿ–ಈ ಶಾಲೆಯಲ್ಲಿ ಪೂರ್ವದಲಾಗಾಯಿತ ಕನ್ನಡು ಇರದೆ ಇದೇ ಬರುಷದಲ್ಲಿ ಕನ್ನಡು ಆರಂಭ ಇದ್ದು ತಾರೀಖು ೩ನೇ ಫೆಬ್ರುವರಿಯಲ್ಲಿ (೫) ನೇ ಮತ್ತು (೬) ನೇ ಮರ್ಯಾದೆಪ್ರಕಾರ ಏನಿಕೆವಿಷಯದ ಪರೀಕ್ಷೆಯನ್ನು ವಿದ್ಯಾರ್ಥಿಗಳು ಕೊಟ್ಟಾಗಲೇ ನಮ್ಮ ಧೊರೆಗಳು ಸಂಭ್ರಮಪಟ್ಟರು. ಆದರೆ ಇತಿಹಾಸವಿಷಯದಲ್ಲಿ (ಸೂರ್ಯನ ತೇಜವನ್ನು ಮೇಘ ಮುಸುಕಿ ನಿಸ್ತೇಜವಾದಂತೆ) ಏನಿಕೆ ಅಂಕ ತೋರಿತು. ಇಷ್ಟರಲ್ಲಿ ಅದೇ ವಿದ್ಯಾರ್ಥಿಗಳು (ಅನಿಲನು ತನ್ನ ಗೆಳೆಯನಾದ ಸೂರ್ಯನು ಕಳೆಗುಂದಿರುವದ

ನ್ನು ಕಂಡು ಸಹನಾಗದೆ ಮೋಘನಿಗೆ ಹೊಡಿಯಲಾಗಿ ಮೋಘ
ವು ಭಂಗಹೊಂದಿ ಅದರಿಂದ ಸುರಿಯುವ ಆಣೆಕಲ್ಲುಗಳ ಹಿಮಾ
ದಿಯಲ್ಲಿ) ಸದರಹು ಧೊರೆಗಳಿಗೆ ಅಂದು ತೋರಿಸಿದ ಕವಿ
ತ್ವವು ಅದರ ಧಾಟಿ, ಶಬ್ದಾರ್ಥ, ಭಾವಾರ್ಥದಿಂದ ಬಹಳೇ
ಸಂತೋಷವನ್ನು ಕೊಟ್ಟರು. ಈ ಆನಂದದಿಂದ ರಜಿಷ್ಟ
ರದಲ್ಲಿ, ಇದರ ಬಗ್ಗೆ ಹಾಗು ಮಾಸ್ತರನು (ನಾನು) ಮೊಹನ
ತಿ ಎಂಬುವ ಬಗ್ಗೆ ಷರಾ ಸಹ ಬರದು ಪಾಸಾದ ವಿದ್ಯಾರ್ಥಿ
ಗಳಿಗೆ ಇನಾಮುವನ್ನು ಕೊಟ್ಟು—ನನಗೆ ಪಾಸಾದ ವಿದ್ಯಾರ್ಥಿಗ
ಳ ಸಂಖ್ಯೆದಮೇಲಿಂದ ಹಾಗು [illegible] ಸರಾಸರಿ ಮೇಲಿಂ
ದ ಲಾಭವದ ಹಣ ದೊರಿಯುವದೆಂದು ಹೇಳಲು. ತಕ್ಕ
ಮುಟ್ಟಿಗೆ ಮೇಹನತ ಮಾಡಿದ ಫಲವು ನನಗೆ ದೊರಿಯುವ
ದೆಂದು ಖಾತ್ರಿಯಾಗಿತ್ತು; ಆದರೆ ಅಂಟ್ರೇಂಡ್ ಇದ್ದವರಿಗೆ
ಹಣದೊರಿಯಲಿಕ್ಕೆ ಅನುಕೂಲವಿಲ್ಲೆಂದು ನಮ್ಮ ಇದೇ ಎ
ಜಮಾನರು ಹೇಳಿದ್ದಲ್ಲದೆ ಸರಕ್ಯೂಲರ ಸಹ ಉಂಟು. ಆ
ದರೆ ಈ ಖರ್ಚದಿಂದ ಬೇಡಿಕೊಳ್ಳುವದೇನಂದರೆ—ಮಾಡಿದಂ
ಥ ಮೇಹನತ್ತಿನ ಫಲವು ಇಂಥ ಜನರಿಗೇ ದೊರಿಯತಕ್ಕ
ದ್ದೆಂದು ಎಲ್ಲಿಯೂ ನಿರ್ಬಂಧವಂತು ಇರಲಿಕ್ಕಿಲ್ಲ. ಇದಲ್ಲದೆ
ಅಂಟ್ರೇಂಡ್‌ರಾದ ಮಾಸ್ತರರು ಬಹುದಿವಸದಾರಭ್ಯ ಇಮಾ
ನಿಯಿಂದ ಚಾಕರಿಮಾಡಿ ಟ್ರೇನಿಂಗಕಾಲೇಜಕ್ಕಾದರೂ ಹೋ
ಗುವದಕ್ಕೆ ಕಬೂಲಿ ಕೊಟ್ಟಂಥ ಮಾಸ್ತರಜನರಿಗೆ ತೀವ್ರ
ದಿಂದ ಕಾಲೇಜಕ್ಕೆ ಕಳುಹಿಸೋಣಿಲ್ಲಾ ಮತ್ತು ಬಡತಿಮಾ
ಡಲಿಕ್ಕೂ ಅನಕೂಲವಿಲ್ಲಾ ಈ ರೀತಿಯಿಂದ ನಿರ್ಬಂಧ ಸರ
ಕಾರ ಮಾಡಿದ್ದರಿಂದ ಅಂಟ್ರೇಂಡ ಮಾಸ್ತರರಿಗೆ ಲುಕ್ಸಾನಿ
ಪೂರ್ಣವಾಗಿ ಆಗುತ್ತದೆ. ಕಾರಣ ದಯಾಳುಗಳಾದ ಸರ

ಕಾರದವರು ವಿಚಾರ ಮಾಡುವಿರೆಂದು ನೆರೆನಂಬುತ್ತೇನೆ.

ತಾರೀಖು ೮।೩।೨೩ } ಸಹಿ ಶಿವಾಜಿ ಧೋಂಡದೇವ ದಾತೆ
ಗಜಂದ್ರಗಡಕರ ಸ್ಕೂಲಮಾಸ್ತರ
ಅಂಜೂಟಗಿ.

ಸ್ಥಾಪನೆ : ೧೮೭೪

ಸಂಸ್ಥಾಪಕರು.

1874

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೯೯

ಶ್ರೀ. ಚನ್ನಬಸಪ್ಪನವರು.

(೧೮೩೩-೧೮೮೧)

ಶತಮಾನೋತ್ತರ ಬೆಳ್ಳಿ ಹಬ್ಬ

(ಏಪ್ರಿಲ್ ೧೯೯೯ ರಿಂದ)

ವರ್ಷ 1874

9-10ನೆಯ ಸಂಚಿಕೆ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚೆನ್ನಬಸಪ್ಪ ವೃತ್ತ, ರೋವ್ವರ ರಸ್ತೆ, ಧಾರವಾಡ - ೮

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಕನ್ನಡ ಶಾಲಾಪತ್ರಕವು
CANARESE SCHOOL PAPER.

ಪುಸ್ತಕ ೯] [ಸಂಚಿಕೆ ೧೦.

ಬೆಳಗಾವಿ, ಮಾಹೆ ಜಾನೇವಾರಿ ೧೮೭೪.

ಅನುಕ್ರಮಣಿಕೆಯು........................ ಪುಟ.
ತನಗೆ ತಾನೇ ನೆರವಾಗುವದು........................ ೫೦೫
ಶಾಂತವೀರ ರಾಚದೇವಕೃತ ಕರ್ನಾಟಕ ವ್ಯಾಖ್ಯಾನಗಳು... ೫೧೨
ನೋಟೀಸು........................ ೫೧೬
ಪತ್ರವ್ಯವಹಾರವು........................ ೫೧೭

CONTENTS........................ Page
.... 505
Self Help........................
Champu Ramayeu and Champu Bharata with Commentaries in Canarese by Mr. Shantaviray........ 512
.... 516
Notice........................ 517
Correspondence........................

BELGAUM.
Printed at the Belgaum Samachar Press.

ಶಾಲಾಪತ್ರಕವು.

ಪುಸ್ತಕ ೯] [ಸಂಚಿಕೆ ೧೦.

ಬೆಳಗಾವಿ, ಮಾಹೆ ಜಾನೇವಾರಿ ೧೮೭೪.

SELF HELP

ತನಗೆ ತಾನೇ ನೆರವಾಗುವದು.

ಸಾಧಾರಣವಾಗಿ ಯೆಲ್ಲ ಲಾಭಕರವಾದ ಹೊಸ ಶೋಧಗಳಲ್ಲಿ ಆಗುವಂತೆ ಇದರಲ್ಲಾದರೂ ಹೀಥಕೋಟನ ಸಂಗಡ ಅವನ ಯಂತ್ರದ ಬಾಧ್ಯಸ್ತಿಕೆಯು ಸಲುವಾಗಿ ವಾದ ಪ್ರಂಟಾಯಿತು; ಇವನೇ ಈ ಯಂತ್ರವನ್ನು ಹುಟ್ಟಿಸಿದನೆಂಬದರ ಬಗೆ ಜನರಲ್ಲಿ ಸಂಶಯವು ನೆಲೆಗೊಂಡಿತು. ಗೋಟುಗಾರರು ಹೀಥಕೋಟನ ಸನದು ಸರಿಯಾದದ್ದಲ್ಲೆಂದು ಕಲ್ಪಿಸಿ, ಘಟ್ಟಿಗತನದಿಂದ ಅವನ ಯಂತ್ರವನ್ನು ತಮ್ಮ ಉಪಯೋಗದಲ್ಲಿ ತಂದುಕೊಂಡು ಅವನ ಸಂಗಡ ಜಗಳ ಹೂಡಿದರು. ಇದಲ್ಲದೆ ಆ ಯಂತ್ರವನ್ನು ನಾವು ತಿದ್ದಿದೆವೆಂದು ಬೇರೆ ಯೆಷ್ಟೋ ಜನರು ಹೊಸ ಸನದುಗಳನ್ನು ಸಂಪಾದಿಸಿ ಕೊಂಡರು. ಆದರೆ ಈ ಜನರು ಸ್ವತಃ ಬಾಧ್ಯಸ್ತಿಕೆಯ ಸಲುವಾಗಿ ತಮ್ಮ ತಮ್ಮೊಳಗೆ ಬಡಿದಾಡಿ, ನ್ಯಾಯಸಭೆಗೆ ಹೋದಾಗ ಹೀಥಕೋಟನ ಬಾಧ್ಯಸ್ತಿಕೆಯು ಸ್ಥಾಪಿತವಾಯಿತು. ಅದು ಹ್ಯಾಗೆಂದರೆ, ಬೋವಿಲ್ಲನೆಂಬ ಒಬ್ಬ ಗೋಟುಗಾರನು ಮೂರನೆಂಬ ಇನ್ನೊಬ್ಬ ಗೋಟುಗಾರನ ಮೇಲೆ

ಫಿರ್ಯಾದು ಮಾಡಿದ್ದೇನಂದರೆ, ಈ ಯಂತ್ರದ ಸನದನ್ನು ನಾನು ಪಡೆಕೊಂಡಿರಲಾಗಿ, ಅದಕ್ಕೆ ವಿರುದ್ಧವಾಗಿ ಪ್ರತಿವಾದಿಯು ಇದರಂಥ ಯಂತ್ರದಿಂದಲೇ ಹಣಿಯುವ ಕೆಲಸ ಮಾಡುತ್ತಾನೆ. ಇದರಲ್ಲಿ ಪಂಚರು ಪ್ರತಿವಾದಿಯ ಪಕ್ಷಕ್ಕೆ ಅನುಕೂಲವಾಗಿ ನಿರ್ಣಯವನ್ನು ಹೇಳಲಾಗಿ, ವಾದಿಯು ಬಾಧ್ಯಸ್ಥಿಕೆಯಾದರೂ ಹೀಥಕೋಟನ ಸನದಿಗೆ ವಿರುದ್ಧವಾದದ್ದೇ ಯೆಂಬ ಆಧಾರದಿಂದ ನ್ಯಾಯಾಧೀಶನು ಅಪನಿರ್ಣಯಕ್ಕೆ ಒಡಂಬಟ್ಟನು. ಈ ವ್ಯಾಜ್ಯದಲ್ಲಿ ಸರ್ ಜಾನಕೊಪ್ಲೀ (ಹಿಂದುಗಡೆಯಲ್ಲಿ ಲಾರ್ಡಲಿಂಧಸ್ಟರ್) ಯೆಂಬ ವಿದ್ವಾಂಸನಾದ ವಕೀಲನು ಜನರು ಆಶ್ಚರ್ಯ ಪಡುವಂತೆ ಹೀಥಕೋಟನ ಯಂತ್ರ ನಡಿಸುವ ಕಳೆಯನ್ನು ಕಲಿತುಕೊಂಡು, ನ್ಯಾಯ ಸಭೆಯಲ್ಲಿ ಅದರ ಕೌಶಲ್ಯವನ್ನು ಯಲ್ಲರಿಗೆ ತೋರಿಸಿದರಿಂದ ಹೀಥಕೋಟನ ಬಾಧ್ಯಸ್ಥಿಕೆಯು ಸ್ಥಿರವಾಗುವದಕ್ಕೆ ಅನುಕೂಲ ವಾಯಿತು.

ಈ ವ್ಯಾಜ್ಯವು ತೀರಿದನಂತರ ಹೀಥಕೋಟನು ಶೋಧ ಮಾಡಿ, ಸುಮಾರು ೬೦೦ ತನ್ನ ಯಂತ್ರದಂಥ ಯಂತ್ರಗಳನ್ನು ಗೋಟಗಾರರು ಮಾಡಿಕೊಂಡಿದ್ದಾರೆಂದು ಗೊತ್ತುಹಚ್ಚಿ, ಅವರೆಲ್ಲರಿಂದ ಬಾಧ್ಯಸ್ಥಿಕೆಯ ತೆರಿಗೆಯನ್ನು ಯೆತ್ತಲಾಗಿ ಅವನಿಗೆ ಬಹಳ ಹಣ ಶಿಕ್ಕಿತು. ಆದರೆ ಆ ಜನರಿಗೆ ಅವನ ಯಂತ್ರದಿಂದ ಬಹಳ ಲಾಭವಾಗುತ್ತಿತ್ತು. ಆದದರಿಂದ ಈ ಯಂತ್ರದ ಉಪಯೋಗವು ದಿನ ದಿನಕ್ಕೆ ಬಹಳ ಬೆಳೆಯುತ್ತ ಹೋಗಿ, ಒಂದು ಚಚ್ಚೌಕು ಯಾರ್ಡ ಗೋಟಗೆ ಮೊದಲು ೫ ಪೌಂಡು ಬೆಲೆ ಬೀಳುತ್ತಿದ್ದದ್ದು, ಸುಮಾರು ೨೫ ವರ್ಷಗಳೊಳಗೆ ೫ ಪೇನ್ಸಗಳ ಬೆಲೆಯಾ

ಯಿತು. ಇದೇ ಕಾಲದಲ್ಲಿ ಈ ಸರಕಿನ ವ್ಯಾಪಾರವು ಪ್ರತಿ ವರ್ಷ ಸರಾ ಸರಿಯು ಮಾನದಿಂದ ನಾಲ್ವತ್ತು ಲಕ್ಷ ಪೌಂಡುಗಳಿಗಿಂತ ಕಡಿಮೆಯಾಗುತ್ತಿದ್ದಿಲ್ಲ. ಈ ಉದ್ಯೋಗದಲ್ಲಿ ಸುಮಾರು ೧೫೦೦೦೦ ಜನರು ಹೊಟ್ಟೆಯು ತುಂಬಿಕೊಳ್ಳುತ್ತಾರೆ.

ಇನ್ನು ಮುಂದೆ ವರ್ಣಿಸುವ ಹೀಥಕೋಟನ ಸ್ವಂತ ವೃತ್ತಾಂತವು ಹ್ಯಾಗಂದರೆ—ಸನ್ ೧೮೦೯ನೇ ವರ್ಷದಲ್ಲಿ ಅವನು ಲೆಸ್ತರ ಶಾಯರಕ್ಕೆ ಸೇರಿದ ತಾಬರೋ ಯೆಂಬಗ್ರಾಮದಲ್ಲಿ ಗೋಟುಗಳನ್ನು ಮಾಡುವ ಕಾರಖಾನೆಯನ್ನು ಸ್ಥಾಪಿಸಿ ಕೊಂಡಿದ್ದನು. ಅಲ್ಲಿ ಹಲ ವರ್ಷಗಳವರೆಗೆ ತನ್ನ ಕಾರಖಾನೆಯನ್ನು ಒಳ್ಳೇ ಭರ ಭರಿಯಿಂದ ನಡಿಸಿ, ಬಹು ಜನರನ್ನು ಕೆಲಸಕ್ಕೆ ಹಚ್ಚಿ, ಒಬ್ಬೊಬ್ಬನಿಗೆ ೫ರಿಂದ ೧೦ಪೌಂಡುಗಳ ವರೆಗೆ ಪ್ರತಿ ವಾರಕ್ಕೆ ಕೂಲಿಯು ಕೊಡುತ್ತಿದ್ದನು. ಹೊಸ ಯಂತ್ರಗಳು ಮೇಲೆ ಮೇಲೆ ಆಗ ಹತ್ತಿದರಿಂದ ಗೋಟುಗಳನ್ನು ಮಾಡುವ ಕೂಲಿಕಾರರ ಸಂಖ್ಯೆಯಾದರೂ ಬಹಳ ಬೆಳೆದಾಗ್ಯೂ, ಆ ಕೆಲಸಕ್ಕೆ ಬೇಕಾದಷ್ಟಕ್ಕಿಂತ ಹೆಚ್ಚು ಜನರು ಕೂಲಿಕಾರರುಂಟೆಂಬ ಸುದ್ದಿಯನ್ನು ಅವರು ಹುಟ್ಟಿಸಿದರು. ಆದದರಿಂದ ಬಹು ಜನರು ಒಕ್ಕಟ್ಟಾಗಿ ಗೋಟುಗಳನ್ನು ಹೆಣೆಯುವ ಯಂತ್ರವನ್ನು ಕಂಡಲ್ಲಿ ಅದನ್ನು ಮುರಿದು ಹಾಕತಕ್ಕದ್ದೆಂದು ನಿಶ್ಚೈಸಿ ಕೊಂಡರು. ಸನ್ ೧೮೧೧ನೇ ವರ್ಷದಲ್ಲಿ ನಾಟಿಂಗಂ ಶಾಯರದ ನೈರುತ್ಯಭಾಗದಲ್ಲಿಯೂ, ಅದರ ನೆರೆಯಲ್ಲಿದ್ದ ಡರ್ಬೀಶಾಯರ, ಲೆಸ್ತರ ಶಾಯರಗಳ ಭಾಗಗಳಲ್ಲಿಯೂ, ವಾಸಿಸುತ್ತಿದ್ದ ಗೋಟು ಕಾಲು ಚೀಲಗಳ ವ್ಯಾಪಾರವನ್ನು

ನಡಿಸುವ ವರ್ತಕರಿಗೂ, ಅವರ ಆಳುಗಳಾಗಿ ದುಡಿಯುತ್ತಿದ್ದ ಕೂಲಿಕಾರರಿಗೂ ವ್ಯಾಜ್ಯ ಪ್ರಂಟಾಯಿತು. ಅದರಿಂದ ಅಕಫೀಲ್ಡ ಪ್ರಾಂತದೊಳಗಿನ ಸಟ್ಟನೆಂಬ ಗ್ರಾಮದಲ್ಲಿ ಕೂಲಿಕಾರರದೊಂದು ದೊಡ್ಡ ಸಮುದಾಯವು ನೆರೆದು, ಅವರೆಲ್ಲರು ಕೂಡಿ ಹಗಲು ಹೊತ್ತೇ ಕಾಲು ಚೀಲ, ಗೋಟುಗೆಳ ಯಂತ್ರಗಳನ್ನು ಮುರಿಯುವದಕ್ಕೆ ಹೊರಟರು. ಆದರೆ ಅವರಲ್ಲಿ ಮುಖ್ಯರಾಗಿದ್ದವರನ್ನು ಹಿಡಿದು ಶಿಕ್ಷಿಸಲಾಗಿ, ಉಳಿದವರು ಬುದ್ಧಿಗಲಿತರು. ಆದರೂ ಸಂಧಿ ಸಾಧಿಸಿದಲ್ಲಿ, ಗುಪ್ತವಾಗಿ ಯಂತ್ರಗಳನ್ನು ಮುರಿಯುವದು ನಡೆದೇ ಇತ್ತು. ಈ ಯಂತ್ರಗಳು ಬಹು ಸೂಕ್ಷ್ಮ ತರದವುಗಳಾದ್ದದರಿಂದ ಸುತ್ತಿಗೆಯ ಒಂದೇ ಪೆಟ್ಟಿನಿಂದ ಕೆಲಸಕ್ಕೆ ಬಾರದ ಹಾಗೆ ಆಗಿ ಹೋಗುತ್ತಿದ್ದದ್ದಲ್ಲದೆ ಅವುಗಳ ಕಾರಖಾನೆಗಳು ವಿಶೇಷವಾಗಿ ನೆರೆ ಹೊರೆಯಲ್ಲಿ ಯಾರು ಒಕ್ಕಲಿಲ್ಲದಂಥ ಮನೆಗಳಲ್ಲಿ ಇದ್ದದರಿಂದ ಅವುಗಳನ್ನು ಮುರಿಯುವದು ಬಹು ಸುಲಭವಾಗಿತ್ತು. ನಾಟಿಂಗಂ ಶಾಯರದ ಜನರು ಬಹಳ ದಂಗೇಗಾರರಾಗಿದ್ದದರಿಂದ ಅದರ ನೆರೆಯಲ್ಲಿ ಯಂತ್ರ ಮುರಿಯುವವರು ಝುಂಡು ಝುಂಡಾಗಿ, ತಮ್ಮ ಉದ್ಯೋಗ ನಡಿಸ ಹತ್ತಿದರು. ಬಹುಶಃ ಜನರಲ್ಲಿ ವಿಶ್ವಾಸವನ್ನು ಹುಟ್ಟಿಸುವ ಉದ್ದೇಶದಿಂದ ಅವರು ತಮಗೆ ನೆಡ ಲಡ್ಡನೆಂಬ ಒಬ್ಬ ಮುಖ್ಯಸ್ಥನಿದ್ದಾನೆಂದು ಹೇಳುವರು; ಇದೇ ಕಾರಣದಿಂದ ಅವರಿಗೆ "ಲಡ್ಡಾಯಿತರೆ"ಂದು ಹೆಸರ ಬಂತು. ಈ ಮೇರಿಗೆ ಯಂತ್ರ ಮುರಿಯುವ ಕೆಲಸವು ಸನ್ನ ೧೮೧೧ನೇ ವರ್ಷದ ಛಳಿಗಾಲದಲ್ಲಿ ಒಳ್ಳೇ ಜವದಿಂದ ನಡೆದಿತ್ತು. ಇದರಿಂದ ಆ ಪ್ರಾಂತದಲ್ಲಿ ಕಡು ವಿಪ

ತ್ತು ವುಂಟಾಗಿ ಬಹು ಮಂದಿ ಬಡ ಜನರಿಗೆ ಉದ್ಯೋಗ ವಿಲ್ಲದೆ ಹೋಯಿತು. ಆದರೂ ಇತ್ತಲಾಗಿ ಯಂತ್ರಗಳ ಒಡೆಯರು ತಮ್ಮ ಯಂತ್ರಗಳನ್ನು ಜನರ ನೆರೆಯಿಲ್ಲದಂಥ ಪ್ರದೇಶಗಳೊಳಗಿಂದ ತೆಗೆದು ದೊಡ್ಡ ದೊಡ್ಡ ಊರುಗಳೊಳಗಿನ ಬಹಳ ಉಲುವಿದ್ದ ಅಂಗಡಿಗಳಲ್ಲಿ ತಂದು ಇಡ ಹತ್ತಿದರು.

ಮೊದಲಿನ ಚೌಕಶಿಯಲ್ಲಿ ಸಿಕ್ಕ ಈ ಲಡ್ಡಾಯಿತರ ಮುಖ್ಯಸ್ಥರಿಗೆ ಸುಲಭವಾದ ಶಿಕ್ಷೆಯಾದ ಕಾರಣ ಅವರು ಹೆದರಿಕೆಯನ್ನು ಬಿಟ್ಟು ಪುನಃ ತೀವ್ರವೇ ಈ ಮೇಲೆ ವರ್ಣಿಸಿದ ದಂಗೆಯನ್ನುಂಟು ಮಾಡಿದರು. ಈ ದಂಗೆಯು ಕಲಾಕೌಶಲ್ಯಗಳು ನಡೆಯುವ ಪ್ರಾಂತಗಳ ಉತ್ತರ ಮಧ್ಯ ಭಾಗಗಳಲ್ಲಿ ಬಹು ಬೇಗ ವ್ಯಾಪಿಸಿತು. ಯಂತ್ರ ಮುರಿಯುವವರ ಕೂಟವು ಮೊದಲಿಗಿಂತ ಹೆಚ್ಚು ಗೌಪ್ಯದಿಂದ ಉಂಟಾಗಿ, ಅವರು ತಮ್ಮ ಮುಖ್ಯಸ್ಥರ ಅಪ್ಪಣೆಯನ್ನು ಯಿಷ್ಟು ಮಾತ್ರವೂ ಮೀರಲಿಕ್ಕಿಲ್ಲೆಂದು ಆಣೆ ಯಿಟ್ಟುಕೊಂಡರು; ಈ ಆಣೆಯನ್ನು ಮುರಿದವನಿಗೆ ಮರಣದಶಿಕ್ಷೆಯೇ ಆಗತಕ್ಕದ್ದೆಂದು ನೇಮಕವಾಗಿತ್ತು. ಬಟ್ಟೆಗಳನ್ನು ನೇಯುವ ಯಂತ್ರಗಳೂ, ಅವುಗಳಿಗೆ ಅಚ್ಚು ಹಾಕುವ ಯಂತ್ರಗಳೂ, ಗೋಟುಗಳನ್ನು ಮಾಡುವ ಯಂತ್ರಗಳೂ ಮೊದಲಾದವುಗಳನ್ನು ಮುರಿದು ಹಾಕಬೇಕೆಂದು, ಅವರು ನಿಶ್ಚೈಸಿ ಕೊಂಡರು. ಇದರನಂತರ ಮುಂದೆ ಯೆಷ್ಟೋ ವರ್ಷಗಳವರೆಗೆ ಬಹು ಭಯಂಕರವಾದ ದಂಗೆಯು ನಡೆಯಿತು. ಯಾರ್ಕಶಾಯರ ಲಾಂಕಾಶಾಯರಗಳಲ್ಲಿ ಈ ದಂಗೆಗಾರರು ಧೈರ್ಯದಿಂದ ಶಸ್ತ್ರಗಳನ್ನು ಧರಿಸಿಕೊಂಡು ಯು

ತ್ರಗಳಿದ್ದಲ್ಲಿಗೆ ಹೋಗಿ ಯಷ್ಟೋ ಯಂತ್ರಗಳನ್ನು ಮು
ರಿದು, ಅಥವಾ ಸುಟ್ಟುಬಿಟ್ಟರು. ಆದದರಿಂದ ಯಂತ್ರಗಳ
ಒಡೆಯರು ತಮ್ಮ ಯಂತ್ರಗಳನ್ನು ಕಾಪಾಡುವದಕ್ಕೋ
ಸ್ಕರ ಹತ್ಯಾರಬಂದ ಶಿಪಾಯಿಗಳನ್ನು ಇಡಬೇಕಾಯಿತು.
ಆದರೆ ದಂಗೆಗಾರರು ಯಂತ್ರಗಳ ಒಡೆಯರನ್ನೇ ಕೊಲ್ಲು
ವ ನಿರ್ಧಾರಹಿಡಿದು, ಕೆಲ ಜನರನ್ನು ಕೊಂದು ಹಾಕಿದರು.
ಆದರೆ ಕಡೆಯಲ್ಲಿ ಕಾಯ್ದೆಯು ಪ್ರಖರವಾಗಿ ನಡೆಯಲೆಸ
ಗಿ, ಯಷ್ಟೋಜನ ದಂಗೆಗಾರರನ್ನು ಹಿಡಿದು, ಅವರಲ್ಲಿ
ಕೆಲವರನ್ನು ಕೊಲ್ಲಿಸಿದರು. ಆದರೂ ಮುಂದೆ ಕೆಲವರ್ಷ
ಗಳ ವರಿಗೆ ಸಾಹಸದ ತಂಟೆಗಳು ನಡೆದು ಕಟ್ಟಕಡೆಯಲ್ಲಿ
ಯಂತ್ರಗಳನ್ನು ಮುರಿಯುವ ಈ ದಂಗೆಯು ಶಾಂತ ವಾ
ಯಿತು.

ಲಡ್ಡಾಯಿತರು ಹೀಥಕೋಟನಿಗೆ ಸಹ ಬಹಳ ಕೇಡ
ನ್ನುಂಟುಮಾಡಿದರು. ಸನ್ನ ೧೮೧೬ನೇ ವರ್ಷದ ಬೇಸಿ
ಗೆಯಲ್ಲಿ ಒಂದುದಿವಸ ಲಾಬರ್ಗದಲ್ಲಿ ಹೀಥಕೋಟನ ಕಾರ
ಖಾನೆಯೊಳಗೆ ಕೆಲಜನರು ದಂಗೆಗಾರರು ದೀವಟಿಗೆಗಳನ್ನು
ಹಿಡಿದುಕೊಂಡು ಹೊಕ್ಕು ಬೆಂಕಿಯು ಹಚ್ಚಿಬಿಟ್ಟರು. ಆದ
ದರಿಂದ ೩೭ ಯಂತ್ರಗಳು ಸುಟ್ಟದ್ದಲ್ಲದೆ, ೧೦೦೦೦ಪೌಂ
ಡಿಗಿಂತ ಹೆಚ್ಚು ಬೆಲೆಯುಳ್ಳ ಬದಕು ನಾಶಹೊಂದಿತು. ಈ
ಕೇಡುಗಾರರಲ್ಲಿ ೧೦ ಜನರನ್ನು ಹಿಡಿದು ಅವರಲ್ಲಿ ೮ಮಂ
ದಿಗೆ ಸರಕಾರದವರು ಮರಣದ ಶಿಕ್ಷೆಯನ್ನು ಕೊಟ್ಟರು.
ಆ ಮೇಲೆ ಹೀಥಕೋಟನು ಆ ಪ್ರಾಂತದ ನಿವಾಸಿಗಳೇ ತ
ನ್ನ ಕೇಡನ್ನು ತುಂಬಿಕೊಡಬೇಕೆಂದು ಫಿರ್ಯಾದಿಯು ಮಾ
ಡಲಾಗಿ, ಅದಕ್ಕೆ ಮೊದಲಿನ ಕೋರ್ಟನಲ್ಲಿ, ಅರ್ಜಿಯು ಮಂ

ಟಾದಾಗ್ಯೂ, ಕ್ವೀನ್ಸಬೆಂಚ ಎಂಬ ನ್ಯಾಯಸಭೆಯಲ್ಲಿ ಹೀಥಕೋಟನಂತೆ ನಿರ್ಣಯವಾಯಿತು. ಆಗ ಹೀಥಕೋಟನು ಆ ಹಣವನ್ನು ಲೆಸ್ಟರಶಾಯರದಲ್ಲಿಯೇ ವೆಚ್ಚ ಮಾಡುವದಕ್ಕೆ ಒಪ್ಪಿಕೊಂಡರೆ ಆ ಹಣವು ಅವನಿಗೆ ಸಿಕ್ಕಬೇಕೆಂದು ಮಾಜಿಸ್ಟ್ರೇಟರು ಗೊತ್ತು ಮಾಡಲೆತ್ನಿಸಿದರು ಆದರೆ ಅವನು ಮೊದಲೇ ಪ್ರಾಂತವನ್ನು ಬಿಟ್ಟು ಹೋಗುವ ನಿಶ್ಚಯವನ್ನು ಮಾಡಿಕೊಂಡಿದ್ದದರಿಂದ ಅದಕ್ಕೆ ಸಂಮತಿಸಲಿಲ್ಲ. ದೇವನ ಶಾಯಿರಕ್ಕೆ ಸೇರಿದ ಟಿವರ್ಟನ್ನೆಂಬ ಗ್ರಾಮದಲ್ಲಿ ಅವನಿಗೆ ಒಂದು ದೊಡ್ಡ ಮನೆಸಿಕ್ಕಿತು ಅದರಲ್ಲಿ ಮೊದಲು ಉಣ್ಣೆಯ ಕಾರಖಾನೆಗಳು ನಡೆಯುತ್ತಿದ್ದವು. ಆದರೆ ಅಲ್ಲಿಯ ಅರಿವೆಯ ವ್ಯಾಪಾರವು ಮುರಿದದರಿಂದ ಆ ಮನೆಯು ತೆರವಾಗಿತ್ತು ಆ ಪುರ ನಿವಾಸಿಗಳು ತೀರ ಬಡತನಕ್ಕೆ ಬಂದಿದ್ದರು ಹೀಥಕೋಟನು ಅಲ್ಲಿ ಬಿದ್ದಿರುವ ಒಂದು ಹಳೆಯಂತ್ರವನ್ನು ಕೊಂಡು ಅದನ್ನು ನೆಟ್ಟಗೆ ಮಾಡಿಕೊಂಡು, ಮೊದಲಿಗಿಂತ ಗೋಟುಗಳ ದೊಡ್ಡ ಕಾರಖಾನೆಯನ್ನು ಸ್ಥಾಪಿಸಿದನು. ಅವನು ೩೦೦ ಯಂತ್ರಗಳನ್ನು ಒಮ್ಮೇಲೆ ಹೂಡಿ, ಬಹು ಜನ ಕೂಲಿಯವರನ್ನು ಒಳ್ಳೇತಾಗಿ ಸಂಬಳಕೊಟ್ಟು ಕೆಲಸಕ್ಕೆ ಹಚ್ಚಿದನು. ಅವನು ಗೋಟುಗಳನ್ನು ಹಣೆಯುವ ಒಂದೇ ಕೆಲಸವನ್ನು ನಡಿಸಲಿಲ್ಲ. ಅದಕ್ಕೆ ಸಂಬಂಧವಾಗಿ ಬೇರೆ ಎಷ್ಟೋ ಕಾರಖಾನೆಗಳನ್ನು ಸಹ ನಡಿಸಿದನು. ಅದಲ್ಲದೆ ಅವನು ಅದೇ ಗ್ರಾಮದಲ್ಲಿ ಕಮ್ಮಾರಿಕೆಯದೊಂದು ಅಂಗಡಿಯನ್ನು ಸ್ಥಾಪಿಸಿ, ಒಕ್ಕಲತನದ ಆಯುಧಗಳನ್ನು ಮಾಡಿಸುತ್ತಿದ್ದನು. ಅದರಿಂದ ಆ ಪ್ರಾಂತದ ನಿವಾಸಿಗಳಿಗೆ ಬಹಳ ಅನುಕೂಲವಾಯಿತು; ದಣುವ

ಬೇಸರಿಕೆಗಳನ್ನುಂಟು ಮಾಡುವ ಕೆಲಸಗಳಿಗೆಲ್ಲ ಉಗಿಯ ಶಕ್ತಿಯು ಬಹಳ ಪ್ರಯೋಜನವಾಗುವೆಂಬ ಕಲ್ಪನೆಯು ಹೀಥಕೋಟನ ಮನಸ್ಸಿನಲ್ಲಿ ಪೂರಾ ನೆಲೆಗೊಂಡಿತ್ತು. ಆದದರಿಂದ ಅವನು ಉಗಿಯಿಂದ ನಡೆಯುವ ಒಂದು ನೇಗಲನು ರಚಿಸುವ ಯತ್ನವನ್ನು ಬಹುಕಾಲದಿಂದ ನಡಿಸಿದ್ದನ್ನು ಇದರಲ್ಲಿ ಸಹ ಅವನ ಪ್ರಯತ್ನವು ಸಫಲವಾಗಿ, ಸನ್ನ೧೮೩೨ನೇ ವರ್ಷದಲ್ಲಿ ಅವನು ಆ ನೇಗಲಿನ ಸನದನ್ನು ಸಹ ಸಂಪಾದಿಸಿ ಕೊಂಡನು. ಈ ನೇಗಲು ಆ ಕಾಲದವರೆಗೆ ರಚಿಸಲ್ಪಟ್ಟ ಎಲ್ಲ ನೇಗಲುಗಳಿಗಿಂತ ಉತ್ತಮವಾದದ್ದೆಂದು ಜನರು ನೆನಸಿಕೊಂಡರು; ಆದರೆ ಫೌಲರನೆಂಬವನ ನೇಗಲು ಉಂಟಾದಂದಿನಿಂದ ಈ ನೇಗಲು ಹಿಂದಕ್ಕೆ ಬಿತ್ತು.

Champu Ramayen and Champu Bharata with Commentaries in Canarese by M. Shantaviraya.

॥ಚಂಪೂಭಾರತೇ ಸವ್ಯಾಖ್ಯಾನೇ ಪ್ರಥಮ ಸ್ತಬಕಃ।

॥ಗದ್ಯ॥

ಯಂಪರಾಶರ ಸುತಃನಿಖಿಲಾವನೀದೇಶಾವನಾಯನಿಜಜನನೀನಿದೇಶಾವನಮ್ರಮನಾಃಮನಾಗಿತರಾಕ್ಷ್ಣಯೋರ್ತಪಕ್ಷ್ಣರ್ಯೋಲಂಕರ್ಮೀಣಃಸಮಾನೋದರ್ಯಸ್ಯ ವಿಚಿತ್ರವೀರ್ಯಸ್ಯಕುಟುಂಬಿನ್ಯಾಮಂಬಾಲಿಕಾಯಾಂಕಿಲಜನಯಾಮಾಸ.

॥ಅನ್ವಯಃ॥

ಇತರಾಕ್ಷ್ಣಯೋರ್ತಪಕ್ಷ್ಣಯೋರ್ಲಂಕರ್ಮೀಣಃ, ಇತರ=ಅನ್ಯವಾದ, ಅಕ್ಷ್ಣೋಃ=ಚಿತ್ರಕರನಾದ, ತಪಕ್ಷ್ಣಯೋರ್ಗಳಲ್ಲಿ,

ಅಲಂಕರ್ಮೀಣಃ=ಸಮರ್ಥನಾದಂಥ। ಪರಾಶರಸುತಃ=ವ್ಯಾಸನು। ನಿಖಿಲಾವನೀದೇಶಾವನಾಯ, ನಿಖಿಲ=ಸಮಸ್ತವಾದ। ಅವನೀ=ಭೂಮಿಯುಮೇಲಿರುವ, ದೇಶಗಳನ್ನು ಅವನಾಯ=ರಕ್ಷಿಸುವಗೋಸ್ಕ। ಮನಾಕ್=ಕಿಂಚಿತ್। ನಿಜಜನನೀನಿದೇಶಾವನಮ್ರಮನಾಃ, ನಿಜ=ತನ್ನ; ಜನನೀ=ತಾಯಿಯು, ನಿದೇಶ=ಪ್ರೇರಣೆಯಿಂದ, (ಹೇಳುವಿಕೆಯಿಂದ)ಅವನಮ್ರ=ಬಾಗಿದ, ಮನಾಃ=ಮನಸ್ಸುಳ್ಳವನಾಗಿ। ಸಮಾನೋದರ್ಯಸ್ಯ=ಒಡಹುಟ್ಟಿದವನಾದಂಥ। ವಿಚಿತ್ರವೀರ್ಯಸ್ಯ=ವಿಚಿತ್ರವೀರ್ಯರಾಜನ। ಕುಟುಂಬಿನ್ಯಾಂ=ಹೆಂಡತಿಯಾದಂಥ। ಅಂಬಾಲಿಕಾಯಾಂ=ಅಂಬಾಲಿಕೆ ಯೆಂಬವಳಲ್ಲಿ। ಯಂ=ಆ ಪಾಂಡುರಾಜನನ್ನು ಜನಯಾಮಾಸಕಿಲ=ಪಡೆದನುಗಡ,

॥ಕರ್ನಾಟಕ ಭಾವಾರ್ಥ॥

ಸಕಲ ತಪಸ್ವಿಯರ್ಗಳಲ್ಲಿ ಸಮರ್ಥನಾದ ವ್ಯಾಸಮುನಿಯು ದೇಶಗಳನ್ನು ಪಾಲಿಸುವಗೋಸ್ಕರ ಕಿಂಚಿತ್ ತನ್ನ ತಾಯಿಯು ಬೋಧನೆಯಿಂದ ಬಾಗಿದ ಮನಸ್ಸುಳ್ಳವನಾಗಿ ತನ್ನ ಸಹೋದರನಾದ ವೀಚಿತ್ರವಿರ್ಯರಾಜನ ಹೆಂಡತಿಯಾದ ಅಂಬಾಲಿಕೆಯೆಂಬವಳಲ್ಲಿ ಪಾಂಡುರಾಜನನ್ನು ಪಡೆದನು.

॥ಸಂಸ್ಕೃತ ಭಾವಾರ್ಥ॥

ಸರ್ವ ತಪಸ್ವಿಶ್ರೇಷು ಬಲವಾನ್ ವ್ಯಾಸಮುನಿಃ ಸಮಸ್ತ ದೇಶಾನ್ ಪಾತುಂ ಕಿಂಚಿತ್ ನಿಜಜನನ್ಯಾಃ ನಿಜಸಂಕೋಧ್ಧಾರಕ ವಾಕ್ಯಂಶ್ರುತ್ವಾ ತಸ್ಯ ವಿಚಿತ್ರವೀರ್ಯಸ್ಯ ಅಂಬಾಲಿಕಾಯಾಂ ಪಾಂಡುನಾಮಕೇತಿ ಪುತ್ರಂ ಜನಯಾಮಾಸ.

॥ಇಂಗ್ಲಿಷ್ ಭಾವಾರ್ಥ॥

Vyása, son of Paráshara and an able perfor-

mer of Severe religious avsteritics, begot, at the Instigation of his Mo her, a son named Pandv, by Ambálika, wife to his brother, Vichitraverya, in order to prodect the earth

॥ಚಂಪೂರಾಮಾಯಣೇಸವ್ಯಾಖ್ಯಾನೇ ಬಾಲಕಾಂಡಃ॥

॥ಇಂದ್ರವಜ್ರವೃತ್ತಂ॥

ಛಂದೋಮಯೀನಾಂನಿಲಯಸ್ಯ ವಾಚಾಂ।
ಅಂತ್ರೇವಸಂತೌಮುನಿಪುಂಗವಸ್ಯ॥
ಏತೌಕುಮಾರೌರಘುವೀರವೃತ್ತಂ।
ಯಥಾಕ್ರಮಂಗಾತುಮುಪಾಕ್ರಮೇತಾಂ॥೬೭॥

॥ಅನ್ವಯಃ॥

ಛಂದೋಮಯೀನಾಂ=ವೃತ್ತ ಛಂದಸ್ಸುಗಳಿಂದ ನಿಬದ್ಧವಾದಂಥ। ವಾಚಾಂ=ವಾಕ್ಯಗಳಿಗೆ। ನಿಲಯಸ್ಯ=ಮನೆಯಾದಂಥ। ಮುನಿಪುಂಗವಸ್ಯ= ಮುನಿಶ್ರೇಷ್ಟನಾದ ವಾಲ್ಮೀಕಿಯ। ಅಂತೇವಸಂತೌ=ಶಿಷ್ಯರಾದಂಥ। ಏತೌ=ಈ। ಕುಮಾರೌ=ಸೀತಾದೇವಿಯ ಪುತ್ರರಾದ ಕುಶಲವರು ರಘುವೀರವೃತ್ತಂ, ರಘುವೀರ=ಶ್ರೀರಾಮಚಂದ್ರನ, ವೃತ್ತಂ=ಚರಿತ್ರವನ್ನು। ಯಥಾಕ್ರಮಂ=ಕ್ರಮಾನುಸಾರವಾಗಿ। ಗಾತುಂ=ಗಾನದಿಂದ ಪಠಿಸುವಗೋಸ್ಕರ। ಉಪಾಕ್ರಮೇತಾಂ=ಆರಂಭಿಸಿದರು.

॥ಕರ್ಣಾಟ ಭಾವಾರ್ಥ॥

ಇಪ್ಪತ್ತಾರು ಛಂದಸ್ಸುಗಳಿಂದ ಯುಕ್ತವಾದ ಪದ್ಯಾತ್ಮಕ ವಾಕ್ಯಗಳಿಗೆ ತವರುಮನೆಯಾದ ವಾಲ್ಮೀಕಿಯ ಶಿಷ್ಯರಾದ

ಕುಶಲವರು ತಮ್ಮ ತಂದೆಯಾದ ಶ್ರೀರಾಮಚಂದ್ರನ ಚರಿತ್ರವನ್ನು ಕ್ರಮಾನುಸಾರವಾಗಿ ಗಾನದಿಂದ ಪಠಿಸಲಿಕ್ಕೆ ಪ್ರಾರಂಭಿಸಿದರು.

॥ಸಂಸ್ಕೃತ ಭಾವಾರ್ಥ॥

ಷಡ್ವಿಂಶತಿಛಂದೋಭಿಃಸಂಯುಕ್ತಪದ್ಯಾ। ತ್ಮಕವಾಕ್ಯಾನಾಂನಿಲಯಸ್ಯವಾಲ್ಮೀಕೇಃ ಶಿಷ್ಯೌ ಸೀತಾಕುಮಾರೌ ಕುಶಲವೌ ಶ್ರೀರಾಮಸ್ಯಚರಿತ್ರಂ ಗಾನೇನಪಠಿತುಂಕ್ರಮೇಣ ಉಪಕ್ರಮೇತಾಂ.

॥ಇಂದ್ರವಜ್ರವೃತ್ತಂ॥

ಆಸ್ತಿಪ್ರಶಸ್ತಾಜನಲೋಚನಾನಾ।
ಮಾನಂದಸಂದಾಯಿಷುಕೋಸಲೇಷು॥
ಅಜ್ಞಾಸಮುತ್ಸಾರಿತದಾನವಾನಾಂ।
ರಾಜ್ಞಾಮಯೋಧ್ಯೇತಿಪುರೀರಘೂಣಾಂ॥೧೮॥

॥ಅನ್ವಯಃ॥

ಜನಲೋಚನಾನಾಂ=ಜನರಕಂಣ್ಗಳ್ಗೆ। ಆನಂದಸಂದಾಯಿಷು=ಆನಂದಕರವಾದಂಥ। ಕೋಸಲೇಷು=ಉತ್ತರಕೋಸಲದೇಶಗಳಲ್ಲಿ। ಪ್ರಶಸ್ತಾ= ಪ್ರಖ್ಯಾತ ವಾದಂಥ। ಆಜ್ಞಾಸಮುತ್ಸಾರಿತದಾನವಾನಾಂ। ಆಜ್ಞೆಯಿಂದೇವೆ। ಸಮುತ್ಸಾರಿತ=ದೂರ ಮಾಡಲ್ಪಟ್ಟ ದಾನವಾನಾಂ =ರಾಕ್ಷಸರುಳ್ಳಂಥ। ರಘೂಣಾಂ=ರಘುಸಂಬಂಧಿಗಳಾದಂಥ। ರಾಜ್ಞಾಂ=ರಾಜರ। ಅಯೋಧ್ಯೇತಿ=ಅಯೋಧ್ಯೆಯೆಂಬ। ಪುರೀ=ಪಟ್ಟಣವು। ಅಸ್ತಿ=ಇರುತ್ತದೆ.

ಕರ್ಣಾಟಭಾವಾರ್ಥ.

ಜನರಕಂಗಳ್ಗೆ ಸಂತೋಷಕರವಾದ ಕೋಸಲದೇಶಗಳಲ್ಲಿ

ಪ್ರಖ್ಯಾತ ಪಾಪಂಥ ರಾಕ್ಷಸರನ್ನು ದೂರ ಮಾಡಿದ ರಘುವಂಶ ಧಿಗಳಾದ ರಾಜರ ಅಯೋಧ್ಯಾ ಎಂಬ ಹೆಸರುಳ್ಳ ಪಟ್ಟಣವು ಇರುವದು.

॥ಸಂಸ್ಕೃತ ಭಾವಾರ್ಥಃ॥

ಜನಾನಾಂ ನೇತ್ರಾಣಾಂ ಆನಂದಕೃತ ಕೋಸಲದೇಶೇಷು ಪ್ರಖ್ಯಾತರಾಕ್ಷಸ ಸಮೂಹಂ ದೂರೀಕೃತಾನಾಂ ರಘು ಕುಲೋದ್ಭವ ನೃಪಾಣಾಂ ಅಯೋಧ್ಯಾ ಪುರೀ ಅಸ್ತಿ.

NOTICES.

ನೋಟೀಸು.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಮಾಸ್ತರರಿಗೆ— ತಿಳಿಪಡಿಸುವದೇನಂದರೆ. ವಿಜಿಟರಪುಸ್ತಕವು ಅಂದರೆ ಯಾರಾದರು ಸಾಲಿ ಪರೀಕ್ಷೆಕ್ಕೆ ಬಂದರೆ ಅವರು ಸಾಲಿ ಸ್ಥಿತಿವಿಷಯಕ್ಕೆ ಶರಾ ಬರೆದಿಡುವ ಪುಸ್ತಕದ ಪತ್ರಗಳು ಕೆಲವು ಮಾಸ್ತರ ಜನರು ಹರಿದುಹಾಕುತ್ತಾರೆಂದು ನಮ್ಮ ಕೇಳಿಕೆಯಲ್ಲಿ ಬಂದಿರುತ್ತದೆ. ಕಾರಣ ಈಗ್ಗೆ ಹೀಗೆ ತಿಳಿಸುತ್ತೇವಲ್ಲಾ ಯಲ್ಲಾ ಮಾಸ್ತರರು ಒಂದೊಂದು ಪುಸ್ತಕವನ್ನು ಕಟ್ಟಿ ಅವಕ್ಕೆ ಪ್ರತಿ ಪುಟದ ಮೇಲೆ ಶೇಜ ಅಂಕಿಹಾಕಿ ಕಡೆಗೆ ಇಷ್ಟು ಪುಟಗಳು ಅವೆ ಅಂತ ಶರಾ ಬರೆದು ಸಹಿ ಮಾಡಿ ಇಟ್ಟು ಅವರಲ್ಲಿ ಪರೀಕ್ಷೆಕ್ಕೆ ಬಂದವರ ಶರಾ ತೆಗದುಕೊಳ್ಳುತ್ತಿರಬೇಕು. ಮುಂದೆ ಹೀಗೆ ಮಾಡದೆ ಹೋದರೆ ಅಥವಾ ಯಾರಾದರೂ ಈ ಪುಸ್ತಕದ ಪತ್ರ ಹರಿದರೆ ಅವರಿಗೆ ದಂಡ ಮಾಡಲಾದೀತು ತಿಳಿಯುವದು ತಾ॥ ೧೫ ಮಾಹೆ ದಿಸಂಬ ೧೮೭೪ ಇಸವಿ.

Ramchandra. A. Sawanoor.
ರಾ. ಎ. ಸ. ಜಿಲ್ಲಾ ಕಲಾದಗಿ.

Correspondence.

ಪ್ರಕಟನೆಯು.

ಕರ್ನಾಟಕ ಭಾಷಾ ಮೂಲಸ್ಥಿತಿಯೂ, ಈಗಿನ ಸ್ಥಿತಿಯೂ, ಸುಧಾರಣೆಯ ಉಪಾಯವೂ.

ಈ ವಿಷಯವಾಗಿ ಯಥಾರ್ಥವಾದ ಸಂಗತಿಗಳನ್ನು ಬರೆದು, ನಮ್ಮ ದೇಶಬಾಂಧವರಾದ ವಿದ್ವಜ್ಜನರ ಮುಂದೂ, ಸ್ಕೂಲಮಾಸ್ತರರೆದುರಿಗೂ, ಸುವಿಚಾರಿಗಳ ಸಮುಖದಲ್ಲಿ ತರಬೇಕೆಂದು ಮನಸ್ಸು ಬಯಸುತ್ತದೆ. ಪರಂತು "ಕಂಪ ಮಾತ್ರಾಡಿದರೆ ಕೆಂಡದಂಥಕೋಪ" ವೆಂದು ವೃದ್ಧೋಕ್ತಿಯುಂಟೆಂದು, ಅದು ಬೆದರುತ್ತದೆ. ಆದಾಗ್ಯೂ ತಿರುಗಿ ಧೈರ್ಯದಿಂದ ವಿಚಾರಮಾಡಿದರೆ ಕ್ಷೀರ ಸಾಗರವನ್ನು ನಿಷ್ಠುರತ್ವದಿಂದ ಕಡಿದಾಗ್ಯೆ ಲೋಕವನ್ನು ಸುಡುವ ವಿಷವು ಹುಟ್ಟಿತು; ಸರಿ! ಆದರೂ ಕಟ್ಟ ಕಡೆಗೆ ಸತ್ತವರನ್ನು ಬದುಕಿಸುವ ಅಮೃತವೂ ಸಿಕ್ಕಿತು. ಹಾಗೆಯೇ ಕಾಠಿಣ್ಯದ ಸದ್ವಾಕ್ಯಗಳಿಂದ ಕೋಪವುಂಟಾದರೂ ಆ ಕೋಪವೇ ತಿರುಗಿ ಕ್ಷೇಮವನ್ನು ಕೊಟ್ಟೀತೆಂಬ ನಂಬಿಗೆಯು ಹುಟ್ಟುತ್ತದೆ. ಹ್ಯಾಗಂದರೆ—ಚಕ್ಕಮುಕಿಗೆ ಉಕ್ಕಿನಿಂದ ಹೊಡೆದು, ಚಿಟ್ಟಿಗೆಬ್ಬಿಸಿದರೆ ಅದು ಚಿಟ್ಟಿನಿಂದ ಬೆಂಕಿಯನ್ನುಗುಳುತ್ತದೆ; ಉಗುಳಿದರೂ ಚಿಂತೆಯಿಲ್ಲ. ಬಳಿಕ ಅದೇ ಬೆಂಕಿಯು ಕತ್ತಲೆಯನ್ನು ಹೋಗಲಾಡಿಸಿ, ಕಣ್ಣುಗಳಿಗೆ ಪ್ರಕಾಶವನ್ನು

ಕೊಟ್ಟು, ಸಿಟ್ಟಿಗೆಬ್ಬಿಸಿದವನಿಗೆ ಉಪಕಾರವನ್ನು ಮಾಡಿ, ಅ ವನ ಮನೋಭೀಷ್ಟವನ್ನು ಪೂರೈಸುತ್ತದೆ. ತಾತ್ಪರ್ಯ ವೇನಂದರೆ ಸುವಿಚಾರಿಗಳಿಂದ ಹುಟ್ಟಿದ ಕೋಪವಾದರೂ ಕಲ್ಯಾಣಕಾರಕವಾಗಿಧೆ; ಇದರಲ್ಲಿ ಸಂದೇಹವಿಲ್ಲ.

"ಹೃದಯಶೂನ್ಯರೊಲವಿಂದ ಬಲ್ಲವರ ಕದನವೇ ಲೇಸು" ಎಂದು ಹೇಳುವರು; ಇದು ಸುಳ್ಳಲ್ಲವೆಂದು ಮನೋವೃತ್ತಿ ಯು ಮುಂದಕ್ಕೆ ಸರಿಯಲಾರಂಭಿಸುತ್ತದೆ.

ದಾರಾದರೂ ಸುವಿಚಾರಿಗಳಿಗೆ ಈ ಸಂಗತಿಗಳೆಲ್ಲಾ ತಿಳಿ ಯುತ್ತಿರವೋ? ಅಥವಾ ಈ ವಿಷಯವಾಗಿ ಬರೆದದರಿಂದ ಭಾಷಾಸುಧಾರಣೆಯು ಆಯಿತೋ? ಎಂದು ವಿತರ್ಕವನ್ನುಂ ಟುಮಾಡಿಕೊಂಡು, ಈ ಲೇಖನದಿಂದ ಏನು ಉಪಯೋಗ ವಿಲ್ಲೆಂದರೆ ಉತ್ತರವು:-ದೇವರು ಸರ್ವಲೋಕಸಂರಕ್ಷಕನು; ಯಲ್ಲಾ ಜಗದ್ವ್ಯಾಪಾರವನ್ನು ಬಲ್ಲವನೇ. ಆದರೆ ಒಳ್ಳೇ ಜ್ಞಾನಿಗಳೂ ದೇವರೇ ನಮ್ಮನ್ನು ಕಾಪಾಡು! ಜಗತ್ತಿನಲ್ಲಿ ರುವ ಅಜ್ಞಾನವನ್ನು ದೂರ ಮಾಡು! ಎಂದು ಏನುಕಾರಣ ಬೇಡಿಕೊಳ್ಳುತ್ತಾರೆ? ಅಥವಾ ನ್ಯಾಯಾಧೀಶನು ಯಾವತ್ತೂ ಕಾಯಿದೆ, ಕಾನೂನ ಮುಂತಾದವುಗಳನ್ನು ಕಲಿತು ದಾವ ದಾದರೊಂದು ಮಾತಿನ ನಿರ್ಣಯವನ್ನು ತಾನೇ ಮಾಡಲಿ ಕ್ಕೆ ಸಮರ್ಥನಾಗಿರುತ್ತಾನೆ. ಅಂಥಾ ಸುಜ್ಞನಿಗೇ ವಕೀ ಲರು ಧೋರಿಯೋ ಹಾಗಲ್ಲ! ಹೀಗೆ ಮಾಡಬೇಕೆಂದು ಯಾ ಕೆ ಹೇಳುತ್ತಾರೆ? ಮಹಾತ್ಮರು ಅನೇಕ ಲೋಕೋಪಕಾರ ದ ಕೆಲಸಗಳಲ್ಲಿ ತೊಡಕಿರುತ್ತಾರೆ. ಆದದರಿಂದ ಅವರಿಗೆ ದಾವ ಕೆಲಸವನ್ನು ಮೊದಲು ಮಾಡಬೇಕೆಂದು ತಿಳಿಯುವ ದಿಲ್ಲ; ಯಾವತ್ತು ಒಳ್ಳೇ ಕೆಲಸಗಳು ಅವರ ಬುದ್ಧಿಗೆ ಬ

ದೇ ತರವಾಗಿ ಕಾಣುತ್ತವೆ. ಏಕಾಗ್ರಚಿತ್ತನಾದವನಿಗೆ ಒಂದೇ ಕಾರ್ಯದ ಅಗತ್ಯವಿರುತ್ತದೆ ಯೆಂದು ಅದರ ಲಾಭಾಲಾಭಗಳೆಲ್ಲಾ ಅವನಿಗೆ ಚನ್ನಾಗಿ ತಿಳಿಯುತ್ತವೆ. ಆದರೆ ಅದನ್ನು ಕಡೆಗಾಣಿಸುವ ಶಕ್ತಿ ಯಿರುವದಿಲ್ಲ. ಅಂಥವನು ತನ್ನ ಕೆಲಸ ಸಂಪೂರ್ಣವಾದ ಅವಶ್ಯಕತೆಯನ್ನು ಲೋಕೋಪಕಾರದಕ್ಷರಾದವರ ಮನಸ್ಸಿನಲ್ಲಿ ಚನ್ನಾಗಿ ತುಂಬಿಕೊಟ್ಟರೆ, ಅವರು ಕರುಣದಿಂದ ತತ್ ಕ್ಷಣವೇ ಅದನ್ನು ಮಾಡಿಬಿಡುತ್ತಾರೆ. ಈ ಮೂಲಕವಾಗಿ ಇಂಥಾ ಜ್ಞಾನಿಗಳಿಗೂ ಸಮಯ ಸೂಚನೆಯನ್ನು ಕೊಡುವದು ಯೋಗ್ಯವೇ. ಹೀಗೆ ತಿಳಿದು ಯಾವತ್ತು ವಿದ್ವಜ್ಜನರು ಈ ಕೆಳಗೆ ಬರೆದ ಸಂಗತಿಗಳನ್ನು ನಿಃಪಕ್ಷಪಾತ ದೃಷ್ಟಿಯಿಂದ ಸಂಭಾವಿಸಬೇಕೆಂದು ನನ್ನ ಪ್ರಣಯ ಪೂರ್ವಕವಾದ ವಿಜ್ಞಾಪನೆಯು.

ಈ ದೇಶದಲ್ಲಿ ಕರ್ನಾಟಕವೆಂದರೆ ಕನ್ನಡಭಾಷೆಯು ನಾನುಬಲ್ಲಹಾಗೆ ೫೦।೬೦ ವರ್ಷಗಳಹಿಂದೆ ತೀರಾ ಕಾಡುಸ್ಥಿತಿಯಲ್ಲಿ ಇತ್ತು. ನಾನು ಶಾಲೆಯ ವಿದ್ಯಾರ್ಥಿಯಾಗಿರುವಾಗ್ಯೆ ಮೆಹೆಬಾರ್ ಲೇಷ್ಟರ ಧೊರೆಗಳ ಕಾಲಕೀರ್ತಿಯಲ್ಲಿ ವಿದ್ಯಾವೃದ್ಧಿಗೆ ಚನ್ನಾಗಿ ಸಹಾಯವು ಆಗುತ್ತಿದ್ದರೂ ಈ ಭಾಷೆಯು ನೆಲಕ್ಕೇ ಹತ್ತಿತ್ತು. ಯಾವತ್ತೂ ಕನ್ನಡ ಜನರು ಮಹಾರಾಷ್ಟ್ರಲಿಪಿಯಲ್ಲಿಯೇ ವ್ಯವಹಾರವನ್ನು ಸಾಗಿಸುತ್ತಿ ಇದ್ದರು. ಪರಂತು ಮಹಾರಾಷ್ಟ್ರವಾದರೂ ಶುದ್ಧರೀತಿಯಾಗಿ ಪ್ರವರ್ತಿಸುತ್ತಿತ್ತೋ? ಅದೂ ಇಲ. "इदंच नास्ति रं न लभ्यते" ಯೆಂಬ ವಿಚಾರವಾಗಿ ಹೋಗಿತ್ತು. ಅದರೂ ನರವಿಶ್ವಾಸವು ಮರಾಠೀ ಓದು ಬರೆಯುವದರಲ್ಲಿಯೂ,

ಅಕ್ಷರಗಳನ್ನು ಚನ್ನಾಗಿ ಸುಧಾರಿಸುವ ಲಿಪಿಯೂ, ಅತಿಶಯು
ವೇ ಇತ್ತು. ಬವರು ಕನ್ನಡವೆಂದರೇನು? ಅದನ್ನು ಯಾ
ತೆ ಕಲಿಯು ಬೇಕು? ಅದುಷ್ಟುಲ್ಲಕ ವಾದದ್ದು; ನಮ್ಮ ಸ್ವ
ಭಾಷೆಯು; ಹ್ಯಾಗಾದರೂ ಒಂದೇ ಬರುತ್ತದೆ. ಯೆಂದು
ತಮಗೆ ಸೊಟ್ಟ ಪಟ್ಟ ಅಕ್ಷರಗಳು ಬರಿಯುಲಿಕ್ಕೆ ಬಂದು,
ಕಾ. ಕೀ. ಕೊ. ಎನಲಿಕ್ಕೆ ಬಂದ ಕೂಡಲೇ ಅಶುದ್ಧವಾದ
ರೂ ಕಾಗದ ಪತ್ರಗಳನ್ನು ಮರಾಠಿಯಿಂವಲೇ ಬರೆಯುತ್ತಿ
ಪ್ಪ, ಒಂದು ವೇಳೆ ದಾವನಾದರೂ ಕನ್ನಡ ಪತ್ರಗಳನ್ನು
ಬರೆದರೆ ನಕ್ಕು, ಅವನನ್ನು ದಡ್ಡನೆಂದೂ, ಮೂರ್ಖನೆಂ
ದೂ ತಿಳಯುತ್ತಿದ್ದರು ಈಗಾದರೂ ತಿಳಯುತ್ತಾರೆ. ಆದರೆ
ತಮ್ಮ ಮರಾಠೀ ಕಾಗದಪತ್ರಗಳು ಎಂಥಾ ಅಸಹ್ಯವಾದ ಅಶು
ದ್ಧ ಸಂಬಂಧವುಳ್ಳವಾದರೂ ಅವುಗಳ ದೋಷಗಳನ್ನು ಗ
ಣಿಸುತ್ತದ್ದಿಲ್ಲ. ಅಂದ ಮೇಲೆ ಅವರಿಗೆ "ನಮ್ಮ ಭಾಷೆ
ಯು ಶುದ್ಧ ರೀತಿಯಿಂದ ಬರದಿದ್ದರೆ ಅನ್ಯ ಭಾಷೆಯು ಬ
ರುವದಿಲ್ಲೆಂಬ" ಮಾತು ಹ್ಯಾಗೆ ತಿಳದೀತು? ತಿಳಯುಲಾರ
ದೆಂಬದು ಸಹಜವೇ. ಇಂಥಾ ಅಡನಾಡಿ ಜನರು ನಡಿಸಿರುವ
ಪುರಾತನ ಮಹಾರಾಷ್ಟ್ರ ಕಾಗದ ಪತ್ರಗಳು ಈ ಕಾಲದಲ್ಲಿ ಬ
ಹು ಜನ ವಿದ್ವಾಂಸರ ಮುಂದೆ ಬಂದು ಅವರ ಕಾತ್ರಿಗೆಯ
ನ್ನು ಒತ್ತುವ ಪ್ರಯತ್ನವನ್ನು ಮಾಡಿ, ಜಂಪ್ರಸಿಗೆ ರಾಶ
ಗಂಟು ಬಿದ್ದು, ಕ್ಷಣಮಾತ್ರದಲ್ಲಿ ಅವನ ಕಾಂತಿಯನ್ನು
ಮುಚ್ಚಬಂತೆ ಮಾನ ಭಂಗವನ್ನು ಮಾಡುತ್ತವೆ. ಈ ಕಾ
ದಗಳ ಅಶುದ್ಧಾಕ್ಷರಗಳೂ, ಅಪಭ್ರಂಶವಾದ ಶಬ್ದಗಳೂ,
ಬ್ದವ್ಯತ್ಯಾಸಗಳೂ ಇಷ್ಟೆಂದು, ಈ ಪ್ರಕಾರವೆಂದು ಹೇ
ಲಳವಲ್ಲ. ಹಾಗು ಇಲ್ಲಿ ಆ ಉದಾಹರಣೆಗಳನ್ನು ತೋರಿ

ರೆ ಓದುವವರಿಗೆ ಬೇಸರಿಕೆ ಮಾತ್ರ ಬಂದೀತು, ಎಂದೂ, ಈ ಸಂಗತಿಯು ನಂಮ ದೇಶ ಬಾಂಧವರಾದ ವಿಚಾರವುಳ್ಳ ವಿದ್ವಾಂಸರಾದ ಸ್ಕೂಲಮಾಸ್ತರರೇ ಮುಂತಾದವರ ಲಕ್ಷ್ಯದಲ್ಲಿರಬಹುದೆಂದೂ, ತೋರಿಸುವದಿಲ್ಲ. ವಿಚಾರವನ್ನು ಮಾಡಿದರೆ ನಮ್ಮ ಕರ್ನಾಟಕ ದೇಶದಲ್ಲಿ ಈ ಆಗಂತುಕ ಭಾಷೆಯು ಇಷ್ಟು ಬಿಕುಸತನವನ್ನು ಹಿಡಿದುಕೊಂಡು ತೀವಿರುವ ಕಾರಣವೇನು? ಎಂಬ ಪ್ರಶ್ನವು ಬಾರದೇ ಇರುವದಿಲ್ಲ. ಆದರೆ ಇದಕ್ಕೆ ಸಬಳ ಕಾರಣವುಂಟು. ಯಾವದೆಂದರೆ—ಹಿಂದಕ್ಕೆ ಈ ಶೀಮೆಯು ಶಿವಾಜಿಯಿಂದ ಕಡೆಯ ಶಹಾಜಿಯವರಿಗೂ ಸುಮಾರು೧೭೫ವರುಷಗಳ ತನಕಮಹಾರಾಷ್ಟ್ರರ ಆಳಿಕೆಯಲ್ಲಿ ಇತ್ತು. ಆ ರಾಜರು ಈಗಿನವರಂತೆ ಅಲ್ಲ; ಅವರು ಈ ಭಾಷೆಗೆ ಯೆಂದೂ ಆಶ್ರಯವನ್ನು ಕೊಡಲಿಲ್ಲ. "यथाराजा तथाप्रजा" ಎಂಬಂತೆ ಆಯಿತು; ಖರೆ! ಆದರೂ ಈ ದೇಶದಲ್ಲಿ ಈ ಗಾದೆಯು ಪೂರಾ ಕೂಡಲಿಲ್ಲ. ಯಾಕಂದರೆ ಈ ಶೀಮೆಯು ಪೂರ್ತಿಶುದ್ಧವಾಗಿ ಮಹಾರಾಷ್ಟ್ರವಾಗಲಿಲ್ಲ. ಪರಂತು "ಘಾಪಾರತ್ರಿಯಲ್ಲಿ ಎಂಟೆತ್ತುಪ್ಪಗಳು ಕಲಿತಂತೆ" ಅದೂ (ಮರಾಠೀ), ಇದೂ (ಕನ್ನಡು), ಕೂಡಿ ಆರಷ್ಟ್ರಾಳವಾಗಿ ಹೋಯಿತು.

(ಮುಂದಕ್ಕೆ ಸಾಗುದದು.)

ರಾ|| ರಾ|| ರಾಮಚಂದ್ರ ಧೋಂಡದೇವ ಅ. ಮಾಸ್ತರಲು ನರಗುಂದ ಇವರ ಕಡಿಯಿಂದ ಬಂದ ಶ್ಲೋಕವನ್ನು ಶುದ್ಧಮಾಡಿ ಅರ್ಥ ಮಾಡಿದ್ದೇನೆ—

ಕಾಳಿದಾಸನೆಂಬವನೊಬ್ಬ ಪ್ರಸಿದ್ಧ ಕವಿಯಿಂದ ರಚಿಸಲ್ಪ